# ಕನ್ನಡ ಭಾಷಾ ಪಠ್ಯ (ಎನ್.ಇ.ಪಿ)

## ವಿನ್ಯಾಸ ಸೌರಭ – ೦೩

## ಬಿ.ಎಸ್ಸಿ. ಫ್ಯಾಡ್

### ತೃತೀಯ ಸೆಮಿಸ್ಟರ್


ಪ್ರಧಾನ ಸಂಪಾದಕರು

**ಡಾ. ಪ್ರಶಾಂತ ನಾಯಕ**

ಸಂಪಾದಕರು

**ಡಾ. ಚನ್ನವೀರಯ್ಯ**

**ಶ್ರೀಮತಿ. ಛಾಯಾದೇವಿ**

**ಶ್ರೀ. ಪಾತಯ್ಯ. ಎನ್.**



ಬೆಂಗಳೂರು ನಗರ ವಿಶ್ವವಿದ್ಯಾಲಯ
BENGALURU CITY UNIVERSITY
ಆಗು ನೀ ಅನಿಕೇತನ
BE BOUNDLESS

**VINYASA SOURABHA - 03**

A Prescribed NEP Text Book for B.Sc. Fad, Degree Course (Third Semester);


**Chief Editor:**

**Prof. Prashanth G. Nayak**

Professor of Kannada & Director,

Kannada Bharathi, Kuvempu University, Shankaraghatta, B.R. Project.

Shimoga Dist.

**Edited By:**

| | |
|---|---|
| **Dr. Channaveeraiah** | **ಡಾ. ಚನ್ನವೀರಯ್ಯ** |
| **Smt. Chaya devi** | **ಶ್ರೀಮತಿ. ಛಾಯಾದೇವಿ** |
| **Sri. Pathaiah. N** | **ಶ್ರೀ. ಪಾತಯ್ಯ. ಎನ್.** |



**Published by: Bengaluru City University, BENGALURU.**



© Bengaluru City University,



First print: 2022



ಪ್ರಧಾನ ಸಂಪಾದಕರು

**ಡಾ. ಪ್ರಶಾಂತ ಜಿ. ನಾಯಕ**

ಸಲಹಾ ಸಮಿತಿ:

**ಡಾ. ಕೆ.ವೈ. ನಾರಾಯಣಸ್ವಾಮಿ**

**ಡಾ. ಎಂ.ಎಸ್. ಆಶಾದೇವಿ**

ಸಂಯೋಜಕರು:

**ಡಾ. ಬೆಳಕೆರೆ ಲಿಂಗರಾಜಯ್ಯ**



**ಬೆಲೆ:** ರೂ. ೦೦/–

**ಪ್ರಕಾಶಕರು : ಬೆಂಗಳೂರು ನಗರ ವಿಶ್ವವಿದ್ಯಾಲಯ**

## ಕುಲಪತಿಗಳ ಆಶಯ ನುಡಿ

ಬೆಂಗಳೂರು ನಗರ ವಿಶ್ವವಿದ್ಯಾಲಯ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಅನನ್ಯತೆಯನ್ನು ಯುವಜನತೆಗೆ ಮನವರಿಕೆ ಮಾಡಿಕೊಡಲು ಸನ್ನದ್ಧವಾಗಿದೆ. ಕನ್ನಡ ಭಾಷೆಯನ್ನು ಸರ್ವಾಂಗೀಣವಾಗಿ ಆಧುನಿಕ ಬದುಕಿನ ಅಗತ್ಯಕ್ಕೆ ತಕ್ಕಂತೆ ಅಭಿವೃದ್ಧಿಪಡಿಸಬೇಕಾದ ಹೊಣೆಯನ್ನು ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳು ಹೊರಬೇಕಿದೆ. ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನದ ಗರಿಮೆ ಸಿಕ್ಕಿರುವುದು; ಕನ್ನಡ ಭಾಷೆಯ ಅಂತಸ್ಥವಾಗಿರುವ ಜ್ಞಾನಕ್ಕೆ ದೊರೆತಿರುವ ಮನ್ನಣೆಯಾಗಿದೆ. ಕನ್ನಡ ಭಾಷೆಯಲ್ಲಿ ಉಪಲಬ್ಧವಿರುವ ಶ್ರೇಷ್ಠ ಸಾಹಿತ್ಯ ಕೃತಿಗಳು, ಅಪರೂಪದ ಶಾಸನಗಳು, ಜಾನಪದ ವಿವಿಧ ವಾಙ್ಮಯಗಳು ಮತ್ತು ಶಾಸ್ತ್ರ ಗ್ರಂಥಗಳು ಕನ್ನಡವನ್ನು ಜ್ಞಾನದ ಭಾಷೆಯಾಗಿ ರೂಪಿಸಲು ಸಹಾಯ ಮಾಡಿವೆ. ಕಳೆದ ಎರಡು ದಶಕಗಳಿಂದ ಕನ್ನಡಭಾಷೆಯನ್ನು ತಂತ್ರಜ್ಞಾನದ ಭಾಷೆಯಾಗಿಸುವ ಕಾರ್ಯವೂ ಯಶಸ್ವಿಯಾಗಿ ನಡೆಯುತ್ತಿದೆ. ಬದುಕಿನ ಎಲ್ಲಾ ವಲಯಗಳ ಅವಶ್ಯಕತೆಗೆ ತಕ್ಕಂತೆ ಕನ್ನಡವನ್ನು ಅಂತರಾಷ್ಟ್ರೀಯ ವ್ಯವಹಾರದ ಭಾಷೆಯಾಗಿ ಆಧುನಿಕ ವಿಜ್ಞಾನದ ಸಂಶೋಧನೆಗಳನ್ನು ನಿರ್ವಹಿಸುವ ವಿಜ್ಞಾನಭಾಷೆಯಾಗಿ ವಿಸ್ತರಿಸಲು ನಾವು ಬದ್ಧತೆಯಿಂದ ಕೆಲಸಮಾಡುವ ಅಗತ್ಯವಿದೆ. ಕುವೆಂಪು ಅವರ ಮಾತಿನಲ್ಲಿ ಹೇಳುವುದಾದರೆ 'ಕನ್ನಡ ಭಾವೋಪಯೋಗಿ ಭಾಷೆಯಾದರೆ ಮಾತ್ರ ಸಾಲದು ಅದು ಲೋಕೋಪಯೋಗಿ ಭಾಷೆಯಾಗಿ ಬಳಸುವ ಅವಶ್ಯಕತೆ ಇದೆ. ಇಂಗ್ಲಿಷ್ ಹಾಗೂ ಹಿಂದಿ ಭಾಷೆಗಳ ಜೊತೆಗೆ ಸೆಣೆಸುತ್ತಲೆ ಕನ್ನಡಭಾಷೆಯು ಕನ್ನಡಿಗರ ಆತ್ಮಸಂಗಾತ ಭಾಷೆಯಾಗಿ ಬಾಳಬೇಕಿದೆ'.

ಕರ್ನಾಟಕ ರಾಜ್ಯವು ದೇಶದಲ್ಲಿ ಹೊಸಶಿಕ್ಷಣ ನೀತಿಯನ್ನು ಮೊತ್ತ ಮೊದಲಿಗೆ ಜಾರಿಗೆ ತಂದಿರುವ ರಾಜ್ಯವಾಗಿದೆ. ಪ್ರಸ್ತುತ ಕರ್ನಾಟಕ ಸರ್ಕಾರವು 2020–2021ರ ವರ್ಷವನ್ನು ಕನ್ನಡ ಕಾಯಕವರ್ಷವೆಂದು ಘೋಷಿಸಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಪ್ರಸರಣಕ್ಕೆ ಅಗತ್ಯವಿರುವ ಕಾರ್ಯಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಿದೆ. ಕಳೆದ ಎಪ್ಪತ್ತೈದು ವರ್ಷಗಳಿಂದಲೂ ಶಿಕ್ಷಣ ಕ್ಷೇತ್ರದಲ್ಲಿ ಅನೇಕ ಬದಲಾವಣೆಗಳು ನಡೆಯುತ್ತಾ ಬಂದಿದ್ದರೂ ಕಲಿಕಾಪ್ರಕ್ರಿಯೆ ವಿದ್ಯಾರ್ಥಿ ಸ್ನೇಹಿಯಾಗಿರಲಿಲ್ಲ ಎಂಬ ಆಪಾದನೆ ಇತ್ತು. ಈಗ ಅನುಷ್ಠಾನಗೊಳ್ಳುತ್ತಿರುವ ಹೊಸ ಶಿಕ್ಷಣ ನೀತಿಯು ಈವರೆಗೆ ಕಲಿಕೆಯಲ್ಲಿ ಇದ್ದ ಜಡತ್ವವನ್ನು ತೆಗೆದು ಹಾಕಿದೆ. ವಿದ್ಯಾರ್ಥಿಗಳಿಗೆ ತಮ್ಮ ಇಷ್ಟದ ವಿಷಯಗಳನ್ನು ವಿನ್ಯಾಸಗೊಳಿಸಿಕೊಳ್ಳುವ ಅವಕಾಶ ಮತ್ತು ಕಲಿಕಾ ಸ್ವಾತಂತ್ರ್ಯವನ್ನು ಕಲ್ಪಿಸಿದೆ. ಆಧುನಿಕ ಜ್ಞಾನವನ್ನು ಮತ್ತು ತಂತ್ರಜ್ಞಾನವನ್ನು ಪ್ರಾದೇಶಿಕ ಭಾಷೆಗಳಲ್ಲಿ ಕಲಿಸುವುದರ ಮೂಲಕ ಪ್ರಕ್ರಿಯಾತ್ಮಕವಾದ ಶೈಕ್ಷಣಿಕ ವಾತಾವರಣವನ್ನು ನಿರ್ಮಿಸಲು ಶಿಕ್ಷಣ ನೀತಿ ಮುಂದಾಗಿರುವುದು ಸ್ವಾಗತಾರ್ಹ.

ಈ ಹಿನ್ನೆಲೆಯಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾಲಯ ರಾಜ್ಯ ಉನ್ನತ ಶಿಕ್ಷಣ ಪರಿಷತ್ ನೀಡಿರುವ ಮಾದರಿ ಪಠ್ಯವಿನ್ಯಾಸವನ್ನು ಅನುಸರಿಸಿ ಕನ್ನಡ ಭಾಷೆಯ ಪಠ್ಯಪುಸ್ತಕಗಳನ್ನು ರೂಪಿಸಿದೆ. ಪಠ್ಯಗಳು ವಿದ್ಯಾರ್ಥಿಸ್ನೇಹಿಯಾಗಿ ಸಂವಾದ ಸ್ವರೂಪದಲ್ಲಿವೆ ಹಾಗೂ ಕನ್ನಡಭಾಷೆಯನ್ನು ಕಲಿಯುವ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸಕ್ಕೂ ಮಾರ್ಗದರ್ಶಿಯಾಗಿವೆ. ಈ ಪಠ್ಯಗಳನ್ನು ಪ್ರೀತಿಯಿಂದ ರೂಪಿಸಿದ ಕನ್ನಡ ಅಧ್ಯಯನ ಮಂಡಳಿಯ ಸದಸ್ಯರಿಗೂ, ಎಲ್ಲಾ ಸಂಪಾದಕರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಪ್ರೊ. ಲಿಂಗರಾಜಗಾಂಧಿ**
ಕುಲಪತಿಗಳು

## ಪ್ರಧಾನ ಸಂಪಾದಕರ ಮಾತು

ಆಧುನಿಕತೆ ಎನ್ನುವ ಮಾತು ಎಲ್ಲವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಂತೆ ಬದಲಾವಣೆ ಎನ್ನುವುದನ್ನು ಬಹುಪಾಲು ಎಲ್ಲಾ ನೆಲೆಯಲ್ಲಿಯೂ ಅನಿವಾರ್ಯ ವೆನ್ನುವಂತಾಗಿಸುತ್ತಿರುವುದು ನಮ್ಮ ನಡುವಿನ ಸರಳವೂ ಸಹಜವೂ ಆದ ಅರಿವಿನಂತಿದೆ. ಸೃಜನಶೀಲತೆ ಮತ್ತು ಕ್ರಿಯಾಶೀಲತೆಗಳ ಅರ್ಥವೂ ಹೀಗೆ ಹೊಸತನ್ನು ನಿರಂತರವಾಗಿ ಕೇಂದ್ರೀಕರಿಸಿ ಕೊಂಡಿರುತ್ತದೆ. ಇದು ಕಲಿಕೆಯ ಹೊತ್ತಿಗೂ ಪರಸ್ಪರ ಕಲಿಯುವವರ ಮತ್ತು ಕಲಿಸುವವರ ನಡುವಿನ ಅನುಸಂಧಾನದ ಪ್ರಕ್ರಿಯೆಯೂ ಹೌದು. ಇದರ ಜೊತೆಗೆ ನಿರಂತರವಾದ ಎಚ್ಚರವೂ ಅತ್ಯಗತ್ಯ. ಕನ್ನಡ ಭಾಷೆ ಮತ್ತು ಸಾಹಿತ್ಯವೆನ್ನುವುದು ಹೀಗೆ ಸದಾ ತನ್ನನ್ನು ಸವಾಲಿಗೆ ತೆರೆದುಕೊಂಡಂತೆ ಹೊಸತನಕ್ಕೆ ನಿರಂತರವಾಗಿ ಎದುರಾಗುತ್ತಲೇ ಬಂದಿರುವುದು ಗಮನಾರ್ಹವಾದುದು.

ಹೊಸ ಶಿಕ್ಷಣ ನೀತಿ ನಮ್ಮ ಉನ್ನತ ಶಿಕ್ಷಣದ ಹಲವು ಬಗೆಯ ಬದಲಾವಣೆಗೆ ಕಾರಣವಾಗುತ್ತಿರುವ ಸಂದರ್ಭದಲ್ಲಿ ಪದವಿಯ ವಿದ್ಯಾರ್ಥಿಗಳಿಗೆ ಭಾಷೆ ಮತ್ತು ಸಾಹಿತ್ಯದ ಪಠ್ಯವನ್ನು ವಿಶಿಷ್ಟವಾಗಿ ರೂಪಿಸುವ ಜವಾಬ್ದಾರಿಯೊಂದು ಕನ್ನಡತನವನ್ನು ನಮ್ಮತನ ಎಂದುಕೊಂಡ ನಮ್ಮೆಲ್ಲರ ಮೇಲಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಕನ್ನಡ ಅಧ್ಯಾಪಕ ಬಂಧುಗಳು ಮೊದಲ ದಿನದಿಂದಲೂ ಅತ್ಯಂತ ಉತ್ಸಾಹ, ಶ್ರಮ ಮತ್ತು ಬದ್ಧತೆಯಿಂದ ಕಾರ್ಯ ನಿರ್ವಹಿಸಿದ್ದಾರೆ. ಅದರ ಫಲಿತವಾಗಿ ಉತ್ತಮ ಪಠ್ಯಗಳು ವಿದ್ಯಾರ್ಥಿಗಳ ಕೈಸೇರುವಂತಾಗುತ್ತಿದೆ. ಇದಕ್ಕಾಗಿ ಬೆಂಗಳೂರು ನಗರ ವಿಶ್ವವಿದ್ಯಾಲಯದ ಅಧ್ಯಯನ ಮಂಡಳಿಯ ಸದಸ್ಯರಿಗೆ ಹೃದಯ ಪೂರ್ವಕ ಅಭಿನಂದನೆಗಳು. ಪಠ್ಯಗಳನ್ನು ರೂಪಿಸುವಲ್ಲಿ ಶ್ರಮ ವಹಿಸಿದ ಎಲ್ಲಾ ಪಠ್ಯಗಳ ಸಂಪಾದಕರಿಗೂ ಆತ್ಮೀಯ ಕೃತಜ್ಞತೆಗಳು. ನಿರಂತರವಾಗಿ ಸಂಯೋಜನೆಯ ಕಾರ್ಯ ನಿರ್ವಹಿಸಿದ ಅತ್ಮೀಯರಾದ ಡಾ. ಲಿಂಗರಾಜಯ್ಯ ನವರ ಶ್ರಮವನ್ನು ಸ್ಮರಿಸಲೇಬೇಕು.

ಅಧ್ಯಯನ ಮಂಡಳಿಯ ಅಧ್ಯಕ್ಷನನ್ನಾಗಿ ನನಗೆ ಜವಾಬ್ದಾರಿ ನೀಡಿದ ಬೆಂಗಳೂರು ನಗರ ವಿಶ್ವವಿದ್ಯಾಲಯದ ಸನ್ಮಾನ್ಯ ಕುಲಪತಿಗಳಾದ ಪ್ರೊ. ಲಿಂಗರಾಜ ಗಾಂಧಿ ಅವರಿಗೆ ಕೃತಜ್ಞತೆಗಳು. ಪ್ರತೀ ಹಂತದಲ್ಲಿಯೂ ನಮ್ಮೊಂದಿಗಿದ್ದು ಸಹಕಾರ ನೀಡಿದ ಪ್ರೊ. ರಮೇಶ್. ಬಿ ಮಾನ್ಯ ಕುಲ ಸಚಿವರು ಪರಿಕ್ಷಾಂಗ ಇವರಿಗೆ ನಮ್ಮ ಧನ್ಯವಾದಗಳು ಮತ್ತು ಶ್ರೀಯುತ ಶ್ರೀಧರ್ ಸಿ.ಎಸ್. ಮಾನ್ಯ ಕುಲ ಸಚಿವರು ಇವರಿಗೆ ನಮ್ಮ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಡಾ. ಪ್ರಶಾಂತ ಜಿ. ನಾಯಕ**

ಪ್ರಾಧ್ಯಾಪಕರು

# ಬೆಂಗಳೂರು ನಗರ ವಿಶ್ವವಿದ್ಯಾಲಯ

## 3ನೇ ಸೆಮಿಸ್ಟರ್ ಬಿಎಸ್ಸಿ. ಫ್ಯಾಡ್

## ಪಠ್ಯವಿಡಿ

### ಘಟಕ ೧. ಅಭಿವೃದ್ಧಿ

**ಆಶಯ**

1. ಗಿರಣಿ ವಿಸ್ತಾರ ನೋಡಮ್ಮ – ಶಿಶುನಾಳ ಶರೀಫರು
2. ಒಂದು ಒಗೆಯುವ ಯಂತ್ರದ ಕಥೆ – ಪ್ರಭುಶಂಕರ
3. ನೈಸರ್ಗಿಕ ಕೃಷಿಯಲ್ಲಿ ಜಾನುವಾರುಗಳ ಮಹತ್ವ – ಎಸ್. ಮೃತ್ಯುಂಜಯ
4. ಮೌಸ್ ಬಿಟ್ಟು ಮೊಲ ಹಿಡಿದಾತ (ಓದು ಪಠ್ಯ) – ವಿ.ಬಿ. ನಾಗರಾಜ್

### ಘಟಕ ೨. ಹಸಿವು

**ಆಶಯ**

1. ಅನ್ನಯಜ್ಞ – ದ.ರಾ. ಬೇಂದ್ರೆ
2. ಅಕ್ರಮ ಸಂತಾನ (ಆಯ್ದ ಭಾಗ) ಶರಣಕುಮಾರ ಲಿಂಬಾಳೆ – **ಅನು:** ದು.ನಿಂ. ಬೆಳಗಲಿ
3. ಜೋಳದ ಪಾಳಿ – ಚನ್ನವೀರ ಕಣವಿ
4. ಹಸಿವು (ಓದು ಪಠ್ಯ) – ಟಿ. ಯಲ್ಲಪ್ಪ

### ಘಟಕ ೩. ಶೈಲಿ/ವಿನ್ಯಾಸ

**ಆಶಯ**

1. ಜಡೆ – ಡಾ. ಜಿ.ಎಸ್. ಶಿವರುದ್ರಪ್ಪ
2. ಅಕ್ಕು – ವೈದೇಹಿ
3. ಕರ್ನಾಟಕದ ಸಂಸ್ಕೃತಿ ಮತ್ತು ವೇಷಭೂಷಣಗಳ ಶೈಲಿ – ಡಾ. ಸಂಧ್ಯಾ ರವಿ
4. ಬಂತು ಬಂತು ಕರಂಟು ಬಂತು (ಓದು ಪಠ್ಯ) – ಚ.ಹ. ರಘುನಾಥ

### ಘಟಕ ೪. ಸಂಕೀರ್ಣ ಲೇಖನಗಳು

**ಆಶಯ**

1. ಕೋಟ್ಯಾಧಿಪತಿಯಾದ ಹುಡುಗಾಟದ ಹುಡುಗ – ಬಾಲಚಂದ್ರ
2. ಶತಮಾನದ ಬಾಳಪ್ಪ – ಗುಡಿಹಳ್ಳಿ ನಾಗರಾಜ್
3. ನಮಗೆ ಬೇಕಾದ ಇಂಗ್ಲೀಷ್ – ಕುವೆಂಪು
4. ಮೈಸೂರು ರುಮಾಲು (ಓದು ಪಠ್ಯ) – ವಿ. ಸೀತಾರಾಮಯ್ಯ

# ಘಟಕ ೧.

# ಅಭಿವೃದ್ಧಿ

**ಆಶಯ:**

ಅಭಿವೃದ್ಧಿ ಎನ್ನುವುದರ ಅರ್ಥವನ್ನ ನಾವು ತಿಳಿದುಕೊಳ್ಳುವ ಅವಶ್ಯಕತೆ ಹಿಂದಿಗಿಂತಲೂ ಇಂದು ಹೆಚ್ಚಾಗಿದೆ. ರಾಮ ಎನ್ನುವನಿಗೆ ಕಾರಿನ ಅವಶ್ಯಕತೆಯಿದೆ ಆತ ಸಾಲ ಮಾಡಿ ಕಾರುಕೊಳ್ಳುತ್ತಾನೆ. ಜಗತ್ತಿನ ದೃಷ್ಟಿಯಲ್ಲಿ ಅವನು ಅಭಿವೃದ್ಧಿ ಹೊಂದುತ್ತಿದ್ದಾನೆ. ಅವನು ಜಗತ್ತಿಗೆ ಅವನ ಸಾಲದ ಬಗ್ಗೆ ಗೊತ್ತಾಗುವುದಿಲ್ಲ, ಸಮಾಜದ ಕಣ್ಣಿಗೆ ಕಾಣುವುದು ಹೊಳೆಯುವ ಕಾರು ಮಾತ್ರ!

ಲಕ್ಷ್ಮಣನಿಗೆ ಕಾರಿನ ಅವಶ್ಯಕತೆ ಇಲ್ಲದಿದ್ದರೂ. ರಾಮ ಕೊಂಡ ಎಂದು ಆತನೂ ಸಾಲಮಾಡಿ ಕಾರು ಕೊಳ್ಳುತ್ತಾನೆ. ಹೀಗೆ ಸಮಾಜದಲ್ಲಿ ಒಬ್ಬರನ್ನ ನೋಡಿ ಒಬ್ಬರು ನಕಲು ಮಾಡುತ್ತಾರೆ. ನಮಗದರ ಅವಶ್ಯಕತೆ ಇದೆಯೇ? ಎನ್ನುವ ಸರಳ ಪ್ರಶ್ನೆಯನ್ನ ಕೇಳಿಕೊಳ್ಳುವುದು ಬಿಡುತ್ತಾರೆ. ಸಾಲ ಮಾಡುವಾಗ ಮುಂದಿನ ಹತ್ತು ಅಥವಾ ಹದಿನೈದು ವರ್ಷ ನನಗೆ ಕೆಲಸ ವಿರುತ್ತದೆಯೇ? ಎನ್ನುವ ಸಣ್ಣ ವಿವೇಚನಯುಕ್ತ ಪ್ರಶ್ನೆಯನ್ನ ಕೇಳಿಕೊಳ್ಳುವುದು ಮರೆಯುತ್ತಾನೆ. ಜಾಗತಿಕ ಮಟ್ಟದ ಸಂಸ್ಥೆಗಳಿಗೆ ಬೇಕಿರುವುದು ಹೀಗೆ ಪ್ರಶ್ನೆ ಕೇಳಿಕೊಳ್ಳದೆ ಸಾಲದ ಸುಳಿಯಲ್ಲಿ ಬೀಳುವ ಜನ, ಅವರಿಗೆ ಅವರ ಪದಾರ್ಥ ಮಾರಾಟವಾದರೆ ಸಾಕು, ಹಣದ ಇಂತಹ ಸಣ್ಣ– ಸಣ್ಣ ಸೂಕ್ಷ್ಮಗಳನ್ನ ತಿಳಿಹೇಳುವ ಕೆಲಸ ಜರೂರಾಗಿ ಆಗಬೇಕಿದೆ. ಎಲ್ಲಕ್ಕೂ ಮುಖ್ಯವಾಗಿ ಪಾಶ್ಚಾತ್ಯ ಆರ್ಥಿಕ ನೀತಿಯನ್ನ ನಾವು ಕಣ್ಣು ಮುಚ್ಚಿ ಅಪ್ಪಿಕೊಳ್ಳುವುದನ್ನ ನಿಲ್ಲಿಸಬೇಕಿದೆ.

ಕಂಡು ಕಂಡುದನೆಲ್ಲವ ಕೊಂಡು

ಅಟ್ಟಹಾಸದಿ ಮೆರೆವಜನಕೆ,

ಕಾಣದ ಜೀವಿಯು ಬಂದು,

ತಲ್ಲಣಿಸುವುದು ಜಗವು ನೋಡಾ ಗುಹೇಶ್ವರ

– ***ಅಲ್ಲಮಪ್ರಭು***

## ೧. ಗಿರಣಿ ವಿಸ್ತಾರ ನೋಡಮ್ಮ

**– ಶಿಶುನಾಳ ಶರೀಫರು**

ಗಿರಣಿ ವಿಸ್ತಾರ ನೋಡಮ್ಮ
ಶರಣಿ ಕೂಡಮ್ಮ ॥ಪಲ್ಲ॥

ಧರಣೀಶ ರಾಣಿ
ಕರುಣಾಕ ರಾಜ್ಯಕೆ
ತರಿಸಿದ ಘನಚೋದ್ಯವೋ, ಚೀನಾದ ವಿದ್ಯವೋ ॥ಅ.ಪ.॥

ಜಲ ಅಗ್ನಿ ವಾಯು ಒಂದಾಗಿ
ಕಲೆತು ಚಂದಾಗಿ
ಜಲ ಅಗ್ನಿ ವಾಯು ಒಂದಾಗಿ
ನೆಲದಿಂದ ಗಗನಕ್ಕೆ ಮುಟ್ಟಿದಂತೆಸುವುದು
ಚಲುವ ಚನ್ನಿಗವಾದ ಕಂಭವೋ, ಹೊಗಿಯ ಬಿಂಬವೋ ॥೧॥

ಒಳಗೊಂದು ಬೇರೆ ಆಕಾರ
ತಿಳಕೋ ಚಮತ್ಕಾರ
ಒಳಗೊಂದು ಬೇರೆ ಆಕಾರ
ದಳಗಳೊಂಭತ್ತು ಚಕ್ರ ಸುಳಿವ ಸೂತ್ರಾಧಾರ
ಲಾಳಿ ಮೂರು ಕೊಳಿವಿಯೊಳು, ಎಳೆತುಂಬುತದರೊಳು ॥೨॥

ಅಲ್ಲಿ ಬರದಿಟ್ಟರಳಿ ಹಿಂಜಿ
ಅಲ್ಯಾದವು ಹಂಜಿ
ಅಲ್ಲಿ ಬರದಿಟ್ಟರಳಿ ಹಿಂಜಿ
ಗಾಲಿಯೆರಡರ ಮೇಲೆ ಮೂಲಬ್ರಹ್ಮದ ಶೀಲ
ನಾಡಿ ಸುಷುಮ್ನನು ಕೂಡಿ, ಅಯ್ತೋ ಕುಕ್ಕಡಿ ॥೩॥

ಪರಮಾನೆಂಬುವ ಪಟ್ಟೇವ ಅಲ್ಲೆ
ಮಾರಾಟಕಿಟ್ಟಾವ
ಪರಮಾನೆಂಬುವ ಪಟ್ಟೇವ
ಧರೆಯೊಳು ಶಿಶುನಾಳ ದೇವಾಂಗ ಋಷಿಯಿಂದ
ನೇಸಿ ಹಚ್ಚಡ ಹೊಚ್ಚಿತೋ, ಲೋಕ ಮೆಚ್ಚಿತೋ ॥೪॥

**– ಆಕರ: ಶಿಶುನಾಳ ಶರೀಫ್ ಸಾಹೇಬರ ಗೀತೆಗಳು – (ಸಂ) ಎನ್.ಎಸ್. ಲಕ್ಷ್ಮೀನಾರಾಯಣ ಭಟ್**

# ೨. ಒಂದು ಒಗೆಯುವ ಯಂತ್ರದ ಕಥೆ

**– ಪ್ರಭುಶಂಕರ್**

ಬೆಂಗಳೂರೆಂಬುದು ಒಂದು ಊರಾಗಿದ್ದ ಕಾಲದ ಕಥೆ ಇದು. ಆಗ ಅಲ್ಲಿ ಜನರು ವಾಸಿಸುತ್ತಿದ್ದರು. ಅವರು ಗಾಳಿಯೆಂಬುದನ್ನು ಉಸಿರಾಡುತ್ತಿದ್ದರು. ಬೆಳಗ್ಗೆ ಎದ್ದು ಮನೆಯಿಂದ ಕೆಲಸ ಕಾರ್ಯಗಳಿಗೆಂದು ಹೊರಟವರೆಲ್ಲರೂ ಖಂಡಿತವಾಗಿಯೂ ಸಂಜೆ ಮನೆಗೆ ವಾಪಸ್ಸು ಬರುತ್ತಿದ್ದರು. ಹಾಗೆ ಯಾರೋ ಒಬ್ಬರೋ ಇಬ್ಬರೋ ಬಾರದಿದ್ದರೆ ಅದು ಸುದ್ದಿಯಾಗುತ್ತಿತ್ತು. ಅದನ್ನು ನಯ, ಭಯಗಳಿಂದ ಪತ್ರಿಕೆಯ ಜನ ಅಚ್ಚು ಹಾಕುತ್ತಿದ್ದರು. ಹಾಗಾದರೆ ಇದು ಯಾವುದೋ ತ್ರೇತಾಯುಗದ ಕಥೆ ಎಂದು ಭಾವಿಸಿ ಓದುವುದನ್ನು ನಿಲ್ಲಿಸಿಬಿಡಬೇಡಿ. ಒಗೆಯುವ ಯಂತ್ರದ ಕಥೆ ಎಂದ ಮೇಲೆ ಈ ಶತಮಾನದ್ದೇ.

ಅಂಥ ಬೆಂಗಳೂರಿನಲ್ಲಿ ಒಂದು ಭಾರೀ ಸರ್ಕಾರಿ ಆಸ್ಪತ್ರೆ ಇತ್ತು. ದಿನಕ್ಕೆ ಹತ್ತಾದರೂ ಹೆಣ ಬೀಳುವ ಆಸ್ಪತ್ರೆ. ಆದ್ದರಿಂದ ಭಾರಿ ಆಸ್ಪತ್ರೆ ತಾನೆ? ಇದೇನು ಹೀಗೆ ಹೇಳುತ್ತೀರಿ ಎನ್ನುತ್ತೀರಾ? ದಿನಕ್ಕೆ ಸಾವಿರ ಟನ್ ಕಬ್ಬಿಣ ತಯಾರಾಗುವ ಭಾರೀ ಕಾರ್ಖಾನೆ, ಸಾವಿರ ಟನ್ ಸಕ್ಕರೆ ತಯಾರಾಗುವ ಭಾರೀ ಕಾರ್ಖಾನೆ ಎನ್ನುವುದಿಲ್ಲವೆ? ಹಾಗೇ ದಿನಾ ಹತ್ತು ಹೆಣ ಹೊರಕ್ಕೆ ಕಳಿಸುವ ಭಾರೀ ಆಸ್ಪತ್ರೆ ಅದು. ಅಲ್ಲಿ ಅಂದಿನ ಕಾಲಕ್ಕೆ ಎಂಟುನೂರು ಜನ ರೋಗಿಗಳು, ನಾಲ್ಕು ನೂರು ಜನ ಮಂಚದ ಮೇಲೂ ಇನ್ನುಳಿದವರು ನೆಲದ ಮೇಲೂ ಮಲಗಿಕೊಂಡು ನರಳುವ ವ್ಯವಸ್ಥೆ ಅಲ್ಲಿತ್ತು. ಎಂಟು ನೂರು ಜನರಿಗೆ ದುಗ್ಗುಲು ಹಾಸಿಗೆಗಳನ್ನೂ, ಹೊದೆಯಲು ದುಬಟಿ ರಗ್ಗುಗಳನ್ನೂ, ದಿಂಬಿನ ಚೀಲಗಳನ್ನೂ ಒದಗಿಸುವ ವ್ಯವಸ್ಥೆಯೂ ಇತ್ತು. ಮೇಲೆ ಹೇಳಿದ ವಸ್ತುಗಳು ನಾನಾ ಬಣ್ಣದವಾಗಿಯೂ ನಾನಾ ರೀತಿಯ ವಾಸನೆಗಳನ್ನು ಹೊಮ್ಮಿಸುವವಾಗಿಯೂ ಇದ್ದವು.

ಒಂದಾನೊಂದು ದಿನ ಆರೋಗ್ಯ ಮಂತ್ರಿಗಳಿಗೆ ಈ ದೊಡ್ಡಾಸ್ಪತ್ರೆಯನ್ನು ತನಿಖೆ ಮಾಡಬೇಕು ಎಂಬ ಖಾಯಷು ಹುಟ್ಟಿಬಿಟ್ಟಿತು. ಅದಕ್ಕೆ ಕಾರಣ ಅವರ ಕರ್ತವ್ಯ ಪ್ರಜ್ಞೆ ಎಂದು ಭಾವಿಸಬಾರದು. ಅವರು ಯಾವುದೇ ಪ್ರಜ್ಞೆಗೂ ಹೆಸರಾದವರಲ್ಲ. ಆದಿನ ಅವರು ಈ ಕಾರ್ಯಕ್ರಮಕ್ಕೆ ಮನಸ್ಸು ಮಾಡಿದ್ದು ಬೇರೆಯೇ ಒಂದು ಕಾರಣಕ್ಕಾಗಿ, ದೇಶದ ನಾಯಕರೊಬ್ಬರು ಮುನ್ನಾ ದಿನ ಹಠಾತ್ತಾಗಿ ತೀರಿಕೊಂಡಿದ್ದರು. ಆ ಪ್ರಯುಕ್ತ ಎಲ್ಲ ಸಾರ್ವಜನಿಕ ಸಮಾರಂಭಗಳೂ ರದ್ದಾಗಿದ್ದುವು. ಇವರು ಮಂತ್ರಿಯಾಗಿ ಮೂರು ವರ್ಷಗಳಾಗಿದ್ದುವು. ಈ ಅವಧಿಯಲ್ಲಿ ಸಾರ್ವಜನಿಕ ಸಮಾರಂಭಗಳು ಇರದಿದ್ದ ಒಂದೇ ಒಂದು ದಿನವೂ ಇರಲಿಲ್ಲ. ಕೊನೆಗೆ ಯಾವುದಾದರೂ ವಿದ್ಯುತ್ ಚಿತಾಗಾರದ ಉದ್ಘಾಟನೆಯಾದರೂ ಇದ್ದೇ ಇರುತ್ತಿತ್ತು. ಈ ದಿನ ಅಂಥದನ್ನೂ ಮಾಡುವಂತಿಲ್ಲ. ತಮ್ಮನ್ನು, ಸ್ವಾಗತ ಭಾಷಣದಲ್ಲಿ ಸಾಕ್ಷಾತ್ ಧನ್ವಂತರಿ ಇತ್ಯಾದಿ ಹೊಗಳದೇ ಇದ್ದ ದಿನ ಅವರು ಬೇಸರಪಡದೆ ಇರುವುದು ಹೇಗೆ?

ಇದ್ದಕ್ಕಿದ್ದಂತೆ ಅವರಿಗೆ ಒಂದು 'ಪಳಾನು' ಹೊಳೆಯಿತು. ಅದರಂತೆ ತಮ್ಮ ಆಪ್ತ ಕಾರ್ಯದರ್ಶಿಯವರನ್ನು ಕರೆದು ದೊಡ್ಡಾಸ್ಪತ್ರೆಯ ದಿಢೀರ್ ತನಿಖೆಗೆ ತಮ್ಮನ್ನು ಕರೆದುಕೊಂಡು ಹೋಗುವಂತೆ ಅಪ್ಪಣೆ ಮಾಡಿದರು.

ಮಂತ್ರಿವರ್ಯರು ತಮ್ಮ ಆಪ್ತಕಾರ್ಯದರ್ಶಿಯೊಡನೆ ಆಸ್ಪತ್ರೆ ತಲುಪಿದಾಗ ಬೆಳಗಿನ ಹತ್ತು ಗಂಟೆ. ಒಂದು ವಾರ್ಡಿನೊಳಕ್ಕೆ ನುಗ್ಗಿದರು. ತಡೆಯಲಾರದ ದುರ್ವಾಸನೆ, ಕಷ್ಟಪಟ್ಟು ಮೂಗು ಮುಚ್ಚಿಕೊಂಡು ಒಳಕ್ಕೆ ತೂರಿಕೊಂಡರು. ಅವಸರದಲ್ಲಿ ಅವರು ನೆಲದ ಮೇಲೆ ಮಲಗಿದ್ದ ಒಬ್ಬ ರೋಗಿಯನ್ನು ತುಳಿದರು. ಮೊದಲೇ

ಯಾತನೆಯಿಂದ ನರಳುತ್ತಿದ್ದ ಆತ ಮೈಮೇಲೆ ಅನಿರೀಕ್ಷಿತವಾಗಿ ಬಿದ್ದ ಯಮಭಾರದಿಂದಾಗಿ ನೋವು ತಡೆಯಲಾರದೆ 'ನಿನ್ನ ಮನೆ ಹಾಳಾಗ' ಎಂದು ಅಶೀರ್ವದಿಸಿದ. ಮಂತ್ರಿಯವರಿಗೆ ಸ್ವಲ್ಪವೂ ಬೇಸರವಾಗಲಿಲ್ಲ. ಏಕೆಂದರೆ ಸಾರ್ವಜನಿಕ ಸಭೆಗಳಲ್ಲಿ ಅವರು ಕೇಳಿದ್ದ ಬೈಗುಳಗಳಲ್ಲಿ ಇದು ಅತ್ಯಂತ ಸೌಮ್ಯವಾದುದಾಗಿತ್ತು.

ಸ್ವಲ್ಪ ಮುಂದೆ ಹೋಗಿ ಮಂತ್ರಿ ಮಹೋದಯರು ಮೂಗಿನಿಂದ ಕರವಸ್ತ್ರವನ್ನು ಸ್ವಲ್ಪ ಮಾತ್ರ ಸರಿಸಿದರು. ಗಬ್ ಎಂದು ಮತ್ತೆ ವಾಸನೆ ಹೊಡೆಯಿತು. ಇಷ್ಟರಲ್ಲಿ ತಮ್ಮ ಇಲಾಖೆಯ ಮಂತ್ರಿಗಳು ತಮ್ಮ ಆಸ್ಪತ್ರೆಗೆ ದಯಮಾಡಿಸಿರುವುದು ತಿಳಿದು ಆಸ್ಪತ್ರೆಯ ಮುಖ್ಯಾಧಿಕಾರಿಗಳು ಹಾಜರಾಗಿ, ಕೈ ಮುಗಿದು ಹಲ್ಲು ಬಿಡುತ್ತಾ ನಮ್ರತೆಯನ್ನು ಪ್ರದರ್ಶಿಸಲು ಪ್ರಯತ್ನಿಸುತ್ತಾ ನೃತ್ಯ ಭಂಗಿಯಲ್ಲಿ ನಿಂತರು. ಮಂತ್ರಿಗಳು ತನಿಖೆಯನ್ನು ಪ್ರಾರಂಭಿಸಿದರು.

ಮಂತ್ರಿಗಳು : ಏನ್ರಿ ಇದು ಗಬ್ಬುನಾತ? ಎಲ್ಲಿಂದ ಬರ್ತಾ ಇದೇರಿ?

ಮುಖ್ಯಾಧಿಕಾರಿಗಳು : ಅದು ಹೇಳೋದು ಕಷ್ಟ ಸಾರ್!

ಮಂ : ಏನ್ರೀ ಹಾಗಂದರೆ? ಪ್ರತಿಯೊಂದಕ್ಕೂ ಒಂದು ಕಾರಣ ಇರುತ್ತೆ ಅಂತ ಕೇಳಿಲ್ಲವೇನ್ರಿ? ಗಬ್ಬುನಾತ ಇದ್ದಮೇಲೆ ಅದಕ್ಕೆ ಕಾರಣ ಇರಲೇ ಬೇಕಲ್ಲವೇ?

ಮು : ಇದೆ ಸಾರ್ ಒಂದು ಕಾರಣ ಅಲ್ಲ ಸಾರ್, ಹತ್ತಾರು ಇದೆ. ಈ ಆಸ್ಪತ್ರೆಯ ನಲ್ಲಿಗಳಲ್ಲಿ ನೀರು ಬಂದು ಎರಡು ದಿನ ಆಗಿದೆ. ಹಾಗಾದ್ದರಿಂದ ಯಾವ ಕಕ್ಕಸನ್ನೂ ತೊಳೆದಿಲ್ಲ ಸಾರ್. ಅಲ್ಲಿಂದಲೂ ಗಬ್ಬುನಾತ ಬರುತ್ತಿದೆ.

ಮಂ : ಮಳೆಯೇ ಇಲ್ಲ. ಇನ್ನು ನಲ್ಲಿಯಲ್ಲಿ ನೀರು ಹೇಗ್ರಿ ಬರುತ್ತೆ? ನಮ್ಮ ಮಹಾ ಯೋಗಿಗಳಿಗೆ ಹೇಳಿದ್ದೇನೆ. ಅವರು ಜಪ ಮಾಡುತ್ತಿದ್ದಾರೆ. ಮಳೆ ಬಂದೇ ಬರುತ್ತೇರಿ. ಆ ಮೇಲೆ ನೀರೂ ಬರುತ್ತೆ. ಆ ಮೇಲೆ ತಕ್ಷಣ ಬಾತ್ ರೂಂ ಕ್ಲೀನ್ ಮಾಡಿಸಿ.

ಮು : ಸರಿ ಸಾರ್.

ಮಂ : ಮತ್ತೆ ಇನ್ನೆಲ್ಲಿಂದ ವಾಸನೆ ಬರುತ್ತೀರಿ?

ಮು : ಈ ಹಾಸಿಗೆ ಬಟ್ಟೆಗಳದ್ದು ಸಾರ್.

ಮಂ : ಏನು? ಹಾಸಿಗೆ ಬಟ್ಟೆಗಳೆ? ಯಾಕೆ, ಅವುಗಳನ್ನು ಓಗೆಸೋದಿಲ್ವೇನ್ರಿ?

ಮು : ಒಗಿಸ್ತೀವಿ ಸಾರ್, ಇರೋದು ತಲಾ ಎರಡೇ ಜೊತೆ. ಅವೂ ಹರಿದು ಚಿಂದಿಯಾಗಿವೆ. ಅವುಗಳಲ್ಲಿ ಒಂದು ಸೆಟ್ ಅಗಸನಿಗೆ ಹಾಕಿದ್ದೀವಿ. ಅವನು ಹದಿನೈದು ದಿನದಿಂದ ಬಂದೇ ಇಲ್ಲ. ಬಂದ ಮೇಲೆ ಬದಲಾಯಿಸ್ತೀವಿ ಸಾರ್,

ಮಂ : ನಾನ್‌ಸೆನ್ಸ್ ಒಂದು ಜೊತೆ ಬಟ್ಟೆ – ಎಷ್ಟು ಬಟ್ಟೇರಿ ಇವೆ ಇಲ್ಲಿ? .

ಮು : ಸುಮಾರು ಎರಡು ಸಾವಿರ ಸಾರ್.

ಮಂ : ಅಬ್ಬಬ್ಬ, ಅಷ್ಟನ್ನು ಜನಗಳೇ ಒಗೆದು ಹಾಕಬೇಕೇನ್ರಿ. ಯಾವು ಯಾವುದಕ್ಕೋ ಯಂತ್ರ ಪಂತ್ರ ಬಂದದೆ. ಬಟ್ಟೆ ಒಗೆಯೋಕೆ ಯಂತ್ರ ತಯಾರಾಗಿಲ್ವೇನ್ರಿ?

ಮು : ಆಗಿವೆ ಸಾರ್. ಅಷ್ಟು ಬಟ್ಟೆ ಒಗೆಯೋ ಯಂತ್ರ ನಮ್ಮ ದೇಶದಲ್ಲಿ ತಯಾರಾಗ್ತಾ ಇಲ್ಲ.

ಮಂ : ಮತ್ತೆ ಯಾವ ದೇಶದಲ್ಲಿ ತಯಾರಾಗ್ತಾ ಇದೆ?

ಮು : ಜರ್ಮನಿ, ಜಪಾನು, ಇಂಗ್ಲೆಂಡ್, ಅಮೇರಿಕಾ....

ಮಂ : ಸಾಕು, ನಿಲ್ಲಿಸಿ, ನಾನು ಇವತ್ತೇ ಒಂದು ಯಂತ್ರಕ್ಕೆ ಮಂಜೂರಾತಿ ನೀಡ್ತೀನಿ, ಆರ್ಡರ್ ಮಾಡ್ರಿ

ಮು : ಸರಿ ಸಾರ್.

ಮಂತ್ರಿಗಳ ಮನಸ್ಸಿನಲ್ಲಿಯೂ ಮುಖ್ಯಾಧಿಕಾರಿಗಳ ಮನಸ್ಸಿನಲ್ಲಿಯೂ ಜರ್ಮನಿ, ಜಪಾನು, ಇಂಗ್ಲೆಂಡು, ಅಮೆರಿಕಾ ದೇಶಗಳು ಏಕ ಕಾಲದಲ್ಲಿ ಸುಳಿದು ಇಬ್ಬರೂ ಪ್ರತ್ಯೇಕ ಪ್ರತ್ಯೇಕವಾಗಿ ಹಿರಿಹಿರಿ ಹಿಗ್ಗಿದರು. ಅಲ್ಲಿಗೆಲ್ಲ ತಾನೇ ಖುದ್ದಾಗಿ ಭೇಟಿ ಕೊಟ್ಟು, ಯಂತ್ರಗಳನ್ನು ಪರಿಶೀಲಿಸಿ ಆರ್ಡರ್ ಕೊಡುವ ದಿನಗಳನ್ನು ನೆನೆದು ಖುಷಿಪಟ್ಟರು.

ತನಿಖೆ ಹಠಾತ್ತನೆ ಮುಗಿಯಿತು. ಏಕೆಂದರೆ ಕೆಟ್ಟನಾತ ಹೆಚ್ಚಿ ಆ ವೇಳೆಗೆ ಮಾನ್ಯ ಮಂತ್ರಿಗಳ ಹೊಟ್ಟೆ ತೊಳಸಿ ಅಲ್ಲಿದ್ದುದೆಲ್ಲ ಹೊರಬರುವ ಸೂಚನೆಗಳು ಕಂಡುವು. ಅವರು ಜಾಗ ಖಾಲಿ ಮಾಡಿದರು. ಒಗೆಯುವ ಯಂತ್ರದ ಮಹಾಪುರಾಣ ಇಲ್ಲಿಂದ ಪ್ರಾರಂಭ.

ಮನೆಗೆ ಹೋದ ಮಂತ್ರಿಗಳು ಒಗೆಯುವ ಯಂತ್ರದ ವಿಷಯವನ್ನು ಮರೆತೇ ಬಿಟ್ಟರು. ಆದರೆ ಮುಖ್ಯಾಧಿಕಾರಿಗಳು ಮರೆಯಲು ಸಾಧ್ಯವೇ ಇರಲಿಲ್ಲ. ಅದರ ಬೆಲೆಯನ್ನು ಊಹಿಸಿ ಈ ವ್ಯವಹಾರ ಕುದುರಿದರೆ ದೊರೆಯಬಹುದಾದ ಕಮಿಷನ್ನನ್ನು ಊಹಿಸಿ ಅದು ತಮ್ಮ ಮನೆಯ ನೆಲಮಾಳಿಗೆಯ ಕಪ್ಪು ಹಣದ ರಾಶಿಯನ್ನು ಹೆಚ್ಚಿಸುವುದನ್ನು ನೆನೆದು ಹಿಗ್ಗಿದರು.

ಆರೋಗ್ಯ ಮಂತ್ರಿಗಳ ಭೇಟಿ, ಗಬ್ಬು ವಾಸನೆ ಹಬ್ಬಿ ಮಂತ್ರಿಗಳಿಗೂ ಅವರ ಆಪ್ತ ಕಾರ್ಯದರ್ಶಿಗೂ ಆದ ಅನಾನುಕೂಲ, ಅದರ ನಡುವೆಯೂ ಕರ್ತವ್ಯ ಪ್ರಜ್ಞೆಯಿಂದ ಮಾನ್ಯ ಮಂತ್ರಿಗಳು ನಡೆಸಿದ ತನಿಖೆ, ಮಾತುಕತೆ ಎಲ್ಲವನ್ನು ಟಿಪ್ಪಣಿ ಮಾಡಿದರು ಮುಖ್ಯಾಧಿಕಾರಿಗಳು. ಜೊತೆಗೆ ನಾಲ್ಕು ಸಾವಿರ ಬಟ್ಟೆಗಳನ್ನು ಏಕಕಾಲದಲ್ಲಿ ಒಗೆಯಬಲ್ಲ ಭಾರೀ ಪ್ರಮಾಣದ ಒಗೆಯುವ ಯಂತ್ರವನ್ನು ಕೊಳ್ಳಲು ಅಪ್ಪಣೆ ಬೇಡಿ ಕಾಗದ ಕಳುಹಿಸಿದರು.

ಹದಿನೈದು ದಿನಗಳಲ್ಲಿ ಅದಕ್ಕೆ ಉತ್ತರ ಬಂತು. ನೂರಾರು ಜನ ಅಗಸರು ನಿರುದ್ಯೋಗಿಗಳಾಗಿ ಕಷ್ಟಪಡುತ್ತಿರುವ ಈ ದೇಶದಲ್ಲಿ ಅವರಿಗೆ ಉದ್ಯೋಗ ಒದಗಿಸುವ ಬದಲು ದುಬಾರಿ ಯಂತ್ರಕ್ಕೆ ಬೇಡಿಕೆ ಸಲ್ಲಿಸಿರುವ ಬಗ್ಗೆ ಆಸ್ಪತ್ರೆಯ ಮುಖ್ಯಾಧಿಕಾರಿಗಳಿಗೆ ಆರೋಗ್ಯ ಇಲಾಖೆಯ ಕಾರ್ಯದರ್ಶಿಗಳು ಚೆನ್ನಾಗಿ ಛೀಮಾರಿ ಹಾಕಿದ್ದರು. ಮುಖ್ಯಾಧಿಕಾರಿಗಳು ಕಾರ್ಯದರ್ಶಿಗಳನ್ನು ಭೇಟಿ ಮಾಡಿ ಅವರ ಮುಂದೆ ಹಲ್ಲು ಕಿರಿದರು. ಕಿರಿಯಲು ತಮ್ಮದೇ ಹಲ್ಲುಗಳು ಸಾಲುವುದಿಲ್ಲವೆಂದು ತಿಳಿದು ಜೊತೆಗೆ ತಮ್ಮ ಕೆಲವು ಸಹೋದ್ಯೋಗಿಗಳನ್ನೂ ಕರೆದುಕೊಂಡು ಹೋಗಿದ್ದರು. ಮಂತ್ರಿಗಳ ಖುದ್ದು ಭೇಟಿ ಸಮಯದಲ್ಲಿ ನಡೆದುದನ್ನೆಲ್ಲ ಸಂಕ್ಷೇಪವಾಗಿ ವಿವರಿಸಿಲು ಐದಾರು ಜನ ಏಕಕಾಲದಲ್ಲಿ ಪ್ರಯತ್ನಿಸಿ ಕಾರ್ಯದರ್ಶಿಗಳನ್ನು ಗೊಂದಲದಲ್ಲಿ ಕೆಡವಿದರು. 'ಮಂತ್ರಿಗಳು' ಎಂಬ ಮಾತನ್ನು ಕೇಳಿದ ಕೂಡಲೇ ಕಾರ್ಯದರ್ಶಿಗಳ ಹೆಡೆ ಮುಚ್ಚಿತು. ಕಾರ್ಯದರ್ಶಿಗಳು ಥರ ಥರ ನಡುಗಿದುದನ್ನು ಕಂಡ ಮುಖ್ಯಾಧಿಕಾರಿಗಳಿಗೆ ಆದ ಸಂತೋಷವನ್ನು ವರ್ಣಿಸುವುದು ಕಷ್ಟ ಕಾರ್ಯದರ್ಶಿಗಳು ಹಂದೀದುರ್ಗ ರಸ್ತೆಯಲ್ಲಿ ಕೇವಲ ಎಪ್ಪತ್ತೈದು ಲಕ್ಷ ರೂಪಾಯಿಗಳ

ವೆಚ್ಚದಲ್ಲಿ ಮನೆ ಕಟ್ಟಿಸುತ್ತಿದ್ದರು. ಅವರಿಗೆ ಈ ಹಂತದಲ್ಲಿ ವರ್ಗ ಬೇಕಾಗಿರಲಿಲ್ಲ. ಆದ್ದರಿಂದ ಅವರು ಇಲಾಖಾ ಮುಖ್ಯಸ್ಥರು ಕಳುಹಿಸಿದ್ದ ಇಪ್ಪತ್ತೈದು ಪುಟಗಳ ಅಹವಾಲಿನ ಕೊನೆಯಲ್ಲಿ ಹೀಗೆಂದು ತಮ್ಮ ಅಪ್ಪಣೆಯನ್ನು ಕೊರೆದು ರುಜು ಮಾಡಿದರು; ನಿಯಮಗಳ ಪ್ರಕಾರ ಕೊಟೇಷನ್ ಕರೆದು ಅತ್ಯಂತ ಕಡಿಮೆ ಕೊಟೇಷನ್ ಕೊಡುವವರಿಂದ ಒಗೆಯುವ ಯಂತ್ರವನ್ನು ಕೊಳ್ಳತಕ್ಕದ್ದು. ಅದರ ವೆಚ್ಚ ಲಕ್ಷ ರೂಪಾಯಿಗಳನ್ನು ಮೀರುವಂತಿಲ್ಲ.

ಇಪ್ಪತ್ತೊಂದು ದಿನಗಳ ಅನಂತರ ಕಾರ್ಯದರ್ಶಿಯವರ ಮಂಜೂರಾತಿ ಆಸ್ಪತ್ರೆಯ ಮುಖ್ಯಾಧಿಕಾರಿಗಳಿಗೆ ತಲುಪಿತು. ಇಬ್ಬರೂ ಒಂದೇ ಊರಿನಲ್ಲಿ ಇದ್ದುದರಿಂದಲೂ, ಮುಖ್ಯಾಧಿಕಾರಿಗಳು ತಮ್ಮ ಆಪ್ತ ಕಾರ್ಯದರ್ಶಿಯವರನ್ನು ಒಂಬತ್ತು ಸಲ ಮುಖ್ಯ ಕಛೇರಿಗೆ ಓಡಿಸಿದ್ದುದರಿಂದಲೂ ಈ ಪವಾಡ, ಎಂದರೆ ಇಪ್ಪತ್ತೊಂದೇ ದಿನಗಳಲ್ಲಿ ಈ ಅದ್ಭುತವಾದ ಟಿಪ್ಪಣಿಯನ್ನು ಲಿಖಿತ ರೂಪದಲ್ಲಿ ಹೊತ್ತ ನಿರೂಪ ತಲುಪುವ ಪವಾಡ ನಡೆಯಿತು.

ಅವನ್ನು ಓದಿ ಮುಖ್ಯಾಧಿಕಾರಿಗಳ ಎದೆ ಧಸ್ಸೆಂದಿತು. 'ಸಾಧ್ಯವಿಲ್ಲ. ಸರ್ಕಾರದಲ್ಲಿ ಹಣವಿಲ್ಲ, ಮುಂದೆ ಇಂಥ ದುಬಾರಿ ಯೋಜನೆಗಳಿಗೆ ಹಣ ಕೇಳಬಾರದೆಂದು ಎಚ್ಚರಿಸಲಾಗಿದೆ' ಎಂಬ ಅರ್ಥದ ಉತ್ತರವನ್ನು ಅವರು ನಿರೀಕ್ಷಿಸುತ್ತಿದ್ದರು. ಅವರು ಹಾಗೆ ಆಶಾಭಾವನೆಯಿಂದ ಇರುವುದಕ್ಕೆ ಕಾರಣಗಳೂ ಇದ್ದವು. 'ಸಾಧ್ಯವಿಲ್ಲ ಎನ್ನುವುದು ಅವರು ಮಂಡಿಸುತ್ತಿದ್ದ ಎಲ್ಲ ಬೇಡಿಕೆಗಳಿಗೂ ಸಾಮಾನ್ಯವಾಗಿ ತಪ್ಪದೆ ಬರುತ್ತಿದ್ದ ಉತ್ತರ. 'ಸರ್ಕಾರದಲ್ಲಿ ಹಣವಿಲ್ಲ' 'ನೀರುಹಾವಿನಲ್ಲಿ ವಿಷವಿಲ್ಲ' ಎನ್ನುವಷ್ಟೇ ಸರ್ವೆ ಸಾಧಾರಣವಾಗಿ, ಬೀದಿಯಲ್ಲಿ ಆಡುವ ಮಕ್ಕಳಿಗೂ ಗೊತ್ತಿದ್ದ ವಿಷಯ. ಮೊನ್ನೆಯಷ್ಟೇ ಅವರೇ ನೀಡಿದ್ದ ಎಂಬತ್ತೈದು ರೂಪಾಯಿಗಳ ಚೆಕ್ಕು ಬ್ಯಾಂಕಿನಿಂದ ಅವಮಾನಿತವಾಗಿ ಹಿಂದಕ್ಕೆ ಬಂದಿತ್ತು. ಈ ಎಲ್ಲ ಹಿನ್ನೆಲೆಯಲ್ಲಿ ಮಂಜೂರಾತಿಗೆ ಏನು ಅರ್ಥ?

ಮುಖ್ಯಾಧಿಕಾರಿಗಳನ್ನು ದಿಗಿಲುಗೊಳಿಸಲು ಮುಖ್ಯವಾದ ಅಂಶವೆಂದರೆ ಒಂದು ಯಾವ ಒಗೆಯುವ ಯಂತ್ರವನ್ನು ಕೊಳ್ಳುವ ವಿಧಾನ ಯಾವುದು ಎಂಬುದು ಅವರಿಗೆ ನಿಜವಾಗಿಯೂ ತಿಳಿಯದೇ ಇದ್ದದ್ದು. ಆಸ್ಪತ್ರೆಗೆ ಬೇಕಾಗುವ ಎಲ್ಲ ಸಲಕರಣೆಗಳೂ ಮಂಚ, ಹಾಸಿಗೆ, ಔಷಧಗಳು, ಶಸ್ತ್ರ ಚಿಕಿತ್ಸೆಯ ಉಪಕರಣಗಳು – ಎಲ್ಲವೂ ಈ ದೇಶದ ಯಾವ ಮೂಲೆಗಳಲ್ಲಿ ತಯಾರಾಗುತ್ತವೆ ಎಂಬುದನ್ನು ಅವರು ಬಲ್ಲವರಾಗಿದ್ದರು. ಮುಟ್ಟಿದ ಕೂಡಲೇ ಲೊಟಕ್ ಎಂದು ಮುರಿದುಹೋಗುವ ಸಾಮಗ್ರಿಗಳನ್ನು ಯಾರು ತಯಾರಿಸುತ್ತಾರೆ, ಯಾವ ಅಂಗಡಿಯವನು ಇಲ್ಲದ ಹತ್ತು ಬೇರೆ ಬೇರೆ ಅಂಗಡಿಗಳ ಹೆಸರಿನಲ್ಲಿ ಹೇಗೆ ಕ್ಷಣಾರ್ಧದಲ್ಲಿ ಕೊಟೇಷನ್‌ಗಳನ್ನು ತಯಾರಿಸಬಲ್ಲ, ಅತ್ಯಂತ ಕಡಿಮೆ ಕೊಟೇಷನ್ ಕೊಟ್ಟು, ಸಾಮಗ್ರಿಗಳನ್ನು ಒದಗಿಸಿ ಅತ್ಯಂತ ಹೆಚ್ಚು ಒಳ ಕಮಿಷನ್ ನೀಡಬಲ್ಲ ಎಂಬುದು ಅವರ ಬೆರಳುಗಳ ತುದಿಯಲ್ಲಿದ್ದ ವಿಷಯಗಳಾಗಿದ್ದುವು. ವಾಸ್ತವವಾಗಿ ಅವರಿಗೆ ಕಾಲು ಶತಮಾನದ ಹಿಂದೆ ಕಲಿತ ವೈದ್ಯ ವಿದ್ಯೆ ಮರೆತೇ ಹೋಗಿ ಈ ಅಂಕಿ ಅಂಶಗಳೇ ತುದಿನಾಲಗೆಯಲ್ಲಿದ್ದುವು. 'ಟೈಫಾಯಿಡ್‌ಗೆ ಔಷಧ ಏನು?' ಎಂದು ಯಾರಾದರೂ ಕೇಳಿದರೆ ಅವರು 'ಮಕನ್‌ಲಾಲ್ ಎಂಡ್ ಸನ್ಸ್' ಎಂದೋ, 'ಇಪ್ಪತ್ತೈದು ಪರ್ಸೆಂಟ್' ಎಂದೋ ಉತ್ತರ ಹೇಳಿಬಿಡುತ್ತಿದ್ದರು. ಅಂತಹ ಖದೀಮ ಅಧಿಕಾರಿಗೂ ಈ ಒಗೆಯುವ ಯಂತ್ರ ಎಂಬುದು ಭಾರೀ ರಾಕ್ಷಸನಂತೆ ಹಗಲೂ ರಾತ್ರಿ ಕಾಡತೊಡಗಿತು.

ಆಪ್ತರೆಂದು ತಿಳಿದ ಕೆಲವರನ್ನು ಅವರು ಒಗೆಯುವ ಯಂತ್ರದ ಬಗೆಗೆ ಗುಟ್ಟಾಗಿ ವಿಚಾರಿಸಿದರು. ಒಬ್ಬರು ಗಹಗಹಿಸಿ ನಕ್ಕರು. 'ನಿಮ್ಮ ಆಸ್ಪತ್ರೆಯ ಬಟ್ಟೆಗಳನ್ನು ಒಗೆದು ಶುದ್ಧಗೊಳಿಸುವುದು ಯಾವ ಯಂತ್ರಕ್ಕೂ ಸಾಧ್ಯವಿಲ್ಲದ ಕೆಲಸ. ಬಟ್ಟೆಗಳನ್ನೆಲ್ಲ ಒಟ್ಟು ರಾಶಿ ಹಾಕಿ ಸುಟ್ಟು ಬಿಡಿ' ಎಂದರು. ಪಕ್ಕದಲ್ಲಿದ್ದ ಇನ್ನೊಬ್ಬರು 'ಅವೆಲ್ಲಿ ಸುಡುತ್ತವೆ? ಕೃಷ್ಣ ಪರಮಾತ್ಮ ಇದನ್ನೇ 'ನೈನಂ ದಹತಿ ಪಾವಕ: ಬೆಂಕಿಯೂ ಸುಡುವುದಿಲ್ಲ' ಎಂದು ಹೇಳಿದ್ದು.

ಆದ್ದರಿಂದ ಎಷ್ಟು ಆಳ ತೆಗೆಸಿ ಹೂತರೆ ತಾನೆ ಏನು? ಅಲ್ಲಿಂದಲೂ ಗಬ್ಬುನಾತ ಎಂದು ಬರುತ್ತಿರುತ್ತದೆ' ಎಂದು ಹೇಳಿ ಗಹಗಹಿಸಿ ನಕ್ಕರು.

ತಮಗೆ ಯಾವುದೇ ದಿಕ್ಕಿನಿಂದಲೂ ಬೆಳಕು ಬರದೆ ಮುಖ್ಯಾಧಿಕಾರಿಗಳು ಮಂಕಾಗಿ ಕುಳಿತಿದ್ದಾಗ ಅವರ ತಲೆಯಲ್ಲಿ ಫಕ್ಕನೆ ಒಂದು ಆಲೋಚನೆ ಮಿಂಚಿತು. ತಾವೇ ಖುದ್ದಾಗಿ ಜಪಾನ್, ಜರ್ಮನಿ, ಇಂಗ್ಲೆಂಡ್, ಅಮೆರಿಕಾ ಮುಂತಾದ ದೇಶಗಳಿಗೆ ಭೇಟಿ ಕೊಟ್ಟು ಅಗ್ಗವಾದ ಒಂದು ಯಂತ್ರವನ್ನು ದುಬಾರಿ ಬೆಲೆಗೆ ಖರೀದಿಸಿದರೆ ಹೇಗೆ? ಯೋಚಿಸಿದಷ್ಟೂ ಅದೇ ಸರಿಯಾದ ದಾರಿ ಎಂದು ಅವರಿಗೆ ಖಚಿತವಾಗುತ್ತಾ ಹೋಯಿತು. ಒಂದೇ ಒಂದು ಅನಾನುಕೂಲ ಎದುರಾಯಿತು. ಆ ದೇಶಗಳಲ್ಲಿ ಕಳ್ಳ ರಶೀತಿ ಕೊಡುವುದು, ಕಮಿಷನ್ ನೀಡಿಕೆ ಮುಂತಾದುವು ಜಾರಿಯಲ್ಲಿವೆಯೋ ಇಲ್ಲವೋ? ಆದರೆ ಒಂದು ದೇಶದ ಪ್ರಧಾನಿ ಇಂಥದೊಂದು ವ್ಯವಹಾರದಲ್ಲಿ ಭಾರೀ ಕಮಿಷನ್ ಹೊಡೆದಿದ್ದು, ವಿಚಾರಣೆ ನಡೆದು ರಾಜೀನಾಮೆ ನೀಡಿದ ಎಂದು ಹಿಂದೆಯಷ್ಟೆ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದುದು ನೆನಪಿಗೆ ಬಂತು. ಆ ದೇಶಗಳಲ್ಲೂ ಈ ವ್ಯವಹಾರ ಇದೆ ಎಂದು ತಿಳಿದು ಅವರಿಗೆ ಸಮಾಧಾನವೂ ಆಯಿತು. ತಾವೇ ವಿದೇಶಗಳಿಗೆ ಭೇಟಿಕೊಟ್ಟು ಒಗೆಯುವ ಯಂತ್ರವೊಂದನ್ನು ಖರೀದಿ ಮಾಡಲೇಬೇಕಾಗಿ ಬಂದಿರುವ ಅವಶ್ಯಕತೆಯನ್ನು ಅವರು ಒತ್ತಿ ವಿವರಿಸಿ ಕಾರ್ಯದರ್ಶಿಯವರಿಗೆ ದೀರ್ಘವಾದ ಮನವಿಯನ್ನು ಕಳುಹಿಸಿದರು.

ಈ ಮನವಿಯನ್ನು ಪರಿಶೀಲಿಸಿದ ಸರ್ಕಾರದ ಕಾರ್ಯದರ್ಶಿಯವರ ಮನಸ್ಸು ಅನೇಕ ಭಾವನೆಗಳ ಆಡುಂಬೊಲವಾಯಿತು. ತಮ್ಮ ಕೆಳ ಅಧಿಕಾರಿಯೊಬ್ಬನ ಧಾರ್ಷ್ಟದ ಬಗ್ಗೆ ಕೋಪ ಬಂತು. ಆದರೆ ತುಂಬ ಬುದ್ಧಿವಂತರಾದ್ದರಿಂದ ತಕ್ಷಣವೇ ಕೋಪವನ್ನು ಬಿಟ್ಟು ಅವನ ಬಗ್ಗೆ ಮೆಚ್ಚುಗೆಯ ಭಾವವನ್ನು ತಾಳಿದರು. ಗುಣಕ್ಕೆ ಮತ್ಸರವೇಕೆ ಎಂದು ಕೊಂಡರು. ವಿದೇಶಕ್ಕೆ ಹೋಗಿ ಯಂತ್ರವನ್ನು ನೋಡಿದ ಮೇಲೆಯೇ ಕೊಳ್ಳಬೇಕು ಎಂಬ ಐಡಿಯಾ ಅವನದ್ದೇ. ಆದರೆ ಅವನು ಮೂರ್ಖ, ಐಡಿಯಾ ಕೊಟ್ಟು ಹಾಳಾದ. ಇಂಥ ಮುಖ್ಯವಾದ ಕೆಲಸಕ್ಕೆ ತಾ ಹೋಗುವುದೇ ಸರಿ. ಆದರೆ ಹಂದೀದುರ್ಗದ ರಸ್ತೆಯಲ್ಲಿ ಕಟ್ಟುತ್ತಿರುವ ಪುಟ್ಟ ಮನೆಯ ಗೋಡೆಗಳು ಭರಭರನೆ ಮೇಲೇರುತ್ತಿರುವಾಗ ತಾವು ತಿಂಗಳುಗಟ್ಟಲೆ ವಿದೇಶಕ್ಕೂ ಸುತ್ತುತ್ತಿದ್ದರೆ ಹೇಗೆ? ಸಾಧ್ಯವಿಲ್ಲದ ಮಾತು. ಅಲ್ಲದೆ ಹೇಗೂ ಈ ಯೋಜನೆಗೆ ಮಂತ್ರಿಗಳ, ಏಕಸಚಿವ ಸಂಪುಟದ ಮಂಜೂರಾತಿಯೂ ಬೇಕಾಗುತ್ತದೆ. ಅಲ್ಲಿಗೆ ಈ ಐಡಿಯಾ ಹೋದರೆ ಕನಿಷ್ಠ ಆರು ಜನ ಮಂತ್ರಿಗಳು ನಾನು ತಾನು ಎಂದು ಮುಂದಾಗುತ್ತಾರೆ. ಕಡೆಗೂ ಅವರಲ್ಲಿ ಬಲಿಷ್ಠರಾದ ಒಬ್ಬರು ಸಂಸಾರ ಸಮೇತ ವಿದೇಶಯಾತ್ರೆಗೆ ಹೊರಟೇ ಬಿಡುತ್ತಾರೆ. ಛೇ, ಇದನ್ನು ಮೊಳಕೆಯಲ್ಲೇ ಚಿವುಟಿ ಹಾಕಬೇಕು ಎಂಬ ಧೀರ ನಿರ್ಧಾರವನ್ನು ಕೈಗೊಂಡರು. 'ಸರಕಾರದ ಹಣದ ದುಂದು ವೆಚ್ಚದ ಇಂಥ ಯೋಜನೆ ಒಪ್ಪುವುದು ಸಾಧ್ಯವೇ ಇಲ್ಲ. ಇದೇ ಕೊನೆಯ ಎಚ್ಚರಿಕೆ' ಎಂದು ಟಿಪ್ಪಣಿ ಬರೆದು ಮನವಿಯನ್ನು ಹಿಂದಕ್ಕೆ ಕಳಿಸಿಬಿಟ್ಟರು.

ನ್ಯಾಯವಾಗಿ ಈ ಪ್ರಕರಣ ಇಲ್ಲಿಗೇ ಮುಗಿಯಬೇಕಾಗಿತ್ತು. ಆದರೆ ಮರುದಿನ ಪತ್ರಿಕೆಗಳು ಆರೋಗ್ಯ ಸಚಿವರು ಮಾಡಿದ್ದ ಒಂದು ಭಾಷಣದ ಒಂದು ವಾಕ್ಯವನ್ನು ದಪ್ಪ ದಪ್ಪ ಅಕ್ಷರಗಳಲ್ಲಿ ಪ್ರಕಟಿಸಿದವು; 'ನಗರದ ದೊಡ್ಡಾಸ್ಪತ್ರೆಗೆ ಸದ್ಯದಲ್ಲೇ ವಿದ್ಯುತ್ ಚಾಲಿತ ಒಗೆಯುವ ಯಂತ್ರ....' ಹಿಂದಿನ ದಿನ ಹೊಸ ಧೋಬೀಘಾಟನ್ನು ಉದ್ಘಾಟಿಸುತ್ತಾ ಮಾನ್ಯ ಸಚಿವರು ಈ ರಹಸ್ಯವನ್ನು ಬಯಲು ಮಾಡಿದ್ದರು. ಆ ಯಂತ್ರ ಬಂದರೆ ತಮಗೆ ಒಗೆಯಬಹುದಾದ ನಷ್ಟಗಳನ್ನು ಮಡಿವಾಳರು ಸ್ವಲ್ಪವೂ ಯೋಚಿಸದೆ, ಸದ್ಯ ತಮಗೆ, ಇಡೀ ದಿನ ಮಂಡಿಯೆತ್ತರ ನೀರಿನಲ್ಲಿ ನಿಂತು ಅತ್ಯಂತ ಕೊಳಕಾದ ಬಟ್ಟೆಗಳನ್ನು ಒಗೆಯಬೇಕಾದ ಕಷ್ಟ ತಪ್ಪುತ್ತದೆಯಲ್ಲ ಎಂದು ಅವರು ಬಹಳ ಹೊತ್ತು ಗಟ್ಟಿಯಾಗಿ ಚಪ್ಪಾಳೆ ತಟ್ಟಿದರು. ಸಂತೋಷ ಸೂಚಕ ಪ್ರತಿಕ್ರಿಯೆಯಿಂದ ಉತ್ತೇಜಿತರಾದ

ಸಚಿವರು ಮಾರನೇ ದಿನ ಆಸ್ಪತ್ರೆಯ ಮುಖ್ಯಾಧಿಕಾರಿಗಳಿಗೆ ಫೋನ್ ಮಾಡಿ 'ಒಗೆಯುವ ಯಂತ್ರ ಬಂತೇ?' ಎಂದು ವಿಚಾರಿಸಿದರು. ಇವರು ಏನೇನೋ ಸಬೂಬುಗಳನ್ನು ತೊದಲುವುದರಲ್ಲಿಯೇ ಅವರು 'ನೀವು ಶುದ್ಧ ನಾಲಾಯಖ್' ಎಂದು ಸರ್ಟಿಫಿಕೇಟ್ ನೀಡಿ 'ಬೇಗ ತರಿಸಿ' ಎಂದು ಅಪ್ಪಣೆ ಮಾಡಿ ಫೋನ್ ಕುಕ್ಕಿಬಿಟ್ಟರು.

ಮುಖ್ಯಾಧಿಕಾರಿಗಳಿಗೆ ಪೀಕಲಾಟಕ್ಕೆ ಬಂತು. ಅಂಥ ಯಂತ್ರ ಎಲ್ಲಿ ದೊರೆಯುತ್ತದೆ. ಎಂಬುದು ಅವರಿಗೆ ಖಚಿತವಾಗಿ ತಿಳಿಯದು. ಅವರ ಹೆಂಡತಿಯ ತಮ್ಮ ಒಬ್ಬ ಜರ್ಮನಿಯಲ್ಲಿದ್ದ. ದೂರವಾಣಿಯ ಮೂಲಕ, ತಮಗೆ ಬಂದಿದ್ದ ಕಷ್ಟವನ್ನು ಅವನಿಗೆ ರವಾನಿಸಿದರು. ಅವನು ಅದು ಹತ್ತೇ ನಿಮಿಷಗಳಲ್ಲಿ ಪರಿಹಾರ ಮಾಡಬಹುದಾದದ್ದು ಎಂದ. ಆ ಯಂತ್ರವನ್ನು ತಯಾರು ಮಾಡುವ ಕಂಪನಿಯ ವಿಳಾಸವನ್ನು ಮಾರನೇ ದಿನವೇ ತಿಳಿಸುವುದಾಗಿ ಹೇಳಿದ. ಅನೇಕ ದಿನಗಳ ಬಳಿಕ ಆ ರಾತ್ರಿ ಮುಖ್ಯಾಧಿಕಾರಿಗಳು ಸುಖವಾಗಿ ನಿದ್ದೆ ಮಾಡಿದರು.

ಕಾಲಕ್ರಮದಲ್ಲಿ ಬೇಕಾದ ವಿವರಗಳು ದೊರೆತವು. ನಾಲ್ಕು ಸಾವಿರ ಏಕೆ, ಐದು ಸಾವಿರ ಬಟ್ಟೆಗಳನ್ನು ಬೇಕಾದರೂ – ಅವು ಸರ್ಕಾರಿ ಆಸ್ಪತ್ರೆಯ ಹೊಲಸು ಬಟ್ಟೆಗಳೇ ಆಗಿರಲಿ – ಶುಭ್ರಗೊಳಿಸಿ ಆಚೆಗೆ ಎಸೆಯಬಲ್ಲ ಯಂತ್ರದ ಬೆಲೆ ಕೇವಲ ಎರಡು ಲಕ್ಷದ ಹತ್ತು ಸಾವಿರದ ಮುನ್ನೂರು ರೂಪಾಯಿ ಎಂದು ಅದನ್ನು ತಯಾರಿಸುವ ಕಂಪನಿ ತಿಳಿಸಿತ್ತು. ಮುಖ್ಯಾಧಿಕಾರಿಗಳು ಕಾರ್ಯದರ್ಶಿಗಳಿಗೆ ಪತ್ರ ಬರೆದರು. ಅವರಿಂದ ಮೂರು ತಿಂಗಳ ಅನಂತರ ಉತ್ತರ ಬಂದಿತು. ಮಂಜೂರಾತಿ ನೀಡಿರುವುದು ಕೇವಲ ಎರಡು ಲಕ್ಷ ರೂಪಾಯಿಗಳಿಗೆ ಮಾತ್ರವೆಂದೂ ಏನು ಮಾಡಿದರೂ ಆ ಗೆರೆಯನ್ನು ದಾಟಕೂಡದೆಂದೂ ಅವರ ನಿರ್ದಾಕ್ಷಿಣ್ಯವಾಗಿ ತಿಳಿಸಿದರು. ತಮ್ಮ ಹಂದೀದುರ್ಗದ ಮನೆಯ ಕಟ್ಟಡಕ್ಕೆ ಬೇಕಾಗುವ ಖರ್ಚಿನ ಯಾವ ಬಾಬೂ ಈ ವ್ಯವಹಾರದಲ್ಲಿ ಗಿಟ್ಟುವುದಿಲ್ಲವೆಂದು ಅವರಿಗೆ ಖಚಿತವಾಗಿತ್ತು. ಮೂರು ತಿಂಗಳ ಮುಖ್ಯಾಧಿಕಾರಿಗಳು ವಿಧವಿಧವಾಗಿ ಅಂಗಲಾಚಿದ ಮೇಲೆ ಹೆಚ್ಚಿನ ಹಣಕ್ಕೂ ಕಾಲ ಮಂಜೂರಾತಿ ದೊರಕಿತು.

ಆರು ತಿಂಗಳ ಅನಂತರ ಭಾರೀ ಒಗೆಯುವ ಯಂತ್ರ ಬೊಂಬಾಯಿ ಬಂದರು ತಲುಪಿದೆಯೆಂದೂ ಅದನ್ನ ಅಲ್ಲಿಂದ ಬೆಂಗಳೂರಿಗೆ ತರಿಸಿಕೊಳ್ಳುವ ಜವಾಬ್ದಾರಿ ಆಸ್ಪತ್ರೆಯ ಮುಖ್ಯಾಧಿಕಾರಿಗಳದ್ದೆಂದೂ ಸರ್ಕಾರದಿಂದ ಲಿಖಿತ ನಿರೂಪ ಬಂದಿತು. ಅಂಥದೊಂದು ಯಂತ್ರ ಬರುತ್ತದೆ ಎಂಬ ವಿಷಯವನ್ನು ಮರೆತೇಬಿಟ್ಟಿದ್ದ ಮುಖ್ಯಾಧಿಕಾರಿಗಳ ಕೈಕಾಲುಗಳು ಗಡಗಡನೆ ನಡುಗಿದುವು. ಅವರು ಎರಡು ಸುಮಾರು ತಿಂಗಳ ಹತ್ತಿರ ರಜೆ ಹಾಕಿದರು ಅವರಿಗೆ ಲಘು ಹೃದಯಾಘಾತ ಆಗಿದ್ದುದು ಹೌದು. ಇದೇ ಆಸ್ಪತ್ರೆಯಲ್ಲಿ ದಾಖಲಾದರೆ ತಮ್ಮ ಗತಿ ಮುಗಿದೇ ಹೋಗುತ್ತದೆ ಎಂದು ಸಕಾರಣವಾಗಿಯೇ ಭಯಪಟ್ಟರು. ಅವರಿನ್ನೂ ತಮ್ಮ ಆರನೆಯ ಮಗಳಿಗೆ ಮದುವೆ ಮಾಡಬೇಕಾಗಿತ್ತು. ಹೀಗಾಗಿ ಖಾಸಗೀ ನರ್ಸಿಂಗ್ ಹೋಂಗೆ ಸೇರಿಕೊಂಡರು. ಕೊನೆಗೊಮ್ಮೆ ಸ್ವಯಮಿಚ್ಛೆಯಿಂದ ಅವಧಿಗೆ ಒಂದು ವರ್ಷ ಮುಂಚೆಯೇ ನಿವೃತ್ತಿಯನ್ನು ಪಡೆದುಕೊಂಡು ಹಾಯಾಗಿ ಉಸಿರಾಡಿದರು.

ಹೊಸದಾಗಿ ಬಂದ ಮುಖ್ಯಸ್ಥರು ಕಾರ್ಯ ಸಮರ್ಥರು, ಯಂತ್ರ ಹತ್ತಾರು ಚಕ್ರಗಳ ಭಾರಿ ಲಾರಿಯಲ್ಲಿ ಬೆಂಗಳೂರು ತಲುಪುವಂತೆ ಮಾಡಿದರು. ಆದರೆ ಆ ಯಂತ್ರವನ್ನು ಅದರ ಭಾರೀ ಪೆಟ್ಟಿಗೆಯ ಸಮೇತ ಅದಕ್ಕಾಗಿ ಕಟ್ಟಿದ್ದ ಕಟ್ಟಡದೊಳಕ್ಕೆ ಸಾಗಿಸುವ ಕೆಲಸ ಅವರಿಂದಲೂ ಸಾಧ್ಯವಾಗಲಿಲ್ಲ. ಏಕೆಂದರೆ ಅದನ್ನು ಇಡಲೆಂದೇ ಕಟ್ಟಿಸಿದ್ದ ಕಟ್ಟಡ ಆ ಯಂತ್ರವನ್ನು ಹಿಡಿಸಲಾರದಷ್ಟು ಚಿಕ್ಕದಾಗಿತ್ತು!

ಮತ್ತೆ ಪತ್ರ ವ್ಯವಹಾರ ಪ್ರಾರಂಭವಾಯಿತು. ಈ ವೇಳೆಗೆ ಕಾರ್ಯದರ್ಶಿಗಳು ಹಂದೀದುರ್ಗದ ನಲವತ್ತು ಚದರದ ಪುಟ್ಟ ಮನೆಯ ಮೂಲೆಯ ಕೋಣೆಯಲ್ಲಿ ಕುಳಿತು ವಿಶ್ರಮಿಸಿಕೊಳ್ಳುತ್ತಿದ್ದರು. ಮುಖ್ಯಾಧಿಕಾರಿಗಳು ಅಲ್ಲಿಗೇ ಹತ್ತಾರು ಸಲ ಯಾತ್ರೆ ಕೈಗೊಂಡು ಒಗೆಯುವ ಯಂತ್ರವನ್ನು ಒಳಗೊಳ್ಳಬಲ್ಲ ಕಟ್ಟಡ ಕಟ್ಟಲು ಮಂಜೂರಾತಿ ಪಡೆದುಕೊಂಡರು. ಕಟ್ಟಡದ ಕೆಲಸ ಸರ್ಕಾರೀ ವೇಗದಲ್ಲಿ ನಡೆದು ಎಂಟೇ ತಿಂಗಳಲ್ಲಿ ಸಿದ್ಧವಾಯಿತು. ಮುಖ್ಯಾಧಿಕಾರಿಗಳು ವೈದ್ಯಕೀಯ ಡಿಗ್ರಿ ಪಡೆದಿದ್ದರೂ ರಾಹುಕಾಲ, ಗುಳಿಕಕಾಲ, ಆಷಾಢಮಾಸ ಯಮಗಂಡ ಕಾಲ, ಅಮಾವಾಸ್ಯೆ, ಏಕಾದಶಿ, ಮುಂತಾದುವನ್ನೆಲ್ಲ ಗಮನಕ್ಕೆ ತೆಗೆದುಕೊಳ್ಳದೆ ಆಪರೇಷನ್ ಕೂಡ ಮಾಡುತ್ತಿರಲಿಲ್ಲ. ಹೀಗಾಗಿ ಯಂತ್ರದ ಗೃಹಪ್ರವೇಶಕ್ಕೆ ತಾನೇ ಖುದ್ದಾಗಿ ಪಂಚಾಂಗ ಗುರ್ತಿಸಿ ಮುಹೂರ್ತ ನಿಶ್ಚಯಿಸಿದರು. ಮತ್ತೆ ಆರು ತಿಂಗಳು ಕಳೆಯಿತು.

ಈ ಮಧ್ಯೆ ಯಂತ್ರವು ತನ್ನ ಮರದ ಕವಚದಲ್ಲಿ ಹುದುಗಿ ಮಳೆಯಲ್ಲಿ ತೊಯ್ದು, ಬಿಸಿಲಿನಲ್ಲಿ ಬೆಂದು ಚಳಿಯಲ್ಲಿ ನಡುಗಿ ಆವಸ್ಥೆಪಡುತ್ತಿತ್ತು. ಅದನ್ನು ಅನೇಕಾನೇಕ ಗಾಲಿಗಳ ನೆರವಿನಿಂದ ಅದರ ಸ್ವಗೃಹದ ಬಾಗಿಲಿನಲ್ಲಿ ನಿಲ್ಲಿಸಿದರು. ಅದಕ್ಕೆ ಪೂಜೆ ಪುನಸ್ಕಾರಗಳು ನಡೆದುವು. ಕೊನೆಗೊಮ್ಮೆ ಅದು ಸೇರಬೇಕಾದ ಆವರಣದೊಳಕ್ಕೆ ಸೇರಿಕೊಂಡಿತು.

ಅನೇಕ ಶ್ರದ್ಧಾಳುಗಳು ಯಂತ್ರದ ಮರದ ಕವಚದ ಮೇಲೇರಿ ಉಳಿ, ಸುತ್ತಿಗೆ ಮುಂತಾದುವುಗಳ ಸಹಾಯದಿಂದ ಕವಚವನ್ನು ಕಿತ್ತೆಸೆದರು. ಯಂತ್ರದ ನಾನಾ ಭಾಗಗಳನ್ನು ಮೃದುವಾಗಿ ಮುಟ್ಟಿ ಮುಟ್ಟಿ ಸಂತೋಷ ಅನುಭವಿಸಿದರು. ಅಂದೇ ಆ ಯಂತ್ರದ ಹೊಟ್ಟೆಯೊಳಕ್ಕೆ ಸಾವಿರಾರು ಬಟ್ಟೆಗಳನ್ನು ತುರುಕಿ ಅವನ್ನು ಶುಭ್ರಗೊಳಿಸುವ ಉತ್ಸಾಹದಲ್ಲಿದ್ದ ಮುಖ್ಯಸ್ಥರು ಎಲ್ಲ ಉತ್ಸಾಹಿಗಳನ್ನು ದೂರ ಸರಿಸಿ, ತಮ್ಮ ಮೆಕಾನಿಕ್ ಕಡೆ ತಿರುಗಿ 'ಎಲ್ಲಿ ಚಾಲೂ ಮಾಡಿ' ಎಂದು ಅಪ್ಪಣೆ ಮಾಡಿದರು. ಆದರೆ ಅದನ್ನ ಚಾಲೂ ಮಾಡುವುದು ಸ್ಥಳೀಯ ಮೆಕಾನಿಕ್‌ನ ತಂತ್ರಜ್ಞಾನವನ್ನು ಮೀರಿದ ವಿಷಯವಾಗಿತ್ತು. 'ಇದು ಘಾರಿಂದು, ನಮ್ಗೆ ಗೊತ್ತಾಗುತ್ತಿಲ್ಲ' ಎಂದು ಆತ ಕೈಯಾಡಿಸಿಬಿಟ್ಟ.

ತಲೆಯ ಮೇಲೆ ಕೈಹೊತ್ತು ಕುಳಿತ ಮುಖ್ಯಸ್ಥರು ಎರಡು ಗಂಟೆಯ ತಲೆಬಿಸಿಯ ನಂತರ ಹಳೆಯ ಫೈಲುಗಳನ್ನು ತಿರುವಿ ಹಾಕಿದರು. ಯಂತ್ರವನ್ನು ಮಾರಿದ ಕಂಪನಿಯವರು ತಮ್ಮದೇ ವೆಚ್ಚದಲ್ಲಿ ತಜ್ಞರೊಬ್ಬರನ್ನು ಕಳುಹಿಸಿ ಯಂತ್ರವನ್ನು ಚಾಲೂ ಮಾಡಿಸಿಕೊಡುವುದಾಗಿ ಷರತ್ತಿತ್ತು. ತಕ್ಷಣವೇ ಕಂಪನಿಗೆ ಕೇಬಲ್ ಹೋಯಿತು. ಎರಡು ವಾರಗಳಲ್ಲೇ ತಜ್ಞರೊಬ್ಬರು ಜರ್ಮನಿಯಿಂದ ಬಂದು ಪ್ರತ್ಯಕ್ಷವಾದರು. ಯಂತ್ರವನ್ನು ಚಾಲೂ ಮಾಡುವ ಮುನ್ನ ಅದನ್ನೊಮ್ಮೆ ಸಮಗ್ರವಾಗಿ ಪರೀಕ್ಷಿಸಿದರು. ಅನಂತರ ಮಂದಹಾಸ ಬೀರಿ ಹೇಳಿದರು. 'ಇದು ಈಗಿರುವ ಸ್ಥಿತಿಯಲ್ಲಿ ಚಾಲೂ ಆಗಲು ಸಾಧ್ಯವಿಲ್ಲ.' ಇನ್ನೇನು ಯಂತ್ರ ಚಾಲೂ ಆಗುತ್ತದೆ ಎಂದು ಕುಣಿದಾಡುತ್ತಿದ್ದ ನೌಕರ ವರ್ಗದ ಉತ್ಸಾಹ ತಣ್ಣಗಾಯಿತು. ಜರ್ಮನ್ ತಜ್ಞರು ಪ್ರಶೋತ್ತರಗಳಲ್ಲಿ ಕಾಲವ್ಯಯ ಮಾಡದೆ ತಾವು ಯಂತ್ರದ ಆಗಿನ ಸ್ಥಿತಿ ಬಗ್ಗೆ ಸಂಗ್ರಹಿಸಿದ್ದ ಮಾಹಿತಿಗಳನ್ನು ಬರೆದುಕೊಟ್ಟರು. ಅದರ ಸಾರಾಂಶ ಇಷ್ಟು! ಮಳೆ ನೀರು ಇಳಿದು, ಯಂತ್ರದ ಕೆಲವು ಭಾಗಗಳು ಹಾಳಾಗಿವೆ. ಮತ್ತು ಯಂತ್ರದ ಬೋಲ್ಟು, ನಟ್ಟು ಮುಂತಾದ ಕೆಲವು ಭಾಗಗಳು ನಾಪತ್ತೆಯಾಗಿವೆ. ಅವೆಲ್ಲ ತಮ್ಮ ಕಂಪನಿಯಲ್ಲಿ ಮಾತ್ರ ದೊರೆಯುವಂಥವು. ಅವನ್ನು ಜರ್ಮನಿಯಿಂದ ತರಿಸಿದ ಮೇಲೆ ಮಾತ್ರ ಯಂತ್ರವನ್ನು ಚಾಲೂ ಮಾಡುವುದು ಸಾಧ್ಯ. ಹೀಗೆ ಬರೆದ ವರದಿಯನ್ನು ಅವರು ಸರ್ಕಾರದ ಕಾರ್ಯದರ್ಶಿಗಳ ಕೈಯಲ್ಲಿ ಇರಿಸಿ ವಿಮಾನ ಹತ್ತಿ ತಮ್ಮ ದೇಶಕ್ಕೆ ಹೊರಟು ಹೋದರು.

ಕಾರ್ಯದರ್ಶಿಗಳಿಗೆ ದಕ್ಷರೂ ನಿರ್ಲಂಚಕರೂ ಆಗಿದ್ದ ಮುಖ್ಯಾಧಿಕಾರಿಗಳನ್ನು ಕಂಡರೆ ಆಗುತ್ತಲೇ ಇರಲಿಲ್ಲ. ಆದ್ದರಿಂದ ಅವರು ಕೂಡಲೇ ಕಾರ್ಯ ಪ್ರವೃತ್ತರಾಗಿ ಈ ಇಡೀ ಪ್ರಕರಣವನ್ನು ಶೋಧಿಸಲು ಒಂದು ವಿಚಾರಣಾ ಸಮಿತಿಯು ನೇಮಕವಾಗುವಂತೆ ಮಾಡಿದರು. ಸಮಿತಿ ಆರು ತಿಂಗಳ ಅನಂತರ ವರದಿ ನೀಡಿತು. ಪರಿಣಾಮವಾಗಿ ಮುಖ್ಯಾಧಿಕಾರಿಗಳು ಒಂದು ಒಗೆಯುವ ಯಂತ್ರವನ್ನು ಸರಿಯಾಗಿ ನೋಡಿಕೊಳ್ಳಲಾರದಷ್ಟು ಅದಕ್ಷರಾದುದರಿಂದ ಅವರನ್ನು ದೂರದ ಊರಿಗೆ ವರ್ಗ ಮಾಡಲು ಶಿಫಾರಸ್ಸಾಯಿತು. ಜೊತೆಗೆ ಜರ್ಮನಿಯಿಂದ ಅವಶ್ಯಕವಾದ ಬಿಡಿ ಭಾಗಗಳನ್ನು ತರಿಸಬಹುದೆಂದೂ ವರದಿ ತಿಳಿಸಿತು. ಮುಂದಿನ ಆರು ತಿಂಗಳಲ್ಲಿ ಬಿಡಿ ಭಾಗಗಳೊಂದಿಗೆ ತಜ್ಞರು ಜರ್ಮನಿಯಿಂದ ಹಾರಿ ಬಂದರು. ನಾಲ್ಕು ವಾರಗಳು ಕೆಲಸ ಮಾಡಿ ಯಂತ್ರವನ್ನು ಚಾಲೂ ಮಾಡಿದರು.

ಉದ್ಘಾಟನೆ ದಿನ ನಿಗದಿಯಾಯಿತು. ಈ ಮಧ್ಯೆ ದೆಹಲಿಯಿಂದ ರಾಜ್ಯಕ್ಕೆ ಅದೃಶ್ಯ ಕೈಗಳು ಹೊತ್ತು ತಂದಿದ್ದ, ಗರಿ ಗರಿ ನೋಟುಗಳು ತುಂಬಿದ್ದ ಬೀಫ್‌ಕೇಸ್‌ಗಳು ಮಂತ್ರಿ ಮಂಡಲವನ್ನು ಉರುಳಿಸಿದ್ದುವು. ಒಗೆಯುವ ಯಂತ್ರದ ಕಥೆ ಏನೇನೂ ಗೊತ್ತಿರದ ಹೊಸ ಆರೋಗ್ಯ ಮಂತ್ರಿಗಳು ತಮ್ಮ ಗಾಂಧೀ ಟೋಪಿಯನ್ನು ಹತ್ತಾರು ಸಲ ಸರಿಮಾಡಿಕೊಳ್ಳುತ್ತಾ, ತಾವು ಈ ಯಂತ್ರವನ್ನು ತರಿಸಲು ಪಟ್ಟ ಸಾಹಸವನ್ನು ವರ್ಣಿಸಿದರು. ಮುಖ್ಯಾಧಿಕಾರಿಗಳೂ ಆಸ್ಪತ್ರೆಯ ಸಿಬ್ಬಂದಿ ವರ್ಗವೂ ಜೋರಾಗಿ ಚಪ್ಪಾಳೆ ತಟ್ಟಿದರು!

ಕೆಲವು ದಿನಗಳ ಹಿಂದೆ ಆ ಮಹಾಯಂತ್ರವನ್ನು ನೋಡುವ ಉದ್ದೇಶದಿಂದ ನಗರದ ಭಾರೀ ಆಸ್ಪತ್ರೆಗೆ ಹೋಗಿದ್ದೆ. ಅದು ಕೊಳಕಾದ ಸಾವಿರಾರು ಬಟ್ಟೆಗಳನ್ನು ಹೊಟ್ಟೆಯಲ್ಲಿಟ್ಟುಕೊಂಡು ಸುತ್ತಿಸುತ್ತಾನರಳುತ್ತಿತ್ತು. ಸಂತೋಷಪಟ್ಟು ಮನೆಗೆ ಬಂದೆ.

*** ಡಾ॥ ಪ್ರಭುಶಂಕರ**

# ೩. ನೈಸರ್ಗಿಕ ಕೃಷಿಯಲ್ಲಿ ಜಾನುವಾರುಗಳ ಮಹತ್ವ

**– ಎಸ್. ಮೃತ್ಯುಂಜಯ**

ನೈಸರ್ಗಿಕ ಹಾಗೂ ಸಾವಯವ ಕೃಷಿಯಲ್ಲಿ ದೇಶೀಯ ಹಸುಗಳನ್ನು ಬಳಕೆ ಮಾಡಬೇಕು. ದೇಶೀ ಹಸುಗಳಿಗೆ ಸುಮಾರು 22 ಗುಣಧರ್ಮಗಳನ್ನು ವಿಜ್ಞಾನ ಹೇಳುತ್ತದೆ. ಅವುಗಳೆಂದರೆ:

- ಜೆಬು ಕುಟುಂಬ ವರ್ಗಕ್ಕೆ ಸೇರಿದ ಪ್ರಾಣಿ ಹಸು,
- ಬುಜ(ಗೋಪುರ) ಇರುವ ಪ್ರಾಣಿ
- ಗ್ರಂಥಿಗಳು: ಹಸುವಿನ ಶರೀರದ ತಳಭಾಗದಲ್ಲಿ ಗ್ರಂಥಿಗಳು ಇವೆ.
- ಮುಂಭಾಗ ಅಗಲವಾಗಿದ್ದು ಹಿಂಭಾಗ ನೀಳವಾಗಿರಬೇಕು (ಸಿಂಹ ಕಟಿ)
- ಸಗಣಿ–ಒಂದು ಗ್ರಾಂ ಸಗಣಿಯಲ್ಲಿ 300–500 ಕೋಟಿ ಜೀವಾಣುಗಳು ಇರಬೇಕು. ಕೃಷಿಗೆ ಬೇಕಾಗಿರುವಂತಹ ಭೂಮಿಯಲ್ಲಿರುವ ಆಹಾರವನ್ನು ಪರಿವರ್ತನೆ ಮಾಡಿಕೊಡಲು ಜೀವಾಣುಗಳು 1 ಗ್ರಾಂ ಸಗಣಿಯಲ್ಲಿ 300–500 ಕೋಟಿ ಇರಬೇಕು.
- ನೊಣಗಳು ದೇಹದ ಮೇಲೆ ಕುಳಿತರೆ ಇಡೀ ದೇಹ ಕಂಪಿಸಬೇಕು. ಚರ್ಮದಲ್ಲಿ ಅಷ್ಟೊಂದು ಸೂಕ್ಷ್ಮ ಗ್ರಂಥಿಗಳು ಇರಬೇಕು,
- ಕೊಂಬುಗಳಲ್ಲಿ ವೈವಿಧ್ಯತೆ ಇರುತ್ತದೆ.
- ಒಂದೊಂದು ಭೂಭಾಗದಲ್ಲಿ ಒಂದೊಂದು ತೆರನಾದ ಹಸುಗಳು ಇವೆ. ಮಲೆನಾಡಿನಲ್ಲಿ ಮಲೆನಾಡು ಗಿಡ್ಡ, ನಿಸರ್ಗ ಅಲ್ಲಿ ಗಿಡ್ಡ ತಳಿ ಹಸುಗಳನ್ನು ನಿರ್ಮಾಣ ಮಾಡಿದೆ. ಬೆಟ್ಟ ಹತ್ತಬೇಕು. ಪೊದೆಗಳಲ್ಲಿ ತೂರಿ ಆಹಾರ ತಿನ್ನಬೇಕು. ದೇಹ ಹೊತ್ತು ನಡೆಯಬೇಕು ಅಂದರೆ ತೂಕ ಕಡಿಮೆ ಇರಬೇಕು. ಹೀಗೆ ಬೇರೆ ಬೇರೆ ಕಾರಣಗಳಿಗೋಸ್ಕರ ಗಿಡ್ಡ ತಳಿ ನಿರ್ಮಾಣ ಮಾಡಿದೆ. ಹೆಚ್ಚು ಬಿಸಿಲಿರುವ ಭೂಭಾಗಗಳಲ್ಲಿ ಬಿಳಿ ಹಸುಗಳು, ಚಳಿ ಪ್ರದೇಶಗಳಲ್ಲಿ ಕಂದು, ಕಪ್ಪು ಹಸುಗಳು, ಯತೇಚ್ಛವಾಗಿ ಮಳೆ ಬೀಳುವ ಭೂಭಾಗಗಳಲ್ಲಿ ಹಸುಗಳಲ್ಲಿ ಹೊರ ಮೈಯಲ್ಲಿ ಒಂದು ರೀತಿಯ ಎಣ್ಣೆ ಅಂಶ ಸ್ರವಿಸುತ್ತಿರುತ್ತವೆ. ಎಷ್ಟೇ ಮಳೆ ಸುರಿದರೂ ಹಸು ನೆನೆಯುವುದಿಲ್ಲ. ಹೀಗೆ ವೈವಿಧ್ಯಮಯವಾಗಿ ನಿಸರ್ಗ ಹಸುಗಳನ್ನು ನಿರ್ಮಾಣ ಮಾಡಿದೆ. ಆದರೆ ಎಲ್ಲವಕ್ಕೂ ಗುಣಧರ್ಮಗಳು ಒಂದೇ.
- ಹಾಲು: ನಾಟಿ ಹಸುವಿನಿಂದ ಹಾಲು ಕರೆಯುತ್ತಿರುವಾಗ ಏನೋ ಕಾರಣದಿಂದ ಸ್ವಲ್ಪ ಕಾಲ ಹಾಲು ಕರೆಯುವುದನ್ನು ನಿಲ್ಲಿಸಿದರೆ ಹಾಲು ಬರುವ ರಂಧ್ರ ತಂತಾನೆ ಮುಚ್ಚಿ ಹೋಗುತ್ತದೆ. ಅಲ್ಲಿ ಜೈವಿಕ–ರಸಾಯನಿಕ ಕ್ರಿಯೆ ನಡೆಯುತ್ತದೆ.
- ಸಗಣಿ : 100 ಗ್ರಾಂ ಒಣ ಸಗಣಿ ಬೆರಣಿ ತಟ್ಟಿರುವಂತಹದನ್ನು ಅದರ ಬೂದಿ ಕೂಡ 100 ಗ್ರಾಂ ಇರಬೇಕು ಈ ಮೇಲೆ ತಿಳಿಸಿರುವ ಗುಣಧರ್ಮಗಳಲ್ಲಿ ಪ್ರತಿಯೊಂದು ಗುಣಧರ್ಮವೂ ವಿಶೇಷ ತಳಿ ಹಸುಗಳಿಗೆ ಇಲ್ಲ. ಆ ಕಾರಣಕ್ಕೋಸ್ಕರ ದೇಶೀ ತಳಿ ಹಸುಗಳನ್ನು (ನಾಟಿ ಹಸು) ನೈಸರ್ಗಿಕ ಕೃಷಿಗೆ ಬಳಕೆ ಮಾಡಿಕೊಳ್ಳಲಾಗುತ್ತದೆ.

**ಪಶುಸಂಗೋಪನೆ :**

ಪಶುಸಂಗೋಪನೆ ಕೃಷಿ ಬದುಕಿನ ಒಂದು ಅವಿಭಾಜ್ಯ ಅಂಗ. ಪಶುಸಂಪತ್ತು ಇಲ್ಲದೆ ಕೃಷಿ ಮಾಡುವುದು ಮನೆ ಇಲ್ಲದೆ ಸಂಸಾರ ಹೂಡುವುದು. ಎರಡೂ ಒಂದೇ. ಕೃಷಿ ಎಂದರೆ ಮೇವು, ಕಾಳು, ಕಸ, ಕಡ್ಡಿ, ಹೊಟ್ಟು ತೆನೆ, ಕಂಕಿ ಎಲ್ಲವೂ ಇರುತ್ತವೆ. ಇವುಗಳ ಸಂಪೂರ್ಣ ಬಳಕೆ ಆಗಬೇಕಾದರೆ ಮತ್ತು ಬಳಕೆಯಾದದ್ದು ಲಾಭವಾಗಬೇಕಾದರೆ ರೈತರ ಜೊತೆ ಪಶು ಸಂಪತ್ತು ಇರಲೇಬೇಕು ಮತ್ತು ಅನಿವಾರ್ಯ ಕೂಡ. ಏಕೆಂದರೆ ಅವುಗಳು ಕೊಡುವ ಕರು, ಗಂಜಲ, ಸಗಣಿ, ಹಾಲು ಎಲ್ಲವೂ ನಮ್ಮ ಕೃಷಿಯಲ್ಲಿ ಉಪಯೋಗಕ್ಕೆ ಬರುತ್ತವೆ. ಲಾಭವನ್ನು ತರುತ್ತವೆ. ಕೇವಲ ಕೃಷಿ ಮಾಡುವುದು, ಪ್ರತ್ಯೇಕವಾಗಿ ಪಶುಸಂಗೋಪನೆ ಮಾಡುವುದು ಎರಡೂ ಲಾಭದಾಯಕವಲ್ಲ. ಏಕೆಂದರೆ ಹೊಲದಲ್ಲಿ ಬೆಳೆದಂತಹ ಹೊಟ್ಟು, ಕಸ ಕಡ್ಡಿಗಳನ್ನು ಅಡ್ಡಾದಿಡ್ಡಿಗೆ ಮಾರಾಟ ಮಾಡಬೇಕಾಗುತ್ತದೆ. ಕೇವಲ ಪಶುಸಂಗೋಪನೆ ಮಾಡಿದಾಗಲೂ ಅವುಗಳಿಗೆ ಬೇಕಾದ ಮೇವು, ಕಾಳು, ಕಡ್ಡಿ ಎಲ್ಲವನ್ನೂ ಖರೀದಿಸಿ ತರಬೇಕಾಗುತ್ತದೆ. ಹೀಗೆ ಖರೀದಿಸಿ ಪಶುಸಂಗೋಪನೆ ಮಾಡಿದಲ್ಲಿ ಅದು ಲಾಭದಾಯಕವಾಗಲಾರದು.

1 ಗ್ರಾಂ, ದೇಶಿ ಆಕಳ ಸಗಣಿಯಲ್ಲಿ 300–500 ಕೋಟಿ ಜೀವಾಣುಗಳು ಇರುತ್ತವೆ ಎಂದು ವಿಜ್ಞಾನ ಹೇಳಿದೆ. 10 ಕೆಜಿಯಷ್ಟು ಸಗಣಿಯಲ್ಲಿ ಎಷ್ಟು ಕೋಟಿ ಜೀವಾಣುಗಳು ಇರುತ್ತವೆ. ಅಷ್ಟು ಕೋಟಿ ಜೀವಾಣುಗಳನ್ನು ಅಂದರೆ ಸಂಸ್ಕರಣೆಗೆ ಒಳಪಡಿಸಿದಾಗ ಅಂದರೆ ಜೀವಾಮೃತ, ಪಂಚಗವ್ಯವಾಗಿ 200 ಲೀಟರ್ ನೀರಿನಲ್ಲಿ ಬೆರೆಸಿದಾಗ ಎಷ್ಟು ಕೋಟಿ ಜೀವಾಣುಗಳು ವೃದ್ಧಿ ಆಗುತ್ತವೆ ? ಅವುಗಳನ್ನು ಹೊಲಕ್ಕೆ ಬಿಟ್ಟು ಜೀವಾಣುಗಳಿಗೆ ಬೇಕಾದ ವಾತಾವರಣ ಸೃಷ್ಟಿ ಮಾಡಿ ಜೀವಾಮೃತ ಸಂಪರ್ಕಕ್ಕೆ ಬಂದ ಮಣ್ಣು ಪಾವನವಾಗುತ್ತಿದೆ. ಈ ಫಲವತ್ತತೆಯಿಂದ ಕೂಡಿದ ಮಣ್ಣಿನಲ್ಲಿ ಬೆಳೆಗಳು ಸದೃಢವಾಗಿ ಬೆಳೆಯುತ್ತವೆ. ಸದೃಢವಾದ ಬೆಳೆಯಲ್ಲಿ ರೋಗ ಕೀಟಗಳ ಬಾಧೆ ಇರುವುದಿಲ್ಲ, ಅಂದರೆ ಯಾವ ರಸಾಯನಿಕದ ಮೊರೆ ಹೋಗಬೇಕಿಲ್ಲ, ಸಮೃದ್ಧವಾದ ಆಹಾರ ಉತ್ಪಾದನೆ ಆಗುತ್ತವೆ. ಸಮೃದ್ಧ ಮನಸ್ಸು ಹುಟ್ಟುತ್ತದೆ. ಸಮೃದ್ಧ ಆರೋಗ್ಯಪೂರ್ಣ ಸಮಾಜ ನಮ್ಮದಾಗುತ್ತದೆ.

ಒಂದು ದೇಶಿ ಆಕಳು 30 ಎಕರೆಗೆ ಬೇಕಾಗುವಷ್ಟು ಪೋಷಕಾಂಶಗಳನ್ನು ಒದಗಿಸಬಲ್ಲದು ಅಂತ ಹೇಳುತ್ತಾರೆ. ಇದು ಸಾಮಾನ್ಯ ಸಂಗತಿಯೇನಲ್ಲ, ವರ್ಷಕ್ಕೊಂದು ಕರು, ಮನೆಗೆ ಬೇಕಾದಷ್ಟು ಹಾಲು, ನಮ್ಮ ಬೆಳೆಗಳಿಗೆ ಬೇಕಾದಷ್ಟು ಪೋಷಕಾಂಶ, ಒಂದು ದೇಶೀ ಆಕಳು ಕೊಡುತ್ತದೆ ಅಂದರೆ ಅದನ್ನು ಸಾಕಲು ಏನು ತೊಂದರೆ? ಸಗಣಿ ಮುಟ್ಟುವವರಾರು? ಗಂಜಲ ಬಳಿಯುವವರಾರು? ಮನೆಯಲ್ಲಿ ವಾಸನೆ ಬರುತ್ತದೆ. ಪಶುಗಳಿದ್ದರೆ ಅವುಗಳಿಗೆ ಆಗಿಂದಾಗ ನೀರು ಉಣಿಸಬೇಕಾಗುತ್ತದೆ. ಹುಲ್ಲು ಹಾಕಬೇಕಾಗುತ್ತದೆ, ಅವುಗಳ ಆರೈಕೆ ಮಾಡಬೇಕಾಗುತ್ತದೆ. ಇದರಿಂದ ನೆಮ್ಮದಿ ಭಂಗ ಎನ್ನುವಂತೆ ಇದ್ದರೆ ಇದೇ ಕಾರಣಕ್ಕೆ ಇಂದು ರೈತರ ಮನೆಯಲ್ಲಿ ಪಶುಸಂಪತ್ತು ಕಡಿಮೆ ಆಗುತ್ತಿರುವುದು. ಈ ನೆಮ್ಮದಿಗೆ ಭಂಗ ಎನ್ನುವ ಕಾರಣ ಸಕಾರಣ ಅಲ್ಲ, ನೆಮ್ಮದಿ ಸಿಗುವಲ್ಲಿಯೇ ನೆಮ್ಮದಿಯನ್ನು ಹುಡುಕಬೇಕು. ಅದು ಮೇವು ತಿನ್ನುವುದನ್ನು ನೋಡಿ, ನೀರು ಕುಡಿಯುವುದನ್ನು ನೋಡಿ, ತನ್ನ ಕರುಳ ಬಳ್ಳಿಯ ಕರುವನ್ನು ಕರೆದು ಹಾಲು ಕುಡಿಸುವುದನ್ನು ನೋಡಿ ನಮಗೆ ಖುಷಿ ಆಗುವುದಿಲ್ಲ. ಅಂದರೆ ಮನಸ್ಸು ಕಲ್ಲಾದವರಿಗೆ ಮಾತ್ರ ಸಾಧ್ಯ. ನಮ್ಮನ್ನು ನೋಡಿ ಪ್ರೀತಿಯಿಂದ 'ಅಂಬಾ' ಎಂದು ಕರೆಯತ್ತಲೂ ಅದನ್ನು ನಾವು ಕಳೆದುಕೊಳ್ಳುತ್ತಿದ್ದೇವೆ ಎಂದು ನಿಮಗೆ ಅನ್ನಿಸದಿದ್ದರೆ ಹೇಗೆ? ಮನೆಗೆ ಮಕ್ಕಳಿಗೆ ಬೇಕಾದ ಹಾಲು, ಮೊಸರು, ಮಜ್ಜಿಗೆ, ಬೆಣ್ಣೆ, ತುಪ್ಪ ನಮ್ಮ ಮನೆಯಲ್ಲಿ ಸಿಗುತ್ತದೆ ಅಂದರೆ ಅದಕ್ಕಿಂತ ತಂಪಾದ ಸಮೃದ್ಧವಾದ ಮನೆ ಬೇಕೆ?

ಎತ್ತು, ಎಮ್ಮೆ, ಕುರಿ, ಆಡು, ಕೋಳಿ ಎಲ್ಲವೂ ನಮ್ಮ ಸಂಗಾತಿಗಳಾಗಲಿ, ಎಲ್ಲವೂ ದೇಶೀ ತಳಿಗಳಾಗಲಿ ಹೆಚ್ಚು ಆರೈಕೆ ಬಯಸುವುದಿಲ್ಲ. ಹೆಚ್ಚು ಖರ್ಚು ಇರುವುದಿಲ್ಲ. ನಮ್ಮ ಹೊಲದಲ್ಲೇ ಬೆಳೆದ ಮೇವು, ಕಸ, ಕಡ್ಡಿ, ಅಂಗಳದಲ್ಲಿ ಬಿದ್ದ ಕಾಳುಗಳನ್ನು ತಿಂದು ಬೆಳೆಯುತ್ತಾ ನಮಗೆ ಆರ್ಥಿಕವಾಗಿ ಲಾಭವನ್ನು ತಂದುಕೊಡುತ್ತವೆ. ನಮ್ಮ ಕೃಷಿ ಬದುಕಿಗೆ ಸಹಾಯ ಮಾಡುತ್ತವೆ. ಅಷ್ಟೇ ಅಲ್ಲ ನಮಗೆ ಇಡೀ ಪ್ರೀತಿಯನ್ನು ಕೊಡುತ್ತವೆ. ಅವು ಕೊಡುವ ಪ್ರೀತಿ ನಮ್ಮದಾಗುತ್ತದೆ, ಬಾಳು ಹಸನಾಗುತ್ತದೆ.

ದನಕರುಗಳ ಮೇಲೆ ಉಣ್ಣೆ ಸಮಸ್ಯೆ ಯಾವಾಗಲೂ ಇದ್ದದ್ದೇ. ನೈಸರ್ಗಿಕವಾಗಿ ಅವುಗಳನ್ನು ಹೇಗೆ ನಿರ್ವಹಿಸಬಹುದು ಎಂದರೆ ಒಂದು ಲೀಟರ್ ನೀರಿನಲ್ಲಿ 5–10 ಮಿಲೀ ಬೇವಿನ ಎಣ್ಣೆ ಹಾಕಿಕೊಂಡು ರಾಸುಗಳ ಮೇಲೆ ಸವರಿದರೆ ಉಣ್ಣೆಯ ಸಮಸ್ಯೆ ಕಡಿಮೆ ಆಗುತ್ತದೆ. ಕೋಳಿ ಸಾಕಾಣಿಕೆ ಮಾಡುವುದರಿಂದಲೂ ಕೂಡ ನೆಲದಲ್ಲಿ ಹರಿದಾಡುವ ಉಣ್ಣೆಗಳನ್ನು ತಿನ್ನುತ್ತವೆ. ದನಕರುಗಳು ಮಲಗಿದಾಗ ಅವುಗಳ ಮೇಲೆ ಹತ್ತಿದ ಕೋಳಿಗಳು ಉಣ್ಣೆಗಳನ್ನು ಆಯ್ದುಕೊಂಡು ತಿನ್ನುತ್ತವೆ. ಕೊಟ್ಟಿಗೆ ಸ್ವಚ್ಛವಾಗಿ ಇರುವುದರ ಜೊತೆಗೆ ಇಂತಹ ಸಣ್ಣ ಪುಟ್ಟ ಕ್ರಮಗಳನ್ನು ಅನುಸರಿಸುವುದರಿಂದ ಉಣ್ಣೆಯ ಕಾಟವನ್ನು ತಪ್ಪಿಸಬಹುದು. ಹಾಗಾಗಿ ದನಕರುಗಳು ಆರೋಗ್ಯವಾಗಿ ಬೆಳೆಯಲು ಸಾಧ್ಯವಾಗುತ್ತದೆ.

**ಪಶುಗಳ ಮಹತ್ವ:**

ಆಕಳು, ಎತ್ತು, ಎಮ್ಮೆ, ಆಡು, ಕುರಿ, ಕೋಳಿ ಇವೆಲ್ಲವೂ ಕೃಷಿಗೆ ಪೂರಕವಾಗಿರುವ ಹಾಗೂ ಕೃಷಿ ಬದುಕಿನ ಅವಿಭಾಜ್ಯ ಅಂಗಗಳು. ಇವುಗಳಿಂದ ಹಾಲು, ಮೊಟ್ಟೆ, ಮಾಂಸ ಎಷ್ಟು ದೊರೆಯಿತು ಎಂದು ನೋಡಿದಾಗ ಮಾರುಕಟ್ಟೆ ಬೆಲೆ ತೂಗಿ ನೋಡಿ ಅಂದಾಜು ಬೆಲೆ ಕಟ್ಟುತ್ತೇವೆ. ಈ ಎಲ್ಲಾ ಪ್ರಾಣಿಗಳು ಭೂಮಿಯನ್ನು ಉತ್ತು ಬಿತ್ತಿ, ಬೆಳೆಯಲು ಬಂದಂತಹವು. ಉದಾ: ಸಗಣಿ, ಗಂಜಲ ಕೋಟ್ಯಾನುಕೋಟಿ ಜೀವಾಣುಗಳನ್ನು ಹೊಂದಿರುತ್ತವೆ. ಭೂಮಿಯಲ್ಲಿ ಜೈವಿಕ ಕ್ರಿಯೆ ಹೆಚ್ಚಾಗಲು ಅವುಗಳ ಅವಶ್ಯಕತೆ ಹೆಚ್ಚಾಗಿದೆ ಮತ್ತು ಅನಿವಾರ್ಯವಾಗಿದೆ. ಅದಕ್ಕೆ ಪರ್ಯಾಯ ವ್ಯವಸ್ಥೆ ಇಲ್ಲವೇ ಇಲ್ಲ. ಒಂದು ಆಕಳು 10 ಎಕರೆ ಭೂಮಿಗೆ ಬೇಕಾದ ಜೀವಾಣುಗಳನ್ನು ಒದಗಿಸುತ್ತದೆ ಅದು ಹೆಜ್ಜೆ ಇಟ್ಟ ಜಾಗದಲ್ಲಿ ಕೋಟ್ಯಾನುಕೋಟಿ ಜೀವಾಣುಗಳು ಫಸರಿಸುತ್ತವೆ. ಭೂಮಿಯನ್ನು ಪಾವನ ಮಾಡುತ್ತವೆ.

ಪಶುಸಂಗೋಪನೆ ಇಲ್ಲದೆ ಕೃಷಿ ಬದುಕಲು ಸಾಧ್ಯ ಇದೆಯೇ, ನಮ್ಮ ಎಲ್ಲಾ ಕಾರ್ಯಗಳು ನಿಸರ್ಗಕ್ಕೆ ಪೂರಕ ಇರಲಿ, ಹಾಗಾಗಿ ಒಂದಕ್ಕೊಂದು ಕೊಂಡಿಯಾಗಿರುವ ನಿಸರ್ಗ ಸರಪಳಿಯನ್ನು ಕಳಚಬೇಡಿ. ಆಕಳು ಬರೀ ಆಕಳಲ್ಲ, ಮರ ಬರೀ ಮರವಲ್ಲ, ಮಣ್ಣು ಕೇವಲ ಮಣ್ಣಲ್ಲ, ನೀರು ಕೇವಲ ನೀರಲ್ಲ. ಇವು ನೇರವಾಗಿ ನೀಡುವ ಸಹಾಯಕ್ಕಿಂತ ಪರೋಕ್ಷವಾಗಿ ನೀಡುವ ಸಹಾಯ ದೊಡ್ಡದು.

**ಮಜ್ಜಿಗೆ**

15–20 ದಿನದ ವಾಸನೆಯಿರುವ ಹುಳಿ ಬಂದ ಮಜ್ಜಿಗೆಯನ್ನು ಸಿಂಪಡಿಸಿದಾಗ ಅನೇಕ ಕೀಟಗಳು ದೂರಹೋಗುತ್ತವೆ. ಅಷ್ಟೇ ಅಲ್ಲದೆ ಶಿಲೀಂದ್ರ ಹತೋಟಿ ಮಾಡುವ ಗುಣ ಕೂಡ ಹುಳಿ ಮಜ್ಜಿಗೆಗೆ ಇದೆ. ಹುಳಿ ಮಜ್ಜಿಗೆಯನ್ನು ಕಾಂಡದ ಬುಡಕ್ಕೆ ಸುರಿದಾಗ ಮಜ್ಜಿಗೆಯಲ್ಲಿರುವ ಜೀವಾಣುಗಳು ಮಣ್ಣಿಗೆ ಸೇರಿ ಮಣ್ಣಿನಲ್ಲಿ ಜೈವಿಕ ಕ್ರಿಯೆ ನಡೆದು ಫಲವತ್ತತೆ ಹೆಚ್ಚಾಗುತ್ತದೆ.

**ಸಗಣಿ**

ಸಗಣಿ ಕೇವಲ ಗೊಬ್ಬರವಲ್ಲ. ಅದು ಜೀವಾಣುಗಳ ಸಮುಚ್ಚಯ. ಒಂದು ಎಕರೆಗೆ ಎಷ್ಟು ಗೊಬ್ಬರ ಬೇಕು ಎಂಬುದಕ್ಕಿಂತ ಎಷ್ಟು ಸಂಖ್ಯೆಯ ಜೀವಾಣುಗಳು ಬೇಕು ಎಂಬುದನ್ನು ಅರ್ಥ ಮಾಡಿಕೊಂಡರೆ ಸಾಕು.

ದೇಶೀ ಹಸುವಿನ 1 ಗ್ರಾಂ ಸಗಣಿಯಲ್ಲಿ 300–500 ಕೋಟಿ ಸೂಕ್ಷ್ಮ ಜೀವಾಣುಗಳನ್ನು ಗುರ್ತಿಸಿ, ಹಸುವಿನಿಂದ 30 ಎಕರೆ ಜಮೀನಿನಲ್ಲಿ ಸ್ವಾವಲಂಭನೆ ಕೃಷಿ ಮಾಡಲು ಸಾಧ್ಯ ಎಂಬುದನ್ನು ಸಾಕ್ಷೀಕರಿಸಿದೆ. ಪ್ರತಿ 20 ನಿಮಿಷಕ್ಕೊಮ್ಮೆ ಸೂಕ್ಷ್ಮಾಣು ಜೀವಿಗಳನ್ನು ದ್ವಿಗುಣಗೊಳಿಸುತ್ತಾ ಅವುಗಳನ್ನು ಅನಂತಾನಂತ ವೃದ್ಧಿಸುವ ಜೀವಾಮೃತ ಸೂಕ್ಷ್ಮಾಣು ಜೀವಿಗಳ ಮಹಾ ಸಾಗರವೇ ಆಗಿದೆ.

**ಗಂಜಲ**

ಒಂದು ರೀತಿ ನೀತಿಯ ಆಧಾರದ ಮೇಲೆ ಗಂಜಲದ ಸತ್ವ ಮತ್ತು ಅದರ ವಿಸರ್ಜನೆಯ ಪ್ರಮಾಣ ಅವಲಂಭಿತವಾಗುತ್ತವೆ. ಏನೆಲ್ಲಾ ಅಂದರೂ ಪ್ರಾಯಕ್ಕೆ ಬಂದಿರುವಂತಹ ಒಂದು ಹಸರು ಅಥವಾ ಎಮ್ಮೆ ದಿನವೊಂದಕ್ಕೆ 10 ಲೀಟರ್‌ನಷ್ಟು ಗಂಜಲವನ್ನು ಕೊಡುತ್ತದೆ. ಚಳಿಗಾಲ, ಮಳೆಗಾಲದಲ್ಲಿ ಈ ಗಂಜಲದ ಪ್ರಮಾಣ ಹೆಚ್ಚಾಗಿರುತ್ತದೆ. ಕುಡಿಯುವಂತ ನೀರು, ತಿನ್ನುವಂತಹ ಹುಲ್ಲು, ನಾವು ಕೊಡುವ ಹಿಂಡಿ, ಬೂಸಾಗಳನ್ನು ಅವಲಂಬಿಸಿ ಗಂಜಲದ ಪ್ರಮಾಣದ ಸತ್ವಾಂಶ ಏರುಪೇರಾಗಬಹುದು. ಪ್ರಾಣಿಜನ್ಯವಾದ ಈ ಪದಾರ್ಥವನ್ನು ಕೃಷಿಕರು ಬೆಳೆ ಉತ್ಪಾದನೆಯಲ್ಲಿ ಪರಿಣಾಮಕಾರಿಯಾಗಿ ಮತ್ತು ಲಾಭದಾಯಕವಾಗಿ ಬಳಸಿಕೊಳ್ಳಬಹುದು.

ಜೊತೆ ಗಂಜಲದಲ್ಲಿ ಬೆಳೆಗಳಿಗೆ ಬೇಕಾದಂತಹ ಸತ್ವಾಂಶಗಳು ಇರುತ್ತವೆ. ಆದರೆ ಕೆಲವರು ಗಂಜಲವನ್ನು ಬೆಳೆಗಳಿಗೆ ನೇರವಾಗಿ ಸಿಂಪಡಿಸಿದಾಗ ಎಲೆಗಳು ಸುಡುವಂತಹ ಸಾಧ್ಯತೆ ಇರುತ್ತದೆ. ಈ ಕಾರಣಕ್ಕಾಗಿ ಅದನ್ನು ನೀರಿನ ಬೆರೆಸಿಕೊಂಡು ತೆಳು ಮಾಡಿಕೊಂಡು ಈ ಗಂಜಲವನ್ನು ಬೆಳೆಗಳಿಗೆ ಬೆಳಗಿನ ಹೊತ್ತು ಸಿಂಪರಣೆ ಮಾಡಬೇಕಾಗುತ್ತದೆ. ಗಂಜಲದಲ್ಲಿ ಪೋಷಕಾಂಶಗಳು ಮತ್ತು ಔಷಧೀಯ ಗುಣಗಳು ಸೇರಿಕೊಂಡಿರುವುದರಿಂದ ಪೈರುಗಳ ಬೆಳವಣಿಗೆಗೆ ಇದು ಅನುಕೂಲ ಮಾಡಿಕೊಡುತ್ತದೆ. ಒಂದು ರೀತಿಯಲ್ಲಿ ಇದು ಬೆಳೆ ವರ್ಧಕವಾಗಿ ಕೆಲಸ ಮಾಡುತ್ತದೆ. ಅದೇ ರೀತಿ ಕೆಲವೊಂದು ಕೀಟ ಮತ್ತು ರೋಗಗಳ ನಿಯಂತ್ರಣಕ್ಕೆ ಇದು ಅನುಕೂಲವಾಗುತ್ತದೆ. ದನಕರುಗಳನ್ನು ಕಟ್ಟುವಂತಹ ಕೊಟ್ಟಿಗೆಯಲ್ಲಿ ಗಂಜಲದ ಸಂಗ್ರಹಣೆಗೆ ನಾವು ಒಂದು ಗುಂಡಿಯನ್ನು ಮಾಡಿಕೊಳ್ಳುವುದು ಒಳ್ಳೆಯದು. ನಿತ್ಯವೂ ಸಿಗುವ ಗಂಜಲವನ್ನು ಶೇಖರಣೆ ಮಾಡಲು ಒಂದು ಪ್ಲಾಸ್ಟಿಕ್ ಡ್ರಂಅನ್ನು ಬಳಸಿಕೊಳ್ಳಬೇಕಾಗುತ್ತದೆ. ಚರಂಡಿಗೆ ಅಥವಾ ತಿಪ್ಪೆಗೆ ಈ ಗಂಜಲವನ್ನು ಸುರಿಯಬಾರದು. ಅದರ ಬದಲಿಗೆ ಅದನ್ನು ಸಂಗ್ರಹಣೆ ಮಾಡಿಕೊಂಡು ಸರಿಯಾದ ರೀತಿಯಲ್ಲಿ ನಾವು ಬಳಸಿದರೆ ಅದರಿಂದ ಬಹಳಷ್ಟು ಅನುಕೂಲಗಳನ್ನು ನಾವು ಪಡೆದುಕೊಳ್ಳಬಹುದು. ಗಂಜಲ ತಾಜಾ ಆಗಿದ್ದಲ್ಲಿ ಬಹಳಷ್ಟು ಪರಿಣಾಮಕಾರಿಯಾಗಿರುತ್ತದೆ. ನಾವು ಸಂಗ್ರಹಿಸಿಟ್ಟ ಗಂಜಲ ಕೂಡ ಬಹಳಷ್ಟು ಅನುಕೂಲ ಮಾಡಿಕೊಡುತ್ತದೆ.

ಗಿಡಗಳ ಬುಡಕ್ಕೆ ನಾವು ಗಂಜಲವನ್ನು ನೇರವಾಗಿ ಉಪಯೋಗಿಸಬಹುದು. ಸಸ್ಯಗಳ ಬುಡಕ್ಕೆ ಹಾಕುವಾಗ ಗಂಜಲವನ್ನು ತೆಳುವು ಮಾಡಿಕೊಳ್ಳುವುದು ಬಹಳ ಒಳ್ಳೆಯದು. 1 ಭಾಗ ಗಂಜಲಕ್ಕೆ 3 ಭಾಗ ನೀರನ್ನು ಬೆರೆಸಿಕೊಂಡು ತೆಳುವು ಮಾಡಿಕೊಂಡು, ಆ ನಂತರ ಅದನ್ನು ಬಳಸಿಕೊಳ್ಳಬೇಕಾಗುತ್ತದೆ. ಬೆಳೆಯ ಹಂತವನ್ನು ನೋಡಿಕೊಂಡು ಯಾವ ರೀತಿ ತೆಳುವು ಮಾಡಿಕೊಳ್ಳಬೇಕು ಎಂಬುದನ್ನು ನಿರ್ಧಾರ ಮಾಡಿಕೊಳ್ಳಬೇಕಾಗುತ್ತದೆ. ಕೆಲವು ಸಂದರ್ಭಗಳಲ್ಲಿ 1 ರಿಂದ 10 ಪಟ್ಟು ನೀರನ್ನು ಬೆರೆಸಿಕೊಂಡು ಅದನ್ನು ತೆಳುವು ಮಾಡಿಕೊಂಡು ಬಳಸಬೇಕಾಗುತ್ತದೆ. ಹಸು ಗಂಜಲಕ್ಕಿಂತ ಎಮ್ಮೆ ಗಂಜಲ ಖಾರ ಇರುತ್ತದೆ. ಇದರಂತೆ ಕತ್ತೆ, ಕುದುರೆಗಳ ಗಂಜಲಗಳೂ ಕೂಡ ಬಹಳಷ್ಟು ಖಾರ ಇರುತ್ತದೆ ಎಂದು ಗೊತ್ತಾಗಿದೆ. ಗರ್ಭಧರಿಸಿದ ರಾಸುಗಳ ಗಂಜಲ ಬಹಳಷ್ಟು ಖಾರ ಇರುತ್ತವೆ.

ಕೃಷಿಕರು ಇಂದು ತರಕಾರಿ, ಭತ್ತ, ರೇಷ್ಮೆ, ಕಾಫಿ, ಕಾಳುಮೆಣಸು, ಶುಂಠಿ, ವೆನಿಲ್ಲಾಗಳಂತಹ ಬೆಳೆಗಳಲ್ಲಿ ಗಂಜಲವನ್ನು ಬಳಸಿಕೊಳ್ಳಬಹುದು. ಗಂಜಲದ ಜೊತೆ ಬೇವಿನ ಮೂಲದ ಔಷಧಿ, ಜೀವಾಣು ದ್ರವ, ಬೇರೆ

ಸಸ್ಯ ಜನ್ಯ ದ್ರಾವಣಗಳನ್ನು ಬೆರೆಸಿಕೊಂಡು ಸಿಂಪರಣೆ ಮಾಡಿಕೊಳ್ಳಬಹುದು. ಸಿಂಪರಣೆ ಮಾಡುವ ವ್ಯಕ್ತಿಗೆ ಸಿಂಪರಣೆ ಪಡೆಯುವ ಬೆಳೆಗೆ ಯಾವುದೇ ರೀತಿಯ ಅಪಾಯವನ್ನು ಇದು ಉಂಟುಮಾಡುವುದಿಲ್ಲ.

ಹಸುವಿನ ಗಂಜಲವನ್ನು ಶೇ 20ರ ಪ್ರಮಾಣದಲ್ಲಿ ಸಿಂಪಡಿಸುವುದರಿಂದ ಸಾರಜನಕದ ಪೂರೈಕೆ ಆಗುತ್ತದೆ. ಇದರಲ್ಲಿ ಇತರ ಪೋಷಕಾಂಶಗಳು ಕೂಡ ಹೇರಳವಾಗಿವೆ. ಅವೂ ಸಹ ಪೂರೈಕೆಯಾಗುತ್ತವೆ. ರೋಗಗಳ ಹಾಗೂ ಕೀಟಗಳ ಬಾಧೆ ಕಡಿಮೆಯಾಗುತ್ತದೆ. ಸಸ್ಯ ಆರೋಗ್ಯಯುತವಾಗಿದ್ದರೆ ಇಳುವರಿಯಲ್ಲಿ ಹೆಚ್ಚಳ ಆಗುತ್ತದೆ.

ಪೂರ್ಣ ಪ್ರಮಾಣದಲ್ಲಿ ಸಾವಯವ ಕೃಷಿಯಲ್ಲಿ ಪೋಷಕಾಂಶಗಳನ್ನು ಒದಗಿಸಿ ಕೊಡಲು ಸಾಧ್ಯವೇ? ಎನ್ನುವ ಪ್ರಶ್ನೆ ಕೃಷಿಕರನ್ನು ಕಾಡಬಹುದು. ಇಂಗಾಲವು ಬೆಳೆಗೆ ಶೇ 44 ರಷ್ಟು ಇರಬೇಕು. ಜಲಜನಕ ಶೇ 6 ರಷ್ಟು ಇರಬೇಕು. ಆಮ್ಲಜನಕ ಶೇ 44 ರಷ್ಟು ಇರಬೇಕು. ಈ ಮೂರೂ ಅತ್ಯಂತ ಪ್ರಮುಖ ಪೋಷಕಾಂಶಗಳು. ಇವುಗಳನ್ನು ಯಾವ ಕಾರ್ಖಾನೆಗಳೂ ತಯಾರಿಸಿ ಮಾರಾಟ ಮಾಡಲು ಸಾಧ್ಯವಿಲ್ಲ. ಎಲ್ಲವೂ ನೈಸರ್ಗಿಕವಾಗಿಯೇ ದೊರೆಯಬೇಕು. ಈ ಮೂರೂ ಪೋಷಕಾಂಶಗಳ ಕೊಡುಗೆ ಎಷ್ಟು ಅಂದರೆ ಶೇ 94 ರಷ್ಟು... ಕೇವಲ 6 ರಷ್ಟನ್ನು ಒದಗಿಸಲು ಇಷ್ಟೆಲ್ಲಾ ಹೋರಾಟ ಇತ್ತೀಚೆಗೆ ಹೆಚ್ಚಿನ ಪ್ರಮಾಣದಲ್ಲಿ ಬಳಕೆಗೆ ಬರುತ್ತಿರುವಂತಹ ಪಂಚಗವ್ಯದ ತಯಾರಿಕೆಯಲ್ಲಿ ಗಂಜಲವನ್ನು ಬಳಸಿಕೊಳ್ಳಲಾಗುತ್ತಿದೆ. ಇದನ್ನೂ ಕೂಡ ತಯಾರಿಸಿಕೊಂಡು ಬೆಳೆ ಉತ್ಪಾದನೆಯಲ್ಲಿ ಬಳಸಿಕೊಳ್ಳಬಹುದು.

**ಗಂಜಲದ ಉಪಯುಕ್ತತೆ**

ಗಂಜಲದ ಬಳಕೆಯಿಂದ ಹಲವಾರು ಉಪಯುಕ್ತತೆಗಳು ದೊರೆಯುತ್ತವೆ. ಗಂಜಲವು ಬೆಳೆಗಳಿಗೆ ತಗಲುವಂತಹ ರೋಗ ಅಥವಾ ಕೀಟ ಬಾಧೆಯನ್ನು ನಿಯಂತ್ರಿಸಲು ಹಾಗೆ ಇನ್ನಿತರ ಉದ್ದೇಶಗಳಿಗೆ ಬಹಳಷ್ಟು ಉಪಯೋಗ ಆಗುತ್ತದೆ.

ಗಂಜಲದ ಉಪಯೋಗವೆಂದರೆ ಲೀಟರ್ ಗಂಜಲಕ್ಕೆ 10 ಲೀ. ನಷ್ಟು ನೀರನ್ನು ಬೆರೆಸಿ ಆ ದ್ರಾವಣದಲ್ಲಿ ಭತ್ತವನ್ನು ಸುಮಾರು 30 ನಿಮಿಷ ನೆನೆಸಿ ಬಿತ್ತನೆ ಮಾಡಿದಲ್ಲಿ ಸಂಪೂರ್ಣ ಎಲೆ ಚುಕ್ಕಿ ರೋಗವನ್ನು ನಿಯಂತ್ರಿಸಬಹುದಾಗಿರುತ್ತದೆ.

ನಾಟಿ ಹಸುವಿನ ಗಂಜಲವನ್ನು ಸಸ್ಯಾಮೃತ, ಜೀವಾಮೃತ, ಬೀಜಾಮೃತ ಹೀಗೆ ಇನ್ನಿತರ ಉಪಯೋಗಗಳಿಗೆ ಬಳಸುವುದರಿಂದ ಅದನ್ನು ಕೃಷಿಯ ಅವಿಭಾಜ್ಯ ಅಂಗ ಎಂದು ಹೇಳಿದರೆ ತಪ್ಪಾಗಲಾರದು. ವಿಜ್ಞಾನಿಗಳು ಹೇಳುವಂತೆ 1 ಗ್ರಾಂ ದೇಶೀಯ ಹಸುವಿನ ಸಗಣಿಯಲ್ಲಿ ಸರಿಸುಮಾರು 300–500 ಕೋಟಿ ಜೀವಾಣುಗಳು ಇರುತ್ತವೆ. ಸಗಣಿ ಮತ್ತು ಗಂಜಲಗಳನ್ನು ಮಣ್ಣಿಗೆ ಸೇರಿಸಿದಾಗ ಸೂಕ್ಷ್ಮಾಣುಜೀವಿಗಳ ಸಂಖ್ಯೆ ವೃದ್ಧಿಗೊಳ್ಳುತ್ತವೆ. ಅಂತಹ ಮಣ್ಣಿನಲ್ಲಿ ಗಿಡಮರಗಳು ಸದೃಢವಾಗಿ ಬೆಳೆಯುತ್ತವೆ.

ಗಂಜಲವನ್ನು ಕಾಳು ಶುಚಿ ಮಾಡುವ ಮೊರಗಳನ್ನು ಹಾಳಾಗದಂತೆ ಮಾಡಲು ಹುಳು ಹತ್ತದಂತೆ ಮರಮುಟ್ಟುಗಳನ್ನು ಕಾಪಾಡಲು ಬಳಸುವುದು ಸಾಮಾನ್ಯ. ಹಸಿ ಗಾಯಗಳಿಗೆ ಗಂಜಲ ಹಾಕಿದರೆ ಬೇಗ ವಾಸಿಯಾಗುತ್ತದೆ. ತಲೆಗೆ, ಮೈಗೆ ಹಚ್ಚಿಕೊಂಡು ಸ್ನಾನ ಮಾಡುವ ಅಭ್ಯಾಸವೂ ಅಲ್ಲಲ್ಲಿ ಕಾಣುತ್ತದೆ. ಪಂಚಗವ್ಯದಲ್ಲಿ ಹಸುವಿನ ಗಂಜಲ ಒಂದು ಘಟಕ. ಹಸುವಿನ ಅಥವಾ ಕರುವಿನ ತಾಜಾ ಗಂಜಲವನ್ನು ಸೇವಿಸುವುದು ಆರೋಗ್ಯಕ್ಕೆ ಒಳ್ಳೆಯದು. ಕೊಟ್ಟಿಗೆಯಲ್ಲಿ ಗಂಜಲ ಮತ್ತು ಸಗಣಿ ವಾಸನೆಯನ್ನು ಎಳೆದುಕೊಳ್ಳುವುದರಿಂದ ಸಣ್ಣಮಟ್ಟ ಕಾಯಿಲೆಗಳಿಂದ ದೂರ ಇರಬಹುದು ಎಂಬುದು ಹಿರಿಯರ ಹೇಳಿಕೆ. ಬೆಳೆಯ ಬಿತ್ತನೆಯಿಂದ ಹಿಡಿದು ಕೊಯ್ಲಿನವರೆಗೆ ಗಂಜಲದ ಬಳಕೆಯನ್ನು ಮಾಡಿಕೊಳ್ಳಬಹುದು. ಅಲ್ಪಾವಧಿ

ಬೆಳೆಗಳಲ್ಲಿ ಇದನ್ನು ವಾರಕ್ಕೊಮ್ಮೆ ಸಿಂಪರಣೆ ಮಾಡುವ ಕ್ರಮ ಒಳ್ಳೆಯ ಪರಿಣಾಮ ಕೊಡುತ್ತದೆ. ಬಹುವಾರ್ಷಿಕ ಬೆಳೆಗಳಲ್ಲಿ ತಿಂಗಳಿಗೊಮ್ಮೆಯಾದರೂ ಅನುಸರಿಸಬೇಕು. ಖುಷಿ ಮತ್ತು ನೀರಾವರಿ ಬೆಳೆಗಳಿಗೂ ಇದು ಹಿತ, ಮನುಷ್ಯರಿಗೆ, ಪ್ರಾಣಿ, ಪಕ್ಷಿ, ಕೀಟಗಳಿಗೆ ಮಾರಕವಾಗಿರುವ ಕಾಯಿಲೆಗಳನ್ನು ಉಪಶಮನಮಾಡಲು ಗಂಜಲವನ್ನು ಉಪಯೋಗಿಸಿ ಆರೋಗ್ಯವನ್ನು ಗಳಿಸಬಹುದು.

ಕೆಲವೊಬ್ಬರು ತಂಗು, ಅಡಿಕೆ, ಮಾವು, ಬಾಳೆ, ಕಾಫಿ ಕಾಳುಮೆಣಸು ಮುಂತಾದ ಬಹುವಾರ್ಷಿಕ ಫಸಲುಗಳ ಗಿಡ ಮರಗಳ ಬುಡಕ್ಕೆ ಮುಂಗಾರಿನಲ್ಲಿ ಹಾಕುತ್ತಾರೆ. ಮಳೆಗಾಲದ ಸಂದರ್ಭದಲ್ಲಿ ಗಂಜಲವು ಮಳೆ ನೀರಿನೊಂದಿಗೆ ಸೇರಿಕೊಂಡು ಬೇರಿಗೆ ತಲುಪಿ ಸಸ್ಯದ ಅಂಗಾಂಶಗಳನ್ನು ಸೇರಿಕೊಂಡು ಆರೋಗ್ಯವನ್ನು ರಕ್ಷಣೆ ಮಾಡುವುದರಲ್ಲಿ ನೆರವಾಗುತ್ತದೆ. ಭತ್ತಕ್ಕೆ ನೀರುಣಿಸುವಾಗ ನೀರಿನೊಂದಿಗೆ ಗಂಜಲವನ್ನು ಮಿಶ್ರಮಾಡಿದರೆ ಅನುಕೂಲವೇ ಹೌದು. ಇವೆಲ್ಲವುದಕ್ಕಿಂತ ಸಿಂಪರಣೆಯು ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಅದು ಫಲಕಾರಿಯೂ ಹೌದು, ಸಿಂಪರಣೆ ಬುಡಕ್ಕೆ ಹಾಕುವ ಕ್ರಮ ಸರಿ, ಯುಕ್ತ, ಗಂಜಲದೊಂದಿಗೆ ಇತರೆ ಗಿಡಮಾಲಿಕೆಗಳ ಕಷಾಯವನ್ನು ಬಳಸಿಕೊಳ್ಳಬಹುದು. ಉದಾ: ಕತ್ತಾಳೆ, ಪಾರ್ಥೇನಿಯಂ, ತುಳಸಿ, ಬೇವು ಇತ್ಯಾದಿಗಳನ್ನು ನುಣ್ಣಗೆ ರುಬ್ಬಿ ಗಂಜಲದೊಂದಿಗೆ ಸೇರಿಸಿ ಸೂಕ್ತ ಪ್ರಮಾಣದಲ್ಲಿ ಅದರೊಂದಿಗೆ ನೀರನ್ನು ಬೆರೆಸಿ ಬಳಕೆ ಮಾಡಬಹುದು.

ಒಂದು ಹಸು ಅಥವಾ ಎಮ್ಮೆಯು 25–40 ಲೀ ನೀರನ್ನು ದಿನಕ್ಕೆ ಕುಡಿಯುವುದುಂಟು. ಎತ್ತು ಮತ್ತಿತರ ಜಾನುವಾರುಗಳು ಹೆಚ್ಚು ಕಡಿಮೆ ಇಷ್ಟೇ ನೀರನ್ನು ಕುಡಿಯಬಹುದು. ಒಂದು ಅಂದಾಜಿನಂತೆ ಕುಡಿದ ನೀರು ಮುಕ್ಕಾಲುಭಾಗ ಗಂಜಲವಾಗಿ ಪರಿವರ್ತನೆ ಆಗುತ್ತದೆ. ಸರಿಯಾದ ಕ್ರಮಗಳನ್ನು ಅನುಸರಿಸಿದರೆ ಒಂದು ಹಸು ಇಲ್ಲವೇ ಎಮ್ಮೆ ಅಥವಾ ಎತ್ತಿನಿಂದ ದಿನಒಂದಕ್ಕೆ 10–15 ಲೀ ಗಂಜಲವನ್ನು ಸಂಗ್ರಹಿಸಬಹುದು. ಉಷ್ಣತೆ ಕಡಿಮೆ ಇರುವ ದಿನಗಳಲ್ಲಿ ಜಾನುವಾರುಗಳು ಹೆಚ್ಚು ಗಂಜಲವನ್ನು ಹುಯ್ಯುತ್ತವೆ. ಬಹಳ ಕಡೆ ಕೊಟ್ಟಿಗೆಗಳಲ್ಲಿ ಕಲ್ಲು ಅಥವಾ ಗಾರೆಯನ್ನು ಹಾಕದೇ ಇರುವುದರಿಂದ ಅದು ಮಣ್ಣಿನಲ್ಲಿ ಹಿಂಗಿ ವ್ಯರ್ಥವಾಗಿ ಹೋಗುತ್ತದೆ. ಕೆಲವು ಕಡೆ ಗಂಜಲದ ಗುಂಡಿ ಇದ್ದರೂ ಜನರು ಕೊಡದಲ್ಲಿ ತುಂಬಿಕೊಂಡು ಮನೆ ಬಳಿ ಇರುವ ಚರಂಡಿಗೆ ಚೆಲ್ಲುವುದಿದೆ. ಕೆಲವೊಬ್ಬರು ತಿಪ್ಪೆಗುಂಡಿಯಲ್ಲಿ ಸುರಿಯುತ್ತಾರೆ. ಸರಿಯಾದ ಪರಿಜ್ಞಾನ ಇಲ್ಲದಿದ್ದಾಗ ಈ ರೀತಿಯ ಕೆಲಸಗಳು ಆಗುತ್ತಿರುತ್ತವೆ ಎಂಬುದಾಗಿ ಹಿರಿಯ ಕೃಷಿಕರು ಹೇಳುತ್ತಿರುತ್ತಾರೆ.

ಜಾನುವಾರುಗಳ ಗಂಜಲವನ್ನು ಸುರಕ್ಷಿತವಾಗಿ ಸಂಗ್ರಹಣೆ ಮಾಡಿಕೊಂಡು ಬಳಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕು. ಜಾನುವಾರುಗಳು ಸಾಮಾನ್ಯವಾಗಿ ಬೆಳಿಗ್ಗೆ ಎದ್ದ ತಕ್ಷಣ ನೀರು ಕುಡಿಯುವಾಗ ಹುಲ್ಲು ಹಾಕುವಾಗ ಕರು ಹಾಲು ಕುಡಿಯುವಾಗ, ಮೈಮೇಲೆ ನೀರು ಹಾಕಿ ತೊಳೆಯುವಾಗ ಗಂಜಲವನ್ನು ಹುಯ್ಯುತ್ತವೆ. ಈ ಸಂದರ್ಭದಲ್ಲಿ ಬಕೆಟ್ಟನ್ನು ಹಿಡಿದು ಸಂಗ್ರಹಿಸಲು ಹೋದರೆ ಕೆಲವೊಮ್ಮೆ ಯಶಸ್ವಿ ಆಗಬಹುದು. ಅಭ್ಯಾಸ ಮಾಡುತ್ತಾ ಮಾಡುತ್ತಾ ಹೋದರೆ ಅವು ಹೊಂದಿಕೊಳ್ಳುತ್ತವೆ. ಕೆಲವೊಮ್ಮೆ ಗಂಜಲವನ್ನು ಹಿಡಿಯಲು ಹೋದರೆ ಜಾನುವಾರುಗಳು ಹುಯ್ಯುವುದನ್ನು ನಿಲ್ಲಿಸಿಬಿಡಬಹುದು. ಆದರೂ ಪ್ರಯತ್ನವನ್ನು ಮಾಡುತ್ತಾಹೋಗಿ ಆ ಕೆಲಸದಲ್ಲಿ ಯಶಸ್ವಿಯಾಗಿ ಸಾಗಬಹುದು.

ಪ್ರಾಣಿಗಳ ಮೂತ್ರ ಅಥವಾ ಗಂಜಲದಲ್ಲಿ ಇರುವ ಸತ್ಯಾಂಶಗಳನ್ನು ಗಮನಿಸಿದರೆ ಶೇ 0.9–1.2 ಸಾರಜನಕ, ರಂಜಕ ಕಡಿಮೆ ಮತ್ತು ಪೊಟ್ಯಾಷಿಯಂ ಶೇ 0.5–1 ರಷ್ಟು ಇರುತ್ತದೆ. ಕುರಿಗಳ ಗಂಜಲದಲ್ಲಿ ಶೇ 1.7 ಸಾರಜನಕ ಮತ್ತು ಕುದುರೆ ಗಂಜಲದಲ್ಲಿ ಶೇ 1.2–1.5 ಸಾರಜನಕ ಹಾಗೂ ಶೇ 1.3–15 ರಂಜಕ ಇರುತ್ತವೆ. ಗಂಜಲವನ್ನು ಬಳಸಿ ಅದರಲ್ಲಿ ಅನುಭವಪಡೆದಿರುವ ಕೃಷಿಕರು ಈ ಅಂಶಗಳನ್ನು ಹೇಳಿದ್ದಾರೆ.

ಬಾಳೆಯಲ್ಲಿ ಗಂಡು ಮೋತೆಯನ್ನು ಉಳಿಸಿಕೊಂಡರೆ ಪ್ರಯೋಜನವಿಲ್ಲ. ಅದು ಪೋಷಕಾಂಶಗಳನ್ನು ಹೀರುತ್ತಾ ಹೋಗುತ್ತದೆ. ಅದಕ್ಕಾಗಿ ಅದನ್ನು ತೆಗೆದು, ಮುಂದಿನ ಭಾಗಕ್ಕೆ ಅಂದರೆ ಗೊನೆಯ ತುದಿಗೆ ಗಂಜಲವನ್ನು ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ ಕಟ್ಟಿದರೆ ಕಾಯಿಗಳು ಹಿಗ್ಗುತ್ತವೆ. ತೂಕ ಹೆಚ್ಚುತ್ತದೆ. ಭತ್ತದಲ್ಲಿ ಜಿಗಿಹುಳುವಿನ ಕಾಟ ಕಡಿಮೆ ಮಾಡಲು 5 ಕೆ.ಜಿಯಷ್ಟು ಬೇವಿನ ಬೀಜವನ್ನು ತೆಗೆದುಕೊಂಡು ರುಬ್ಬಿ (ರಾಡಿ ತರಹ ತಯಾರಿಸಿಕೊಳ್ಳಿ) ಇದನ್ನು 50 ಲೀ. ಗಂಜಲದಲ್ಲಿ ಚೆನ್ನಾಗಿ ಬೆರೆಸಬೇಕು. ಒಂದು ಸಮಯ ಬೇವಿನ ರಾಡಿ ಸರಿಯಾಗಿ ಬೆರೆಯದೇ ಹೋದರೆ ಅಂಟುವಾಳ ಅಥವಾ ಸೀಗೆಕಾಯಿ ಪುಡಿಯ ರಸವನ್ನು ಸೇರಿಸಿಕೊಳ್ಳಬಹುದು. ಇಲ್ಲವೇ ಆಯಾ ಪ್ರದೇಶದಲ್ಲಿ ಎಣ್ಣೆಯ ಭಾಗ ಕರಗಿಸಲು ಬಳಸುವ ಯಾವುದೇ ಸಸ್ಯದ ಭಾಗವನ್ನು ಉಪಯೋಗಿಸಿಕೊಳ್ಳಬಹುದು. ಬೇವಿನ ಬೀಜದ ಸರಿ ಅಥವಾ ರಾಡಿಯನ್ನು ಗಂಜಲದೊಂದಿಗೆ ಬೆರೆಸಿದ ಬಳಿಕ ಸಿಗುವ ಪದಾರ್ಥವನ್ನು ಸೇರಿಸಿಕೊಂಡು ಇದಕ್ಕೆ 500 ಲೀ. ನೀರನ್ನು ಸೇರಿಸಿ ಭತ್ತದ ಬೆಳೆಯ ಮೇಲೆ ಸಿಂಪಡಿಸಿದರೆ ಬೆಳವಣಿಗೆ ಉತ್ತಮಗೊಳ್ಳುತ್ತದೆ. ಜೊತೆಗೆ ಇತರ ಕೀಟಗಳೂ ಸಹ ಹತೋಟಿಗೆ ಬರುತ್ತವೆ.

ಜಿಗಿಹುಳುವಿನ 500 ಗ್ರಾಂ ಬೆಳ್ಳುಳ್ಳಿ, 1.25 ಕಿ.ಗ್ರಾಂ ಒಣ ಮೆಣಸಿನಕಾಯಿ, 500 ಗ್ರಾಂ ಶುಂಠಿಯನ್ನು ತೆಗೆದುಕೊಂಡು ಪ್ರಮಾಣಕ್ಕೆ ತಕ್ಕಂತೆ ಗಂಜಲವನ್ನು ಸೇರಿಸಿ ಸರಿ ಅಥವಾ ರಾಡಿಯಂತೆ ಮಾಡಿಕೊಳ್ಳಲು ಒರಳಿನಲ್ಲಿ ಹಾಕಿ ರುಬ್ಬುವುದು ಸರಿ. 500ಮಿ.ಲೀ. ಬೇವಿನ ಎಣ್ಣೆ, 500 ಮಿ. ಲೀ. ತಂಬಾಕಿನ ಕಷಾಯ 100 ಮಿ.ಲೀ. ಹಿಂಗಿನ ಕಶ ಇದಕ್ಕೆ ಸೇರಿಸಿಕೊಳ್ಳಿ. ಇವೆಲ್ಲವನ್ನೂ 5 ಲೀ, ಗಂಜಲದಲ್ಲಿ ಚೆನ್ನಾಗಿ ಬೆರೆಸಿ, ಬೇವಿನ ಎಣ್ಣೆ ಕರಗಿಸಲು ಈ ದ್ರಾವಣಕ್ಕೆ 100 ಗ್ರಾಂ ಸೀಗೆಕಾಯಿ ಅಥವಾ ಅಂಟವಾಳದ ಪುಡಿ ಬೆರೆಸಬಹುದು ಒಟ್ಟು ತಯಾರದ ದ್ರಾವಣಕ್ಕೆ 300–500 ಲೀ. ನೀರು ಸೇರಿಸಿ ಬೆಳೆಗಳ ಮೇಲೆ ಸಿಂಪಡಿಸುವುದರಿಂದ ಕೀಟ, ರೋಗಗಳ ಬಾಧೆ ಕಡಿಮೆಯಾಗಿ, ಬೆಳೆ ಆರೋಗ್ಯಕರವಾಗಿ ವೃದ್ಧಿಯಾಗುತ್ತದೆ.

ಜಾನುವಾರುವಿನ ಗಂಜಲದ ಸತ್ವ ಮತ್ತು ಅದು ವಿಸರ್ಜಿಸುವ ಪ್ರಮಾಣ ಹಲವು ಅಂಶಗಳಿಂದ ಅವಲಂಬಿತವಾಗಿರುತ್ತದೆ. ಪ್ರಾಯಕ್ಕೆ ಬಂದಿರುವ ಒಂದು ಹಸು ಅಥವ ಎಮ್ಮೆ ದಿನವೊಂದಕ್ಕೆ ಲೀಟರ್‌ನಷ್ಟು ಗಂಜಲವನ್ನು ಕೊಡುತ್ತದೆ. ಚಳಿಗಾಲ, ಮಳೆಗಾಲದಲ್ಲಿ ಈ ಗಂಜಲದ ಪ್ರಮಾಣ ಹೆಚ್ಚಾಗಿರುತ್ತದೆ. ಕುಡಿಯುವಂತಹ ನೀರು, ತಿನ್ನುವಂತಹ ಹುಲ್ಲು, ಕೊಡುವ ಹಿಂಡಿ, ಬೂಸಾಗಳನ್ನು ಅವಲಂಬಿಸಿ ಗಂಜಲದ ಪ್ರಮಾಣದ ಸತ್ವಾಂಶ ಏರುಪೇರಾಗಬಹುದು. ಪ್ರಾಣಿಜನ್ಯವಾದ ಈ ಪದಾರ್ಥವನ್ನು ಕೃಷಿಕರು ಬೆಳೆ ಉತ್ಪಾದನೆಯಲ್ಲಿ ಪರಿಣಾಮಕಾರಿಯಾಗಿ ಮತ್ತು ಲಾಭದಾಯಕವಾಗಿ ಬಳಸಿಕೊಳ್ಳಬಹುದು.

ಗಂಜಲದಲ್ಲಿ ಬೆಳೆಗಳಿಗೆ ಬೇಕಾದಂತಹ ಸತ್ವಾಂಶಗಳು ಇರುತ್ತವೆ. ಆದರೆ ಕೆಲವರು ಬೆಳೆಗಳಿಗೆ ನೇರವಾಗಿ ಗಂಜಲವನ್ನು ಸಿಂಪಡಿಸಿದಾಗ ಎಲೆಗಳು ಸುಡುವಂತಹ ಸಾಧ್ಯತೆ ಇರುತ್ತದೆ. ಈ ಕಾರಣಕ್ಕಾಗಿ ನೀರಿನ ಜೊತೆ ಅದನ್ನು ಬೆರೆಸಿಕೊಂಡು ತೆಳು ಮಾಡಿಕೊಂಡು ಈ ಗಂಜಲವನ್ನು ಬೆಳೆಗಳಿಗೆ ಬೆಳಗಿನ ಹೊತ್ತು ಸಿಂಪರಣೆ ಮಾಡಬೇಕಾಗುತ್ತದೆ. ಗಂಜಲದಲ್ಲಿ ಪೋಷಕಾಂಶಗಳು ಮತ್ತು ಔಷಧೀಯ ಗುಣಗಳು ಸೇರಿಕೊಂಡಿರುವುದರಿಂದ ಪೈರುಗಳ ಬೆಳವಣಿಗೆಗೆ ಇದು ಅನುಕೂಲ ಮಾಡಿಕೊಡುತ್ತದೆ. ಒಂದು ರೀತಿ ಇದು ಬೆಳೆವರ್ಧಕವಾಗಿ ಕೆಲಸ ಮಾಡುತ್ತದೆ. ಅದೇ ರೀತಿ ಕೆಲವೊಂದು ಕೀಟ ಮತ್ತು ರೋಗಗಳ ನಿಯಂತ್ರಣಕ್ಕೆ ಇದು ಅನುಕೂಲವಾಗುತ್ತದೆ. ದನಕರುಗಳನ್ನು ಕಟ್ಟುವಂತಹ ಕೊಟ್ಟಿಗೆಯಲ್ಲಿ ಗಂಜಲದ ಸಂಗ್ರಹಣೆಗೆ ನಾವು ಒಂದು ಗುಂಡಿಯನ್ನು ಮಾಡಿಕೊಳ್ಳುವುದು ಬಹಳ ಒಳ್ಳೆಯದು. ನಿತ್ಯವೂ ಸಿಗುವ ಗಂಜಲವನ್ನು ಶೇಖರಣೆ ಮಾಡಲು ಒಂದು ಪ್ಲಾಸ್ಟಿಕ್ ಡ್ರಂನ್ನು ಬಳಸಿಕೊಳ್ಳಬೇಕಾಗುತ್ತದೆ. ಚರಂಡಿಗೆ ಅಥವಾ ತಿಪ್ಪೆಗೆ ಈ ಗಂಜಲವನ್ನು ಸುರಿಯಬಾರದು. ಅದರ ಬದಲಿಗೆ ಅದನ್ನು ಸಂಗ್ರಹಣೆ ಮಾಡಿಕೊಂಡು ಸರಿಯಾದ ರೀತಿಯಲ್ಲಿ ನಾವು ಬಳಸಿದರೆ ಇದರಿಂದ ಬಹಳಷ್ಟು

ಅನುಕೂಲಗಳನ್ನು ನಾವು ಪಡೆದುಕೊಳ್ಳಬಹುದು. ಗಂಜಲ ತಾಜಾ ಆದಷ್ಟು ಪರಿಣಾಮಕಾರಿಯಾಗಿರುತ್ತದೆ. ಆದರೂ ನಾವು ಸಂಗ್ರಹಿಸಿಕೊಂಡ ಗಂಜಲ ಕೂಡ ಬಹಳಷ್ಟು ಅನುಕೂಲ ಮಾಡಿಕೊಡುತ್ತದೆ.

ಗಿಡಗಳ ಬುಡಕ್ಕೆ ಗಂಜಲವನ್ನು ನೇರವಾಗಿ ಉಪಯೋಗಿಸಬಹುದು. ಸಸ್ಯಗಳ ಬುಡಕ್ಕೆ ಹಾಕುವಾಗ ಗಂಜಲವನ್ನು ತೆಳುವು ಮಾಡಿಕೊಳ್ಳುವುದು ಬಹಳ ಒಳ್ಳೆಯದು. 1 ಭಾಗ ಗಂಜಲಕ್ಕೆ 3 ಭಾಗ ನೀರನ್ನು ಬೆರೆಸಿಕೊಂಡು ತೆಳುವು ಮಾಡಿಕೊಂಡು ಆ ನಂತರ ಅದನ್ನು ಬಳಸಿಕೊಳ್ಳಬೇಕಾಗುತ್ತದೆ. ಬೆಳೆಯ ಹಂತವನ್ನು ನೋಡಿಕೊಂಡು ಯಾವ ರೀತಿ ತೆಳುವು ಮಾಡಿಕೊಳ್ಳಬೇಕು ಎಂಬುದನ್ನು ನಿರ್ಧಾರ ಮಾಡಿಕೊಳ್ಳಬೇಕಾಗುತ್ತದೆ. ಕೆಲವು ಸಂದರ್ಭಗಳಲ್ಲಿ 6 ರಿಂದ 10 ಪಟ್ಟು ನೀರನ್ನು ಬೆರೆಸಿಕೊಂಡು ಅದನ್ನು ತೆಳುವು ಮಾಡಿಕೊಂಡು ಬಳಸಬೇಕು. ಹಸುವಿನ ಗಂಜಲಕ್ಕಿಂತ ಎಮ್ಮೆ ಗಂಜಲ ಖಾರ ಇರುತ್ತದೆ. ಇದರಂತೆ ಕತ್ತೆ, ಕುದುರೆ ಗಂಜಲಗಳು ಕೂಡ ಬಹಳಷ್ಟು ಖಾರ ಇರುತ್ತದೆ. ಗರ್ಭಧರಿಸಿದ ರಾಸುಗಳ ಗಂಜಲ ಬಹಳಷ್ಟು ಖಾರ ಇರುತ್ತದೆ ಎಂದು ಗೊತ್ತಾಗುತ್ತದೆ.

ಇಂದು ತರಕಾರಿ, ಭತ್ತ, ರೇಷ್ಮೆ, ಕಾಫಿ, ಕಾಳುಮೆಣಸು, ಶುಂಠಿ, ವೆನಿಲ್ಲಾಗಳಂತಹ ಬೆಳೆಗಳಲ್ಲಿ ಗಂಜಲವನ್ನು ಯತೇಚ್ಛವಾಗಿ ಬಳಸುತ್ತಿದ್ದಾರೆ. ದನ ಕರುಗಳನ್ನು ಸಾಕದಿರುವಂತಹವರು ಇತರರಿಂದ ಪಡೆದು ಗಂಜಲವನ್ನು ಬಳಸಿಕೊಳ್ಳಬಹುದು. ಗಂಜಲದ ಜೊತೆ ಬೇವಿನ ಮೂಲದ ಔಷಧಿ, ಜೀವಾಣು ದ್ರವ, ಬೇರೆ ಸಸ್ಯ ಜನ್ಮ ದ್ರಾವಣಗಳನ್ನು ಬೆರೆಸಿಕೊಂಡು ಸಿಂಪರಣೆ ಮಾಡಿಕೊಳ್ಳಬಹುದು. ಸಿಂಪರಣೆ ಮಾಡುವ ವ್ಯಕ್ತಿ, ಸಿಂಪರಣೆ ಪಡೆಯುವ ಬೆಳೆಗೆ ಯಾವುದೇ ರೀತಿಯ ಅಪಾಯವನ್ನು ಇದು ಉಂಟುಮಾಡುವುದಿಲ್ಲ. ಇತ್ತೀಚೆಗೆ ಹೆಚ್ಚಿನ ಪ್ರಮಾಣದಲ್ಲಿ ಕೂಡ ತಯಾರಿಸಿಕೊಂಡು ಬೆಳೆ ಉತ್ಪಾದನೆಯಲ್ಲಿ ಬಳಸಿಕೊಳ್ಳಬಹುದು. ಬಳಕೆಗೆ ಬರುತ್ತಿರುವಂತಹ ಪಂಚಗವ್ಯದ ತಯಾರಿಕೆಯಲ್ಲಿ ಇದನ್ನು ಗಂಜಲವನ್ನು ಬಳಸಿಕೊಳ್ಳಲಾಗುತ್ತಿದೆ.

**ಹಸುವಿನ ಗಂಜಲದ ಪ್ರಾಮುಖ್ಯತೆ**

ಮಾನವ ಒಂದು ಕಡೆ ನೆಲೆಸಿ ಕೃಷಿ ಮಾಡುವುದಕ್ಕೆ ಪ್ರಾರಂಭಿಸುವುದಕ್ಕೆ ಪೂರ್ವದಿಂದಲೂ ಪಶುಪಾಲನೆಯಲ್ಲಿ ತೊಡಗಿದ್ದನು. ಕೃಷಿ ಪ್ರಾರಂಭ ಮಾಡಿದ ನಂತರವೂ ಕೂಡ ಪಶುಪಾಲನೆ ಮುಂದುವರೆಯಿತು. ಉಳುಮೆ ಮಾಡಲು ಪ್ರಾರಂಭ ಮಾಡಿದ ಮೇಲೆ ಜಾನುವಾರುಗಳ ಅವಶ್ಯಕತೆ ಹೆಚ್ಚಾಯಿತು. ಜೊತೆಗೆ ಹಾಲು, ತುಪಟ ಮತ್ತು ಮಾಂಸಕ್ಕಾಗಿ ಕೂಡ ಪಶುಪಾಲನೆ ಪ್ರಾರಂಭವಾಯಿತು. ಈ ಮುಖ್ಯ ಉತ್ಪನ್ನಗಳ ಜೊತೆಗೆ ಸಗಣಿ ಗಂಜಲಗಳು ಪೋಷಕಾಂಶಗಳ ಪೂರೈಕೆಯ ಸಾಧನಗಳಾದವು. ಆಧುನಿಕ ಕೃಷಿಯಲ್ಲಿ ರಸಗೊಬ್ಬರಗಳ ಬಳಕೆಗೆ ಹೆಚ್ಚಿನ ಒತ್ತು ಸಿಕ್ಕಿ ಸಾವಯವ ಗೊಬ್ಬರಗಳ ಕಡೆಗೆ ಗಮನ ಕಡಿಮೆಯಾಯಿತು. ಕೃಷಿ ಕೆಲಸಗಳನ್ನು ಮಾಡಲು ಯಂತ್ರೋಪಕರಣ, ಟ್ರ್ಯಾಕ್ಟರ್ ಬಳಕೆ ಬಂದ ಮೇಲೆ ಜಾನುವಾರುಗಳ ಸಾಕಣೆ ಕಡಿಮೆ ಆಯಿತು. ಇದರ ಪರಿಣಾಮ ಕೃಷಿ ಮೇಲೆ ಕೂಡ ಆಯಿತು. ಭೂಮಿಗೆ ಸೇರಿಸುವ ಸೇಂದ್ರೀಯ ವಸ್ತುಗಳ ಪ್ರಮಾಣ ಕಡಿಮೆ ಆದಂತೆ ಭೂಮಿಯ ಫಲವತ್ತತೆ ಕಡಿಮೆಯಾಗಿ ಇಂದು ಉತ್ಪಾದಕತೆ ಕಡಿಮೆ ಆಗಿದೆ. ಇದರಿಂದ ಉತ್ಪಾದನೆ ತಟಸ್ಥ ಆಗಿದೆ. ಈ ನಿಟ್ಟಿನಲ್ಲಿ ಸಾವಯವ ಕೃಷಿಗೆ ಹೆಚ್ಚಿನ ಒತ್ತನ್ನು ನೀಡುತ್ತಿರುವ ಸಂದರ್ಭದಲ್ಲಿ ಸ್ಥಳೀಯ ಸಾಕಣೆ ಮತ್ತು ಪೋಷಣೆಗೆ ಕೃಷಿಯ ಜೊತೆ ಸಂಪನ್ಮೂಲಗಳನ್ನು ಬಳಸಿಕೊಳ್ಳಬೇಕಾಗಿದೆ. ಜಾನುವಾರುಗಳ ಜೊತೆಯಲ್ಲಿಯೇ ಒತ್ತನ್ನು ನೀಡಬೇಕಾಗಿದೆ.

ನಮ್ಮಲ್ಲಿ ಹಲವಾರು ದೇಶೀ ತಳಿಗಳ ಹಸುಗಳಿವೆ. ಅವು ನಮ್ಮ ಪರಿಸರಕ್ಕೆ ಚೆನ್ನಾಗಿ ಹೊಂದಿಕೊಂಡಿವೆ. ಉದಾಹರಣೆಗೆ ಅಮೃತಮಹಲ್, ಹಳ್ಳಿಕಾರ್, ಕಿಲ್ಲಾರ್, ಮಲ್ನಾಡ್ ಗಿಡ್ಡ ಮುಂತಾದುವು. ಇವು ಕೃಷಿ ಕೆಲಸಕ್ಕೆ ಮತ್ತು ಶ್ರಮದಾಯ ಕೆಲಸಗಳಿಗೆ ಸೂಕ್ತವಾದ ತಳಿಗಳು. ತಕ್ಕಮಟ್ಟಿಗೆ ಹಾಲನ್ನು ಕೊಡುತ್ತವೆ. ಸ್ಥಳೀಯ ಮೇವು,

ಆಹಾರವನ್ನು ತಿಂದು ಕೆಲಸ ಮಾಡುತ್ತವೆ. ಈ ಸ್ಥಳೀಯ ತಳಿಗಳ ಸಂರಕ್ಷಣೆ ಪ್ರತಿಯೊಬ್ಬ ರೈತನ ಕರ್ತವ್ಯವಾಗಿದೆ. ನಮ್ಮ ಮೂಲ ತಳಿಗಳ ಸಂರಕ್ಷಣೆಯಿಂದಲೇ ಸುಧಾರಿತ ತಳಿಗಳ ಅಭಿವೃದ್ಧಿಯನ್ನು ಮಾಡಿಕೊಳ್ಳಬಹುದು. ಈ ಮೂಲ ತಳಿಗಳ ಸಂರಕ್ಷಣೆಗೆ ಸಾಕಷ್ಟು ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ.

ಸಾವಯವ ಪರಿಕರಗಳ ತಯಾರಿಕೆಯಲ್ಲಿ ಮುಖ್ಯವಾಗಿ ನಾಟಿ ತಳಿಗಳ ಸಗಣಿ ಮತ್ತು ಗಂಜಲಗಳ ಬಳಕೆಗೆ ಹೆಚ್ಚಿನ ಒತ್ತನ್ನು ನೀಡಲಾಗುತ್ತಿದೆ. ನಾಟಿ ಹಸುಗಳ ಸಗಣಿ ಮತ್ತು ಗಂಜಲಗಳನ್ನು ಬಳಸುವುದರಿಂದ ದೇಶೀ ತಳಿಗಳ ಹಸುಗಳ ಸಾಕಾಣಿಕೆಗೆ ಒತ್ತನ್ನು ನೀಡಿದಂತಾಗುತ್ತದೆ. ನಮ್ಮ ಸಂಪತ್ತಿನ ರಕ್ಷಣೆ ಕೂಡ ಮಾಡಿದಂತಾಗುತ್ತದೆ.

| **ಅಂಶಗಳು** | **ದೇಶೀ ಹಸು** | **ಸಂಕರಣ ಹಸು** |
|---|---|---|
| ಗಂಜಲದ ರಸಸಾರ | 7.75 (ತಟಸ್ಥ) | 8.94 (ಕ್ಷಾರಿಯ) |
| ವಿದ್ಯುತ್ ವಾಹಕತೆ (ಲವಣಾಂಶಗಳ ಪ್ರಮಾಣ)(EC) $dsm^1$ | 16.4 | 52.8 |
| ಇಂಗಾಲ | 0.62 | 1.05 |
| ಸಾರಜನಕ (ಶೇ) | 0.75 | 0.92 |
| ರಂಜಕ (ಶೇ) | 0.012 | 0.029 |
| ಪೊಟ್ಯಾಷಿಯಂ (ಶೇ) | 0.062 | 1.5 |
| ಸತು (ಪಿಪಿಎಂ) | 3.8 | 5.2 |

ಈ ಅಂಶಗಳ ಪ್ರಮಾಣ ಹಸುಗಳು ತಿನ್ನುವ ಆಹಾರ ಮತ್ತು ವಯಸ್ಸನ್ನು ಅವಲಂಬಿಸಿರುತ್ತದೆ. ಇಷ್ಟೆಲ್ಲಾ ವಿಶೇಷತೆಗಳಿಂದ ಕೂಡಿರುವ ಗಂಜಲವನ್ನು ಜಾಗರೂಕತೆಯಿಂದ ಸಂಗ್ರಹಿಸಿ ಬಳಸಬೇಕು. ಹಸು, ಎಮ್ಮೆಗಳ ಮೆತ್ತೆಯಾಗಿ ಕೊಟ್ಟಿಗೆಯಲ್ಲಿ ಹಸಿರು ಸೊಪ್ಪನ್ನು ಹಾಕಿ ಅವುಗಳನ್ನು ಮಾರನೇ ದಿನ ಬೆಳಿಗ್ಗೆ ಸಂಗ್ರಹಿಸಿ ಕಾಂಪೋಸ್ಟ್ ಗುಂಡಿಗೆ ಹಾಕುವುದು. ಸಗಣಿ, ಗಂಜಲಗಳಿಂದ ಮಿಶ್ರಗೊಂಡು ಹಸಿರು ಸೊಪ್ಪು ಬೇಗ ಕಳಿತು ಗೊಬ್ಬರವಾಗುತ್ತದೆ. ಹೊಂಗೆ ಮತ್ತು ತಂಗಡಿಯನ್ನು ಈ ಉದ್ದೇಶಕ್ಕಾಗಿ ಬಳಸಲಾಗುತ್ತದೆ.

ಗಂಜಲ ಸಂಗ್ರಹಣೆಗಾಗಿ ಕೊಟ್ಟಿಗೆ ನೆಲವನ್ನು ಗಾರೆ ಮಾಡಿಸಿ ಕಲ್ಲು ಚಪ್ಪಡಿ ಹಾಸಿ, ಅಲ್ಲಿ ಇಳಿಜಾರು ಎಲ್ಲವೂ ಗುಂಡಿಯಲ್ಲಿ ಸಂಗ್ರಹವಾಗುವ ರೀತಿಯಲ್ಲಿ ಮಾಡಿಕೊಳ್ಳಬೇಕು. ಕಾಲಕ್ರಮೇಣ ಕಲ್ಲುಹಾಸು ಬಹಳ ನುಣುಪಾದಾಗ ಹಸುಗಳು ಕಾಲು ಜಾರುವ ಸಂದರ್ಭ ಇರುತ್ತದೆ. ಇದಕ್ಕಾಗಿ ಕಲ್ಲುಮುಳ್ಳು ಹೊಡೆಸಿ ಸ್ವಲ್ಪ ಹೊರಟು ಮಾಡಬೇಕಾಗುತ್ತದೆ. ಕೆಲವರು ಕೊಟ್ಟಿಗೆಯಲ್ಲಿ ಮಣ್ಣನ್ನು ಹಾಕಿ ಅದರಲ್ಲಿ ಗಂಜಲ ಇಂಗುವಂತೆ ಮಾಡಿ ಅದನ್ನು ಬಳಸಿಕೊಳ್ಳುತ್ತಾರೆ.

ದೊಡ್ಡ ತೊಟ್ಟಿಗಳನ್ನು ಮಾಡಿಕೊಂಡು ಅದರಲ್ಲಿ ಗಂಜಲವನ್ನು ಸಂಗ್ರಹಿಸಿ ವಿವಿಧ ಉದ್ದೇಶಗಳಿಗೆ ಬಳಸಿಕೊಳ್ಳಬಹುದು. ಮುಖ್ಯವಾಗಿ ಅಭಿವರ್ಧಿತ ಕಾಂಪೋಸ್ಟ್ ತಯಾರಿಕೆಗೆ ಗಂಜಲವನ್ನು ಬಳಸಿಕೊಳ್ಳಬಹುದು. ಕಾಂಪೋಸ್ಟ್ ಗುಂಡಿಗಳಲ್ಲಿ ಅಥವಾ ಬೇರೆ ವಿಧಾನದಲ್ಲಿ ವಿವಿಧ ಪದರಗಳ ಮೇಲೆ ಗಂಜಲವನ್ನು ಸುರಿದು ನಂತರ ಮಣ್ಣಿನಿಂದ ಮುಚ್ಚುತ್ತಾರೆ. ಈ ರೀತಿ ಗಂಜಲದಿಂದ ವರ್ಧಿಸಲ್ಪಟ್ಟ ಗೊಬ್ಬರವನ್ನು ಅಭಿವರ್ಧಿತ ಕಾಂಪೋಸ್ಟ್ ಎಂದು ಕರೆಯುತ್ತಾರೆ. ಈ ರೀತಿಯ ಸಾವಯವ ಗೊಬ್ಬರದಲ್ಲಿ ಪೋಷಕಾಂಶಗಳು ಅಧಿಕ ಪ್ರಮಾಣದಲ್ಲಿರುತ್ತವೆ.

ನೀರಾವರಿ ನೀರಿನ ಜೊತೆಗೆ ಗಂಜಲವನ್ನು ಮಿಶ್ರಮಾಡಿ ಬಳಸಬಹುದು. ಬೇರೆ ಬೇರೆ ಬೆಳೆಗಳಿಗೆ ಬಳಸಬಹುದು. ಗಂಜಲದಲ್ಲಿ ವೀಳ್ಯದೆಲೆ, ಭತ್ತ, ಮೆಣಸಿನಕಾಯಿ, ತೊಗರಿ, ನೆಲಗಡಲೆ, ಅಡಿಕೆ, ಬಾಳೆಯಂತಹ ಬೆಳೆಗಳಿಗೆ ಬಳಸಿಕೊಳ್ಳಬಹುದು.

ಭತ್ತದ ಬೆಳೆಗೆ ಎಕರೆಗೆ 300 ಲೀ.ನಷ್ಟು ಗಂಜಲ ಬಳಸಿ ಒಳ್ಳೆಯ ಇಳುವರಿ ಪಡೆಯಬಹುದು. ಎಲ್ಲಾ ಬೆಳೆಗಳಲ್ಲೂ ಒಂದು ಒಂದು ಪ್ರಮಾಣದ ಗಂಜಲವನ್ನು ಅಲ್ಪ ಪ್ರಮಾಣದ ನೀರಿನಲ್ಲಿ ಬೆರೆಸಿಕೊಂಡು ಬಳಸಿಕೊಳ್ಳಬಹುದಾಗಿದೆ. ಮಳೆಯಾದ ಮಾರನೇ ದಿನ ನೇರವಾಗಿ ಗಂಜಲವನ್ನು ಭೂಮಿಗೆ ಕೊಡಬಹುದು, ಮಾವು, ಕಿತ್ತಲೆ, ಹುಣಿಸೆ, ಸಪೋಟ, ತೊಗರಿ, ಅಡಿಕೆ, ಮೂಸಂಬಿ ಮುಂತಾದ ತೋಟಗಳಲ್ಲೂ ಕೂಡ ಬಳಸಬಹುದು. ಗಂಜಲವನ್ನು 1:10ರ ಪ್ರಮಾಣದಲ್ಲಿ ನೀರಿನಲ್ಲಿ ಬೆರೆಸಿಕೊಂಡು ಬಳಸಬಹುದು. ಗಂಜಲದಿಂದ ಜೀವಾಮೃತ ತಯಾರಿಸಿ ಬಳಸಬಹುದು.

## ಓದುಪಠ್ಯ:

## ೪. ಮೌಸ್ ಬಿಟ್ಟು ಮೊಲ ಹಿಡಿದಾತ

**– ಡಿ.ಬಿ. ನಾಗರಾಜ**

**ಆಶಯ :**

**ಕೋಡಿಂಗ್, ಡಿಬಗ್ಗಿಂಗ್, ಟೆಸ್ಟಿಂಗ್, ಪ್ರಾಜೆಕ್ಟ್, ಡೆಡ್‌ಲೈನ್ ಎಂದು ಸೂರ್ಯನ ಬೆಳಕನ್ನೇ ಕಾಣದೆ ದುಡಿಯುತ್ತಿದ್ದ ಯುವ ಸಾಫ್ಟ್‌ವೇರ್ ತಜ್ಞ ಎ.ಸಿ. ಸುನಿಲ್ ಒಂದು ದಿನ ಮೌಸ್ ಬಿಟ್ಟುಬಿಡಲು ತೀರ್ಮಾನಿಸಿದರು. ಅವರ ಕೈಗೆ ಸಿಕ್ಕಿದ್ದು ಮೊಲ. ಈಗ ಅದೇ ಅವರ ಬದುಕು, ಉದ್ದಿಮೆ, ಸಾಮಾಜಿಕ ಸಂಪರ್ಕ ಎಲ್ಲವೂ ಆಗಿಬಿಟ್ಟಿದೆ.**

ಹುಟ್ಟಿದ್ದು ಹಳ್ಳಿಯಲ್ಲಿ, ಓದಿದ್ದು ಕಂಪ್ಯೂಟರ್ ಸೈನ್ಸ್, ರಾಜಧಾನಿಯಲ್ಲಿ ಸಾಫ್ಟ್‌ವೇರ್ ಉದ್ದಿಮೆಯಲ್ಲಿ ಉದ್ಯೋಗ, ಕೈ ತುಂಬಾ ಸಂಬಳ, ಆದರೂ ಅತೃಪ್ತಿ ಇದು ಹೆಚ್ಚು ಸಂಪಾದನೆಯ ಹಪಹಪಿಕೆಯಲ್ಲ. ಅರ್ಥಪೂರ್ಣವಾಗಿ ದುಡಿಯುವ ತುಡಿತ. ಅದಕ್ಕಾಗಿ ಇಪ್ಪತ್ತಾರರ ಹರೆಯದ ಎ.ಸಿ.ಸುನಿಲ್ ಎಂಬ ಈ 'ತಾಂತ್ರಿಕ' ಮೌಸ್ ಬಿಟ್ಟು ಮೊಲ ಹಿಡಿಯಲು ತೀರ್ಮಾನಿಸಿದರು.

ಈಗ ಗುಬ್ಬಿ ತಾಲ್ಲೂಕಿನ ನಿಟ್ಟೂರು ಹೋಬಳಿಯ ಕಾರೇಹಳ್ಳಿಯಲ್ಲಿ 'ಎಸಿಎಸ್ ರಾಬಿಟ್ ಫಾರ್ಮ್' ಹಾಗೂ ವೈಜ್ಞಾನಿಕ ಹಿನ್ನೆಲೆಯ 'ಬ್ರೀಡಿಂಗ್ ಸೆಂಟರ್' ಇದೆ. ಮೂರು ವರ್ಷದ ಹಿಂದೆ ಮೊಲ ಹಿಡಿಯಲು ಹೊರಟ ಸುನಿಲ್‌ಗೆ ಮೌಸ್ ಹಿಡಿಯುವುದಕ್ಕಿಂತ ಹೆಚ್ಚಿನ ಸಂತೋಷ ದೊರೆಯುತ್ತಿದೆ. ಕೋಡಿಂಗ್, ಡಿಬಗ್ಗಿಂಗ್ ಎಂದುಕೊಂಡು ಮನೆಗೂ ಕಚೇರಿಗೂ ಸೀಮಿತನಾಗಿದ್ದ ಯುವಕನನ್ನು ಈಗ ಇಡೀ ಸಮಾಜ ಗುರುತಿಸುತ್ತಿದೆ.

ಸುನಿಲ್ ಅವರ ಮೊಲ ಸಾಕಣೆ ಕೇಂದ್ರಕ್ಕೆ ಇದುವರೆಗೂ ಸಾವಿರಕ್ಕೂ ಹೆಚ್ಚು ಜನ ಭೇಟಿ ನೀಡಿ ತಮ್ಮ ಸಾಧ್ಯತೆಗಳನ್ನು ಅರಿತುಕೊಂಡಿದ್ದಾರೆ. ಐವತ್ತಕ್ಕೂ ಹೆಚ್ಚು ಮಂದಿ ಸುನಿಲ್ ಮಾರ್ಗದರ್ಶನದಲ್ಲಿ ಮೊಲ ಸಾಕಣೆ ಆರಂಭಿಸಿ, ಯಶಸ್ಸಿನ ಪಥದತ್ತ ಸಾಗುತ್ತಿದ್ದಾರೆ.

**ಮೊಲದತ್ತ ಚಿತ್ತ...**

25 ರಿಂದ 40 ವರ್ಷ ನಡುವಿನ ಅವಧಿ ಪ್ರತಿಯೊಬ್ಬರ ಜೀವನದಲ್ಲೂ ಬದಲಾವಣೆಯ ಪರ್ವ. ಅದಕ್ಕೇ ಸುನಿಲ್ ಕಾಲು ಶತಕದತ್ತ ಸಾಗುತ್ತಿರುವಾಗಲೇ ಬದಲಾವಣೆಯ ದಾರಿಯನ್ನು ಆರಿಸಿಕೊಂಡರು. ಇದು ಅವರು ಏಕಾಏಕಿ ಕೈಗೊಂಡ ನಿರ್ಣಯವಲ್ಲ. ಅದರ ಹಿಂದೊಂದು ಚಿಂತನೆಯಿದೆ. ಅದನ್ನು ಅವರದೇ ಮಾತುಗಳಲ್ಲಿ ಹೀಗೆ ಸಂಗ್ರಹಿಸಬಹುದು.

ಯಾರೂ ಸುಮ್ಮನೆ ಸಂಬಳ ನೀಡಲ್ಲ. ನಮ್ಮ ಸಾಮರ್ಥ್ಯ ಅಳೆಯುತ್ತಾರೆ. ನಮಗೆ 1 ಲಕ್ಷ ಸಂಬಳ ಕೊಟ್ಟರೆ, ನಮ್ಮಿಂದ 2 ಲಕ್ಷ ಮೌಲ್ಯದ ದುಡಿಮೆ ಪಡೆಯುತ್ತಾರೆ. ಎಲ್ಲ ಖರ್ಚು ವೆಚ್ಚ ಕಳೆದು ಲಾಭದ ಒಂದು ಭಾಗವನ್ನು ಮಾತ್ರ ನಮಗೆ ಸಂಬಳದ ರೂಪದಲ್ಲಿ ನೀಡುತ್ತಾರೆ. ಸಂಬಳದ ಈ ಒಳಮರ್ಮ ಅರಿತೆ. ನಲವತ್ತು ತುಂಬುವುದರೊಳಗೆ ಮಾನಸಿಕ, ದೈಹಿಕ ಸಾಮರ್ಥ್ಯ ಕುಂಠಿತಗೊಂಡಿರುತ್ತದೆ. ಕಬ್ಬು ಹಿಂಡುವ ರೀತಿ ನಮ್ಮ ಸಾಮರ್ಥ್ಯವನ್ನು ಕಂಪನಿಗಳು ಹೀರಿ ಹಾಕುತ್ತವೆ. ಕಂಪನಿಗಳಿಗಾಗಿ ಇಲ್ಲಿ ತನಕ ಅಹೋರಾತ್ರಿ ದುಡಿದ ನಮ್ಮಂಥವರಿಗೆ ಸಾಮರ್ಥ್ಯ ಕುಂದುತ್ತಿದ್ದಂತೆ ಚಿಕ್ಕಪುಟ್ಟ ತಪ್ಪಿಗೂ ಗೇಟ್‌ಪಾಸ್ ನೀಡುತ್ತಾರೆ. ಆಗ ನಮ್ಮ ಇಷ್ಟು ವರ್ಷದ ದುಡಿಮೆಗೆ ತಕ್ಕ ಗೌರವ, ಘನತೆ, ಸಂಪತ್ತು, ಕೀರ್ತಿ ದೊರಕಲಿಲ್ಲ ಎಂಬ ಪಶ್ಚಾತ್ತಾಪ ಕಾಡುತ್ತದೆ. ಬೇರೆ

ಯಾರೂ ಕರೆದು ಕೆಲಸ ಕೊಡಲ್ಲ. ನಾವು ಹತ್ತಾರು ಕಂಪನಿಗೆ ಅಲೆದರೂ; ಕೆಲಸ ಸಿಗಲ್ಲ, ಅಂಥ ಸ್ಥಿತಿಯಲ್ಲಿ ನಾವು ಎಲ್ಲಿಗೆ ಹೋಗಬೇಕು.

ಸ್ವಾವಲಂಬಿಗಳಾದಾಗ ಮಾತ್ರ ನಮ್ಮ ಉದ್ಧಾರ ಎಂಬುದು ಹೊಳೆಯಿತು. ಯಾವ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಬೇಕು ಎಂದು ಹತ್ತು ಹಲವು ಕ್ಷೇತ್ರಗಳ ಅಧ್ಯಯನ ಕೈಗೊಂಡೆ, ಅದರ ಪ್ರತಿಫಲವೇ ಆಹಾರಕ್ಕಾಗಿ ಮೊಲ ಸಾಕಣೆ. ಸಾಫ್ಟ್‌ವೇರ್‌ನಲ್ಲೇ ಹೊಸ ಕಂಪನಿ ಆರಂಭಿಸೋಣ ಎಂದರೆ ತುಂಬಾ ಪೈಪೋಟಿ, ಹೆಜ್ಜೆ ಹೆಜ್ಜೆಗೂ ಸ್ಪರ್ಧೆ, ತಂತ್ರಜ್ಞಾನ ಕ್ಷೇತ್ರಕ್ಕಿಳಿಯೋಣ ಎಂದರೆ ಗಂಟೆಗೊಮ್ಮೆ ಬದಲಾವಣೆ. ಪ್ರತಿಕ್ಷಣವೂ ಅಪ್‌ಡೇಟ್ ಆಗಬೇಕು. ಇನ್ನು ರೀಟೇಲ್ ಇಂಡಸ್ಟ್ರಿಯೂ ಕಷ್ಟದಲ್ಲಿದೆ. ಇರುವ ಚಿಲ್ಲರೆ ವ್ಯಾಪಾರಿಗಳೇ ಬೀದಿಗೆ ಬೀಳುತ್ತಿದ್ದಾರೆ. ಸಾಮಾನ್ಯ ಜನರ ಉದ್ಯಮಕ್ಕೆ ಮಲ್ಟಿನ್ಯಾಷನಲ್ ಕಂಪನಿಗಳು ಲಗ್ಗೆ ಹಾಕುತ್ತಿವೆ. ಗ್ರಾಹಕರನ್ನು ಸೆಳೆಯಲು ಆಫರ್‌ಗಳ ಸುರಿಮಳೆ ನೀಡುತ್ತಿವೆ. ಬೃಹತ್ ಕಂಪನಿಗಳಿಗೆ ವರ್ಷದ ನಷ್ಟ ಭರಿಸುವ ಸಾಮರ್ಥ್ಯ ಇದೆ. ನಮ್ಮಿಂದ ಆಗಲ್ಲ. ಅಲ್ಲೂ ಕಷ್ಟ – ನಷ್ಟ ತಪ್ಪಿದ್ದಲ್ಲ. ಹೀಗೆ ಹತ್ತು ಹಲವು ರೀತಿ ಆಲೋಚನೆ ಮಾಡಿದ ಬಳಿಕ ಆಹಾರ ಉತ್ಪಾದನಾ ಕ್ಷೇತ್ರ ಎಂದೂ ಕೈ ಬಿಡಲ್ಲ ಎಂಬುದನ್ನು ಖಚಿತ ಪಡಿಸಿಕೊಂಡೆ. ಕೊನೆಗೆ ಮೊಲ ಸಾಕಣೆಯ ದೃಢ ನಿರ್ಧಾರ ಮಾಡಿದೆ. ಕಂಪ್ಯೂಟರ್ ಮೌಸ್ ಬಿಟ್ಟು ಬಂದ ನನ್ನನ್ನು 'ಮೊಲ' ಕೈ ಹಿಡಿದು ನಡೆಸುತ್ತಿದೆ.

**ಮೊಲ ಹಿಡಿದರೆ...**

ಮೊಲ ಸಾಕಣೆಯಲ್ಲಿ ಕಡಿಮೆ ರಿಸ್ಕ್, ನಷ್ಟಕ್ಕೆ ಅವಕಾಶವಿಲ್ಲ. ಎಲ್ಲರೂ ಉಪಕಸುಬಾಗಿ ಸುಲಭವಾಗಿ ನಿರ್ವಹಿಸಬಹುದು. ಸುನಿಲ್ ಅವರ ಫಾರ್ಮ್‌ನಲ್ಲಿ ಮಾಂಸಕ್ಕಾಗಿ ಹಾಗೂ ತಳಿ ಅಭಿವೃದ್ಧಿಗಾಗಿ ಮೊಲ ಸಾಕಲಾಗುತ್ತಿದೆ. ಇಲ್ಲೀತನಕ ಹತ್ತು ಲಕ್ಷ ಬಂಡವಾಳ ಹಾಕಿದ್ದು, ಮೂರು ವರ್ಷದಲ್ಲಿ ಶೇಕಡಾ 90 ಭಾಗ ಮರಳಿದೆ ಎನ್ನುತ್ತಾರೆ ಸುನಿಲ್. ಮೊಲದ ಜೀವಿತಾವಧಿ 8 ವರ್ಷ ವಂಶಾಭಿವೃದ್ಧಿ ಅತಿ ವೇಗವಾಗಿ ನಡೆಯುತ್ತದೆ. ಹುಟ್ಟಿದ ಮರಿ 6 ತಿಂಗಳಿಗೆ ಗರ್ಭ ಧರಿಸುವ ಸಾಮರ್ಥ್ಯ ಪಡೆಯುತ್ತದೆ. ನಂತರ ವರ್ಷಕ್ಕೆ 6 ಬಾರಿ ಮರಿ ಹಾಕುವುದು. ಮೊದಲ ತಿಂಗಳು ಗರ್ಭ ಧರಿಸಿದರೆ; ಮತ್ತೊಂದು ತಿಂಗಳು ಮರಿಗಳ ಆರೈಕೆ ಮಾಡುತ್ತದೆ.

ಮೂರು ತಿಂಗಳ ಮರಿ 2.5 ಕೆ.ಜಿ. ತೂಗುತ್ತದೆ. ವರ್ಷದ ಮೊಲ 5–6 ಕೆ.ಜಿ. ತೂಗುತ್ತದೆ. ಪ್ರಸ್ತುತ ಮಾರುಕಟ್ಟೆಯಲ್ಲಿ ಜೀವಂತ ಮೊಲದ ತೂಕ ಕೆ.ಜಿ.ಗೆ 130 ನಡೆಯುತ್ತಿದೆ. ಸಾಕಷ್ಟು ಬೇಡಿಕೆಯಿದೆ. ಸೋವಿಯತ್ ಚಿಂಚಿಲ್ಲಾ, ವೈಟ್ ಜೈಂಟ್, ನ್ಯೂಜಿಲೆಂಡ್ ವೈಟ್, ಕ್ಯಾಲಿಫೋರ್ನಿಯಾ ವೈಟ್, ರಷ್ಯನ್ ಗ್ರೇ ಜೈಂಟ್, ಜೈಂಟ್ ಫ್ಲೇಮಿಸ್ ಮಾಂಸಕ್ಕಾಗಿಯೇ ಸಾಕುವ ಮೊಲದ ತಳಿಗಳು. ಇವುಗಳಿಗೆ ಎಲ್ಲೆಡೆ ಬೇಡಿಕೆ, ಮೊಲದ ಮಾಂಸದಲ್ಲಿ ಕೊಲೆಸ್ಟ್ರಾಲ್ ಕಡಿಮೆ. ಹೆಚ್ಚು ಪ್ರೋಟೀನ್ ಅಂಶ ಇರುವುದರಿಂದ ಮಕ್ಕಳು, ವಯಸ್ಕರು, ವೃದ್ಧರು ಸೇರಿದಂತೆ ರೋಗಿಗಳಿಗೂ ಉತ್ತಮ ಆಹಾರ, ಈ ಆರೋಗ್ಯದಾಯಕ ಮಾಂಸಾಹಾರಕ್ಕೆ ಎಲ್ಲೆಡೆ ಬೇಡಿಕೆ ಹೆಚ್ಚುತ್ತಿದೆ. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಬೇಡಿಕೆ ದಿನಕಳೆದಂತೆ ದ್ವಿಗುಣಗೊಳ್ಳುತ್ತಿದೆ ಎಂದು ಸುನಿಲ್ ಮಾಹಿತಿ ನೀಡಿದರು.

ತುಪ್ಪಳಕ್ಕಾಗಿ ಅಂಗೋರಾ ಮೊಲ ಸಾಕಣೆ ಚಾಲ್ತಿಯಲ್ಲಿದೆ. ವರ್ಷಕ್ಕೆ ಒಂದು ಮೊಲದಿಂದ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇದಕ್ಕೆ ಹೆಚ್ಚಿನ ಬೇಡಿಕೆ ಸಿಗುತ್ತದೆ.

**ಸಾಕಾಣಿಕೆ ಹೇಗೆ?**

ಮೊಲದ ವಸತಿ ಸೌಕರ್ಯಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಕಡಿಮೆ ಜನಸಂದಣಿ, ಉತ್ತಮ ನೆರಳಿರಬೇಕು. ಶುದ್ಧ ಗಾಳಿ, ಉತ್ತಮ ಬೆಳಕಿನ ಜಾಗದಲ್ಲಿ ಗೂಡು ಅಥವಾ ಮನೆ ನಿರ್ಮಿಸಬೇಕು. ಬೆಕ್ಕು, ನಾಯಿ, ಮುಂಗುಸಿ, ಹೆಗ್ಗಣ, ಇಲಿ..... ಇತ್ಯಾದಿ ಪ್ರಾಣಿಗಳು ಬರದಂತೆ ನಿಯಂತ್ರಿಸಬೇಕು.

ಪ್ರತಿಯೊಂದು ಮೊಲಕ್ಕೂ ಪ್ರತ್ಯೇಕ ಗೂಡು ನಿರ್ಮಿಸುವುದರಿಂದ ರೋಗ ತಡೆಗಟ್ಟುವ ಜೊತೆಗೆ ಆರೋಗ್ಯಕರವಾಗಿ ಬೆಳೆಸಬಹುದು. ಮೊಲಗಳು ಎಲ್ಲಾ ರೀತಿಯ ಹುಲ್ಲು, ಹಸಿರೆಲೆ, ಸೊಪ್ಪು, ತರಕಾರಿ, ಗೆಡ್ಡೆ – ಗೆಣಸು, ಮೊಳಕೆ ಕಾಳುಗಳನ್ನು ತಿನ್ನುತ್ತವೆ. ಇದಲ್ಲದೆ ಮೊಲಗಳಿಗೆ ಬೇಕಾದ ಆಹಾರ ಮಾರುಕಟ್ಟೆಯಲ್ಲೂ ದೊರೆಯುತ್ತದೆ. ಬೆಳೆಯುವ ಮರಿಗಳಿಗೆ ನಿತ್ಯ ಶೇ. 20ರಷ್ಟು ಪ್ರೋಟೀನ್, 50 – 80 ಗ್ರಾಂ ಧಾನ್ಯ ಮಿಶ್ರಣ, 100 –200 ಗ್ರಾಂ ಹಸಿರು ಮೇವು, ತಾಯಿ ಹಾಗೂ ಗಂಡು ಮೊಲಗಳಿಗೆ ಶೇ 16 ರಷ್ಟು ಪ್ರೋಟೀನ್, 100– 150 ಗ್ರಾಂ ಧಾನ್ಯ ಮಿಶ್ರಣ, 200 – 300 ಗ್ರಾಂ ಹಸಿರು ಮೇವು ಒದಗಿಸಬೇಕು. ಗೂಡಿನಲ್ಲಿ ಸದಾ ಶುದ್ಧ ನೀರು ಇರಬೇಕು. ಕುದುರೆಮೆಂತ್ಯಸೊಪ್ಪು, ರೋಟ್ಸ್ ಹುಲ್ಲು ಉತ್ತಮ ಆಹಾರ. ಒಮ್ಮೆ ಬಿತ್ತಿದರೆ ಪ್ರತಿ ತಿಂಗಳು ಕಟಾವಿಗೆ ಬರುತ್ತದೆ. ರೋಟ್ಸ್ ಹತ್ತು ವರ್ಷ ಬಳಕೆಗೆ ಬಂದರೆ; ಕುದುರೆ ಮೆಂತ್ಯ ಸೊಪ್ಪು ಐದು ವರ್ಷ ಸಿಗುತ್ತದೆ.

ಎರಡು ಮೂರು ಹೆಣ್ಣು ಮೊಲಗಳಿಗೆ ಒಂದು ಗಂಡು ಮೊಲ. ಗಂಡು ಮೊಲದ ಜತೆ ಮುಂಜಾನೆ ಅಥವಾ ಮುಸಂಜೆ ಎರಡು ಗಂಟೆ ಅವಧಿ ಹೆಣ್ಣು ಮೊಲವನ್ನು ಬಿಡಬೇಕು. ನಂತರ ಗೂಡಿನಿಂದ ಬೇರ್ಪಡಿಸಬೇಕು. ಈ ದಿನಕ್ಕೆ ಸರಿಯಾಗಿ 28 ರಿಂದ 30 ದಿನದ ಅವಧಿಯಲ್ಲಿ ಮರಿಗಳನ್ನು ಹಾಕುತ್ತವೆ. 10ಕ್ಕಿಂತ ಹೆಚ್ಚು ಮರಿ ಹಾಕಿದಾಗ ಹಾಲು ಸಾಲದೆ ಮರಿಗಳು ಸಾಯಬಹುದು. ಅದನ್ನು ತಪ್ಪಿಸಲು ತಾಯಿ ಮೊಲಕ್ಕೆ ಸಾಕಷ್ಟು ಪ್ರಮಾಣದಲ್ಲಿ ಹುಲ್ಲು, ಧಾನ್ಯ ಮಿಶ್ರಣ ನೀಡಿ ಆರೈಕೆ ಮಾಡಿದರೆ, ಎಲ್ಲಾ ಮರಿಗಳು ಬದುಕುಳಿಯುವ ಸಾಧ್ಯತೆ ಹೆಚ್ಚಿರುತ್ತದೆ. ವಂಶಾಭಿವೃದ್ಧಿಗಾಗಿ ಸುನಿಲ್, ವಂಶಾವಳಿ ದಾಖಲಾತಿ ತಂತ್ರಜ್ಞಾನ ಕಂಡುಕೊಂಡಿದ್ದಾರೆ. ಆರೋಗ್ಯವಂತ ಮೊಲಗಳನ್ನು ಆಯ್ದು ಬೇರೆ ಜೀನ್ಸ್ ಹೊಂದಿರುವ ಮೊಲಗಳ ಜೊತೆ ಅಭಿವೃದ್ಧಿ ಪಡಿಸುತ್ತಿದ್ದಾರೆ. ಇದರಿಂದ ಉತ್ತಮ ತಳಿ ಸೃಷ್ಟಿಯಾಗುವ ಜೊತೆಗೆ ಎಲ್ಲವೂ ಆರೋಗ್ಯಕರವಾಗಿರುತ್ತವೆ ಎಂಬ ಅಭಿಪ್ರಾಯ ಇವರದು.

ಮೊಲ ಸಾಕಲು ಬರುವವರ ಸಂಖ್ಯೆ ಹೆಚ್ಚುತ್ತಿದೆ. ಆಸಕ್ತರಿಗೆ ಮೊದಲು ಮೊಲಗಳನ್ನು ನೀಡದೆ ತರಬೇತಿ ಕೊಡಿಸಲಾಗುತ್ತಿದೆ. ಹೆಸರುಘಟ್ಟದಲ್ಲಿರುವ ಮೊಲಸಾಕಣೆ ತರಬೇತಿ ಕೇಂದ್ರದಲ್ಲಿ ಡಾ. ಸುಧಾಕರ್, ಡಾ. ಮಂಜುನಾಥ್ ತರಬೇತಿ ನೀಡುತ್ತಾರೆ. ಸಾಕಣೆಯ ಎಲ್ಲ ಕ್ರಮ ತಿಳಿಸಿ, ಸರ್ಟಿಫಿಕೇಟ್ ನೀಡುತ್ತಾರೆ. 'ಹೀಗೆ ತರಬೇತಿ ಪಡೆದವರಿಗೆ ಮೊಲ ನೀಡಿದ್ದೇನೆ. ಇಷ್ಟಕ್ಕೆ ಸುಮ್ಮನಾಗದೆ ಅವರ ಸಂಪರ್ಕದಲ್ಲಿದ್ದು, ಎಲ್ಲಾ ಸಲಹೆ ನೀಡುತ್ತೇನೆ. ಅದನ್ನು ನನ್ನ ಮತ್ತೊಂದು ಬ್ರಾಂಚ್ ಎಂದು ಪರಿಗಣಿಸಿ ಆಗಾಗ್ಗೆ ಭೇಟಿ ನೀಡುತ್ತೇನೆ' ಎನ್ನುತ್ತಾರೆ ಸುನಿಲ್.

**ಹೊಸ ಮಾರುಕಟ್ಟೆ**

ಮೊಲದ ಮಾಂಸಕ್ಕೆ ಎಲ್ಲೆಡೆ ಬೇಡಿಕೆ ಇದೆ. ಆದರೆ ಅದಕ್ಕೆ ತಕ್ಕಂಥ ವ್ಯವಸ್ಥಿತ ಮಾರುಕಟ್ಟೆಯಿಲ್ಲ. ಬೆಂಗಳೂರಿನ ಮಧ್ಯವರ್ತಿಗಳಿಗೆ ಮಾರಲಾಗುತ್ತಿದೆ. ಈ ಪರಿಸ್ಥಿತಿಯನ್ನು ಬದಲಾಯಿಸುವುದರ ಕುರಿತೂ ಸುನಿಲ್ ಚಿಂತಿಸುತ್ತಿದ್ದಾರೆ. ಅವರ ಬಳಿ ಮೊಲ ಖರೀದಿಸಿ ಸಾಕಲು ಕೊಂಡೊಯ್ದವರಿಗೆ ಮಾರುಕಟ್ಟೆ ಸಮಸ್ಯೆ

ಎದುರಾಗಬಾರದು ಎಂಬ ಕಾರಣಕ್ಕೆ ಅವರೊಟ್ಟಿಗೆ ಕೆ.ಜಿ.ಗೆ 130ರಂತೆ ಮರು ಖರೀದಿಯ 'ಒಪ್ಪಂದ' ಮಾಡಿಕೊಳ್ಳುತ್ತಾರೆ.

'ಒಬ್ಬನೇ ಬೆಳೆಯುವ ಹಂಬಲವಿಲ್ಲ. ಜತೆಯಾಗಿ ಎಲ್ಲರೂ ಬೆಳೆಯೋಣ ಎಂಬ ಚಿಂತನೆ ನನ್ನದು' ಎನ್ನುವ ಸುನಿಲ್ ಎರಡು ವರ್ಷದೊಳಗೆ ಸಾಕಣೆದಾರರ ಒಕ್ಕೂಟ ರಚಿಸಿಕೊಂಡು, ನೇರ ಮಾರುಕಟ್ಟೆ ಪ್ರವೇಶಿಸಿವ ಚಿಂತನೆ. ಈ ಯೋಜನೆಯಲ್ಲಿ ಮಾಂಸ ಕೆಡದಂತೆ ಕಾಪಾಡುವ ಶೈತ್ಯಾಗಾರ, ಪ್ಯಾಕಿಂಗ್ ವ್ಯವಸ್ಥೆ, ಪಾಶ್ಚಾತ್ಯ ರಾಷ್ಟಗಳಿಗೆ ರಫ್ತು ಮಾಡುವುದು ಇತ್ಯಾದಿಗಳೆಲ್ಲವೂ ಒಳಗೊಂಡಿದೆ. ಶೈತ್ಯಾಗಾರ ಆರಂಭಗೊಂಡರೆ ಮೊಲದ ಚರ್ಮಕ್ಕೂ ಬೆಲೆ ಸಿಗುತ್ತದೆ. ಬೆಚ್ಚನೆಯ ಉಡುಪು ತಯಾರಿಕೆಗೆ ಬಳಕೆಯಾಗುತ್ತದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಉತ್ತಮ ಬೇಡಿಕೆಯಿದೆ. ಪ್ರಸ್ತುತ ಕೆ.ಜಿ.ಗೆ 700–800 ರೂಪಾಯಿ ಇದೆ. ಈ ಲಾಭವೂ ಸಾಕಣೆದಾರರ ಪಾಲಾಗುತ್ತದೆ.

ಈಗ ಸುನಿಲ್ ಅವರ ಫಾರ್ಮ್‌ನಲ್ಲಿ 550 ಹೆಣ್ಣು, 250 ಗಂಡು ಸೇರಿದಂತೆ 800 ಮೊಲಗಳಿವೆ. ಬ್ಯಾಚ್ ಮಾಡಿ ಸಾಕಲಾಗುತ್ತಿದೆ. ಪ್ರತಿ ಬ್ಯಾಚ್‌ನ ಮೊಲಗಳು ವಾರಕ್ಕೊಮ್ಮೆ ಮರಿ ಹಾಕುತ್ತಿವೆ. ಇದರಿಂದ ನಮಗೆ ಪ್ರತಿವಾರವೂ ವಹಿವಾಟು ನಡೆಯುತ್ತಿದೆ. ಪ್ರಸಕ್ತ ವಾರಕ್ಕೆ ಒಂದು ಸಾವಿರ ಕೆ.ಜಿ. ಜೀವಂತ ಮೊಲಗಳು ಮಾರಾಟವಾಗುತ್ತವೆ. ಇದನ್ನು ಹೊರತುಪಡಿಸಿ ತಳಿ ಅಭಿವೃದ್ಧಿಪಡಿಸಲು ಪ್ರತ್ಯೇಕ ವ್ಯವಸ್ಥೆ ಮಾಡಲಾಗಿದೆ. ಪ್ರತಿ ತಿಂಗಳು ನೂರಕ್ಕೂ ಹೆಚ್ಚು ಮೊಲಗಳನ್ನು ಮಾರಾಟ ಮಾಡುತ್ತಾರೆ. ಇವರ ಫಾರ್ಮ್‌ನಲ್ಲಿ.. ಕೆಲಸಗಾರರಿಲ್ಲ. ಸುನಿಲ್ ಅವರ ಜೊತೆಗೆ ಅವರ ತಾಯಿ ಸಾಕಾಣಿಕೆಗೆ ನೆರವಾಗುತ್ತಾರೆ.

## ಘಟಕ ೨

# ಹಸಿವು

**ಆಶಯ:**

**ಹಸಿವೆಂಬ ಹೆಬ್ಬಾವು ಬಸಿರ ಬಂದು ಹಿಡಿವಡೆ**
**ವಿಷವೇರಿತ್ತಯ್ಯ ಅಪಾದಮಸ್ತಕಕ್ಕೆ**
**ಹಸಿವಿಗನ್ನವನಿಕ್ಕಿ ವಿಷವನಿಳುಹಬಲ್ಲಡೆ**
**ವಸುಧೆಯೊಳಗೆ ಆತನೆ ಗಾರುಡಿಗ ಕಾಣಾ ರಾಮನಾಥಾ.**

**– ಜೇಡರ ದಾಸಿಮಯ್ಯ**

ಅಲ್ಲಮಪ್ರಭು ಈ ಮೇಲಿನ ವಚನದಲ್ಲಿ ಅಪಾರವಾದ ಅರ್ಥವನ್ನು ವಿವರಿಸಿದ್ದಾರೆ. ಇಂದ್ರಿಯಗಳ ಹಸಿವಿನ ಪರಿಣಾಮದ ಬಗ್ಗೆ ಹೇಳುತ್ತಿದ್ದಾರೆ. ಇಲ್ಲಿ ಹಸಿವೆಂಬ ಹೆಬ್ಬಾವು ಎಂದರೆ "ಇಂದ್ರಿಯಗಳ ಹಸಿವು" ಎಂಬ ಹೆಬ್ಬಾವು – ಇಂದ್ರಿಯಗಳು ಅದು ಬೇಕು ಇದು ಬೇಕು ಎಂದು ವಿಷಯಗಳ ಬಗ್ಗೆ ಅಪಾರವಾದ ಆಸಕ್ತಿಯನ್ನು, ಆಸೆಯನ್ನು ಹೊಂದಿರುತ್ತವೆ. ಅದರಿಂದ ಹಸಿವೆಂಬ ಹೆಬ್ಬಾವು ಹೊಟ್ಟೆ ಹಿಡಿದುಕೊಂಡಾಗ ಇಡೀ ಶರೀರವನ್ನೆಲ್ಲ ಘಾಸಿಗೊಳಿಸುತ್ತದೆ.

# ೧. ಅನ್ನಯಜ್ಞ

**- ಅಂಬಿಕಾತನಯದತ್ತ**

ಕೂಸುಗಳಿಗೆ ಹಾಲು ಇಲ್ಲ, ಪಶುಬಲಿಯೇ ನಡೆದಿದೆ.
ಕಾಳು ಇದೆ ಕೂಳು. ಇಲ್ಲ, ಹಣದ ಹುಚ್ಚು ಹಿಡಿದಿದೆ.
ಕತ್ತಲಲ್ಲಿ ಬೆಳಕೆ ಇಲ್ಲ, ಜಗಕೆ ಬೆಂಕಿ ಹತ್ತಿದೆ
ಎಲ್ಲ ಇದೆ ಎಲ್ಲಿ ಇಲ್ಲ, ಇಲ್ಲಿ ಸುತ್ತುಮುತ್ತಿದೆ
ಸಾಕು ಎಂಬುವಂತೆ ನೀಡು ಬೇಕು ಎಂಬ ಹೊತ್ತಿಗೆ
ಬೆಣ್ಣೆ ಎಣ್ಣೆ ಎರೆಯಬನ್ನಿ ಹಸಿದ ಹೊಟ್ಟೆ-ನೆತ್ತಿಗೆ

ಬರುವ ಸಾವ ನೆನೆದು ಕೆಲವು ತಿನ್ನುತಿಹವು ಹೆಚ್ಚಿಗೆ
ಕಾಳುಸಾಲದೀಗ ಜನದ ಇರುವ ಹೊಟ್ಟೆ ಕಿಚ್ಚಿಗೆ
ಇದ ಕಂಡೂ ಕಂಡು ಕೂಡ ಏಳಬೇಡ ರೊಚ್ಚಿಗೆ
ಇದರ ಹೊಟ್ಟೆಯಲ್ಲಿ ಹುಟ್ಟಿತೀ ಪಿಶಾಚಿ ಹುಚ್ಚಿಗೆ
ಬಾಳ್ಮೆಯಲ್ಲಿ ತಾಳ್ಮೆ ಬೇಕು ಬದುಕಬೇಕು ಎಂದರೆ
ಜೀವವೇ ಸಾವಾಗಬಹುದು ಬಚ್ಚಬರಿಯ ನೊಂದರೆ

ಋಣವು ರಣವು, ಜನವು ಹೆಣವು, ಸಾವಿಗಾಗಿ ದುಡಿವರೇ?
ಯಾರ ಬಾಳಿಗಾಗಿ ಯಾರೋ ಯಾವೊ ಕೈಗೆ ಮಡಿವರೇ?
ಕಾವ ಕೈಯ್ಯೇ ಕೊಲ್ಲುತಿಹವು ! ಮರಣದತ್ತ ನಡೆವರೇ?
ಸಾವಿಗಾಗಿ ತಪಿಸುವವರು ಬಾಳ-ಬೀಜ ಹಿಡಿವರೇ?
ಕಣ್ಣೀರಿನ ಕಡಲ ನಡುವೆ ತೇಲುತಿಹವು ನೆಲಗಳು
ತಾಯಿ-ಹಾಲ ಕುದಿಯುತಿಹುದು ಕೆಂಪೇರಲು ಜಲಗಳು.

ಇದ್ದ ನೆಲವ ಹೊಲವ ಮಾಡಿ ಬಿತ್ತಬೇಕು ಕಾಳನು
ಬದುಕಲಿರುವ ಬಾಯಿಗಳಿಗೆ ತುತ್ತಬೇಕು ಕೂಳನು
ಅನ್ನದಾನ ಮಹಾಯಜ್ಞ! ಅನ್ನಹೀನ ಆಳನು
ಅನ್ನ ಮುಚ್ಚಿ ಬಾಳಲೆಳಸುವವನು ಮಹಾಖೂಳನು
ನೆಲದ ಹುರುಡಿನಲ್ಲಿ ಹುರುಳಿಗಿಂತ ಜೊಳ್ಳೆ ಹೆಚ್ಚಿಗೆ
ಗೆದ್ದು ಸತ್ತು ಪಡೆಯುವವರು ಹುಚ್ಚ ಜನರ ಮೆಚ್ಚಿಗೆ

ಮತ್ತೆ ನೆಲದ ಎದೆಯ ಮೇಲೆ ತೆನೆಯ ಧ್ವಜವು ನಿಲ್ಲಲಿ
ಸಾವಿಗಿಂತ ಬಾಳು ಮೇಲು ಎಂಬ ಮಾತು ಗೆಲ್ಲಲಿ
ವಿಷದ ಒಡಲಿನಿಂದ ರಸದ ಊಟೆ ಚಿಮ್ಮಿ ಚೆಲ್ಲಲಿ
ಪ್ರೇಮವ ಹಣ್ಣಾಗಿ ಬರಲಿ ಕವಿಯ ಬಲ್ಲ ಸೊಲ್ಲಲಿ
ಹೊನ್ನ ನೆಕ್ಕಿ ಬಾಳ್ವರಿಲ್ಲ, ಅನ್ನ ಸೂರೆಮಾಡಿರಿ
ಅಣ್ಣಗಳಿರಾ ಅನ್ನದಲ್ಲಿ ಮಣ್ಣ ಕಲಿಸಬೇಡಿರಿ.

# ೨. ಅಕ್ರಮ ಸಂತಾನ

**– ಶರಣಕುಮಾರ ಲಿಂಬಾಳೆ;**

**ಅನು: ದು.ನಿಂ. ಬೆಳಗಲಿ**

ನಮ್ಮೂರಿನಲ್ಲಿ ದೊಡ್ಡವರ ಮನೆಗಳಲ್ಲಿ ಲಗ್ನಗಳು ಜರುಗುತ್ತಿದ್ದವು. ಆಗ ನಮಗೆ ತೋಳದ ಹಾಗೆ ಆನಂದ. ದೊಡ್ಡವರು ಊರಿಗೆ ಊಟಕ್ಕೆ ಹಾಕಿಸುತ್ತಿದ್ದರು. ಕೊನೆಗೆ ಹೊಲಗೇರಿಗೂ ಔತಣ ಇರುತ್ತಿತ್ತು.

ಊರಲ್ಲಿ ಲಗ್ನಗಳು ಆರಂಭವಾದ ಕೂಡಲೇ ನಾವು ಲಗ್ನದ ಮನೆಗಳತ್ತ ಸುತ್ತುತ್ತ ಇರುತ್ತಿದ್ದೆವು. ಏನಿಲ್ಲದಿದ್ದರೂ ಮಂಟಪ ನೋಡಲು ಸಿಗುತ್ತಿತ್ತು. ವಾದ್ಯ ಕೇಳಲು ಸಿಗುತ್ತಿತ್ತು. ಧ್ವನಿವರ್ಧಕ ಕೇಳಲು ದೊರೆಯುತ್ತಿತ್ತು. ನಾವು ಚಿಕ್ಕ ಚಿಕ್ಕ ಬಾಲಕರು – ಇಡೀ ದಿನ ಮಂಟಪದಲ್ಲಿ ಸುತ್ತಾಡುತ್ತಿದ್ದೆವು. ವಾದ್ಯ ಬಾರಿಸತೊಡಗಿದರೆ ಕುಣಿಯುತ್ತಿದ್ದೆವು. ನಡುವೆ ಯಾವನಾದರೂ ಊರಿನವ ಸಿಟ್ಟಿಗೆ ಬರುತ್ತಿದ್ದ. ನಮ್ಮನ್ನು ದೂರ ಅಟ್ಟುತ್ತಿದ್ದ. ಅಂಜಿ ಓಡುತ್ತಿದ್ದೆವು. ಮತ್ತೆ ಒಂದಿಷ್ಟು ಸಮಯ ಬಿಟ್ಟು ತುಡುಗಿನಿಂದ ಮರಳಿ ಬರುತ್ತಿದ್ದೆವು.

ಲಗ್ನ ಗೊಂದಲದಲ್ಲಿ ಮುಗಿಯುತ್ತಿತ್ತು. ಗಡಿಬಿಡಿಯಿಂದ ಜರುಗುತ್ತಿತ್ತು. ಬೀಗರು ಬಿಜ್ಜರು ಊಟಕ್ಕೆ ಕೂಡುತ್ತಿದ್ದರು. ನಾವು ಉಗುಳು ನುಂಗುತ ಹೊರಗೆ ಕುಳಿತುಕೊಳ್ಳುತ್ತಿದ್ದೆವು. "ಬೋಲಾ ಪುಂಡಲಿಕ ವರದೇ ಹರಿ ವಿಠಲ ಶ್ರೀ ಜ್ಞಾನದೇವ ತುಕಾರಾಮ' ಎನ್ನುತ್ತ ಪಂಕ್ತಿ ಕೂಡುತ್ತಿತ್ತು. ಅಲ್ಲಿನ ಫರಕ್ ಸದ್ದು ಕೇಳಿಬರುತ್ತಿತ್ತು. "ಎಲ್ಲಾರಿಗೂ ಮುಟ್ಟಿತೋ ?" ಎಂದು ಹಿರಿಯರು ವಿಚಾರಿಸುತ್ತಿದ್ದರು. "ಸಂಕೋಚ ಪಡಬ್ಯಾಡ್ರಿ.... ಸಾವಕಾಸ್ ತಗೋರಿ" ಎಂದನ್ನುತ್ತಿದ್ದರು. ನೀಡುವವರು ಪಂಕ್ತಿಯಲ್ಲಿ ಭರ ಭರ ಸುತ್ತಾಡುತ್ತಿದ್ದರು. "ಹುಗ್ಗಿ...." ಎನ್ನುತ್ತಿದ್ದರು. ಕೆಲವರು "ಚಪಾತಿ, ತುಪ್ಪ.... ಪಲ್ಲೆ" ಎಂದು ಧ್ವನಿ ಮಾಡುತ್ತಿದ್ದರು. ನಮ್ಮ ಹೊಟ್ಟೆಯಲ್ಲಿ ಕಾಗೆಗಳ ಗುಂಪು ಹಾರುತ್ತಿತ್ತು. ಪಂಕ್ತಿಯಲ್ಲಿ ನೀಡುವವರು ಕೂಗುತ್ತಿದ್ದರು. ನಾವು ಕಿವಿಗೊಟ್ಟು ಕೇಳುತ್ತಿದ್ದೆವು. ನಮ್ಮ ಹೊಟ್ಟೆ ಕಿವಿಗೆ ಬರುತ್ತಿತ್ತು. ಹೊಟ್ಟೆ ಪಂಕ್ತಿಯಲ್ಲಿ ಕೂಡುತ್ತಿತ್ತು. ಹೊಟ್ಟೆ ಕಡಾಯಿ ಆಗುತ್ತಿತ್ತು.

ದೇವರು ಮನುಷ್ಯನಿಗೆ ಒಂದೇ ಹೊಟ್ಟೆ ಕೊಟ್ಟಿದ್ದಾನೆ. ಮನುಷ್ಯ ತಿನ್ನತೊಡಗಿದ; ಮೋಜು ಪಡೆಯತೊಡಗಿದ. ಏನನ್ನು ತಿನ್ನಬೇಕು ಏನನ್ನು ತಿನ್ನಬಾರದು ಇಷ್ಟೇ ಇರುತ್ತಿತ್ತು. ತಿನ್ನಲು ಬಹಳ, ಆದರೆ ಹೊಟ್ಟೆ ಒಂದೇ. ಮನುಷ್ಯನಲ್ಲಿ ಗೊಂದಲ ಉಂಟಾಯಿತು. ಮನುಷ್ಯ ವಿಚಾರಿಸಿದ. ತಿನ್ನಲು ದೇವರು ಸಾಕಷ್ಟು ಕೊಟ್ಟಿದ್ದಾನೆ. ಆದರೆ ಹೊಟ್ಟೆ ಮಾತ್ರ ಒಂದೇ. ಆತ ದೇವರು ಹೋದ. ದೇವರಲ್ಲಿ ವಿನಂತಿಸಿಕೊಂಡ. "ತಂದೆ, ನನಗೆ ಒಂದೇ ಹೊಟ್ಟೆ ಕೊಟ್ಟು ತಪ್ಪು ಮಾಡಿದೆ. ನನಗೆ ಬಹಳಷ್ಟು ತಿನ್ನಬೇಕಾಗಿದೆ, ಕುಡಿಯಬೇಕಾಗಿದೆ. ಎರಡು ಹೊಟ್ಟೆ ಕೊಟ್ಟರೆ ಉಪಕಾರವಾಗುವುದು. ದೇವರು ಮನುಷ್ಯನಿಗೆ ತಿಳಿಹೇಳಿದ, "ಮಗು, ನೀನು ಹೋಗು, ಒಂದೇ ಹೊಟ್ಟೆಯನ್ನಷ್ಟೆ ತುಂಬಿಕೊಳ್ಳು. ಅನಂತರ ನನ್ನತ್ತ ಬಾ. ನಾನು ನಿನಗೆ ಅವಶ್ಯವಾಗಿ ಎರಡನೇ ಹೊಟ್ಟೆ ಕೊಡುವೆ."

ಮನುಷ್ಯ ಹೊಟ್ಟೆಯು ಬೆನ್ನು ಹತ್ತಿದ. ಮನುಷ್ಯನಿಗೆ ಒಂದೇ ಹೊಟ್ಟೆ ತುಂಬಿಸುವುದು ಕಷ್ಟಸಾಧ್ಯವಾಯಿತು. ಅರ್ಧ ಹೊಟ್ಟೆಯಿಂದ ಇರತೊಡಗಿದ. ಉಗುಳು ನುಂಗಿ ಬದುಕತೊಡಗಿದ.

ಹಲ್ಲಲ್ಲಿಯ ನೀರು ಕುಡಿದು ದಿನಗಳೆಯತೊಡಗಿದ. ಹೊಟ್ಟೆಗಾಗಿ ಸ್ವತಃ ಮಾರಿಕೊಂಡ. ಹೊಟ್ಟೆಗಾಗಿ ಹೆಂಡತಿ ಹಾದರಕ್ಕೆ ತೊಡಗಿದಳು. ಗಂಡ ತುಡುಗಿಗೆ. ಹೊಟ್ಟೆ ಹೇಲನ್ನು ಹೊರಗೆ ಹಾಕಿದಂತೆ, ಹೊಟ್ಟೆಯೇ ಹೇಲನ್ನು ತಿನ್ನಹಚ್ಚುತ್ತದೆ.

ದೇವರು ಹೊಟ್ಟೆ ಕೊಟ್ಟು ತಪ್ಪು ಮಾಡಿದ ಎಂದೆನಿಸತೊಡಗಿತು. ಲಗ್ನದ ಮನೆಯ ಮುಂದೆ ಹೊಟ್ಟೆ ಹಿಡಿದುಕೊಂಡು ನಿಲ್ಲುತ್ತಿದ್ದೆವು. ನಿರೀಕ್ಷಿಸುತ್ತ ನಿಲ್ಲು ತಿದ್ದೆವು. ಹೊಲಗೇರಿಗೆ ಯಾವಾಗ ಔತಣ ಸಿಗುವುದೆಂದು ವಿಚಾರಿಸುತ್ತಿದ್ದೆವು.

ಲಗ್ನದ ಮನೆಯ ಹೊಲೆಯ ಆಮಂತ್ರಣ ಪಡೆದು ಹೊಲಗೇರಿಗೆ ಬರುತ್ತಿದ್ದ "ಉಣ್ಣಾಕ ನಡೀರಿ" ಎಂದು ಕೂಗುತ್ತಿದ್ದ. ಎಲ್ಲ ಹೊಲಗೇರಿ ಉಡುಗಿದಂತೆ ಹೊರಡುತ್ತಿತ್ತು. ಆ ದಿನ ಒಲೆಗಳು ಹೊತ್ತುತ್ತಿರಲಿಲ್ಲ. ಹಿಂದೆ ಚಿಕ್ಕಾಡು ಕೂಡ ಉಳಿಯುತ್ತಿರಲಿಲ್ಲ. ಮೊದಲು ಹೆಂಗಸರ ಪಂಕ್ತಿ, ಹೆಂಗಸರು ತಮ್ಮ ತಮ್ಮ ಮಕ್ಕಳನ್ನು ಕರೆದುಕೊಂಡು ಹೊರಡುತ್ತಿದ್ದರು.

ತಂಡ ತಂಡವಾಗಿ ಲಗ್ನದ ಮನೆಯತ್ತ ಬರುತ್ತಿದ್ದರು. ನನ್ನ ಅವ್ವ ಎಂದೂ ಯಾವ ಪಂಕ್ತಿಗೂ ಹೋಗುತ್ತಿರಲಿಲ್ಲ. ನಾನು ಸಂತಾಮಾಯಿ ಜತೆ ಊಟಕ್ಕೆ ಹೊರಡುತ್ತಿದ್ದೆ. ಸಂಗಡ ತಂಗಿ ಇರುತ್ತಿದ್ದಳು. ನನಗೆ ತಂದೆಯಿಲ್ಲ. ನಾನು ಯಾರ ಬೆನ್ನು ಹತ್ತಿಯಾದರೂ ಹೋಗುತ್ತಿದ್ದೆ. ಅಂಗಿಯ ಮರೆಯಲ್ಲಿ ಹೊಟ್ಟೆಗೆ ತಟ್ಟೆಯನ್ನು ಅಡಗಿಸಿಕೊಳ್ಳುತ್ತಿದ್ದೆ.

ತಟ್ಟೆಯಲ್ಲಿ ಹುಗ್ಗಿ ನೀಡುತ್ತಿದ್ದರು. ಚಿಕ್ಕ ಹುಡುಗರಿಗೆ ಕಡಿಮೆ ನೀಡುತ್ತಿದ್ದರು. ನೀಡಿದ ಕೂಡಲೇ ನಾನು ಗಬಗಬ ತಿನ್ನುತ್ತಿದ್ದೆ. ಎಂದೂ ಸಿಗದಂತೆ ತಟ್ಟೆ ಖಾಲಿ ಮಾಡುತ್ತಿದ್ದೆ. ಮತ್ತೆ ನೀಡಿಸಿಕೊಳ್ಳುತ್ತಿದ್ದೆ. ಅವ್ವ ಮನೆಯಲ್ಲಿ ಉಪವಾಸ ಇರುತ್ತಿದ್ದಳು. ಆಕೆಗೆ ಇಂಥ ರುಚಿಕರವಾದ ಊಟವನ್ನು ಒಯ್ದು ಕೊಡಬೇಕೆಂದೆನಿಸುತ್ತಿತ್ತು. ಹೆಚ್ಚಿಗೆ ಹುಗ್ಗಿ ನೀಡಿಸಿಕೊಳ್ಳುತ್ತಿದ್ದೆ. ಪಂಕ್ತಿ ಎದ್ದ ಬಳಿಕ ತಟ್ಟೆ ತೆಗೆದುಕೊಂಡು ಮನೆಯತ್ತ ಹೊರಡುತ್ತಿದ್ದೆ, ಸಂತೋಷವಾಗುತ್ತಿತ್ತು.

ಒಂದು ಸಲ ಭೀಮಣ್ಣ ಹುಗ್ಗಿ ತುಂಬಿದ ತಟ್ಟೆಯನ್ನು ಕಸಿದುಕೊಂಡ. ಅದು ಕೆಳಗೆ ಬಿದ್ದು ಮಣ್ಣಾಯಿತು. ಕಪಾಳಿಗೆ ಹೊಡೆದು, "ಭೋಸಡಿ ಮಗನ, ತಿನ್ಲಾಕ ಆಗದಿದ್ರ ನೀಡಿಸಿಕೊಂಡ ಯಾಕ ಒಯ್ತಿ ? ಇನ್ನೊಮ್ಮೆ ಪಂತ್ಯಾಗ ಕಣ್ಣಿಗಿ ಬಿದ್ದೀ ಅಂದ್ರ ನೋಡ, ಜಾತೀನ ಹಲ್ಕಟ್, ತಿನೂದ ತಿಂದ ಮನೀಗಿ ಒಯ್ತಿ...." ನಾನು ಅಳುತ್ತ ಮನೆಯತ್ತ ನಡೆದೆ. ಇನ್ನೂ ಮೂರು ನಾಲ್ಕು ಜನರನ್ನು ಹುಗ್ಗಿ ಒಯ್ಯುತ್ತಿರುವಾಗ ಭೀಮಣ್ಣ ಹಿಡಿದಿದ್ದ. ಆಗ ಅದರಲ್ಲಿ ನಾಗಿಯೂ ಇದ್ದಳು.

ನಾನು ಬರೀ ತಟ್ಟೆಯಿಂದ ಮನೆಗೆ ಬಂದರೆ ಸಂತಾಮಾಯಿ ಒಂದಿಷ್ಟಾದರೂ ತುಡುಗಿನಿಂದ ಹುಗ್ಗಿಯನ್ನು ತಂದೇ ತರುತ್ತಿದ್ದಳು. ನಾವು ಹುಗ್ಗಿಯನ್ನು ಸಂಜೆಗೆ ತಿನ್ನುತ್ತಿದ್ದೆವು. ಹಳಸಿದ ಹುಗ್ಗಿ ಸಿಹಿ ಹುಳಿಯಾಗಿರುತ್ತಿತ್ತು.

ಸಂತಾಮಾಯಿ ಆ ಹುಗ್ಗಿಯಲ್ಲಿ ಒಂದಿಷ್ಟು ನೀರು ಹಾಗೂ ಬೆಲ್ಲ ಹಾಕಿ ಬಿಸಿ ಮಾಡುತ್ತಿದ್ದಳು ಮತ್ತು ನಮಗೆ ತಿನ್ನಲು ಕೊಡುತ್ತಿದ್ದಳು.

ಒಮ್ಮೊಮ್ಮೆ ಸಂತಾಮಾಯಿ ಲಗ್ನದ ಮನೆಯನ್ನು ಸಾರಿಸುತ್ತಿದ್ದಳು. ಕಸಗುಡಿಸುತ್ತಿದ್ದಳು. ಆಗ ಹೆಚ್ಚಿನ ಹುಗ್ಗಿ ದೊರೆಯುತ್ತಿತ್ತು. ತಿಂದು ತಿಂದು ಉಳಿಯುತ್ತಿತ್ತು. ಮತ್ತೆ ನಾವು ಹುಗ್ಗಿಯ ಸಂಡಿಗೆ

ಮಾಡುತ್ತಿದ್ದೆವು ಒಣಗಿಸಲಾಗುತ್ತಿತ್ತು. ಹಸಿವೆಯಾದಾಗ ಒಣಗಿದ ಸಂಡಿಗೆಯನ್ನು ಹುಣಸೆ ಬೀಜದಂತೆ ಚವಳಿಸುತ್ತಿದ್ದೆವು.

ಒಮ್ಮೆ ಊರಿಗೆ ಊಟವಿತ್ತು. ಸಂತಾಮಾಯಿ ಹಾಗೂ ನನ್ನ ತಂಗಿ ಊಟ ಮಾಡಿ ಬಂದಿದ್ದರು. ಅವರು ತುಡುಗಿನಿಂದ ತಂದ ಹುಗ್ಗಿಯನ್ನು ನಾನು ಬೇಡುತ್ತಿದ್ದೆ. "ತಾಟ ತಗೊಂಡ ಉಣ್ಣಾಕ ಹೋಗಿ ಬಾ" ಎಂದು ಅವ್ವ ಹೇಳುತ್ತಿದ್ದಳು. ಆದರೆ ನನಗೆ ಊರಲ್ಲಿ ಹೋಗಿ ಉಂಡು ಬರಲು ನಾಚಿಕೆಯಾಗುತ್ತಿತ್ತು. ನಮ್ಮ ಶಾಲೆಯ ಹುಡುಗರು ನೋಡಿದರೆ ಹೇಗೆ? ಹೀಯಾಳಿಸಬಹುದಿತ್ತು. ದಾರಿಯಲ್ಲಿ ಶಾಲೆಯ ಹುಡುಗರ ಮನೆಗಳಿದ್ದವು. ಅವರ ಮನೆಯೆದುರು ಹಾಯುವುದು ಕಳ್ಳನಂತಾಗುತ್ತಿತ್ತು. ನನಗೆ ಬೇಡಾಗುತ್ತಿತ್ತು. ಅವ್ವ ಹೋಗಲು ಹೇಳುತ್ತಿದ್ದಳು. ಬೈಯ್ಯುತ್ತಿದ್ದಳು. ತಟ್ಟಿ ಕೊಟ್ಟು ಹೊರ ಹಾಕುತ್ತಿದ್ದಳು. "ಮನ್ಯಾಗ ತಿನ್ಲಾಕ ಮಣ್ಣ ಐತೇನ ? ಏನ ನಟ್ಟ ಕಡದ ಗಳಕಿ ಮಾಡ್ತಿಯಾ? ಹೋಗಿ ತಿಂದ ಬಾ, ಭಾಳ ದೊಡ್ಡ ಮನಸ್ಯಾ ಆಗೇದಿ, ನಿನಗೆ ತಿನ್ಲಾಕ ನಾ ಎಲ್ಲಿಂದ ತಂದ ಕೊಡಲಿ? ನೋಡ, ಪ್ಯಾಟ್ಯಾಗ ಯಾರೇ ನಿನ್ನ ಕೊಂಡ ತಗೋತಾರೇನ ? ನನ್ನ ನುಂಗಿ ಕೂಡು ತನಕಾ ನಿನಗೆ ಸಮಾಧಾನ ಸಿಗೂದಿಲ್ಲ... !

ಆಗ ನಾನು ಸುಮ್ಮನೆ ಹೊರಡಬೇಕಾಗುತ್ತಿತ್ತು. ತಟ್ಟೆಯನ್ನು ಅಂಗಿಯ ಒಳಗೆ ಮರೆ ಮಾಡಿಕೊಳ್ಳುತ್ತಿದ್ದೆ. 'ಅವ್ವನನ್ನು ಹೆಚ್ಚು ಕಡಿಮೆ ಮಾಡಿ ಮಾರಲು ಬರುವುದೇ ? ಅವ್ವನನ್ನು ಖಾರಾ–ಪುಟಾಣಿಗೆ ಯಾರಾದರೂ ಕೊಳ್ಳುವರೆ ? ಎಂದು ವಿಚಾರಿಸುತ್ತಿದ್ದೆ. ಎಷ್ಟು ನೀಡುತ್ತಿದ್ದರೋ ಅಷ್ಟನ್ನೇ ತಿನ್ನುತ್ತಿದ್ದ. ಬೇಡುತ್ತಿರಲಿಲ್ಲ. ಊಟ ಸಿಗುತ್ತಿತ್ತು. ಆದರೆ ನೀರು ಇರುತ್ತಿರಲಿಲ್ಲ. ಕುಡಿಯಲು ಮನೆಗೆ ಬರಬೇಕಾಗುತ್ತಿತ್ತು. ಮನೆಗೆ ಬಂದ ಬಳಿಕ ಅ ಮಾತು ತಿನ್ನಬೇಕಾಗುತ್ತಿತ್ತು. 'ಹುಗ್ಗಿ ಯಾಕ ಉಳಿಸಿ ತರ್ಲಿಲ್ಲ?' ನಾನು ಮುಸುರೆಯ ತಟ್ಟೆಯಂತೆ ನಿಲ್ಲುತ್ತಿದ್ದೆ.

ನಾನು ಸಂತಾಮಾಯಿ ಜತೆ ಸೆಗಣಿ ಹಿಡಿಯಲು ಹೋಗುತ್ತಿದ್ದೆ. ಮಾಯಿ ಹಿಂದೆ ಹಿಂದೆ, ನಾನು ಮುಂದೆ ಮುಂದೆ ಪೋಲಿಸ್ ನಾಯಿಯಂತೆ, ಸೆಗಣಿ ಹುಡುಕಾಡುತ್ತಿದ್ದೆವು. ಬರುವಾಗ ಮಾಯಿಯ ಬೆನ್ನ ಮೇಲೆ ಚೀಲ ಪಿಶಾಚಿಯಂತೆ ಇರುತ್ತಿತ್ತು. ಹರಿದ ಚಪ್ಪಲಿಯಿಂದ ಕಾಲು ಎಳೆಯುತ್ತ ಇಡೀ ಗುಡ್ಡ ತುಳಿಯುತ್ತಿದ್ದಳು. ಸೆಗಣಿ ಸಿಕ್ಕರೆ ಊಟ ಸಿಕ್ಕಷ್ಟು ಆನಂದವಾಗುತ್ತಿತ್ತು. ಸೆಗಣಿಯ ಕುಳ್ಳು ಬಡಿದು ಅವುಗಳನ್ನು ಮಾರುತ್ತಿದ್ದೆವು. ಹೊಟ್ಟೆಯ ಬೆಂಕಿ ಶಾಂತವಾಗುತ್ತಿತ್ತು. ಹೊಟ್ಟೆಯ ತಗ್ಗು ತುಂಬುತ್ತಿತ್ತು.

ಸುಗ್ಗಿಯ ಕಾಲಕ್ಕೆ ದನಕರು ಹೊಲದಲ್ಲಿ ಮೇಯುತ್ತಿದ್ದವು. ಜೋಳದ ತೆನೆ ತಿಂದು ಕಾಳಿನ ಸೆಗಣಿ ಹಾಕುತ್ತಿದ್ದವು. ಸೆಗಣಿಯಲ್ಲಿ ಉಬ್ಬಿದ ದಪ್ಪಾದ ಕಾಳುಗಳು ಇರುತ್ತಿದ್ದವು. ಕಾಳಿದ್ದ ಸೆಗಣಿಯನ್ನು ಸಂತಾಮಾಯಿ ಉಡಿಯಲ್ಲಿ ತೆಗೆದುಕೊಳ್ಳುತ್ತಿದ್ದಳು. ಮನೆಯಿಂದ ಹೊರಟರೆ ದಾರಿಯಲ್ಲಿ ನದಿ ಸಿಗುತ್ತಿತ್ತು. ನದಿಯಲ್ಲಿ ನಾವು ಆ ಸೆಗಣಿಯನ್ನು ತೊಳೆಯುತ್ತಿದ್ದವು. ಸೆಗಣಿ ಹರಿದು ಹೋಗುತ್ತಿತ್ತು. ಕಾಳು ಉಳಿಯುತ್ತಿದ್ದವು, ಅಕ್ಕಿಯ ಕಾಳಿನಂತೆ. ಉಸುಬಿನಲ್ಲಿ ಮಾಯಿ ಕಾಳು ಒಣಗಿಸುತ್ತಿದ್ದಳು. ಒಣಗಿದ ಬಳಿಕ ಕಾಳು ಕಡಿಮೆಯಾಗುತ್ತಿದ್ದವು. ಕಾಳನ್ನು ಒಣಗಿಸಬಾರದೆಂದು ನನಗೆ ಭಾವನೆಯಾಗುತ್ತಿತ್ತು. ಕಾಳು ಒಣಗಿದ ಬಳಿಕ ನಾವು ಮನೆಗೆ ಹೋಗುತ್ತಿದ್ದೆವು. ಮನೆಗೆ ಬಂದ ಬಳಿಕ ಮಾಯಿ ಆ ಕಾಳುಗಳನ್ನು ಬೀಸುವ ಕಲ್ಲಿಗೆ ಹಾಕುತ್ತಿದ್ದಳು. ಮತ್ತು ಹಾಡುತ್ತ ಬೀಸುತ್ತಿದ್ದಳು.

ಆಕೆಯ ಮಧುರ ಧ್ವನಿ ಹಾಗೂ ಬೀಸುವ ಕಲ್ಲಿನ ಘರ ಘರ ಸದ್ದು ಪರಸ್ಪರ ಸೇರಿ ಬಿಡುತ್ತಿದ್ದವು. ಕತ್ತಲಲ್ಲಿ ದೀಪ ಹಚ್ಚಿಡುತ್ತಿದ್ದಳು. ಕಲ್ಲೆಣ್ಣೆ ಕಡಿಮೆಯಿದ್ದು ಚಿಮಣಿ ಕ್ಷಯರೋಗಿಯಂತೆ ಉರಿಯುತ್ತಿತ್ತು. ಇಲ್ಲಿ ಜೀವ ಉಳಿಸಿಕೊಂಡು ಕಣ್ಣುಮರೆಯಾಗುತ್ತಿತ್ತು, ನಾಯಿ ಒಗೆದು ಹಾಕಿದ ಬಟ್ಟೆಯಂತೆ ಬಾಗಿಲಲ್ಲಿ ಬಿದ್ದುಕೊಂಡಿರುತ್ತಿತ್ತು. ದಾದಾ ಬೀಡಿ ಸೇದುತ್ತ ಬರುತ್ತಲಿದ್ದ. ಮೂಲೆಯಲ್ಲಿ ಕೆಮ್ಮುತ್ತ ಕುಳಿತುಕೊಳ್ಳುತ್ತಿದ್ದ. 'ಅಲ್ಲಾಮೌಲಾ' ಎಂದು ಹೇಳಿಕೊಳ್ಳುತ್ತಿದ್ದ. ಗಾಣದಲ್ಲಿ ತುರುಕಿದ ಕಬ್ಬಿನಂತೆ ಆತನ ಕಣ್ಣು ನನ್ನತ್ತ ನೋಡುತ್ತಿದ್ದವು. ದಾದಾನಿಗೆ ಕಥೆ ಹೇಳಲು ಕೇಳುತ್ತಿದ್ದೆ. ದಾದಾ ನನಗೆ ತನ್ನ ಕಾಲು ಒತ್ತಲು ಹೇಳುತ್ತಿದ್ದ. ದಾದಾ ಕಥೆ ಹೇಳುತ್ತಿದ್ದ "ಹೀಂಗ ಒಂದು ಗುಬ್ಬಿ ಇತ್ತು. ಮತ್ತೊಂದ ಕಾಗಿ ಇತ್ತು."

ಸಂತಾಮಾಯಿ ಸೆಗಣಿಯ ಕಾಳು ಬೀಸಿ ಏಳುತ್ತಿದ್ದಳು. ಬಿಸಿಲಿನಲ್ಲಿ ಅಡವಿಯಲ್ಲಿ ಸಂತಾಮಾಯಿ ಸುಡುತ್ತ ತಿರುಗಿದವಳು. ಬಿಸಿಲಿನಿಂದ ಮುಖ ಸುಟ್ಟ ಹಾಗಿರುತ್ತಿತ್ತು. ಹಸಿವೆಯನ್ನು ಸಹಿಸಿ ರೂಢಿಯಾಗಿತ್ತು. ಸಂತಾಮಾಯಿ ಒಲೆಯಲ್ಲಿ ಚಿಂದಿ ಚಿಪ್ಪಾಡಿ, ಸಿಂದಿಯ ಹುಲ್ಲು ತುರುಕಿದಳು. ನನಗೆ ಹರಕು ಚಿಂದಿ ಕೊಟ್ಟಳು. ನಾನು ಮಸಾಮಾಯಿ ಮನೆಗೆ ಬೆಂಕಿ ಬೇಡಲು ಹೋದೆ. ಚಿಂದಿಯಲ್ಲಿ ಬೆಂಕಿ ತಂದೆ. ಸಂತಾಮಾಯಿ ಚಿಂದಿಯಲ್ಲಿಯ ಬೆಂಕಿ ಊದತೊಡಗಿದಳು. ಹೊಗೆ ಬರತೊಡಗಿತು. ಹೊಗೆ ಹತ್ತಿ ಚಿಂದಿ ಉರಿಯ ತೊಡಗಿತು. ಚಿಂದಿಯನ್ನು ಒಲೆಯಲ್ಲಿ ಹಾಕಿದಳು. ದಣ ದಣ ಒಲೆ ಹತ್ತಿತು. ಒಲೆಯ ಬೆಳಕಿನಲ್ಲಿ ಭಟ್ಟಿಯವರಂತೆ ಬೆವರು ಸುರಿಸುವ ಸಂತಾಮಾಯಿ ಕಂಡಳು. ಒಲೆ ನನ್ನ ತಲೆಯ ಹಾಗೆ ಉರಿಯತೊಡಗಿತು. ಮನೆ ತುಂಬ ಹೊಗೆ ದಟ್ಟವಾಗಿ ಹಬ್ಬಿತು. ಗಡಿಪಾರು ಮಾಡಿದ ಕೈದಿಗಳಂತೆ ಹುಳುಗಳು ಹೊರಗೆ ಹೊರಟವು. ಹುಳುಗಳ 'ಚಿರ್' ಸದ್ದಿನಿಂದ ಮನೆ ತುಂಬಿತ್ತು.

ದಾದಾ ಕಥೆ ಹೇಳುತ್ತಲಿದ್ದ. ದಾದಾನ ಕಥೆ ಅಂದರೆ ಅಡಿಗೆಯಾಗುವವರೆಗೆ ಟೈಂ ಪಾಸ್, ಸಂತಾಮಾಯಿ ರೊಟ್ಟಿ ಬಡಿದಳು, ನಾವು ಊಟಕ್ಕೆ ಕುಳಿತೆವು. ಸೆಗಣಿಯ ಕಾಳಿನ ರೊಟ್ಟಿಯನ್ನು ಸಂತಾಮಾಯಿ ತಿನ್ನುತ್ತಿದ್ದಳು. ಜೋಗಾಡಿ ಬೇಡಿ ತಂದ ಹಿಟ್ಟಿನ ರೊಟ್ಟಿಯನ್ನು ನಮಗೆ ಕೊಟ್ಟಿದ್ದಳು. ಸೆಗಣಿಯ ಕಾಳಿನ ರೊಟ್ಟಿ ತಾಲಿಪಿಟ್ಟಿನಂತೆ ಕಾಣುತ್ತಿದ್ದವು. ಮಾಯಿ ಅವುಗಳನ್ನು ನಮಗೆ ಕೊಡುತ್ತಿರಲಿಲ್ಲ. ಆ ದಿನ ನಾನು ಜಗಳವಾಡಿ ಇಸಿದುಕೊಂಡೆ. ತುತ್ತು ತುಣುಕನ್ನು ಬಾಯಲ್ಲಿ ಇಟ್ಟುಕೊಂಡೆ. ಕಚ ಕಚ ನುರಿಸಿದೆ. ರೊಟ್ಟಿಯಲ್ಲಿ ಸೆಗಣಿಯ ವಾಸನೆ ಬರುತ್ತಿತ್ತು. ತುತ್ತು ನುರಿಸುತ್ತಿರುವಲ್ಲಿ ಸೆಗಣಿ ತಿಂದಂತೆ ಆಗುತ್ತಿತ್ತು. ಗಂಟಲಲ್ಲಿ ಇಳಿಯುತ್ತಿರಲಿಲ್ಲ. ಹಾಗೇ ನುಂಗಿದೆ ಮತ್ತು ಮಾಯಿಯ ತಾಲಿಪಿಟ್ಟು ಆಕೆಗೇ ಕೊಟ್ಟೆ.

ಸಂತಾಮಾಯಿ ಮಾತ್ರ ರೂಢಿಯಂತೆ ಸೆಗಣಿಯ ರೊಟ್ಟಿ ತಿನ್ನುತ್ತಿದ್ದಳು. ಭಟ್ಟಿಯಲ್ಲಿ ಒಳಹಾಕಿದರೆ ಸುಟ್ಟು ಹೋಗುವಂತೆ ಆಕೆಯ ಹೊಟ್ಟೆಯಿತ್ತು. ಸಂತಾಮಾಯಿಯ ಕೈ ಯಂತ್ರದಂತೆ ರೊಟ್ಟಿಯ ತುಣುಕನ್ನು ಮುರಿಯುತ್ತಿತ್ತು. ಅದು ಬಾಯಿಗೆ ಬೀಳುತ್ತಿತ್ತು. ಕಪ್ಪು ಹಲ್ಲು ತುತ್ತನ್ನು ನುರಿಸುತ್ತಿದ್ದವು. ಸಂತಾಮಾಯಿಯ ಬಾಯಿ ಅಜಸ್ರ ಕುದಿಯುವ ಬಾಯಲರ್ ಎಂದೆನಿಸುತ್ತಿತ್ತು. ನನಗೆ ಅದೊಂದು ಸಮಸ್ಯೆ ಸಂತಾಮಾಯಿಗೆ ಹೇಸಿಕೆ ಹೇಗೆ ಬರುತ್ತಿರಲಿಕ್ಕಿಲ್ಲ ? ಆಕೆಗೆ ಸೆಗಣಿಯ ವಾಸನೆ ಬರುತ್ತಿರಲಿಲ್ಲವೆ ? ಕೈಯ ತುತ್ತು ಭಾರವಾಗಿ ಬಾಯಿಗೆ ಹೋಗುತ್ತಿತ್ತು. ಹೊಟ್ಟೆಯಲ್ಲಿ ಸೇರುತ್ತಿತ್ತು. ಹೊಟ್ಟೆಯಲ್ಲಿ ಮಾತ್ರ ಸೆಗಣಿಯ ತಗ್ಗು ಕೆಳಗೆ ಮೇಲೆ ಆಗುತ್ತಿತ್ತು.

ಒಮ್ಮೆ ರಸ್ತೆಯಲ್ಲಿ ಗ್ರಾಮದ ಓರ್ವ ಹೆಂಗಸಿನ ಹಿಟ್ಟಿನ ಡಬ್ಬಿ ಜಾರಿ ಬಿತ್ತು. ಆ ಹೆಂಗಸು ಮೇಲಿನ ಹಿಟ್ಟನ್ನು ಬಳಿದುಕೊಂಡಳು. ದಾದಾ ಮತ್ತು ನಾನು ಬಹಳ ಹೊತ್ತಿನಿಂದ ಅಲ್ಲಿಯೇ ತಡೆದು ನಿಂತಿದ್ದೆವು. ಕೊನೆಗೆ ದಾದಾ ದೂರ ಹೋಗಿ ನಿಂತ. ನಾನು ಮಣ್ಣು ಸರಿಸಿ ಹಿಟ್ಟು ತೆಗೆದುಕೊಂಡೆ; ಮನೆಗೆ ಹೋದೆ. ಜರಡಿಯಿಂದ ಹಿಟ್ಟು ಚಾಳಿಸಿದೆ. ಹಿಟ್ಟನ್ನು ಅಲ್ಯುಮಿನಿಯಂ ಬೋಗುಣಿಯಲ್ಲಿ ಜೋಪಾನವಾಗಿಟ್ಟೆ. ಸಂಜೆಯಲ್ಲಿ ದಾದಾ ಸಂತಾಮಾಯಿಗೆ 'ಈದ್ ಹಬ್ಬಕ್ಕೆ ಚಂದ್ರ'ನನ್ನು ತೋರಿಸಿದಂತೆ ಹಿಟ್ಟಿನ ಬೋಗುಣಿಯನ್ನು ತೋರಿಸುತ್ತಿದ್ದನು. ಸಂತಾಮಾಯಿ ನನ್ನನ್ನು ಅಪ್ಪಿಕೊಂಡಳು. ನನಗೆ ಮುತ್ತು ಕೊಟ್ಟಳು. ಆಕೆಯ ಬಾಯಿಂದ ತಂಬಾಕಿನ ಹೊಲಸು ವಾಸನೆ ಬಂತು. ಸೆಗಣಿಯ ರೊಟ್ಟಿಗಳ ಸ್ಮರಣೆಯಾಯಿತು. ನಾನೇ ಬಿಡಿಸಿಕೊಂಡೆ.

ನನಗೆ ಇನ್ನೂ ಆ ಕತೆಯ ನೆನಪಿದೆ. ಆ ಕತೆಯನ್ನು ದಾದಾ ಇಲ್ಲವೆ ಸಂತಾಮಾಯಿ ಹೇಳಿರಬೇಕು. ನಾನು ಊರಲ್ಲಿ ಒಬ್ಬನೇ ಹೋಗುತ್ತಿದ್ದೆ. ಎದುರಿನಿಂದ ಹೆಣ ಬರುತ್ತಲಿತ್ತು. ಅಲ್ಲಿಂದ ಓಡಿ ಹೋಗಬೇಕೆಂದು ಮಾಡಿದೆ. ಭೂತ ಬಡಿದವರಂತೆ ಭಯವಾಯಿತು. ರಾತ್ರಿ ಹೆಣ ಕನಸಿನಲ್ಲಿ ಬರುವುದು, ಎದೆಯ ಮೇಲೆ ಕೂಡುವುದು ಎಂಬ ಅಂಜಿಕೆ. ಆದರೆ ಓಡಲು ದಾರಿ ಇರಲಿಲ್ಲ. ರಾಮಬಾಪ ಕಹಳೆ ಊದುತ್ತಿದ್ದ. ಜಂಠಿಗ್ಯಾ ಹಲಗೆ ಬಾರಿಸುತ್ತಿದ್ದ. ಮುಂದೆ ಪಟಾಕಿ ಹಾರಿಸುತ್ತಿದ್ದರು. ಹೆಣದ ಚಟ್ಟ ಹತ್ತಿರ ಬರುತ್ತಿತ್ತು. ಹಿಂದೆ ಹೆಂಗಸರು ಅಳುತ್ತಿದ್ದರು. ಹೆಣ ಹತ್ತಿರ ಬಂತು. ಹೆಣದ ಮೇಲೆ ದುಡ್ಡು ಹಾರಿಸುತ್ತಿದ್ದರು, ನೀಲಗಿರಿ ಎಣ್ಣೆಯ ವಾಸನೆ ಬರುತ್ತಿತ್ತು. ನಾನು ಅಂಜಿದೆ. ನನ್ನ ಕಾಲಿನ ಹತ್ತಿರ ಹೆಣದ ಮೇಲೆ ಹಾರಿಸಿದ ಐದು ಪೈಸೆ ಬಿತ್ತು. ನನಗೆ ಆ ದುಡ್ಡಿನ ಭಯವಾಯಿತು. ಆದರೂ ನಾನು ಕೂಡಲೇ ಅದನ್ನು ತೆಗೆದುಕೊಂಡೆ ಮತ್ತು ದುಡ್ಡಿನ ಆಸೆಯಿಂದ ಆ ಸ್ಮಶಾನಯಾತ್ರೆಯಲ್ಲಿ ಪಾಲುಗೊಂಡೆ. ಉಂಬರ್ಯಾ, ಪರಶ್ಯಾ ಕೂಡ ಇದ್ದರು.

ದಾರಿಯಲ್ಲಿ ಹೆಣವನ್ನು ವಿಶ್ರಾಂತಿಗಾಗಿ ಇಟ್ಟರು. ಜನರು ಅತ್ತಿತ್ತ ಒಡೆದು ಗುಂಪಾದರು. ರಾಮಬಾಪ ಬೀಡಿ ಹೊತ್ತಿಸಿದ. 'ಜಂಠಿಗ್ಯಾ ನನ್ನನ್ನು ಮೆಲ್ಲನೆ ವಿಚಾರಿಸಿದ "ಎಷ್ಟು ರೊಕ್ಕ ಸಿಕ್ಕಾವೋ?" ನಾನೂ ಕಳ್ಳ ದನಿಯಲ್ಲಿ ಹೇಳಿದೆ "ಹತ್ತು ಪೈಸೆ". ಮತ್ತೆ ಹೆಣ ದಾರಿ ಹಿಡಿಯಿತು. ರಾಮಬಾಪ ಕಹಳೆ ಊದಿದ ಜಂಠಿಗ್ಯಾ ಗುಣಿ ಹಿಡಿದು ಬಾರಿಸತೊಡಗಿದ.

ಹೆಣವನ್ನು ವಿಶ್ರಾಂತಿಗಾಗಿ ಇಟ್ಟ ಸ್ಥಳದಲ್ಲಿ ಒಂದು ಬೊಗಸೆ ಜೋಳದ ಗುಂಪಿ ಇತ್ತು. ಹೆಣವನ್ನು ಸ್ಮಶಾನಕ್ಕೆ ಒಯ್ಯುವ ಮುಂಚೆ ಹೆಗಲ ಮೇಲೆ ಹೊತ್ತವರು ದಾರಿಯಲ್ಲಿ ಹೆಣವನ್ನು ವಿಶ್ರಾಂತಿಗಾಗಿ ಇಡುತ್ತಾರೆ. ಹೆಣಕ್ಕೆ ವಿಶ್ರಾಂತಿ ಕೊಡುತ್ತಾರೆ. ತಾವೂ ಸಹ ವಿಶ್ರಾಂತಿ ಪಡೆಯುತ್ತಾರೆ. ಹೆಣವನ್ನು ವಿಶ್ರಾಂತಿಗಾಗಿ ಇಟ್ಟ ಸ್ಥಳದಲ್ಲಿ ಬೊಗಸೆ ಜೋಳ, ಐದು ಪೈಸೆ ದುಡ್ಡು ಇಟ್ಟು ಜನರು ಕಾಲಿಗೆ ಬೀಳುತ್ತಾರೆ. ವಿಶ್ರಾಂತಿ ಸ್ಥಳದ ಜೋಳದ ಗುಂಪಿ ನನ್ನನ್ನು ಕರೆಯುತ್ತಲಿತ್ತು. ನಾನು ಹೆಣದ ಹಿಂದೆ ಹೋಗಲಿಲ್ಲ. ನಾನು ಆ ಜೋಳ ಬಳಿದುಕೊಂಡು ಮನೆಯತ್ತ ಗಾಳಿಯಂತೆ ಓಡಿದೆ. ಈಗ ಸಂತಾಮಾಯಿ ನನಗೆ ಎಷ್ಟು ಮುತ್ತು ಕೊಡುವಳೋ ಎಂದು ಲೆಕ್ಕ ಹಾಕುತ್ತ ಧಾವಿಸಿದ್ದೆ.

ಹೀಗೆ ದಿನಾಲು ಶ್ರೀಮಂತರ ಹೆಣಗಳು ಹೊರಡಬೇಕೆಂದು ಅನ್ನಿಸುತ್ತಿತ್ತು. ದುಡ್ಡು ಹಾರಿಸಬೇಕು, ನನಗೆ ಅಷ್ಟೇ ದುಡ್ಡು ಸಿಗಬೇಕು. ವಿಶ್ರಾಂತಿ ಸ್ಥಳದ ಜೋಳ ಸಿಗಬೇಕು.

ಸಂತಾಮಾಯಿ ಹಳೆಯ ಸೀರೆಗೆ ದಿಂಡು ಹಾಕುತ್ತಲಿದ್ದಳು. ನಾನು ಹೆಣ ಮುಟ್ಟಿದ್ದು ಆಕೆಗೆ ತಿಳಿದಿತ್ತು. ನನ್ನನ್ನು ಕಂಡ ಕೂಡಲೇ ಆಕೆ ಕಾಲಲ್ಲಿಯ ಚಪ್ಪಲಿ ತೆಗೆದು ಹೆಟ್ಟಿದಳು. ಸಂತಾಮಾಯಿ ಭಯಂಕರ ಸಿಟ್ಟಿಗೆ ಬಂದಿದ್ದಳು. ನಾನು ಅಳುತ್ತಲಿದ್ದೆ.

"ಏಯ್, ಅವು ಹೆಣದ ಮ್ಯಾಲಿನ ಜ್ವಾಳಾ, ಹೊಳ್ಯಾಗ ಚೆಲ್ಲಿ ಮುಣಗಿ ಬಾ."

ನದಿಯ ದಾರಿಯಲ್ಲಿ ಹೋಗುತ್ತಿದ್ದೆ. ಜಂಠಿಗ್ಯಾ, ರಾಮಬಾಪ ಒದ್ದೆ ಬಟ್ಟೆಗಳಿಂದ ಬರುತ್ತಿದ್ದರು. ಹೆಣವನ್ನು ಮಣ್ಣುಗೂಡಿಸಿದ ಜನರು ಮನೆಗಳತ್ತ ನಡೆದಿದ್ದರು. ಆಗ ಶಿವಪ್ಪ ತೇಲಿ ಹೆಣಕ್ಕೆ ಮಣ್ಣು ಕೊಟ್ಟು ಬರುತ್ತಲಿದ್ದ. ಆತನಿಗೆ ಹೆಣದ ಮೈಲಿಗೆ ಆಗಿತ್ತು. ನನ್ನನ್ನು ಕಂಡು ಆತ ದೂರ ಸರಿದ. ಆತನಿಗೆ ನನ್ನ ಮೈಲಿಗೆ ಬೇಡಾಗಿತ್ತು.

ಹೊಲಗೇರಿ ಅಂದರೆ ಹೆಣದ ವಿಶ್ರಾಂತಿ ಸ್ಥಳದಲ್ಲಿಯ ಜೋಳದ ಗುಂಪು ಒಂದೊಂದು ವ್ಯಕ್ತಿ ಒಂದೊಂದು ಕಾಳು, ಹೆಣದ ಮೇಲಿನ ಕಾಳನ್ನು ಏಕೆ ತಿನ್ನುವುದಿಲ್ಲ ? ಅವು ಕೂಡ ಜೋಳದ ಕಾಳುಗಳು, ಈ ಜೋಳಕ್ಕೆ ಮೈಲಿಗೆ ಏಕೆ ? ತಿಂದರೆ ಹೊಟ್ಟೆ ತುಂಬುವುದು; ಬಿತ್ತಿದರೆ ಬೆಳೆ ಬರುವುದು.

ಕಾರಹುಣ್ಣಿಮೆಗೆ ಹೊಸ ವರ್ಷಕ್ಕಾಗಿ ಆಯಗಾರಿಕೆ ನೇಮಿಸುತ್ತಿದ್ದರು. ಆಗ ಇಡೀ ಹೊಲಗೇರಿ ತಕ್ಕೆಯಲ್ಲಿ (ತಕ್ಕೆ: ಹೊಲೆಯರು ಸಾಮೂಹಿಕವಾಗಿ ಸೇರುವ ಸ್ಥಳ) ಸೇರುತ್ತಿತ್ತು. ಎಲ್ಲರ ಮತದಂತೆ ಈ ಮರ್ಯಾದೆ ನಾಲ್ಕು ಮನೆಗಳಿಗೆ ಹೋಗುತ್ತಿತ್ತು. ಪಾಳಿ ಪ್ರಕಾರ ಆಯಗಾರಿಕೆ ಮನೆ ಮನೆಗೆ ಮುಟ್ಟುತ್ತಿತ್ತು. ಮೇಲಿನ ಓಣಿಯವರು ಒಬ್ಬರು, ನಡುವಿನ ಓಣಿಯವರು ಒಬ್ಬರು, ಕೋಳಿಯ ಓಣಿಯವರು ಒಬ್ಬರು, ಕೆಳಗಿನ ಓಣಿಯವರು ಒಬ್ಬರು, ಹೇನಿನ ಓಣಿಯವರಿಗೆ ಆಯಗಾರಿಕೆ ಇರುತ್ತಿರಲಿಲ್ಲ. ಅವರು ವತನದಾರ ಆಗಿರುತ್ತಿರಲಿಲ್ಲ. ಅವರ ಶರೀರದಲ್ಲಿ ಯಾವಾಗಲೂ ಹೇನು ಇರುತ್ತಿದ್ದು, ಅವರ ಓಣಿಗೆ ಹೇನಿನ ಓಣಿ ಎಂದೆನ್ನುತ್ತಿದ್ದರು. ಗಂಡಸರಿಲ್ಲದ ಮನೆಗೂ ಆಯಗಾರಿಕೆ ಹೋಗುತ್ತಿತ್ತು. ಇದ್ದಬದ್ದ ಮುದುಕಿಯರು ಮುಪ್ಪಿನವರು ಆಯಗಾರಿಕೆ ಮಾಡಬೇಕಾಗುತ್ತಿತ್ತು.

ಆಯಗಾರರಿಗೆ ಸುಗ್ಗಿಯಲ್ಲಿ ಕಾಳು ದೊರೆಯುತ್ತದೆ. ಕೆಲವರಿಗೆ ನಲವತ್ತೆಂಟು ಸೇರು, ಹಲವರಿಗೆ ಮೂವತ್ತೆರಡು ಸೇರು, ಉಳಿದವರಿಗೆ ಹದಿನಾರು ಸೇರು ಕಾಳು ದೊರೆಯುತ್ತಿತ್ತು. ಕಣದಲ್ಲಿಯ ಉಳಕಲು ಬೇರೆ. ಗಂಡಸರಿಲ್ಲದ ಮನೆಯ ಹೆಂಗಸರು ತಮ್ಮ ಆಯಗಾರಿಕೆಯನ್ನು ಬೇರೆಯವರಿಗೆ ಪಾಲುಗಾರಿಕೆಯಲ್ಲಿ ಕೊಡುತ್ತಿದ್ದರು. ಅರ್ಧ ಮಾಲು ಕೊಟ್ಟು ಯಾರಾದರೂ ಆಯಗಾರಿಕೆ ಮಾಡುತ್ತಿದ್ದರು.

ಆಯಗಾರಿಕೆ ಅಂದರೆ ಸುಗ್ಗಿಯಲ್ಲಿ ಕಾಳು ಪಡೆಯುವ ವೃತ್ತಿ. ಇವರು ತಕ್ಕೆಯನ್ನು ಸಾರಿಸಬೇಕಾಗುತ್ತಿತ್ತು. ಅಲ್ಲಿ ದೀಪ ಹಚ್ಚಬೇಕಾಗುತ್ತಿತ್ತು. ಊರಲ್ಲಿ ದನ ಸತ್ತರೆ ಅದನ್ನು ಎತ್ತಿ ತರಬೇಕು; ಸುಲಿಯಬೇಕು. ತೊಗಲು ಬೇರೆ ಮಾಡಬೇಕು; ಅದನ್ನು ಮಾರಬೇಕು. ದನ ಸತ್ತ ಮನೆಯವರು ಎಂಟು ಬೊಗಸೆ ಜೋಳ ಹಾಕುತ್ತಿದ್ದರು. ಎಲ್ಲರೂ ಅದನ್ನು ಹಂಚಿಕೊಳ್ಳುತ್ತಿದ್ದರು. ಅಷ್ಟೇ ಹೊಟ್ಟೆ ತುಂಬಲು ಸಾಕಾಗುತ್ತಿತ್ತು.

ಸಂಜೆಯಾದರೆ ಮಲಗಲು ಎಲ್ಲ ಹೊಲಗೇರಿ ತಕ್ಕೆಗೆ ಬರುತ್ತಿತ್ತು. ಎಲ್ಲರನ್ನು ಅದು ತನ್ನ ಹೊಟ್ಟೆಯಲ್ಲಿ ಸೇರಿಸಿಕೊಳ್ಳುತ್ತಿತ್ತು. ರಾತ್ರಿ ಹೊತ್ತು ಮುದುಕರು ತಮ್ಮ ತಾರುಣ್ಯದ ನೆನಪಿನ ಹರಟೆಯೊಂದಿಗೆ ಸಮಯ ಕಳೆಯುತ್ತಿದ್ದರು. ಬೀಡಿ ತಂಬಾಕು ಹೊತ್ತಿಸುತ್ತಿದ್ದರು. ಕೆಮ್ಮಿ ಕಮ್ಮಿ

ದಣಿಯುತ್ತಿದ್ದರು. ಮೂಲೆಯಲ್ಲಿ ಮಲಗಿದ ಹುಡುಗರ ಗುಂಪಿಗೆ ಕಸಿವಿಸಿಯಾಗುತ್ತಿತ್ತು. ಓಡಿ ಹೋದ ಹೆಂಡತಿಯ ಗಂಡ ದೀಪ ಆರಿಸಿ ಚಿಕ್ಕ ಹುಡುಗರ ಹಾಸಿಗೆಯಲ್ಲಿ ಸೇರುತ್ತಿದ್ದ. ಚಿಮಣಿಯ ಹೊಗೆಯಿಂದ ತಕ್ಕೆಯ ಗುಮ್ಮಟ ಕಪ್ಪಾಗಿ ಹೋಗುತ್ತಿತ್ತು. ತಿಗಣೆಯ ರಕ್ತದಿಂದ ಗೋಡೆ ಪಾನ್ ತಿಂದಂತೆ ಕಾಣುತ್ತಿತ್ತು. ಮೂಲೆಯಲ್ಲಿ ಬಿದ್ದ ಪೊರಕೆ ವಿಧವಾ ಮಾಟಗಾತಿಯಂತೆ ತೋರುತ್ತಿತ್ತು. ತಕ್ಕೆಯ ಮುಂದೆ ರಾತ್ರಿಯಲ್ಲಿ ಜನರು ಉಚ್ಚೆ ಹೊಯ್ದಿದ್ದು, ಆ ಜಾಗ ಹಸಿಯಾಗಿ ಎಣ್ಣೆ ಉಂಡವರಂತೆ ತೋರುತ್ತಿತ್ತು. ಅಲ್ಲಿಯೇ ಹುಡುಗರು ಗೋಲಿ ಗುಂಡು ಆಡುವ ಕುಣಿಗಳು ಇರುತ್ತಿದ್ದವು. ತಕ್ಕೆಗೆ ಹತ್ತಿದ ಗೋಡೆಗೆ ಮೇಲೆ ಹೊಲಗೇರಿಯ ಅನೇಕ ಪ್ರಕರಣಗಳು ಬರೆಯಲ್ಪಡುತ್ತಿದ್ದವು. ಕೆಮ್ಮುತ್ತ ಕೈ ಮುಂದೆ ಮಾಡಿದ ಭಿಕಾರಿಯಂತೆ ಮಾರಿಯ ದೇವಾಲಯ ಕಾಣುತ್ತಿತ್ತು. ಹದ್ದು ಕಾಗೆಗಳ ಗೂಡುಗಳನ್ನು ಹೊತ್ತು ಜನರಿಗೆ ನೆರಳು ಕೊಡುತ್ತ ಹುಣಸೆ ಗಿಡ ನಿಂತಿತ್ತು. ಹುಣಸೆ ಗಿಡದ ಟೊಂಗೆಗೆ ಚರ್ಮವನ್ನು ಒಣಗಿಸಲು ಹಾಕಲಾಗುತ್ತಿತ್ತು.

ಊರಲ್ಲಿ ದನ ಸತ್ತರೆ ಆ ಮನೆಯವರು ಹೊಲಗೇರಿಗೆ ಬರುತ್ತಿದ್ದರು. ಆಯಗಾರರಿಗೆ ಮೊದಲೇ ದನ ಸತ್ತ ಸಮಾಚಾರ ತಿಳಿದಿದ್ದು, ನಾಲ್ಕು ಜನರು ಸತ್ತ ದನ ತರಲು ಹೋಗುತ್ತಿದ್ದರು. ಜಾನವಾರು ಚಿಕ್ಕದಾಗಿದ್ದರೆ ಹೆಗಲ ಮೇಲೆ ಹೊತ್ತು ತರುತ್ತಿದ್ದರು. ದೊಡ್ಡ ಎಮ್ಮೆ, ಆಕಳು ಇದ್ದರೆ ಎತ್ತಿನ ಗಾಡಿ ಒಯ್ಯುತ್ತಿದ್ದರು. ಇಬ್ಬರು ಮುಂದೆ ಎಳೆಯುತ್ತ ಇಬ್ಬರು ಹಿಂದೆ ದೂಡುತ್ತ ಸತ್ತ ಪ್ರಾಣಿಯನ್ನು ತರುತ್ತಿದ್ದರು.

ಹಿಂದುಗಳು ಆಕಳನ್ನು ತಾಯಿ ಎಂದು ತಿಳಿಯುತ್ತಾರೆ. ತಾಯಿ ಸತ್ತರೆ ಮಣ್ಣು ಕೊಡುತ್ತಾರೆ. ಆದರೆ ಆಕಳು ಸತ್ತರೆ ಹೊಲೆಯರಿಗೆ ಎಳೆಯಲು ಹಚ್ಚುತ್ತಾರೆ. ದನ ಸತ್ತ ಮನೆಯೊಡತಿ ಅಳುತ್ತಾಳೆ. ಕೊಟ್ಟಿಗೆ ಬಣ ಬಣವಾಗುತ್ತದೆ. – ಹೊಲೆಯರು ಸತ್ತ ದನ ಎತ್ತುತ್ತಾರೆ; ಗಾಡಿಯಲ್ಲಿ ಹೇರುತ್ತಾರೆ. ಒಡತಿ ಎಂಟು ಬೊಗಸೆ ಉಡಿಯಲ್ಲಿ ಕಾಳು ಹಾಕುತ್ತಾಳೆ.

ದನಗಳು ಸಾಯುವ ಕಾಲ, ಸುಕಾಲ. ದನಗಳು ಸಾಯದಿದ್ದರೆ ತಿಂಗಳು ಕಷ್ಟದಿಂದ ಕಳೆಯುತ್ತದೆ. ಆದರೆ ತೆನೆ, ತಿನ್ನಿಸಿ ದನಗಳನ್ನು ಕೊಲ್ಲಬೇಕಾಗುತ್ತಿತ್ತು. ಮಾಣಕು ಅಣ್ಣ ಮತ್ತು ಪ್ರಹ್ಲಾದಬಾಪ ರಾತ್ರಿ ಸಮಯ ದೂರದ ಊರುಗಳಿಗೆ ಕಳ್ಳತನದಿಂದ ಎಮ್ಮೆಗಳನ್ನು ತರಲು ಹೋಗುತ್ತಿದ್ದರು. ಇಡೀ ರಾತ್ರಿ ದನಕರುಗಳನ್ನು ಕೊಯ್ಯುತ್ತಿದ್ದರು. ಬೆಳಿಗ್ಗೆ ಎಲ್ಲರ ಒಲೆಗಳ ಮೇಲೆ ಮಾಂಸವನ್ನು ಬೇಯಿಸಲಾಗುತ್ತಿತ್ತು. ಕೈ ಕೈಯಲ್ಲಿ. ದನಗಳು ಇಲ್ಲದಂತಾಗುತ್ತಿದ್ದವು.

ಸತ್ತ ದನ ಕಂಡರೆ ನಮ್ಮಂಥ ಚಿಕ್ಕ ಹುಡುಗರಿಗೆ ಸಂತೋಷವಾಗುತ್ತಿತ್ತು. ದನ ಸುಲಿಯುತ್ತಿದ್ದಾಗ ನಾವು ಹತ್ತಿರ ಸೇರುತ್ತಿದ್ದೆವು. ಸಣ್ಣ ಹುಡುಗರ ಗೊಂದಲ ಇರಬಾರದೆಂದು ಅಟ್ಟುತ್ತಿದ್ದರು. ನಾನು ಒಂದಿಷ್ಟು ದೊಡ್ಡವನಾಗಿದ್ದೆ. ಗಟ್ಟಿ ಹುಡುಗರನ್ನು ಕೆಲಸಕ್ಕೆ ಹಚ್ಚುತ್ತಿದ್ದರು. ನಾನು ಕಾಲು ಹಿಡಿಯುತ್ತಿದ್ದೆ. ಜನರು ಚೂರಿಯಿಂದ ಚರ್ಮ ಸುಲಿಯುತ್ತಿದ್ದರು. ರಕ್ತ ಮಾಂಸಗಳಿಂದ ಕೈ ತೊಯ್ದು ಹೋಗುತ್ತಿತ್ತು. ಕೈಯಿಂದ ಕಾಲು ಜಾರುತ್ತಿದ್ದವು. ಆಗ ಬೈಗಳು ಬರುತ್ತಿದ್ದವು. ಮತ್ತೆ ಕಾಲುಗಳನ್ನು ಗಟ್ಟಿಯಾಗಿ ಹಿಡಿದುಕೊಂಡು ನಿಲ್ಲಬೇಕಾಗುತ್ತಿತ್ತು. ಶಾಲೆಯಲ್ಲಿ ಕಲಿತ ಯಕೃತ್ತು, ಜಠರ, ಪುಪ್ಪುಸ, ಹೃದಯ, ಸ್ವಾದುಪಿಂಡ, ಚಿಕ್ಕ ಕರುಳು, ದೊಡ್ಡ ಕರುಳು ಇವುಗಳನ್ನು ಸೂಕ್ಷ್ಮವಾಗಿ ನೋಡುತ್ತ ನಿಲ್ಲುತ್ತಿದ್ದೆ.

ನಾಯಿಗಳು ಸುತ್ತಮುತ್ತ ಗುಂಪಾಗಿ ನಿಲ್ಲುತ್ತಿದ್ದವು. ಒಬ್ಬ ಹುಡುಗ ಕಲ್ಲು ತೆಗೆದುಕೊಂಡು, ನಾಯಿಗಳನ್ನು ಅಟ್ಟುವ ಕಾರ್ಯದಲ್ಲಿ ತೊಡಗಿರುತ್ತಿದ್ದ.

ಹೊಲಗೇರಿ ನಿಧಾನವಾಗಿ ಬೋಗುಣಿ, ತಟ್ಟೆ ತೆಗೆದುಕೊಂಡು ಸೇರುತ್ತಿತ್ತು. ದನದ ಮೇಲೆ ಮುಗಿ ಬೀಳುತ್ತಿದ್ದರು. ಮೊದಲೇ ಆಯಗಾರರು ಒಳ್ಳೆಯ ಮಾಂಸವನ್ನು ತೆಗೆದುಕೊಂಡು ಹೋಗುತ್ತಿದ್ದರು. ಉಳಿದಿದ್ದನ್ನು ಇನ್ನಿತರರು ಒಯ್ಯುತ್ತಿದ್ದರು. ಬಾಕಿ ನಾಯಿಗಳು ಹರಿದು ತಿನ್ನುತ್ತಿದ್ದವು. ಬೊಗಳುತ್ತಿದ್ದವು; ಕಚ್ಚಾಡುತ್ತಿದ್ದವು. ರೊಟ್ಟಿಗಾಗಿ ನಾನು ಚೂರುಗಳನ್ನು ತೆಗೆದುಕೊಳ್ಳುತ್ತಿದ್ದೆ. ನದಿಗೆ ಹೋಗಿ ಮಾಂಸ ತೊಳೆಯುತ್ತಿದ್ದೆ. ಜರಡಿಯ ಅಂಚಿಗೆ ಮಾಂಸದ ತುಂಡುಗಳನ್ನು ಸುತಳಿಯಿಂದ ಕಟ್ಟುತ್ತಿದ್ದೆ, ಒಣಗಿಸುತ್ತ ಕೂಡುತ್ತಿದ್ದೆ. ನಾಯಿ, ಬೆಕ್ಕು ಅದನ್ನು ಎತ್ತಿಕೊಂಡು ಹೋಗ ಬಹುದೆಂದು ಕಾಯುತ್ತಿರುತ್ತಿದ್ದೆ. ಊಟ ಮಾಡುವಾಗ ಕೈಗೆ ಮಾಂಸದ ವಾಸನೆ ಬರುತ್ತಿತ್ತು.

ದನಗಳು ಸತ್ತರೆ ಬಿಳಿ ಹದ್ದುಗಳು ಬರುತ್ತಿದ್ದವು. ಸ್ವರ್ಗದಲ್ಲಿಯ ಅವುಗಳ ಹುರಿ ಹರಿದರೆ ಆ ದನಗಳು ಸಾಯುತ್ತಿದ್ದವು. ಹುರಿ ಹರಿದರೆ ಹದ್ದುಗಳಿಗೆ ತಿಳಿಯುತ್ತಿತ್ತು. ಹದ್ದುಗಳು ಬರುತ್ತಿದ್ದವು. ದೊಡ್ಡ ದೊಡ್ಡ ಕಪ್ಪು ಬಿಳುಪು ಹದ್ದುಗಳು. “ಹದ್ದು ಮೂಗ ನಿಂತಾವು” ಎಂದು ಜನರು ನಮ್ಮನ್ನು ಭಯಪಡಿಸುತ್ತಿದ್ದರು.

ಚಿಕ್ಕವರಿದ್ದಾಗ ನಾವು ಸತ್ತ ದನಗಳ ಆಟವನ್ನು ಕೂಡ ಆಡುತ್ತಿದ್ದೆವು. ಯಾರಾದರೂ ಸತ್ತ ದನದಂತೆ ಬೀಳುತ್ತಿದ್ದರು. ನಾವು ಹತ್ತು ಹನ್ನೆರಡು ಹುಡುಗರು ಹದ್ದುಗಳಾಗುತ್ತಿದ್ದೆವು. ಬಂಗಾರದ ಹದ್ದು ಎಲ್ಲವುಗಳಿಗಿಂತ ದೊಡ್ಡದು. ಅದರ ಚುಂಚು ಬಾಗಿದ್ದು, ಒಬ್ಬ ಬಂಗಾರದ ಹದ್ದಾಗುತ್ತಿದ್ದ. ಈ ಆಟದ ಹದ್ದುಗಳಲ್ಲಿ ಮಾದಿಗ ಹದ್ದು ಕೂಡ ಇರುತ್ತಿತ್ತು. ಮಾದಿಗ ಹದ್ದು ಮಾತ್ರ ದೂರದಲ್ಲಿದ್ದು ಆಡಬೇಕು. ಸತ್ತ ದನವಾಗಿದ್ದ ಹುಡುಗನನ್ನು ಚುಚ್ಚುತ್ತಿದ್ದೆವು : ಹದ್ದಿನಂತೆ ಚೀರುತ್ತಿದ್ದೆವು. ಸತ್ತ ದನದ ಅಸ್ಥಿಪಂಜರ ಎಷ್ಟು ದಿನಗಳಾದರೂ ಕೊಳೆಯುತ್ತ ಇರುತ್ತಿತ್ತು. ಎದೆಯ ಎಲುಬುಗಳು, ಬಾಯಲ್ಲಿಯ ಒಸಡು, ಹಲ್ಲುಗಳು, ಕಾಲು ಎಲ್ಲವೂ ಭಯಾನಕವಾಗಿ ಕಣ್ಣುಗಳ ತಗ್ಗು, ಕೋಡುಗಳು, ತೋರುತ್ತಿದ್ದವು. ಶಾಲೆಯಲ್ಲಿ ಒಮ್ಮೆ ಮನುಷ್ಯನ ಅಸ್ಥಿಪಂಜರ ತೋರಿಸಿದರು. ಎಲ್ಲದರಲ್ಲಿ ಮನುಷ್ಯ ಎಷ್ಟು ಅಸಹ್ಯ ಕಾಣುತ್ತಾನೆ ?

ನಾನು ಏಳನೆಯ ವರ್ಗದಲ್ಲಿದ್ದಾಗ ಮೌಲಾ ಜಮಾದಾರನ ಹೋರಿ ಸತ್ತಿತ್ತು. ತಾಜಾ ತಾಜಾ ಮಾಂಸವಿತ್ತು. ಹೊಲೆಯರು ಆ ಹೋರಿಯನ್ನು ನೆಲಕ್ಕೆ ಬೀಳಲು ಕೊಡಲೇ ಇಲ್ಲ. ಸ್ವಚ್ಛ ಮಾಡಿದರು. ಪತಾಕೆ ಹಚ್ಚಿದಂತೆ ಮನೆ ಮನೆಗೆ ಚರ್ಮ ತೂಗು ಹಾಕಿದ್ದರು.

ನಾನು ಶಾಲೆಗೆ ಹೋದಾಗ ಇಸ್ಮಾಯಿಲ್, ಉಂಬರ್ಯಾ, ಮಾರುತ್ಯಾನನ್ನು ಕಾಡುತ್ತಿದ್ದರು, “ಕಟುಕ ಕಟುಕ” ಎಂದೆನ್ನುತ್ತಿದ್ದರು. ನಾನು ಶಾಲೆಗೆ ಹೋದಾಗ ಏರಿ ಬಂದ ಅವರು “ನೋಡ್ರಿ, ಮತ್ತೊಬ್ಬ ಕಟುಕ ಬಂದಾ. ನಮ್ಮ ಎತ್ತಾ ತಿಂದಾ” ಎಂದರು. ಹುಡುಗಿಯರು ಗಮನವಿಟ್ಟು ಕೇಳುತ್ತಿದ್ದರು. ನಾನು ಹೊರಗೆ ಓಡಿದೆ. ಹೊಟ್ಟೆಯಲ್ಲಿ ಎತ್ತು ಧಡಿಕೆ ಕೊಡುತ್ತಿತ್ತು.

## ೪. ಜೋಳದ ಪಾಳಿ

**– ಚೆನ್ನವೀರ ಕಣವಿ**

ಬೆಳುವಲದ ಹೊಲದ ಉದ್ದಗಲ ಎತ್ತು ಎತ್ತರಕೆ
ನಿಂತು ಗರಿಗೆದರಿ–
ಹಾರಿ ಹೋಗುವದಿಲ್ಲ ಆಕಾಶಕ್ಕೆ.
ಬಿರುಸು ನೆಲದೆದೆಗೆ ಬೆವರಿಳಿಸಿ, ಹದಗೊಳಿಸಿ
ಬಿತ್ತಿ ಬೆಳೆದವನ ಕೈ
ಬಿಡುವದಿಲ್ಲ.

ಮೈ ಕೊಡವಿ ಏಳುತ್ತೇನೆ ಮುಗಿಲ ಮುತ್ತಿನ ಹನಿಗೆ
ಎಡೆ ಹೊಡೆದು, ಸುತ್ತುಮುತ್ತಿನ ಕಳೆಯ ಕಿತ್ತಾಗ
ದಿನಕ್ಕೊಂದು ಗೇಣು ಸುಳಿಗೆಗೆದು ಬೆಳೆಯುತ್ತೇನೆ.
ಶಿಸ್ತಿನ ಸಿಪಾಯಿಯಂತೆ ನಿಲ್ಲುತ್ತೇನೆ ಸಾಲಾಗಿ
ಮಸಾರಿಗೆ ಹಸಿರು ಧ್ವಜವನೆತ್ತಿ.
ಹೊಡೆ ಬಿಚ್ಚಿ ಹಗುರಾಗುತ್ತೇನೆ ಹೀಗೆ
ಚರಗ ಚೆಲ್ಲುವ ಸೀಗೆ ಹುಣ್ಣಿಮೆಗೆ.

ಹಕ್ಕಿ ಬಂದು ಕುಕ್ಕಿದರೂ ತೂಗುತ್ತೇನೆ.
ತೆನೆಯೊಡನೆ, ಮೆಲ್ಲಗೆ ನೋವಾಗದಂತೆ;
ಬಾಗುತ್ತೇನೆ ಭೂಮಿತಾಯಿಗೆ ಭಾರವಾಗದಂತೆ.
ಮಾಗುತ್ತೇನೆ ಒಂದಕ್ಕೆ ನೂರು ಸಾವಿರವಾಗಿ
ಕಾಳೆಲ್ಲ ಮುತ್ತಿನ ಗೊಂಡೆಯಾಗಿ.

ಹಂತಿಯ ಹಾಡು ಸೂಸಿ, ಬೀಸುಗಾಳಿಗೆ ಸೋಸಿ
ಕಣ ಕಣದಲ್ಲಿ ರಾಶಿಯಾಗುತ್ತೇನೆ.
ಅದೇ ಚಣವೆ ದನಕರುಗಳಿಗೆ ಹೊಟ್ಟು ಮೇವಿನ ಬಣವೆ.
ಹಿಟ್ಟಾಗಿ, ಬಳೆಯ ತಾಳಕ್ಕೆ ಗುಟ್ಟಾಗಿ
ಬಡವರಂಗೈ ತುಂಬ ರೊಟ್ಟಿಯಾಗಿ,
ಖಾರ, ಉಳ್ಳಾಗಡ್ಡಿ, ಮೊಸರು, ಬದನೆಕಾಯಿ
ಪರಸ್ಪರ ಭೆಟ್ಟಿಯಾಗಿ,
ತುತ್ತು ತುತ್ತಿಗೆ ಶಿವ ಶಿವಾ ಎಂದು
ತುಂಬುತ್ತೇನೆ ಹಸಿದ ಹೊಟ್ಟೆ.
ಇನ್ನೂ ಸಿಗದಿದ್ದವರ ಗೋಳು ಕೇಳಿ, ಕಸವಿಸಿಗೊಂಡು
ಸಿಟ್ಟಿನಲ್ಲಿ ಅವುಡುಗಚ್ಚಿ ನಿಟ್ಟುಸಿರು ಬಿಟ್ಟಿದ್ದೇನೆ.

ಅವರಿಗೆ ಮಾತ್ರ ಗೊತ್ತು ನಿಜವಾದ ನನ್ನ ಬೆಲೆ
ನೀವೇಕೆ ಏರಿಸುತ್ತೀರಿ, ಹೊಟ್ಟೆ ತುಂಬಿದ ಮೇಲೆ?
ನನ್ನ ಮುಚ್ಚಿಟ್ಟು ಮುಗ್ಗು ನಾರಿಸಬೇಡಿ.
ದಯವಿಟ್ಟು ಎಲ್ಲರಿಗೂ ಹಂಚಿ, ಅಡ್ಡ ಬರಬೇಡಿ
ನಾನವರ ದೇವರ ಗುಡಿ

## ಓದುಪಠ್ಯ:

### ೪. ಹಸಿವು

**– ಟಿ. ಯಲ್ಲಪ್ಪ**

ನನ್ನೂರಿನ ಗುಡಿಸಲುಗಳಲ್ಲಿ
ಒಲೆಯ ಮೇಲಿನ ಗಂಜಿ
ತಪ – ಪಕ ಕುಣಿಯುತ್ತದೆ
ಹಸಿದ ಜೀವಗಳು ಆಶ್ವಾಸನೆಗಳ
ತಂಗಾಳಿಯಲ್ಲಿ ಉಸಿರಾಡುತ್ತವೆ

ಗಂಡ ನಿರ್ವೀರ್ಯನಾಗುತ್ತಾನೆ
ಹೆಂಡತಿ ಮುಗಿಲೆತ್ತರದ ಮಹಲುಗಳ ಕಡೆಗೆ
ಕತ್ತಲೆಯೊಡನೆ ಕರ್ರಗೆ ಕರಗಿ
ಕತ್ತಲಲ್ಲಿ ಕತ್ತಲಾಗುತ್ತಾಳೆ

ಮಗಳಿಗೆ ಮೊಲೆ ಮೂಡುತ್ತಿರುವಾಗಲೇ
ತಾಯಿ ಸೀರೆಯುಡಿಸುತ್ತಾಳೆ
ಹೆಂಡದಂಗಡಿಯ ಸಂದಿಗಳಲ್ಲಿ
ಹುಡುಗಿ ಕಾಣೆಯಾಗುತ್ತಾಳೆ

ಸೇಂದಿ ಸಾರಾಯಿಗಳ
ಕೈ–ಬಾಯಿಗಳಲ್ಲಿ
ಮಗಳು ಫಲವಾಗುತ್ತಾಳೆ
ಮಾಂಸದ ಪಲ್ಯವಾಗುತ್ತಾಳೆ

ಕೆನ್ನೆಯ ಮೇಲೆ
ಸಿಗರೇಟಿನ ಚುಂಬನದೊಂದಿಗೆ
ತುಟಿಯಂಚಿನ ನಗೆಯೊಂದಿಗೆ
ಹುಡುಗಿ ಹಿಂದಿರುಗುತ್ತಾಳೆ ಅನಂತರ,

ಒಲೆಯಲ್ಲಿ ಬೆಂಕಿ ಉರಿಯುತ್ತದೆ
ಮಡಕೆಯಲ್ಲಿ

ಅನ್ನದ ಅಗಳುಗಳು
ತಕಪಕ ಕುಣಿಯುತ್ತವೆ

ಬದುಕಿನ ಅಸಹಾಯಕತೆಯನ್ನರಿಯದ ಜನ
ಎರಡಕ್ಷರದ ಜ್ಞಾನಪೀಠವನ್ನಿತ್ತು
ಸನ್ಮಾನಿಸುತ್ತದೆ
ಕರುಳಿಗೆ ಕೊಳ್ಳಿಯಿಟ್ಟು ಅಲ್ಲಾಡಿಸುತ್ತದೆ.

## ಘಟಕ ೩.

# ಶೈಲಿ ವಿನ್ಯಾಸ

**ಆಶಯ:**

ಗಿರಿಗಳೆಲ್ಲ ಕೂಡಿ ಮೇರುಗಿರಿಗೆ ಸರಿಯಾಗಬಲ್ಲುದೆ ?
ತರುಗಳೆಲ್ಲ ಕೂಡಿ ಕಲ್ಪತರುವಿಗೆ ಸರಿಯಾಗಬಲ್ಲವೆ?
ಸರಿಯಿಲ್ಲ ನೋಡಾ। ನಮ್ಮ ಭಕ್ತರಿಗೆ ನರರು ಸುರರು
ಸರಿಯಿಲ್ಲ ನೋಡಾ। ಪರುಷಕ್ಕೆ ಪಾಷಾಣ ಸರಿಯೇ?
ಮರುಜವಣಿಗೆ ಔಷಧ ಸರಿಯೇ? ಇದು ಕಾರಣ
ಶಿವಭಕ್ತರ್ಗೆ ಲೋಕದವರು ಸರಿಯೆಂದರೆ ನರಕ
ತಪ್ಪದಯ್ಯಾ – ರಾಮನಾಥ

**– ಜೇಡರ ದಾಸಿಮಯ್ಯ**

## ೧. ಜಡೆ

**- ಡಾ. ಜಿ.ಎಸ್. ಶಿವರುದ್ರಪ್ಪ**

ಲಲನೆಯರ ಬೆನ್ನಿನೆಡೆ
ಹಾವಿನೊಲು ಜೋಲ್ವ ಜಡೆ
ಕಾಳಿಂದಿಯಂತಿಳಿದು, ಕೊರಳೊಡೆಗೆ ಕವಲೊಡೆದು
ಅತ್ತಿತ್ತ ಹರಿದ ಜಡೆ !
ಚೇಳ್ ಕೊಂಡಿಯಂಥ ಜಡೆ,
ಮೋಟು ಜಡೆ, ಚೋಟು ಜಡೆ,
ಚಿಕ್ಕವರ ಚಿನ್ನ ಜಡೆ !
ಎಣ್ಣೆ ಕಾಣದೆ ಹಿಣಿಲು ಹಿಣಿಲಾಗಿ ಹೆಣೆದ ಜಡೆ
ಬೆವರಿನಲಿ ಧೂಳಿನಲಿ ನೆನೆದಂಟಿಕೊಂಡಿರುವ
ಗಂಟು ಜಡೆ !
ಅಕ್ಕ ತಂಗಿಯ ಮುಡಿಯ
ಹಿಡಿದು ನಾನೆಳೆದಂಥ
ಮಲ್ಲಿಗೆಯ ಕೆಂಪು ಜಡೆ
ಕೇದಗೆ ಹೆಣೆದ ಜಡೆ
ಮಾತೃ ಮಮತಾವೃಕ್ಷ ಬಿಟ್ಟ ಬೀಳಲಿನಂತೆ
ಹರಿವ ತಾಯ ಜಡೆ !
“ಕುರುಕುಲ ಜೀವಾಕರ್ಷಣ ಪರಿಣತ”- ಆ
ಪಾಂಚಾಲಿಯ ಜಡೆ !
ಸೀತೆಯ ಕಣ್ಣೀರೊಳು ಮಿಂದ ಜಡೆ
ಓ ಓ ಈ ಜಡೆಗೆಲ್ಲಿ ಕಡೆ !

ಸಂಜೆಯಲಿ ಹಗಲು ಕೆದರುವ ಕತ್ತಲೆಯ
ಕಾಳ ಜಡೆ
ಬೆಳಗಿನಲಿ ಇರುಳು ಬಿಚ್ಚುವ ಬೆಳ್ಳನೆಯ
ಬೆಳಕು ಜಡೆ
ಒಮ್ಮೊಮ್ಮೆ ಮುಗಿಲಲ್ಲಿ ತೇಲುತ ಬರುವಂಥ
ಬೆಳ್ಳಕ್ಕಿಗಳ ಜಡೆ
ಕ್ರೌಂಚೆಗಳ ಜಡೆ
ಮರ ಮರದಿ ಬಳುಕುತಿಹ ಹೂಬಿಟ್ಟ ಬಳ್ಳಿ ಜಡೆ !

ಕಾಡು ಬಯಲಿನ ಹಸುರು ಹಸರದಲಿ ಹರಿ ಹರಿದು
ಮುನ್ನಡೆವ ಹೊಳೆಯ ಜಡೆ !
ಶ್ರೇಣಿ ಶ್ರೇಣಿಗಳಾಗಿ ಹರಿದಿರುವ ಗಿರಿಯ ಜಡೆ !
ಗಿರಿ ಶಿವನ ಶಿರದಿಂದ ಹಬ್ಬಿ ಹಸರಿಸಿನಿಂದ
ಕಾನನದ ಹಸುರು ಜಡೆ
ನಕ್ಷತ್ರಗಳ ಮುಡಿದ ನಟ್ಟಿರುಳ ನಭದ ಜಡೆ !
ಮುಂಗಾರು ಮೋಡಗಳು ದಿಕ್ಕು ದಿಕ್ಕಿಗೆ ಬಿಚ್ಚಿ
ಹರಡಿರುವ ಮಳೆಯ ಜಡೆ !
ಚಂದ್ರಚೂಡನ
ವ್ಯೋಮಕೇಶನ
ವಿಶ್ವವನೆ ವ್ಯಾಪಿಸುತ ತುಂಬಿರುವ ಜಡೆ
ಗಾನಗಳ ಕಾವ್ಯಗಳ ಶಿಲ್ಪಗಳ ಕಲೆಯ ಜಡೆ
ಎಲ್ಲವೂ ರಮ್ಯವೆಲ್ಲ !
ಜಡೆಯಾಚೆ ತಿರುಗಿಸಿದ ತಾಯ ಮುಖ ಮಾತ್ರ ಇಂದಿಗೂ
ಕಾಣದಲ್ಲ !

# ೨. ಅಕ್ಕು

**– ವೈದೇಹಿ**

ಅಕ್ಕುವಿಗೆ ದೊಡ್ಡ ಕುಂಕುಮವಿದೆ. ಆದರೆ ಗಂಡನಿಲ್ಲ.. ಕತ್ತಿನಲ್ಲಿ ಕರಿಮಣಿಯಿದೆ. ಕರಿಮಣಿಯನ್ನು ನಾಗಂದಿಗೆಯ ಮೂಲೆಯಲ್ಲಿಟ್ಟು ಸವಾರಿ ಹೊರಡುವ ರಿವಾಜೂ ಅಕ್ಕುವಿಗುಂಟು. "ಅಕ್ಕೂ, ನಿನ್ನ ಗಂಡ ಎಲ್ಲಿ?" ಎಂದು ಕೇಳಿದರೆ ಕೇಳಿದವರ ಗ್ರಹಚಾರವನ್ನೇ ಆಕೆ ಮುಗಿಸಿಕೊಡುವುದಿದೆ. ಎಲ್ಲ ಸಲವೂ ಅಲ್ಲ ಒಮ್ಮೊಮ್ಮೆ ಗುಮ್ಮಕ್ಕಿಯಂತೆ ಕುಳಿತರೂ ಕುಳಿತಳೇ, ಕೆಲವೊಮ್ಮೆ ಏನೇ ಹೇಗೇ ಕೆಣಕಿದರೂ ಕಣ್ಣು ಮೂಗು ಬಾಯಿ ಕೊಡಿಯಲ್ಲೆಲ್ಲ ಡೊಂಕು ಡೊಂಕಾಗಿ ನಗೆ ಬಿಕ್ಕುತ್ತ ತಲೆ ಕೊಡವಿಬಿಡುವ ಗುಣವೂ ಅಕ್ಕುವಿಗೆ ಇದೆ.

ಅವಳ ಕೈಯಲ್ಲಿ ಯಾವಾಗ ಕಂಡರೂ ಒಂದು "ಟುವಾಲು". ಅವಳರ್ಥದಲ್ಲಿ ಟುವಾಲು ಎಂದರೆ ಕರವಸ್ತ್ರ, ಗಂಡಸರ ಕರವಸ್ತ್ರ ಅದು ಯಾರದೆಂತ ಅವಳಲ್ಲಿ ಹೇಗೆ ಬಂದು ಸೇರಿತೆಂತ ಯಾರಿಗೂ ಗೊತ್ತಿಲ್ಲ. ಆ ಬಗ್ಗೆ ತಲೆಕೆಡಿಸಿಕೊಳ್ಳುವ ಅಗತ್ಯವೂ ಇರಲಿಲ್ಲ. ಒಟ್ಟಿನಲ್ಲಿ ಅಕ್ಕುವೆಂದರೆ ಆ ಟುವಾಲು ಸಮೇತವೇ. ಅದನ್ನು ಎಲ್ಲಿಯೋ ಇಟ್ಟು, ಎಲ್ಲಿಯೋ ಕಳೆದು, ಮತ್ತೆ ಹುಡುಕುತ್ತಾ ಇರುವುದಕ್ಕಿಂತ ದೊಡ್ಡ ಕೆಲಸವನ್ನು ಆಕೆ ಮಾಡುವುದಿಲ್ಲ. ಒಳಗಿನ ಕೆಲಸವನ್ನು ನರಿನಾಯಿ ತಿನ್ನಲಿ ಬೇಕಾದರೆ!. ಆಕೆ ಟುವಾಲು ಹುಡುಕುತ್ತಾ ಮೂಲೆ ಸಂದಿ ಹರಡುತ್ತಲೇ ಇರುತ್ತಾಳೆ.

ಅಜ್ಜಯ್ಯನ ಮನೆಯಲ್ಲಿ ಯಾರೂ ಸ್ವತಂತ್ರರಲ್ಲ. ಸ್ವಲ್ಪ ಸ್ವರ ಇರುವುದಾದರೆ ವಾಸು ಚಿಕ್ಕಪ್ಪಯ್ಯನಿಗೆ! ಮಾತಾಡಲು ಒಂಚೂರು ಧೈರ್ಯ ಮಾಡುವುದಾದರೆ ಅವನ ಹೆಂಡತಿ ಭಾನು ಚಿಕ್ಕಿ, ಯಾರಿಗೂ ಹೆದರದವರೆಂದರೆ ದೊಡ್ಡಜ್ಜನ ತಂಗಿ 'ದೊಡ್ಡತ್ತೆ'. ಎಲ್ಲರಿಗೂ ದೊಡ್ಡತ್ತೆ. ಯಾವ ನಿರ್ಬಂಧವೂ ಇಲ್ಲದಿರುವವಳೆಂದರೆ ಅಕ್ಕು ಪೊಟ್ಟು. ಹೇಗೆ ಬೇಕಾದರೂ ತಿರುಗಿಕೊಂಡಿರಲಿ, ಹೊತ್ತು ಕಳೆಯಬೇಕಲ್ಲ ಎಂಬ ಮಾಫಿ ಪಡೆದವಳು. ಪೊಟ್ಟು ಎಂದರೆ ಮುಂಚಿನಿಂದಲೂ ಪೊಟ್ಟೆಂತ ಅಲ್ಲ. ಮನೆಯಲ್ಲಿ ಉಳಿದವರೆಲ್ಲ ಮಜ್ಜಿಗೆ ಕಡೆಯಲಿಕ್ಕೆ, ಅಡಿಗೆಗೆ ಉಪ್ಪು ಹುಳಿ ಹಾಕಲಿಕ್ಕೆ, ನೀರೆತ್ತಲಿಕ್ಕೆ, ಹೊಸ ಸೀರೆ ಚಿನ್ನ ತೊಟ್ಟು ಮದುವೆ ಉಪನಯನ ಇತ್ಯಾದಿಗಳಿಗೆ ಹೋಗಿ ಬರಲಿಕ್ಕೆ. ಗಂಡಸರು ವ್ಯವಹಾರ ನೋಡಿ ಅಜ್ಜಯ್ಯನಿಗೆ ವರದಿ ಒಪ್ಪಿಸಲಿಕ್ಕೆ. ಆ ಮನೆಯ ಕಂಬಗಳಂತೆ, ತಲೆಯ ಮೇಲೆ ಭಾರವಿದ್ದರೂ ತುಟಿ ಎರಡು ಮಾಡರು.

ಹೀಗೆ ನಿರ್ಬಂಧವಿರದ ಅಕ್ಕು ಯಾರ ಮನೆ ಊಟವನ್ನೂ ಬಿಟ್ಟವಳಲ್ಲ. ಬಲಬದಿ ನಗ್ಗಾದಂತೆ ಕಾಣುವ ಮುಖದ, ಒಟ್ಟಾರೆ ಅತ್ತ ಇತ್ತ ಚಲಿಸುತ್ತಲೇ ಇರುವ ಮಂದಕಾಂತಿಯ ಕಣ್ಣುಗಳ, ತುಟಿ ಮೀರಿ ಬಂದ ಮುಂಬ್ಹಲ್ಲುಗಳನ್ನು ಸದಾ ಮುಚ್ಚಿ ಕೊಳ್ಳುವ ಪ್ರಯತ್ನದಲ್ಲಿರುವ ತುಟಿಗಳ, ಕೇವಲ ನಾಲ್ಕೂ ಮುಕ್ಕಾಲು ಅಡಿ ಉದ್ದದ ಅಕ್ಕು ಮೂಗಿಗೆ ಪುಡಿ ತುಂಬಿಸಿ, ಟುವಾಲನ್ನು ಹೊಳ್ಳೆಗಳ ಅಡ್ಡಕ್ಕೆ ಆಚೆ ಈಚೆ ಸರಬರವೆಂತೆ ಗರಗಸದಂತೆ ಹರಿದಾಡಿಸಿ ಮುಖದ ಸುತ್ತ ಒಮ್ಮೆ ಬಲವಾಗಿ ಕೈಯಾಡಿಸಿ, ಸೀರೆಗೊರೆಸಿ, ರಸ್ತೆ ಗುಡಿಸುವ ಸೆರಗು ಹಾಕಿ ಸೀರೆಯುಟ್ಟು ಟುವಾಲು ಬೀಸುತ್ತ ಹೊರಟಳೆಂದರೆ "ಹಾಸುವಾ ಹಾಸಣಿಗೆ, ಬೀಸುವಾ ಬೀಸಣಿಗೆ, ಊಟ ಎಲ್ಲಿವತ್ತು?"– ಎಂದು ಒಗಟು ಮಾತಾಡುವವರಿಗೆ ಕಡಿಮೆಯಿಲ್ಲ. "ಪತಾಕೆ ಎಲ್ಲಿಗೆ ಹೊರಟಿದೆ?" ಎಂದು ಅವಳ ಹತ್ತಿರವೇ ಕೇಳುವರೆ ಮನಸ್ಸಾದರೆ ಉತ್ತರ

ಕೊಟ್ಟಾಳು. ಇಲ್ಲವಾದರೆ "ನಿಮ್ಮಜ್ಜನ್ ಶ್ರಾದ್ಧಕ್ಕೆ" ಎಂದು ಮುಖಕ್ಕೆ ಹೊಡೆದಂತೆ ಹೇಳಿ ಜಕಣಿಯಂತೆ ತುದಿಗಾಲಿನಲ್ಲಿ ಹಾರಿ ನಡೆದಾಳು.

ಊಟಕ್ಕೆ ಕುಳಿತಳೆಂದರೆ ಈಚಿನ ಪರಿವೆ ಇಲ್ಲದೆ, ತಗ್ಗಿಸಿದ ತಲೆ ಎತ್ತದೆ, ಭರಾರೆಂದು ಸುರಿದು ಉಣ್ಣುವುದೇ. ಬಡಿಸಲು ಬಂದ ಭಕ್ಷ್ಯಗಳನ್ನು ಎಡಗೈಯಲ್ಲಿ ಹಿಡಿದು, ಅದೇ ಪುಡಿವಾಸನೆಯ ಟುವಾಲಿನಲ್ಲಿ ಸುತ್ತಿಕೊಂಡು ಮನೆಗೆ ಬಂದು ಚಾವಡಿ ಜಗಲಿಯ ಮೂಲೆಯಲ್ಲಿ ಒಬ್ಬಳೇ ಕುಳಿತು, ಕಾಗೆಗೆ ಸಹ ಒಂದು ತುತ್ತು ಬಿಸಾಡದೆ, ಗುಳ್ಮಾಯ ಸ್ವಾಹಾ ಮಾಡುವುದರಲ್ಲಿ ಭಾರೀ ಹುಶಾರು.

ಅಕ್ಕು ಬಿಡದೆ ಹೋಗುವ ಊಟಗಳೆಂದರೆ ಬಸುರಿ-ಬಯಕೆಯ ಊಟ ಮತ್ತು ನಾಮಕರಣದ್ದು. ಹಾಗೆ ಹೋದವಳು ಮಲ್ಲಿಗೆ, ಅಬ್ಬಲಿಗೆ, ಸೇವಂತಿಗೆ, ಇರುವಂತಿಗೆ ಇತ್ಯಾದಿ ಏಳು ಹೂಗಳ ಜಲ್ಲಿ ಬಿಡಿಸಿಕೊಂಡು "ಭಾರದ ಮೇಲೆ ಭಾರ ಹೇರಿದವರಂತೆ ಕುಳಿತ ಬಸುರಿಯ ಬಳಿಯಿಂದ ಆಚೀಚೆ ಹಂದಾಡಲಿಕ್ಕಿಲ್ಲ. ಗುರುತಿಲ್ಲದವರೋ, ಹುಡುಗಿಯ ಗಂಡನ ಮನೆಯವರೋ, ಮರುಳ್ಳಿಯಂತೆ ಕುಳಿತ ಅಕ್ಕುವನ್ನು ಕಂಡು ಇದ್ಯಾರ್ ಈ ಬಿಕ್ರ್ ಮಂಡೆ ದೇವಮ್ಮ! ಅಲ್ಲಿಂದ ಏಳ್ಸಿ ಕಾಂಬ"- ಎಂದರೂ, ಮನೆಯವರು ಬಂದು ಹೆದಹೆದರುತ್ತಾ "ಅಕ್ಕು ಬಾ, ಈಚೆ ಕೂಕೊ"ಎಂದರೂ ಅಕ್ಕುವಿನ ಕಿವಿ ಅದಕ್ಕೆಲ್ಲಾ ಪೂರ್ತಿ ಕೆಪ್ಪೇ. ನಾಮಕರಣಕ್ಕೆ ಹೋದರೂ ಅಷ್ಟೇ, ಮಗುವಿನ ತೊಟ್ಟಿಲ ಹಗ್ಗ ಹಿಡಿದು ಬೀಸುವುದನ್ನು ಆಕೆ ಬಿಡುವುದು ವಾಪಾಸು ಮನೆಗೆ ಬರುವಾಗಲೇ. ಬಂದ ನೆಂಟರೆಲ್ಲ ಹೋದ ಮೇಲೆ ಎರಡು ಲಾಲಿ ಹಾಡಿದರೂ ಹಾಡಿದಳೇ, ಆದರೆ ಅವಳೆಷ್ಟೇ ಕತ್ತೆತ್ತಿ ಹಾಡಲಿ ಅವರಿವರು ನಗೆ ಸಿಮಿಸುತ್ತ, 'ಅಕ್ಕೊ, ನಿನ್ ಕೋಗಿಲೆ ಸ್ವರ ಕೇಂಬುಕೆ ಕಾಕಿ ಹಿಂಡೇ ಬಂದ್ ಕಂಡಿಯಾಗ್ ಕೂತಿತ್ತ್ ಕಾಣ್!" ಎನ್ನದಿದ್ದರೆ ರಾತ್ರಿ ಅವರಿಗೆ ನಿದ್ದೆ ಬೀಳುಲಿಕ್ಕಿಲ್ಲ. ಹೀಗಿರುವಾಗಲೇ ಸಿರಿಯತ್ತೆಯ ಮದುವೆಯಾದದ್ದು, ಮದುವೆಯ ದಿನ ನಡೆದ ಒಂದು ವಿಷಯ ಸಿರಿಯತ್ತೆಯ ಬಾಯಿಂದಲೇ ಕೇಳಬೇಕು.

"ದಿಬ್ಣ ಬಂದಾಯಿತ್, ನನ್ನತ್ರ ಯಾರೂ ಇರ್ಲಿಲ್ಲೆ. ಎಲ್ರೂ ಚಪ್ರಕ್ಕೋಡಿದ್ರ್, ನಂಗೊನ್ನಮೂನೆ ಹೆದ್ರಿಕೆ ಆದ್ಧಂಗಿದ್ದಿತ್, ಅಷ್ಟೊತ್ತಿಗೆ ಅಕ್ಕು ಬಂದ್ಲು "ಓ ಅಕ್ಕು!" ಎಂದೆ. ಅಯ್ಯಬ್ಬ ಅನ್ಸಿ. 'ಹೂಂ ಹೂಂ, ಅಕ್ಕುವಾ ಅವ್ಳ್ ನೆರಳ! ಹರಪಿದ ಹಾಂಗೆ ಉತ್ರ ಕೊಟ್ಟ ಅಕ್ಕು, ಸ್ವಲ್ಪ ದೂರ ನಿಂತಿದ್ದೆ. ನನ್ನನ್ನ ದುರುದುರು ಕಂಡ್ಲ್ "ಅಷ್ಟೇ ಚಂದ ಯಾಕ್ ಮಾಡ್ಕಂಕ್?" ಅಂತ್ಹೇಳಿ ಕೇಂಡ್ಲ್ ನಾ ಮಾತಾಡಿಲ್ಲೆ. ಅವ ಸ್ವರ ಸೀಳ್ ಬಿಟ್ಹಾಂಗಿದ್ದಿತ್, ಅವಳನ್ನೇ ಕಾಂತ ಕೂತೆ. 'ಇಲ್ಬಾ' ಅಂದ್ಲ್. 'ಯಾಕೆ?' ಎಂದೆ. 'ಬಾ ಅಂದ್ರೆ ಬರ್ಕ್' ಅಂದ್ಲ್. ನಂಗೆ ಯಾರನ್ನಾದ್ರೂ ಕರೀಕಂತ ಕಂಡ್ತ್, ಬೇಡ ಅಂತೇಳಿಯೂ ಕಂಡ್ತ್ "ಅಕ್ಕೊ, ಹುಶಾರಿಲ್ಲ?" ಎಂದೆ. ಉತ್ರ ಕೊಡ್ದೆ ಸೀದ ನುಗ್ಗಿ ಬಂದದ್ದೇ ನೆತ್ತಿವರೆಗೆ ಮುಡ್ದ್ ಹೂವನ್ನು ಕಣ್ಮುಚ್ಚಿ ತೆರ್ಯುದ್ರೊಳ್ಗೆ ಹರ್ದ್ ತೆಗ್ದ್ ಸಾಕಿಷ್ಟ್ ಚಂದ! ನಿನ್ ಚಂದ ಕಂಡ್ ಮದ್ವೆ ಆದವ ಖಂಡಿತ ಬಾಳ್ಸುದಿಲ್ಲೆ. ಗೋಡೆ ಮೇಲೆ ಬರ್ದಿಟ್ಕೋ' ಅಂದ್ಲ್, ಸತ್ಯಕ್ಕೂ ಹೇಳ್ತೆ, ನಂಗ್ ಉಸ್ರಿರ್ಲಿಲ್ಲೆ. ಗಿಡ್ಡ ಇದ್ರೂ ಒಂದ್ರೀತಿ ಚಂದ ಇದ್ದಿದ್ಲ್ ಅಕ್ಕು! ಈಗ ಮಾತ್ರ ಬ್ರಹ್ಮರಾಕ್ಷಸಿ ಹಾಂಗೇ ಕಂಡ್ಲ್. ಒಂದೇ ಕ್ಷಣ, ಮತ್ತ್ ಕಾಂಬ್ಸಮಿಗೆ ಅಕ್ಕುವೆ. ಮನ್ಸಿಗೆ ಭಾರೀ ಬೇಜಾರಾಯ್ತ್, ಹೂವ್ ಹರ್ದದಕ್ಕಲ್ಲ, ಹೀಲಿಗಟ್ಟಿದ್ಹಾಂಗಿನ ಅವ್ಳ್ ಮುಖ ಕಂಡ್, 'ಎಂಥ ಸೆಕೆಯ!' ಅಂತೆಳೀ ಕೈಯಿಂದ್ಲೇ ಗಾಳಿ ಬೀಸ್ಕಂತ, ಇನ್ನೊಂದು ಕೈಯಿಂದ ಟುವಾಲು ಹಾಕಿ ತಿಕ್ಕಿ ಮುಖ ಒರ್ಸ್‌ಕಂತ ಹೊರ್ಗ್ ಹೋದ್ದ್ ಅಕ್ಕು. ಈ ಸುದ್ದಿ ವಾಸುಗೆ ಹೇಳಿರ? ಸುಮ್ನೆ ಬಿಡ್ತಿದ್ನ? ಜಪ್ಪಿ ಕೋಣೆಗೆ ಹಾಕಿ ಚಿಣಕ ಹಾಕ್ತಿದ್ದ. ನನ್ನ ಮದ್ವೆ ಚಪ್ರದೊಳ್ಗೆ ನಾ ಚಂದ ನಾ ಚಂದ ಅಂದ್ಕಂತ ಬೀಗ್ಕಂಡ್ ಕೂತವ್ರ್ ಮಧ್ಯ ಅಕ್ಕು

ಬಿಸಾತಿಲ್ದೆ ಮೂಗಿಗ್ ಟುವಾಲು ಹಾಕಿ ತಿರ್ಸುದನ್ನ ಹೇಂಗೆ ಕಾಂಬುಕಾತಿತ್? ದೊಡ್ಡತ್ತೆ ಬಂದವ್ಳ್ ಮದುಮಗಳು. ಅಂತೂ ಕಾಣ್ದೆ, ಬಾಯಿಗ್ ಬಂದ್ಹಾಂಗ್ ಬೈಯ್ದ್, ಪುನಾ ತಲೆ ಬಾಚಿ ಹೂವ್ ಮುಡ್ಸಿದ್ಲ್"

ಸಿರಿಯತ್ತೆ ಮದುವೆಯಾಗಿ ಹೋದ ದಿನ ಅಕ್ಕುವಿನದು ಗಲಾಟೆಯೋ ಗಲಾಟೆ. "ನನ್ ಗಂಡ ಎಲ್ಲಿ ಸತ್ತ? ಈ ಕ್ಷಣ ತಂದುಕೊಡಿ!" ಎಂಬ ಸೊಲ್ಲು ಬಿಟ್ಟರೆ ಬೇರೆ ಇಲ್ಲ. ಗಾಳಿಗೆ, ಆಕಾಶಕ್ಕೆ ಟುವಾಲು ಹಾರಿಸಿ ಹಾರಿಸಿ ಕೇಳಿದಳು. ವಾಸು ಚಿಕ್ಕಪ್ಪಯ್ಯ ಹಲ್ಲಿನ ಚಡಿಗೆ ಕಡ್ಡಿ ಹಾಕುತ್ತಾ ನಿಂತಿದ್ದವ "ಆಗ ಕಾಣಲ್ಲಿ, ಓ ತಟ್ಟಿಯ ಚಡಿಯೊಳ್ಗೆ' ಎಂದು ಇತ್ತಿನ ಧಾತಿಲ್ಲದೆ ಮಲಗಿ ಗೊರೆಯುತ್ತಿದ್ದ ಅಡುಗೆಯ ಬಾಬು ಭಟ್ಟನನ್ನು ತೋರಿಸಿದ. ಭಾನು ಚಿಕ್ಕಿ ಒಂದು ಗೊಂಬೆ ತಂದು ಅವಳ ಎದುರು ಬಿಸಾಡಿ "ನಿನ್ ಗಂಡ ಯಾವಾಗ್ ಬಂದಿದ್ನೋ ಏನೋ, ಒಬ್ರೂ ಕಂಡವ್ರಿಲ್ಲೆ. ಅಕ್ಕೂ ಅಕ್ಕೂ ಅಂತೆಳಿ ಸೋರ್ಗ್ಲೊಳ್ಳೆ ಅರ್ಚಕಂತಿದ್ದ, ಕರ್ಕಂಡ್ ಬಂದೆ" ಎಂದರೂ ಅವಳ ಆರ್ಭಟ ನಿಲ್ಲಲಿಲ್ಲ. ಆರ್ಭಟ ಹೆಚ್ಚಿದಷ್ಟೂ ನಗೆಯ ಅಬ್ಬರವೂ ಹೆಚ್ಚಿತು. ಸತ್ಯಮಾಣಿಯೆಂಬ ಮೂರು ಗೇಣುದ್ದದ ಹುಡುಗ ತಡೆಯದೆ ಓಡಿಹೋಗಿ ಬಾಬು ಭಟ್ಟನನ್ನು ಬಡಿಬಡಿದು ಎಬ್ಬಿಸಿ, "ಬಾಬುಭಟ್ಟ, ಬಾಬು ಭಟ್ಟ, ನೀನ್ ಅಕ್ಕು ಗಂಡ ಅಂಬ್ರ!" ಅಂತ ನಾಲಿಗೆ ತುದಿ ಕಚ್ಚಿಕೊಂಡು ಟಸಿಲ್ಲೆಂದು ನಕ್ಕಿತು. "ಅಯ್ಯಯ್ಯಬ್ಬ, ಅವಳನ್ ಕಟ್ಕಂಡ್ರ? ನನ್ ಕೈಕಾಲ್ ಸವರಿ, ಒಲೆಗ್ ತುಂಬ್ಯಾಳ್ ಮೂರ್ ಮಂಡಕ್ಕಿ ಕಾಳಿಗೆ ಕಾರ್ಕಂಡ್ ತಿಂದ್ರೂ ಆಶ್ಚರ್ಯ ಇತ್ತಾ?" ಎಂದ ಬಾಬು ಭಟ್ಟ, ನಗೆಗೆ ಅಮಲೇರುತ್ತಿತ್ತು. ಅಷ್ಟೊತ್ತಿಗೆ ಗೋಡೆಗೆ ಬೆನ್ನು ಅನಿಸಿ ಅಡಿಕೆ ಹೋಳು ಕತ್ತರಿಸುತ್ತ ಇದ್ದ ತೊಳೆದ ಕೆಂಡದಂತಹ ತಮ್ಮಣ್ಣಯ್ಯ ಎಂಬವ, ಇಷ್ಟರವರೆಗೆ ಸುಮ್ಮನೆ ನಾಟಕ ನೋಡುತ್ತಿದ್ದವ, ಎದ್ದು ಬಂದ. ಯಕ್ಷಗಾನದಲ್ಲಿ ಸ್ತ್ರೀ ಪಾತ್ರ ಮಾಡುವ ಆತ ನಡು ಬಳುಕಿಸುತ್ತಾ ಕೈ ಬೀಸಿ ಎದೆಗೆ ಹೊಡೆದುಕೊಳ್ಳುತ್ತಾ "ಪ್ರಿಯೇ, ನಿನ್ನ ಗಂಡನೆಂಬುವ ನಾನು ಬಂದಿದ್ದೇನೆ. ನನ್ನಿಂದೇನಾಗಬೇಕು" ಎಂದು ನಾಟಕೀಯವಾಗಿ ಕೇಳುತ್ತ: ಎಲ್ಲರ ಮುಖ ನೋಡಿ ಮುಗುಳು ನಗುತ್ತಿರಲು ಇದ್ದಕ್ಕಿದ್ದಂತೆ ಹಾರಿಬಿದ್ದ ಅಕ್ಕು ಸರಕ್ಕೆಂತ ಏರಿ ಬಂದು ಅವನನ್ನು ಕಚ್ಚಿಬಿಟ್ಟಿದ್ದಳು. ಪಾಪದವರಂತೆ ಒಳಗೆ ಹೋಗಿ ಮೂಲೆಯಲ್ಲಿಟ್ಟಿದ್ದ ಕೊಡಪಾನದಿಂದ ಒಂದು ಚೊಂಬು ನೀರು ಬಗ್ಗಿಸಿಕೊಂಡು ಗಟಗಟ ಕುಡಿದು.

"ಏ ತಮ್ಮಣ್ಣಯ್ಯ, ಬಾಲ ಮಡ್ಚ್‌ಕಂಡ್ ಆಚೆಗ್ ಹೋಗ್, ನಿನ್ ಕೆಲ್ಸ ಕಾಣ್, ನನ್ ಸುದ್ದಿಗ್ ಬತ್ಯಾ? ನಿನ್ ಹೆಂಡ್ತಿ ಮೊನ್ನೆ ಯಾರೊಟ್ಟಿಗ್ ಚಾಂಚ್ಕಂಡ್ ಮನ್ಕಂಡಿದ್ಲ್ ಅಂತೆಳಿ ಹೇಳುದಾ ಈಗ?" ಎಂದು ದೊಡ್ಡ ಸ್ವರದಲ್ಲಿ ಕತ್ತಿ ಬೀಸಿದಂತೆ ಹೇಳುತ್ತಾ ಕೋಣೆಗೆ ಹೋಗಿ ಬಾಗಿಲು ಹಾಕಿಕೊಂಡು ಬಿಟ್ಟಳು. ಎಲ್ಲರ ನಗೆ ಸುತ್ತುವರಿದು ತಮ್ಮಣ್ಣಯ್ಯನ ನಗೆಯನ್ನು ನಂದಿಸಿ ಬಿಟ್ಟಿತು.

ಕೂಡಲೆ ವಾಸು ಚಿಕಪ್ಪಯ್ಯ ಇಲ್ಲಿ ಬಿಡಿ ತಮ್ಮಣ್ಣಯ್ಯ, ಅದ್ಕೆ ಬುದ್ದಿ ಇಲ್ಲೆ ಅಂತೆಳಿ ಎಲ್ಲರಿಗೂ ಗೊತ್ತಿಲ್ಯ? ಬೇಜಾರು ಮಾಡ್ಕಣ್ಬೇಡಿ" ಎಂದು ಸಮಾಧಾನ ಮಾಡಿದ. ಒಂದು ಕಾಲು ಮಡಚಿ, ಕಾಲು ಗಂಟಿಗೆ ತಲೆಯೂರಿ ಗಲಾಟೆ ನೋಡುತ್ತ ನಗುತ್ತಿದ್ದ ತಮ್ಮಣ್ಣಯ್ಯನ ಹೆಂಡತಿ ಅಳು ಒತ್ತಿಟ್ಟುಕೊಂಡವಳಂತೆ ಸೆರಗನ್ನು ಬಾಯಿಗೆ ಒತ್ತಿಟ್ಟುಕೊಂಡು ಒಳಗೋಡಿದಳು. ವಾಸು ಚಿಕ್ಕಪ್ಪಯ್ಯ "ಏ ಭಾನು, ಅವ್ಳಿಗೆ ಸಮಾಧಾನ ಮಾಡು ಪಾಪ. ಇದರ ದೆಸೆಯಿಂದ ಮಾರ್ಯಾದೆ ಇದ್ದವ್ರ್ ನೇಣ್ ಹಾಕಂಕ್!" ಎಂದ.

"ಅಲ್ಲಿ ಇಲ್ಲಿ ತಿರ್ಗಿ ತಿರ್ಗಿ ಇತ್ತಿಲ್ಲಾಯಿ ಬರೀ ಹಡೆ ಮಾತ್ ಕಲ್ತಿತ್" ಎಂದು ಚಿಂತಿಸಿದ.

ಹಾಗೆ ಬಾಗಿಲು ಹಾಕಿಕೊಂಡು ಮಲಗಿದ ಅಕ್ಕು ಎದ್ದದ್ದು ಮಾರನೆಯ ದಿನ ಗಂಟಿ ಮೇಯಿಸುವವ ಬಂದು ಗಂಟೆ ಹೊಡೆದುಕೊಂಡು ಹೋದ ಮೇಲೆಯೇ. "ಅದನ್ ತಂಡ್ಬೇಡಿ, ಅದ್ರಷ್ಟಕ್ ಬಿಟ್ಟಿಡಿ" ಎಂದರೂ ತಡೆಯದೆ ಅಂತಣ್ಣನೆಂಬವ "ಕಡೆಗೆ ಎಂತದ ಅಕ್ಕು? ನಿನ್ ಗಂಡ ಸಿಕ್ಕಿದ್ನ ಎಂತ ಕತೆ?" ಎನ್ನಲು "ಅವನ್ನ ಹೂಳಿಬಂದೆ" ಎಂದಳು ಅಕ್ಕು. ಮುಖದಲ್ಲಿ ನಿದ್ದೆಗೇಡಿತನದ ವಿಕಾರವಿತ್ತು. ಈಗಷ್ಟೇ ಹೂಳಿ ಕೈಕಾಲು ತೊಳೆದುಕೊಂಡು ಬಂದವರಂತಿತ್ತು. ಹಂಗಾರೆ ನಿನ್ ಮಕ್ಳಗತಿ!" ಎಂದರು ಯಾರೋ, "ಮಿಂಡ ಇಪ್ದ್ ಯಾವ್ ಕರ್ಮಕ್ ಮತ್ತೆ? ಕಂಡ್ಕಂತ" ಎಂದು ಮಾತು ಉಗಿದಳು."ಆ ಮಿಂಡನ್ ಗತಿ? ರಾಮಾ ರಾಮಾ!" ಎಂದು ಯಾರೋ ಪಿಸುಗುಟ್ಟಿ ನಗೆ ತಿರುಗಿಸಿದ್ದು ಅವಳಿಗೆ ಕೇಳಿಸದಂತೆ ಕಾಣಲಿಲ್ಲ.

ದುರ್ದುರ್ಗಡಿಯಂತೆ ಕೆದರಿದ ತಲೆ, ಕುಂಕುಮದೊಂದಿಗೆ ಕಂಬಕ್ಕೊರಗಿ ಕುಳಿತಿದ್ದ ಅಕ್ಕುವನ್ನು ಕಂಡು ದೊಡ್ಡತ್ತೆ ಮೆಟ್ಟುಗತ್ತಿಯ ಮೇಲೆ ಕುಳಿತಿದ್ದಂತೆಯೇ ಓಲಾಡಿದರು. ಕೂತಲ್ಲಿ ನಿಂತಲ್ಲಿ ಓಲಾಡುತ್ತಾ ಹಾಡು ಕಟ್ಟುವ ದೊಡ್ಡತ್ತೆ ಹಂಬೆ ಕತ್ತರಿಸುತ್ತಾ ಇದ್ದರು. ಗಾಲಿ ಗಾಲಿ ಮಾಡಿ ಕತ್ತರಿಸುತ್ತಾ ನಾರನ್ನು ಬೆರಳಿಗೆ ಸುತ್ತಿಕೊಳ್ಳುತ್ತಾ,

"ಅಕ್ಕು ಕುಂಕುಮ ಚಂದ! ಅಕ್ಕು ಗುಂಗುರು ಚಂದ! ಅಕ್ಕುವೇ ಚಂದ ಲೋಕಕ್ಕೆ" ಎಂದು ರಾಗವೆಳೆದರು. ದಾರಿ ಮೇಲೆ ಮೇಯುತ್ತಿದ್ದ ಗಂಡನನ್ನು ಜುಟ್ಟು ಹಿಡಿದು ಮನೆಗೆ ತಂದು ಆಳಿ ಕಡೆಗೂ ಅವನನ್ನು ಕಳೆದುಕೊಂಡು "ಇದ್ದರೆ ಮಾ ಕಷ್ಟ ಇದ್ದಿತ್. ಹೋದದ್ದೇ ಪರಮ ಸುಖ ಆಯ್ತ್" ಎಂದ ದೊಡ್ಡತ್ತೆ ಅಕ್ಕುವನ್ನು ಕೆಣಕುತ್ತ, ಹಸಿರುವಾಣಿ ಕತ್ತರಿಸುತ್ತ, ಅಶನಾರ್ಥ ಪಡೆಯುತ್ತ ಅರ್ವತ್ತು ಸಮೀಪಿಸುತ್ತಿದ್ದರು. ಅಟ್ಟೆಕಾಲಿನ ದೊಡ್ಡತ್ತೆ ಕುಳಿತರೆ ಸರಿ, ನಿಂತರೆ ಬಗ್ಗು ಬೆನ್ನು.

ಅವರ ಹಾಡು ಕೇಳಿದ ಅಕ್ಕು ಮೂಗಿನ ಕೋಲಿಗೆ ಕೈಯಿಟ್ಟು ಸೊರಕ್ಕೆಂತ ಸಿಂಬಳ ತೆಗೆದಳು. ಸೆರಿಗಿಗೆ ಕೈ ಒರೆಸಿಕೊಂಡು "ನನ್ ಟುವಾಲೆಲ್ಲಿ?" ಎಂದಳು. "ನಾ ಬೆಳಗಾತೆದ್ ಕಾಂಬ್ಸಮಿಗೆ ಗೇಟ್ ದಾಟಿ ಹೋತಿತ್. ಎಲ್ಲಿಗ್ಹೋತ್ ಅಂತೆಳಿ ಕೇಂಡ್ರೆ ಮಂಜ್ರ್ ಹೋಟ್ಲಗೆ ಕಾಫಿ ಕುಡಿಯೂಕೆ ಅನತ್" ಎಂದಿತು ಸತ್ಯ ಮಾಣಿ. ಹೇಳಿದ್ದೇ ಕುಂಡೆಗೆ ಕಾಲು ಕೊಟ್ಟು ಓಡಿತು. ಅಕ್ಕು ಬೆರೆಸಿಕೊಂಡು ಹೋಗದೆ ಕುಳಿತಲ್ಲೇ ನಕ್ಕಳು. ನಕ್ಕು ಪೂರೈಸಿದ ಮೇಲೆ ಒಮ್ಮೆ ಮೂಗೆಳೆದುಕೊಂಡು ದೊಡ್ಡತ್ತೆಯತ್ತ ತಿರುಗಿ "ಅಟ್ಟೇಕಾಲಿನ ಸುಬ್ಬಿ, ನಿನ್ ಬೆನ್ನನ್ ಬಿಲ್ ಮಾಡಿ ಕಂಕುಳಿಗೇರ್ಸ್‌ಕಂತೆ ಕಾಣೀಗ" ಎಂದಳು.

"ಯೇ ಪುಣ್ಯಾತ್ಗಿತ್ತಿ, ನನ್ ಗಂಡ ಸತ್ ನರ್ಕಕ್ಕೆ ಹೋಯಾಯ್ತ್. ನಾ ಇಪ್ಪಲ್ಲಿವರೆಗಾರೂ ಗಟ್ಟಿ ಇರ್ತೆ. ನಂಗೊಂದ್ ಯೆಂತ ಮಾಡ್ಬೇಡ" ಎಂದು ಸುಳ್ಳು ಶರಣಾಗತಿಯ ದನಿಯಲ್ಲಿ ಹೇಳುತ್ತ "ಪಾಪ" ಎಂದು ತನ್ನೊಳಗೇ ಹೇಳಿದರು. ದೊಡ್ಡತ್ತೆ "ಯಾಕ್ ಪಾಪ? ನಾಯೆಂತ ಮಾಡ್ದೆ? ನಿನ್ಹಾಂಗೆ ನಾನೇನ್ ಗಂಡ ಸತ್ ಮುಂಡೆ ಅಲ್ಲ, ನನ್ ಗಂಡ ಬಾಸಾಯಿ ತಿಂಬುಕೆ ದೇಶಾಂತರ ಹೋದ ಅಂತೆಳಿ ನಾ ಪಾಪ್ವ? ಮೈ ಮೇಲ್ ಬಂದ್ ಅಡ್ಡದ್ಮನೆ ತಿಮ್ಮಪ್ಪಯ್ಯನ್ ಹೊಂಡಕ್ಕ್ ದೂಡಿ ಹಾಕವ್ಳ್' ನಾನ್, ಕೇಣ್ ಕೇಣ್ಲೇ ಗಾಡ್ಮಿಣೀ!" – ಆಕೆ ಮತ್ತೆ ಏನೇನೆಲ್ಲ ಹೇಳುತ್ತಿದ್ದಳೋ, ದೊಡ್ಡಜ್ಜಯ್ಯ ಬಂದರು.
ಅವರ ಉಸಿರಿನ, ಕೋಲಿನ ಪರಾಕು ಕೇಳಿಯೇ ಮುಕ್ಕಾಲು ಜನ ದಿಕ್ಕಾಪಾಲಾದರು. "ಯೇ ವಾಸು!" – ವಾಸು ಚಿಕ್ಕಪ್ಪಯ್ಯ ಹನುಮಂತನಂತೆ ಹಾರಿ ಬಂದ, "ತಕೋ, ನಾಲ್ಕ ಹಾಕದ್ಕೆ ಪಿತ್ಥ ಇಳ್ಸಿಕೊಡ್"

ದೊಡ್ಡಜ್ಜಯ್ಯ ಅಷ್ಟು ಹೇಳಿದ್ದೇ ಮೈಮೇಲೆ ಬಾಸುಂಡೆ ಬಿದ್ದೇಬಿಟ್ಟಿತು ಎಂಬಂತೆ "ಅಯ್ಯಯ್ಯೋ, ನನ್ನನ್ ತೆಗೀತ್ರೋ" ಎನ್ನುತ್ತ ಅಕ್ಕು ದಿಡುಗುಟ್ಟಿಕೊಂಡು ಓಡಿ ಮೂಲೆ ಕೋಣೆಯಲ್ಲಿ ಬಾಗಿಲು ಹಾಕಿಕೊಂಡಳು.

ಸಿರಿಯತ್ತೆಯ ಖಾಸಾ ಅಕ್ಕ ಅಕ್ಕು. ಅವಳು ಸಿರಿಯತ್ತೆಗೂ ಅಕ್ಕುವೇ. ಈಗ ಹುಟ್ಟಿದ ಮಗುವೂ ಅವಳನ್ನು ಅಕ್ಕು ಎಂದು ಕರೆದೀತೇ ಹೊರತು ಸಂಬಂಧದ ಮರೆ ಹಿಡಿಯಲಾರದು. ಅಕ್ಕುವಿಗೂ ಸಿರಿಯತ್ತೆಗೂ ಮಧ್ಯೆ ತುಂಬ ವರ್ಷಗಳ ಅಂತರವಿತ್ತೇನೋ. ಆದರೆ ಸಿರಿಯತ್ತೆಗಿಂತ ಅಕ್ಕುವೇ ಎಳೆಯವಳಂತೆ ಕಾಣುತ್ತಿದ್ದಳು. ಸಿರಿಯತ್ತೆ ಹೇಳುವಂತೆ ತನಗೆ ಬುದ್ಧಿ ತಿಳಿಯುವಾಗ ಅಕ್ಕುವಿಗೆ ಹೀಗೆ ಆಗಿಯಾಗಿತ್ತು. ಸಿರಿಯತ್ತೆ ಯಾವಾಗಲೂ ಹೇಳುತ್ತಿದ್ದರು. "ಎಂಥ ಹೋದ್ರೂ ಅಡ್ಡಿಲ್ಲೆ. ಮಂಡೆ ಒಂದ್ ಸಮಾ ಇರ್ಕ್. ಇಲ್ದಿದ್ರೆ ಹುಟ್ಟಿದ್ ಅಪ್ಪಂಗೂ ಸಸಾರ, ಅಬ್ಬೆಗೂ ಸಸಾರ, ಊರಿಗೇ ಸಸಾರ."

ಗಂಡ ಸನ್ಯಾಸಿ ಹಿಂದೆ ಹೋದ ಲಾಗಾಯ್ತಿಂದ ಬಸುರಿ ಪಾರ್ಟು – ಮಾಡುವ ಅಕ್ಕುವಿಗೆ ಒಂದು ಸಲವಾದರೂ ಅದು ಸುಳ್ಳು ಎಂತ ಅನಿಸಿದ್ದಿಲ್ಲ. ಒಮ್ಮೆ ಹೊಟ್ಟೆ ನೋವೋ ಎಂತ ಬೊಬ್ಬೆಯಿಡುತ್ತ ಆಚೆ ಈಚೆ ಓಡಾಡುತ್ತ ಮನೆ ಬಾಗಿಲಿಗೆ ಕೈ ಕಾಲು ತಂದವರ ಹತ್ತಿರವೆಲ್ಲ ಹೇಳಿಕೊಂಡು ಗಲಾಟೆ ಮಾಡುತ್ತಿದ್ದಳು ಅಕ್ಕು. "ನಿನ್ ಹೊಟ್ಟೆನೋವು ಬಿಡಿಸ್ತೆ" ಎಂತ ದೊಡ್ಡಜ್ಜಯ್ಯ ರಪರಪೆಂತ ಹಿಡಿಕಟ್ಟು ಹುಡಿ ಮಾಡಿದಾಗ "ಅಪ್ಪಯ್ಯ, ನನ್ ಮಗು ಸಾಯತ್, ನಿಮ್ಮೆ ಪಾಪ ತಟ್ಟತ್ ಕಾಣಿ" ಎನ್ನುತ್ತ ಬಗ್ಗಿಕೊಂಡೇ ಹೊಟ್ಟೆ ತಪ್ಪಿಸಿಕೊಳ್ಳುತ್ತಿದ್ದಳು. ಹಾಗೆ ಹೊಡೆಸಿಕೊಂಡು ಹದಿನೈದು ದಿನ ತುಟಿ ಒಡೆಯದೆ ತಾನಾಯಿತು, ಕೋಣೆಯಾಯಿತು ಎಂದು ಕೋಣೆಯೊಳಗೇ ಗುರುಟಿಕೊಂಡಿರುತ್ತಿದ್ದಳು. ಅವಳಿರುವ ಮೂಲೆ ಕೋಣೆಯೆಂದರೆ ಬೇಡದ ಸಾಮಾನುಗಳನ್ನೆಲ್ಲ ಬಿಸಾಡಿ ಇಡುವ ಕೋಣೆ. ಹಿಡಿಕಟ್ಟೂ ಓಡದ ಆ ಕೋಣೆಯೊಳಗೆ ಸಾಲೆಬಲೆ ಬೇಕಾದಷ್ಟು ಕಟ್ಟಿ, ಅದು ಒಕ್ಕುಂಟಿಯಂತೆ ಒಂದು ಮೂಲೆಯಲ್ಲಿತ್ತು. ಅದರೊಳಗೆ ಭೂತ ಪಿಶಾಚಿಗಳೂ ಉಂಟೆಂತ ಹೇಳುತ್ತಿದ್ದರು.

ಒಮ್ಮೆ ನಾವೆಲ್ಲ ಮನೆಯಾಟವಾಡುತ್ತಿದ್ದಾಗ ಝುಣಝುಣ ಶಬ್ದ ಕೇಳಿಸಿತು. ನಮ್ಮ ಗಂಟಲು ನೀರು ಆರಿತು. ಏಳಲೊಲ್ಲದ ಕಾಲನ್ನೆಳೆದುಕೊಂಡು ಹೋಗಿ ಸುದ್ದಿ ಮುಟ್ಟಿಸಿದಾಗ ವಾಸು ಚಿಕ್ಕಪ್ಪಯ್ಯ ಮತ್ತು ಅಂತಣ್ಣ ಓಡಿಬಂದರು. ಅವರ ಹಿಂದೆ ನಾವೂ ಬಂದಾಗ "ಹೆಣ್ ಮಕ್ಕಿಗೆಲ್ಲ ಎಂಥದದು ಧೈರ್ಯ! ಹೋತ್ರಿಯಾ ಇಲ್ಯ ಆಚೆಗೆ!" ಎಂದು ದನ ಎಬ್ಬಿದಂತೆ ಎಬ್ಬಿದರು. ನಾವು ಹೋದಂತೆ ಮಾಡಿ ಮತ್ತೆ ವಾಪಸಾದೆವು. ಕೋಣೆಯ ಬಾಗಿಲನ್ನು ಕಿರಿಬೆರಳ ತುದಿಯಿಂದ ಮೆಲ್ಲ ದೂಡಿದ ವಾಸು ಚಿಕ್ಕಪ್ಪಯ್ಯ "ಓ ಅಂತಣ್ಣ, ಇದೇ ಪ್ರೇತ!" ಎಂದು ನಕ್ಕ. ಅವನ ಸ್ವರ ಕೇಳುತ್ತಲೇ ನಾವು ಒಂದೊಂದೇ ಕಣ್ಣಲ್ಲಿ ಇಣುಕಿದೆವು. ಅಕ್ಕು ಹಿತ್ತಾಳಿ ತೊಟ್ಟಿಲೊಳಗೆ ಕುಳಿತಿದ್ದಳು. ಅದರೊಳಗೆ ಕಳಚಿ ಇಟ್ಟಿದ ಸರಪಳಿ ಹಿಡಿದು ತೊಟ್ಟಿಲು ತೂಗುವಂತೆ ಅಲ್ಲಾಡಿಸುತ್ತಿದ್ದಳು. "ಶ್, ಮಾತಾಡ್ಬೇಡಿ, ಮಗು ಈಗಷ್ಟೇ ಮೊಲೆಯುಂಡ್ ಮನ್ಕಂಡಿತ್" ಎಂದಳು. ವಾಸು ಚಿಕ್ಕಪ್ಪಯ್ಯ ಬಳಪದ ಕೀಚಲು ಗೀರಿನಂತೆ ನಗೆಯಾಡಿದ. ಓಲಾಡುತ್ತ ಬಂದು ನಿಂತಿದ್ದ ದೊಡ್ಡತ್ತೆ ನಗೆಯ ಚಕ್ಕೆ ಎಬ್ಬಿಸಿದಂತೆ "ಹಾಲು ಮಸ್ತಿತ್ತ ಕೇಣ ವಾಸು" ಎಂದರೆ ವಾಸು ಚಿಕ್ಕಪ್ಪಯ್ಯ ನಾಚಿಗೆ ಇಲ್ಲದೆ ಕೇಳಿದ. ಅಕ್ಕು ಸೆರಗು ಸರಿ ಮಾಡಿಕೊಂಡು "ಇತ್ತ, ಸದ್ಯಕ್ ಸಾಕ್" ಎಂದಳು.

"ಪಿರ್ಕಿ, ಅಡ್ಡಿಲ್ಲೆ, ಹೆರಿಗೆ ಯಾವಾಗಾದ್?"

"ನಿನ್ನೆ ರಾತ್ರಿ"

ಅವತ್ತಿಡೀ ಮೂಲೆ ಕೋಣೆಯಲ್ಲಿ ಹೆತ್ತು ಮಲಗಿದ ಬಾಣಂತಿ ಪ್ರೇತದ ಮಾತೇ. ಹೀಗೇ ಬಿಟ್ಟರೆ ಕೋಣೆಯಲ್ಲಿ ನಿಜವಾದ ಪ್ರೇತವೇ ಇದನ್ನು ಒತ್ತಿ ಹಿಡಿದೀತು ಎಂದ ವಾಸು ಚಿಕ್ಕಪ್ಪಯ್ಯನಿಗೆ "ಸತ್ಯಕ್ಕೂ ಹಿಡಿಯುಕೆ ಬಂದ್ ಪ್ರೇತನ್ನ ದೂಡಿಹಾಕಿ ಬಂದದ್ದಲ್ಲ ಇದ್, ಹಾಂಗೆಲ್ಲ ಹೆದ್ರಿಕೆ ಬೇಡ" ಎಂದರು ದೊಡ್ಡತ್ತೆ.

ಮರುದಿನವೇ ಅಕ್ಕು ಮತ್ತೆ ಬಸುರಿಯಾಗಿದ್ದಳು. ಈ ಬಸುರು ಕಳೆಯುವುದೂ ಇಲ್ಲ. ಗಂಡ ಬರುತ್ತಲೂ ಇಲ್ಲ.

ಹೀಗಿರಲೊಂದು ದಿನ ಅಕ್ಕುವಿನ ಗಂಡ ಬಂದ ಸುದ್ದಿ ಉಪ್ಪರಿಗೆ ಕಪಾಟಿನ ಚಡಿಯಲ್ಲಿ ಕುಳಿತು ಕತೆ ಪುಸ್ತಕ ಓದುತ್ತಿರುವವರನ್ನಾದಿಯಾಗಿ ಮುಟ್ಟಿತು. ಊರಿಗೆ ಬಂದು ಮುಟ್ಟಿದ ಕೂಡಲೇ "ಅಕ್ಕು ಬಸುರಿ" ಎಂದರಂತೆ ಯಾರೋ, ಎದೆ ಅತ್ತ ಹಾರಿಹೋದಂತಾಗಿ ವಾಪಸು ಹೊರಟನಂತ. ಕಡೆಗೆ ಕತೆ ಹೀಗೆ ಹೀಗೆ, ನಾಲ್ಕು ಸುತ್ತು ಬಿದ್ದು ಹೋಗಿದೆ ಎಂದರಂತೆ. ಹಿಂದೆ ಬಂದನಂತೆ.

ಚಾವಡಿಯಲ್ಲಿ ಕುಳಿತು ದೊಡ್ಡಜ್ಜಯ್ಯನೊಡನೆ ಕಫ ಗುರುಗುಡುವ ಸ್ವರದಲ್ಲಿ ಹೇಳುತ್ತಿದ್ದ. ಅವನಿಗೆ ನಾವೆಣಿಸಿದಂತೆ ದೊಡ್ಡ ಹೊಟ್ಟೆ, ದೊಡ್ಡ ಮೀಸೆ, ಗಿಡ್ಡ ದೇಹ, ಉರುಟು ಮುಖವಿರಲಿಲ್ಲ. ಬರೀ ಚೀಂಕಟೆಯಾಗಿದ್ದ. ಕೈಕಾಲು ಸೌದೆ ಚಪ್ಪಿನಂತಿದ್ದವು. ಕಣ್ಣುಗಳು ಕಪ್ಪೆಗಣ್ಣಿನಂತಿದ್ದವು. ಹರಿವೆ ಬೀಜ ಬಿತ್ತಿದರೆ ಗಿಡವಾಗುವಷ್ಟು ಮಣ್ಣು ಮಣ್ಣಾದ ಮುಂಡು ಸುತ್ತಿಕೊಂಡು ಮುಡುಗು ಬೆನ್ನಲ್ಲಿ ಕುಳಿತಿದ್ದ. ಅಜ್ಜಯ್ಯ ತನ್ನ ದೊಡ್ಡ ಕುರ್ಚಿಯಲ್ಲಿ ಮುಖದಲ್ಲಿ ಹನಿನಗೆಯೂ ಇಲ್ಲದೆ ಬಿರುಸಾಗಿ ಕುಳಿತಿದ್ದರು. ಅವರ ಮೀಸೆ ತುದಿ ಕೂಡ ಈ ಮನುಷ್ಯನನ್ನು ಮೂರು ಕಾಸಿನ ನಾಯಿಯೆಂಬಂತೆ ನೋಡುತ್ತಿರುವಂತಿತ್ತು.

ಅಕ್ಕುವಿನ ಗಂಡ ಕುಳಿತಂತೆ ಕೂರಲಿಲ್ಲ. ನೀರು ಹಾವಿನಂತೆ ಮಲಗುತ್ತ ಕುಳಿತ ರೀತಿ ಬದಲಾಯಿಸುತ್ತಿದ್ದ. ತಾನವಳನ್ನು ಬಿಟ್ಟು ಹೋದದ್ದಲ್ಲ. ಆ ಸುಟ್ಟ ಸ್ವಾಮಿಗಳ ಹಿಂದೆ ಹೋದದ್ದಲ್ಲವೆ? ನೆನಪು ಹೋಯಿತೆ? ಹೋದವ ಹೋಗಿಯೇ ಬಿಟ್ಟ. ಕಾಶಿ ಹಿಮಾಲಯದವರೆಗೂ ಸ್ವಾಮಿಗಳು ಬಂದರು. ತಾನೂ ಬಂದೆ. ಪಡಪೋಶಿಯೆಂತ ಎಣಿಸುವುದು ಬೇಡ. ಸ್ವಾಮಿಗಳೊಟ್ಟಿಗೆ ಇದ್ದರೆ ಒಳ್ಳೆಯ ಸಂಪಾದನೆ ಆಗುತ್ತದೆ, ಆಗಿದೆ ಇತ್ಯಾದಿ ಹೇಳಿದ. ಅಜ್ಜಯ್ಯ ಹೂಂಗುಡುತ್ತಲೂ ಇರಲಿಲ್ಲ. ಅವನತ್ತ ನೋಡಲೂ ಇಲ್ಲ.

ಇಷ್ಟಕ್ಕೂ ಅಕ್ಕುವನ್ನು ಬರ ಹೇಳಿದರೆ ಅವಳೆಲ್ಲಿ? ಒಳಗೆಲ್ಲಿಯೂ ಇಲ್ಲ ಎಂಬ ಸುದ್ದಿ ಬಂತು. "ಹುಡುಕಿ, ಇಲ್ಲ ಅಂದ್ರೆ" ಅಪ್ಪಣೆಯಾಯಿತು. ಹುಡುಕಿಕೊಂಡು ಹೊರಟ ವಾಸು ಚಿಕ್ಕಪ್ಪಯ್ಯನಿಗೆ ಆಕೆ ಸಿಕ್ಕಿದ್ದು ಹಾಡಿಯ ಕೆರೆ ದಂಡೆಯ ಮೇಲೆ. "ಗುಂಪಿಗೆ ಹಾರ್ಕಂಬೇಡ, ಗಂಡ ಬಂದಿದ್ದ ಕಾಣ್" ಎಂದ್ರೆ "ಬಸ್ ಛಾರ್ಜ್ ಕೊಟ್ ವಾಪಸ್ ಕಳ್ಸ್. ಅವ ಬಂದದ್ ಕಂಡೇ ಇಲ್ಲಿಗ್ ಬಂದದ್ ನಾನ್" ಎಂದು ರಾಪು ಮಾಡಿದಳಂತೆ. "ಎಂತದೆಲ್ಲ ಹಿಕ್ಕತ್ ಮಾಡಿ ಕರ್ಕಂಡ್ ಬಂದೆ. ನೀವೇನಾದ್ರೂ ಬೈಯ್ದ್ ಗಿಯ್ದ್ರೆ ಗುಂಪಿಗೆ ಹಾರ್ಕಂತ್ಲ್ ನಂಗೊತ್ತಿಲ್ಲೆ ಕಡೆಗೆ!" ಎಂದ ಬೆವರೊರೆಸಿಕೊಳ್ಳುತ್ತ.

ಹಿಂಬದಿಯ ಬಾಗಿಲಿಂದ ಒಳಹೊಗ್ಗಿದ ಅಕ್ಕು ಏನು ಮಾಡಿದರೂ ಮುಂದೆ ಹೆಜ್ಜೆ ಇಡಲೊಲ್ಲಳು. ಬಾಯಿ ತೆರೆದು ನಿಂತ ಭತ್ತ ಕುಟ್ಟುವ ಒರಳಿನ ಹತ್ತಿರ ಗೋಡೆಗೆ ಬಲ ಹಿಂಗಾಲು

ಕೊಟ್ಟು ಡೊಂಕಾಗಿ ನಿಂತು ಉರುಟುರುಟಾಗಿ ಕಣ್ಣು ಬಿಟ್ಟಳು. ದೊಡ್ಡಜ್ಜಯ್ಯ ಕಾದು "ನಡಿ, ನೀನೇ" ಎಂದು ಸಂಕಪ್ಪನ್ನ–ಅಕ್ಕುವಿನ ಗಂಡನ್ನ ಕರೆದುಕೊಂಡು ಒಳಗೆ ಬಂದರು.

"ಅಕ್ಕು..." ಎಂದರು ಅಜ್ಜಯ್ಯ.

"ಅಕ್ಕು ಸತ್ ಮೂರ್ ಹಗಲು ಮೂರ್ ರಾತ್ರಿ ಆಯಾಯ್ತ್. ಈ ನಾರಟೆ ಕ್ರಿಯೆ ಹಿಡಿಯುಕೆ ಬಂದದ್ದಾ ಕೇಣು! ಭಗಭಗ ಬೆಂಕಿ ಉರಿಯುವಂತಹ ಸ್ವರದಲ್ಲಿ ನುಡಿದಳು ಅಕ್ಕು, "ಕೇಂಡ್ಯಲೆ! ನಿನ್ನಂಥ ಘಟಿಂಗ್ನಿಗೆ ಮಾಣಿಕ್ಯ ಕೊಟ್ಟದ್ದಕೆ!"

ಸಂಕಪ್ಪ ಅಕ್ಕಳ, ಕೊಚ್ಚಿದಂತಿದ್ದ ಕ್ರಾಪಿನ ತಲೆಯನ್ನು ಬಾಗಿಸಿ ಮಾತಾಡದೆ ನಿಂತಿದ್ದ. ದೊಡ್ಡತ್ತೆ ಹೇಳಿದರು–'ಅಂತೂ ಬಂದ್ಯ! ಊರ್ ಮೇಲಿನ್ ಹೆಣ್ಮಕ್ಕೆಲ್ಲ ಖರ್ಚಾದ್ವ?"

ದೊಡ್ಡತ್ತೆ ಕೇಳಿದ್ದು ಸಮನೆಂಬಂತೆ ಅಜ್ಜಯ್ಯ ಅವನನ್ನೊಮ್ಮೆ ಸದರದಿಂದ ನೋಡಿದರು. ಅವ ಬಾಯಿ ತೆರೆಯುವುದರೊಳಗೆ ಅಕ್ಕು ಹೇಳಿದಳು.

"ನಾನೇನ್ ಬಿಟ್ಟಿದ್ನ? ಈ ಉರೊಳ್ಗೆ ಯಾವ ಗಂಡ್ಸನ್ನ ನಾನ್ ಬಿಟ್ಟಿದ್ದೆ ಅಂಬ್ರ್! ಹೇಳೂ ಗಂಡ್ಸ್ ಯೆದ್ರ್ ಬರ್ಲಿ ಕಾಂಬ! ಇಂಥಾ ಕಳ್ಳನ್ನ ಕಟ್ಕಂಡ್ರೆ ಹೌದ ಮತ್ತೆ?"

ನಪುಂಸಕನಂತೆ ನಿಂತಿದ್ದ ಸಂಕಪ್ಪ, ಅಜ್ಜಯ್ಯ ಅಕ್ಕುವಿನತ್ತ ಹೂಂಕರಿಸಿದರು. "ಹೆಣೆ, ಬಾಯ್ಮುಚ್ಚಂತ್ಯ? ಹೀಂಗಿದ್ ಉಡಾಪ್ ಮಾಡ್ಕಂಡೇ ತಲೆ ಕೆಳ್ಗೆ ಕಾಲ್ ಮೇಲೆ ಅದ್ದ್" ಎಂದರು ದೊಡ್ಡತ್ತೆ.

"ಸಂಕಪ್ಪ, ಆದದ್ ಆಯ್ತ್, ನಿನ್ನಿಂದ್ಲೇ ಆದ್ ಈ ಕರ್ಮನ್ನ ನೀನೇ ಅನುಭವಿಸ್ಕ, ಪೊಟ್ಪೋ ಪೋಂಕೋ. ಅವ್ಳ ಇರ್ಲ್ಕಾದ್ ನಿನ್ನತ್ರ, ಎರಡು ದಿವಸ ಇದ್, ಕರ್ಕಂಡ್ ನಡೆ" ಎಂದು ಅಲ್ಲಿಂದ ಹೋಗಿ ಬಿಟ್ಟರು ಅಜ್ಜಯ್ಯ.

"ಯೆಂತದ್? ನಿನ್ನ್ ಇವ್ನೊಟ್ಟಿಗೆ ಹ್ವೋಪ್ದ್! ನನ್ ಹೆಣ ಸಮೇತ ಹೋಗ!" ಎಂದಳು ಅಕ್ಕು.

"ಹೆಣೆ, ಗಂಡನ್ನ ಈ ನಮೂನೆ ನಿಕೃಷ್ಟ ಮಾಡಿ ಮಾತಾಡುಕಾಗ, ಅವ ಎಂಥವ್ನೇ ಇರ್ಲಿ" ಎಂದರು ದೊಡ್ಡತ್ತೆ. ಸಂಕಪ್ಪ ಒಂದು ಹೆಜ್ಜೆ ಮುಂದಿಡಲಿಲ್ಲ. ಅಕ್ಕು ಸರಕ್ಕೆಂತ ತಿರುಗಿ ಹೊರ ನಡೆದು ಬಿಟ್ಟಳು. ಯಾರೂ ಈಗ ಒಂದಕ್ಷರ ಪಿಟಕ್ಕೆನ್ನಲಿಲ್ಲ.

ಎರಡು ರಾತ್ರಿಯಿದ್ದ ಸಂಕಪ್ಪ. ಅಕ್ಕು ಮೂಲೆಕೋಣೆಯಲ್ಲಿಯೇ ಮಲಗಿದಳು. ಒಳಗೆ ಕಾಲಿಡಲಿಲ್ಲ. ಚಾವಡಿ ಕೊಡಿಯಲ್ಲಿ ಕಾಲು ಮಡಚಿ ಮುರುಚಿಕೊಂಡು ಮಲಗುತ್ತಿದ್ದ ಸಂಕಪ್ಪ. ಏನೂ ತಿಳಿಯದ ಬೋದಾಳ ಶಂಕರನಂತೆ.

ಆ ಬೆಳಿಗ್ಗೆ ವಾಸು ಚಿಕ್ಕಪ್ಪಯ್ಯನ ಹತ್ತಿರ ಪಿಸುಗುಡುತ್ತಿದ್ದರು ದೊಡ್ಡತ್ತೆ. "ನಾ ನಿನ್ನೆ ರಾತ್ರಿ ಏಣು ಮೆಟ್ಲಿನ ಬುಡದಲ್ಲಿ ಕೂತ್ಕಂಡ್ ಕಾಂತಿದ್ದೆ. ಹಂಗರೆ ಈ ಪ್ರಾಣಿ ಸನ್ಯಾಸಿಯೇ ಆಯ್ತಾ ಎಂತದು ಅಂದ್ಕಂಡು ಮಾರಾಯ. ಘಟ ಅರ್ಧರಾತ್ರಿ ಮೇಲೆ ಮೆಲ್ಲ ಎದ್ದು ಮೂಲೆ ಕೋಣೆಗೆ ನಡ್ಡದ್ದೆ, ಅಲ್ಲ! ಅಷ್ಟ ಕಂಡೇ ನಾ ಒಳ್ಗ್ ಬಂದ್ ಕಣ್ಮುಚ್ಚಿದ್!"

ಇದು ಅಲ್ಲೇ ದೇವರಿಗೆ ಹೂಮಾಲೆ ಕಟ್ಟುತ್ತ ಕುಳಿತ ನಮಗೆಲ್ಲ ಕೇಳಿಸಿದಾಗ "ಈಗಿನ ಹೆಣ್ಮಕಿಗೆ ಪ್ರಾಯ ಬತ್ ಬತ್ ಅಂಬುದೊಳ್ಗೆ ಸೂ ಅಂಬುಕಿಲ್ಲೆ. ಕಿವಿ ಬೀಳೆಲ್ಲ ಅರ್ಥಿಯಾಯ್ತ್" ಎಂದರು. ಕಿವಿ ಮಡಚಿ ಕೊಳ್ಳುವಂತಾಯ್ತು.

ಇದೇ ದೊಡ್ಡತ್ತೆಯಲ್ಲವೇ? "ಹಾಲು ಮಸ್ತಿತ್ತಾ ಕೇಣ್" ಎಂದು ವಾಸು ಚಿಕ್ಕಪ್ಪಯ್ಯನಿಗೆ ಹೇಳಿದ್ದು? ಮನಸ್ಸು ಬಂದಾಗ ಯಾರಿದ್ದಾರೆ ಸುತ್ತಮುತ್ತ ಎಂಬ ಗೋಚರ ಇಲ್ದೆ, ಬೇಕು ಬೇಕಾದ್ದು ಮಾತಾಡುವುದು. ನಮ್ಮ ಹತ್ತಿರ ಮಡಿ ಮಡಿಯಾಗುವುದು. ಇವರು ಹೆಣ್ಣಲ್ಲವೆ ಹಾಗಾದರೆ? ಅಂಬೆಲ್ಲ ತರ್ಕಗಳೂ ಹೂ ಹಗ್ಗದ ಗಂಟೆಯೊಳಗೆ ಸೇರುತ್ತ ಮಾಲೆ ಉದ್ಧವಾಗುತ್ತಿರುವಾಗ –

ಅಕ್ಕುವಿನ ಸವಾರಿ ಬಂತು, ಭೂತ ಬಂದಂತೆಯೇ, ಅರಳು ಹೊಟ್ಟಿದಂತೆ ಮಾತಾಡಿಕೊಂಡೇ ಬಂದಳು. "ಓಯ್, ಓ ಹೋಯ್, ದೊಡ್ಡತ್ತೆ ಎಂಬ ಎಲ್ಲಿ ಹೋದ್ರಿ? ಬನ್ನಿ, ಬನ್ನಿ ಬನ್ನಿ ಬೇಗ, ಮಾತಾಡ್ಲಿಕ್ಕೆ ಕೋರ್ಜಿಯುಂಟು, ಆ ಎಲೆ ಅಡಿಕೆ ಹರಿವಾಣ ತನ್ನಿ........"

ದೊಡ್ಡತ್ತೆ ಅವಳ ಸ್ವರದ ಗೆಲ ಕಂಡು "ಈ ರಂಡೆಗ್ ಜೀವ ಹೋಯ್ತಂತೆಳಿ ಕಾಣತ್" ಎನ್ನುತ್ತಲೇ ಅದೇ ನಗುವಿನಲ್ಲಿ ಎದುರು ಬಂದರು. ಅವರ ಹಿಂದೆ ಮನೆಯ ಉಳಿದವರು, ಕೆಲಸದವರು, ನಾವು ಎಲ್ಲರೂ ಕಾಲು ಮೇಲೆ ಕಾಲು ಏರಿಸಿ ಕೂತಲ್ಲೇ ಆನೆಯಾಡುತ್ತಾ, "ಓ ಹೋಯ್, ಕೇಳೀದಿರೇನು ಸಮಾಚಾರ? ಬಂದವ ಹಿಡ್ಕಂಡದ್ದೇ ರಸ್ತೆ ಬದಿ ಹೆಣ್ಣೆನ್ ಹಾಂಗಲ್ಲ ನೀನ್ ಎಂದ. 'ಥೂ ನಾಲು ಜಾತಿಯವ್ನೆ, ತೆವಡ್ಕೋ ಆಚೆ, ಮುಟ್ಬೇಡ, ನಾ ಬಸ್ರಿ' ಎಂದೆ. 'ಯಾರ್ ಮಾಡಿದ್ದ್?' ಎಂದ. 'ಅಡ್ಡದ್ ಮನೆ ತಿಮ್ಮಪ್ಪಯ್ಯ' ಎಂದೆ. ಅದ್ರೂ ಬಿಡ್ಲಿಲ್ಲೆ. ಮಾಡಿಸ್ತೆ ನಿಂಗೆ ಅಂದೇ, ತೊಟ್ಲಿನ್ ಸರಪಣಿ ಎಳ್ದೇ, ಬೀಸಿ ಬೀಸಿ ಹೊಡ್ದೆ, ಬೀಸಿ ಬೀಸಿ ಹೊಡ್ದೆ, ಎಲ್ಲಿತ್ ನಸ್ರಾಣಿ? ಪ್ರಾಣಿ ಪಂಜಿ ಸುತ್ಕಂಡ್ ಪುಡ್ಚೋ....

"ನೀವೆಂತದೇ ಹೇಳಿ ದೊಡ್ಡತ್ತೆ, ಇದ್ರಕಿಂತ ಆ ಅಡ್ಡದ್ಮನೆ ತಿಮ್ಮಪ್ಪಯ್ಯ ಆಡ್ಡಿಲ್ಲ. ಅವನ್ ಯೆದೆಯೇನ್! ತುಟಿಯೇನ್!"

ದೊಡ್ಡಜ್ಜಯ್ಯ ಜಲ್ಲು ಊರಿ ಬರುವ ಶಬ್ದ ಕೇಳಿಸಿತು. ವಾಸು ಚಿಕ್ಕಪ್ಪಯ್ಯ ಅಕ್ಕುವಿನ ಬಾಯಿ ಹಿಡಿದು ಒತ್ತಿ ಹಿಡಿದು ವಿಶೇಷದಡಿಗೆ ಕೋಣೆಗೆ ದರದರ ಎಳೆದುಕೊಂಡು ಹೋದ. ಅಲ್ಲಿದ್ದ ಕೋಲು ಸೌದೆ ಎಳೆದು ಒಗೆಯುವ ಕಲ್ಲಿಗೆ ವಸ್ತ್ರ ಜಪ್ಪಿದಂತೆ ಜಪ್ಪಿದ. "ಈ ಮರುಳು ಹೊಳೆ, ಗುಂವಿ, ಬೇಣ, ಮತ್ತೊಂದ್ ಮೊದ್ಲೊಂದ್ ಅಂತೆಳಿ ತಿರುಗಿರೆ ಅಡ್ಡದ್ಮನೆ ತಿಮ್ಮಪ್ಪಯ್ಯ ಬಿಟ್ಟ್ ಅವನಪ್ನೂ ಹಿಡ್ಕಂತ, ಇನ್ನೇಲೆ ಎಲ್ಲ ತಿರ್ಗಾಟ ಬಂದ್" ಪೆಟ್ಟು ಬೀಳುತ್ತಲೇ ಇತ್ತು.

"ಇಷ್ಟಕ್ಕೂ ಅವ ಮುಟ್ಟಿದ್ನೋ ಇಲ್ವೋ, ಆ ಪಿರ್ಕಿ ಮಾತ್ ಕೇಳ್ಕಂಡ್ ಅವನ್ನ ಕೊಚ್ಚುಕೆ ಹೋದ್ರೆ ನಾವೇ ಕೆಪ್ಪೆಗ್ ತಿಂದ್, ಬರ್ಲಕ್" ಅಂತಣ್ಣ ಎಲೆ ಅಡಿಕೆ ಹೋಳನ್ನು ಬಾಯೊಳಗೆ ಆಚೀಚೆ ಉರುಳಿಸುತ್ತ ಕುಶಾಲಿನಲ್ಲಿ ಎಂದ. "ಹಲ್ಲ, ಎಲ್ಲ ಬಿಟ್ಟು ಅ ತಿಮ್ಮಪ್ಪಯ್ಯ ಅವ ಬಿತ್ತಿದ ಬೀಜ ಗಿಡವಾದ್ದ್ ಇತ್ತಂಬ್ರ?" ಗೆರಟೆ ಹೆರೆದಂತೆ ನಗಾಡಿದ.

"ಸಂಕಪ್ಪನ್ ಎಳ್ಕಂಡ್ ಬಾ, ಗಂಡ ಹೆಂಡತಿ ಇಲ್ಲಿಂದೊಂದ್ಸಲ ನಿವಾಳ್ಸಲಿ, ಬೇಕಾರೆ ಕಾಲಿಗೂ ಕುತ್ತಿಗೆಗೂ ಬಳ್ಳಿ ತಕಣ್ಹೆ–

ಮನೆಯ ಕಂಬ ಕಂಬಗಳಿಗೆಲ್ಲ ಈಗ ಮಾತು ಬಂದಿತ್ತು. ಅಜ್ಜಯ್ಯ ಬಂದೇ ಬಿಟ್ಟರು. ಸಿಟ್ಟಿಂದ ಥರಗುಟ್ಟುತ್ತಿದ್ದರು. "ನನ್ ಯಾವ್ ಜನ್ಮದ್ ಪ್ರಾರಬ್ದ ಇದ್!" ಎಂದು ಸಂಕಟಪಟ್ಟರು. "ಹಾಕ್ ನಾಕ್, ಇನ್ನೂ ನಾಕ್, ಸತ್ರೆ ಸತ್ತತ್, ಮರ್ರುವವ್ರ್ ಯಾರಿಲ್ಲೆ' ಎಂದರು. ವಾಸು ಚಿಕ್ಕಪ್ಪಯ್ಯ ಹೊಡೆತ ಮುಂದುವರಿಸಿದ.

"ಅಯ್ಯಯ್ಯೋ, ನನ್ ಜೀವ ತೆಗೀತಾ ವಾಸೂ, ಅಪ್ಪಯ್ಯಾ, ನಂಗೆ ಹೊಡೀತಾ, ನನ್ ಮಗೂನ ಕೊಲ್ತಾ ಕಾಣಿ ಅಪ್ಪಯ್ಯ. ಇವ ಮೊನ್ನೆ ತಮ್ಮಣ್ಣಯ್ಯನ್ ಜಗಲಿ ಮೇಲೆ ಯಾಕಿದ್ದ ಅಂತೆಳಿ ಕೇಣಿ ಅಪ್ಪಯ್ಯ......" ಎಂದು ಬೊಬ್ಬೆ ಹೊಡೆಯುತ್ತಿದ್ದ ಅಕ್ಕುವಿನ ಬಾಯಿ ಮೇಲೆ ಹೊಡೆದ. ಯಾರೂ ತಡೆಯಲಿಲ್ಲ. ಬಿಡು ಎನ್ನಲಿಲ್ಲ. ಅಕ್ಕುವನ್ನು ಈಚೆಗೆಳೆದುಕೊಳ್ಳಲಿಲ್ಲ. ಕ್ಷಣಕ್ಷಣಕ್ಕೂ ನೋಡುವ ಜನರ ಸಂಖ್ಯೆ ಬೆಳೆಯುತ್ತಾ ಇತ್ತು. ಈ ದೃಶ್ಯ ನಿರಂತರವಾಗಿರಬೇಕು ಎಂಬ ಬಯಕೆಯಿಂದ ನಿಂತಂತಿತ್ತು. ಆ ಕೂಗಿಗೂ, ಆ ಪೆಟ್ಟಿಗೂ ಅಷ್ಟು ಲಗತ್ತಿತ್ತು. ಭಾನು ಚಿಕ್ಕಿ ಸೊಂಟಕ್ಕೆ ಕೈಯಿಟ್ಟು ಕೊಂಡು

"ಅದು ಪಿರ್ಕಿಯ ಮತ್ತೆಂತದ! ಯಾರಿಗಾದ್ರೂ ಪಿರ್ಕಿ ಮಾಡತ್ತ್" ಎಂದದ್ದು ಆಕೆ ಅಳುವಿನಿಂದ ಗುಸುಗುಟ್ಟಿದಂತಿತ್ತು.

"ಈ ನಮೂನೆ ಹೊಡೆದಿದ್ರೆ ನಾನಾರೆ ಸತ್ತೇ ಹೋತಿದ್ದೆ. ಪಿರ್ಕಿಗಳಿಗೆ ಶಕ್ತಿ ಜಾಸ್ತಿ ಅಂಬ್ರಲೆ" ಎಂದಿತು ಒಂದು ಹೆಣ್ಣುದನಿ.

ವಾಸು ಚಿಕ್ಕಪ್ಪಯ್ಯ ಬಾಯಿ ಮೇಲೆ ಎಷ್ಟೇ ಹೊಡೆದರೂ, ಅಕ್ಕುವಿನ ಬೊಬ್ಬೆ ನಿಲ್ಲಲಿಲ್ಲ ದೂರೂ ನಿಲ್ಲಲಿಲ್ಲ. ಆಕೆ ಸಾಯಲಿಲ್ಲ.

ಸೋತು ಅಕ್ಕುವನ್ನು ಅಲ್ಲಿಯೇ ಬಿಟ್ಟು "ಎಲ್ಲ ಹೊರ್ಗ್ ಹೋಯ್ನಿ" ಎಂದ ವಾಸು ಚಿಕ್ಕಪ್ಪಯ್ಯ, ಹೊರಗೆ ಬಂದದ್ದೇ ಬಾಗಿಲೆಳೆದು ಚಿಲಕ ಹಾಕಿದ. ಅವನ ಹಿಂದೆಯೇ ಓಡಿಬಂದು ಬಾಗಿಲು ತೆಗೀ ಎಂದು ಬೊಬ್ಬೆ ಹಾಕುತ್ತಾಳೆಂತ ಮಾಡಿದ್ದೆಲ್ಲ ಸುಳ್ಳಾಯಿತು. ಯಾರಿಲ್ಲದ ಹೊತ್ತಿನಲ್ಲಿ ಮೆಲ್ಲ ಚಿಲಕ ತೆಗೆದು ಬಿಡಬೇಕೆಂಬ ನಮ್ಮ ಆಸೆ ಉತ್ಸಾಹ ಕಳೆದುಕೊಂಡಿತು. ಅಕ್ಕು ಒಳಗೇ ಉಳಿದು ಪುಟ್ಟ ಕಿಟಕಿಯಿಂದ ಅವಳ ಟುವಾಲು ತೂರಿಸಿ ಹಾರಿಸುತ್ತಾ ಬೊಬ್ಬಿಡುತ್ತಿದ್ದಳು.

"ಅ ತಮ್ಮಣ್ಣಯ್ಯನ್ ಹೆಂಡ್ತಿ ಕಾಯ್ತ್ಲ್ ಕಾಣ್, ಓಡು, ಬೇಗ, ಮರ್ಯಾದೆ ಸತ್ತವ್ನೇ, ಈಗ ಹೊಡೀ ಬಾ..... ಕಾಂಬ."

# ೩. ಕರ್ನಾಟಕದ ಸಂಸ್ಕೃತಿ ಮತ್ತು ವೇಶಭೂಷಣಗಳ ಶೈಲಿ

**- ಡಾ. ಸಂಧ್ಯಾ ರವಿ.**

ಕರ್ನಾಟಕವು ಭಾರತದ ನೈಋತ್ಯ ರಾಜ್ಯದಲ್ಲಿರುವ ಒಂದು ರಾಜ್ಯವಾಗಿದೆ. ಕರ್ನಾಟಕವು "ಒಂದು ರಾಜ್ಯ, ಹಲವು ಪ್ರಪಂಚಗಳು" ಎಂಬ ಟ್ಯಾಗ್ ಲೈನ್(tag-line)ಗೆ ಸತ್ಯವಾಗಿದೆ. ಮತ್ತು ಟ್ಯಾಗ್ ಲೈನ್(tag-line)ಅನ್ನು ಪ್ರತಿನಿಧಿಸುತ್ತದೆ. ಐದು ರಾಜ್ಯಗಳಿಂದ ಸುತ್ತುವರೆದಿರುವ ಗೋವಾ, ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ತಮಿಳುನಾಡು, ಕೇರಳ ರಾಜ್ಯಗಳ ವಿವಿಧ ಸಂಸ್ಕೃತಿಗಳನ್ನು ಹೊಂದಿದೆ. ಇದನ್ನು ಮೂಲತಃ ಮೈಸೂರುರಾಜ್ಯ ಎಂದು ಕರೆಯಲಾಗುತ್ತಿತ್ತು, ಆದರೆ 1973ರಲ್ಲಿ ಕರ್ನಾಟಕ, ಬೆಂಗಳೂರು ಎಂದು ಮರು ನಾಮಕರಣ ಮಾಡಲಾಯಿತು. ಬೆಂಗಳೂರು ಕರ್ನಾಟಕದ ರಾಜಧಾನಿ ಮತ್ತು ದೊಡ್ಡ ಐಟಿ ಕೇಂದ್ರ ಅಥವಾ ಸಿಲಿಕಾನ್ ಪ್ರಾಂತ್ಯ ಎಂದು ಪ್ರಸಿದ್ಧಿ ಪಡೆದಿದೆ. ಇದು ವಿಶ್ವದ ನಾಲ್ಕನೇ ಅತಿದೊಡ್ಡ ತಂತ್ರಜ್ಞಾನ ಕ್ಲಸ್ಟರ್ (largest technology cluster) ಆಗಿದೆ. ಮತ್ತು ವಿಶ್ವದ ಮೊದಲ ಕಂಪ್ಯೂಟರ್ ತಂತ್ರಜ್ಞಾನದ ಪ್ರಮುಖ ನಗರವಾಗಿದೆ. ನಮ್ಮ ರಾಜ್ಯವನ್ನು ಏಷ್ಯಾದ ಜ್ಞಾನ ಸಂಶೋಧನೆ ಮತ್ತು ಅನ್ವೇಷಣೆಯ ಕೇಂದ್ರ ಎಂದೂ ಕರೆಯುತ್ತಾರೆ.

ಮೈಸೂರು, ಹಂಪಿ ಮತ್ತು ಪಟ್ಟದಕಲ್ಲು ಮುಂತಾದ ಸ್ಥಳಗಳನ್ನು ನೋಡಲು ಕರ್ನಾಟಕವು ತನ್ನ ಸಂಪುದಾಯ ಮತ್ತು ರಮಣೀಯ ಸೌಂದರ್ಯಕ್ಕೆ ಹೆಸರುವಾಸಿಯಾಗಿದೆ. ಕರ್ನಾಟಕವು ಕಾಲಾತೀತ ಸ್ಮಾರಕಗಳು, ವಿಶ್ವಪರಂಪರೆಯ ತಾಣಗಳು, ಘಮಘಮಿಸುವ ಹಸಿರು ಕಾಡು, ಅದ್ಭುತವಾದ ವನ್ಯ ಜೀವಿಗಳು, ರೋಮಾಂಚನೀಯ ಗಿರಿಧಾಮಗಳು, ಬೆರಗುಗೊಳಿಸುವ ಕಡಲತೀರಗಳು ಮತ್ತು ರೋಮಾಂಚಕ ಸಂಸ್ಕೃತಿಗಳಿಂದ ಆಶೀರ್ವದಿಸಲ್ಪಟ್ಟ ಸುಂದರ ರಾಜ್ಯವಾಗಿದೆ.

**ಸಂಸ್ಕೃತಿ**

ಕರ್ನಾಟಕವು ತನ್ನ ಶ್ರೀಮಂತ ಸಾಂಸ್ಕೃತಿಕ ಪರಂಪರೆಗೆ ಹೆಸರು ವಾಸಿಯಾಗಿದೆ, ಇದು ವಿವಿಧ ಸಾಮ್ರಾಜ್ಯಗಳ ಕೊಡುಗೆಯೊಂದಿಗೆ ನಿರಂತರವಾಗಿ ಮುನ್ನಡೆಯುತ್ತಿದೆ. ಕರ್ನಾಟಕ ಸಾಹಿತ್ಯ ವಾಸ್ತುಶಿಲ್ಪ, ಜಾನಪದ, ಸಂಗೀತ, ಚಿತ್ರಕಲೆ, ವೇಷಭೂಷಣ ಮತ್ತು ಇತರ ಕಲಾಪ್ರಕಾರಗಳು ಜನರ ಮೇಲೆ ಸಾಕಷ್ಟು ಪ್ರಭಾವ ಬೀರುತ್ತವೆ. ಜನಾಂಗೀಯತೆ, ಸಂಸ್ಕೃತಿ ಮತ್ತು ಜನಾಂಗದ ವೈವಿಧ್ಯಮಯ ಮಿಶ್ರಣವು ಕರ್ನಾಟಕದ ಜನರನ್ನು ಒಳಗೊಂಡಿದೆ. ಇಲ್ಲಿ ನೆಲೆಸಿರುವ ಗರಿಷ್ಠ ಸಂಖ್ಯೆಯ ಜನರು ಕನ್ನಡಿಗರು. ಅವರು ತಮ್ಮ ನೆರೆಹೊರೆಯ ಮರಾಠರು, ಆಂಧ್ರದವರು, ತಮಿಳರು ಮತ್ತು ಮಲಯಾಳಿಗಳು ಇವರೊಂದಿಗೆ ಸ್ನೇಹ ಸೌಹಾರ್ದತೆ, ಸಾಮರಸ್ಯ ಮತ್ತು ಪರಸ್ಪರ ಸಂತೋಷದಿಂದ ವಾಸಿಸುತ್ತಿದ್ದಾರೆ. ಕರ್ನಾಟಕದ ಜನರು ಮಹಾನ್ ಆತಿಥೇಯರು, ಅವರ ಜೀವನ ಶೈಲಿ ಸರಳವಾಗಿ ಅವರ ವಿಶಿಷ್ಟ ಪದ್ಧತಿಗಳು, ಮೋಡಿ ಮಾಡುವ ಸಂಸ್ಕೃತಿ ಮತ್ತು ನಂಬಿಕೆಗಳಿಗೆ ಬದ್ಧರಾಗಿದ್ದಾರೆ.

**ಕಲೆ ಮತ್ತು ಕರಕುಶಲ:**

ಕರ್ನಾಟಕವು ಮರದ ಕೆತ್ತನೆ, ದಂತದ ಕೆತ್ತನೆ, ಕಲ್ಲಿನ ಕೆತ್ತನೆ ಮತ್ತು ಶ್ರೀಗಂಧದ ಕರಕುಶಲ ಮತ್ತು ಗೊಂಬೆ ತಯಾರಿಕೆಯಲ್ಲಿ ತನ್ನ ಕರಕುಶಲತೆಗೆ ಹೆಸರುವಾಸಿಯಾಗಿದೆ. ಮರದ ಮೇಲಿನ

ಕೆತ್ತನೆಗಳು ವಿಶೇಷವಾಗಿ ರೋಜ್‌ವುಡ್ ಮತ್ತು ಶ್ರೀಗಂಧದ ಮರಕ್ಕೆ ಭಾರಿ ಬೇಡಿಕೆಯಿದೆ. ದಂತಕಲೆ ಮೈಸೂರು ರಾಜ್ಯಕ್ಕೆ ವಿಶಿಷ್ಟವಾಗಿದೆ. ಮೈಸೂರು ಚಿತ್ರಕಲೆ ಪ್ರಪಂಚದಾದ್ಯಂತ ಜನಪ್ರಿಯವಾಗಿದೆ. ರೇಷ್ಮೆ ನೇಯ್ಗೆ ಕೂಡ ಕರ್ನಾಟಕದ ವಿಶಿಷ್ಟ ಕಲೆ.

ಮೈಸೂರು ರೇಷ್ಮೆ ನೇಯ್ಗೆ ಕಲೆಯು ಜನರ ಸಾಂಪ್ರದಾಯಿಕ ಉದ್ಯೋಗವಾಗಿದೆ. ಉತ್ತರ ಕರ್ನಾಟಕ ಜಿಲ್ಲೆ ಬೀದರ್‌ನಿಂದ ಜನಪ್ರಿಯವಾಗಿರುವ ಲೋಹದ ತಟ್ಟೆಗಳ ಮೇಲೆ ಮಾಡಿದ ಬಿದಿರಿನ ಕಲೆ ಕರ್ನಾಟಕದ ಅಪರೂಪದ ಕರಕುಶಲ ವಸ್ತುಗಳಲ್ಲಿ ಒಂದಾಗಿದೆ.

**ವೇಷಭೂಷಣ:**

ಕರ್ನಾಟಕದ ಜನರ ವೇಷ ಭೂಷಣಗಳು ಜಿಲ್ಲೆಯಿಂದ ಜಿಲ್ಲೆಗೆ ಬದಲಾಗುತ್ತವೆ. ಪಂಚೆ, ಅಂಗಿ ಮತ್ತು ಪೇಟ ಮುಖ್ಯವಾಗಿ ಪುರುಷರ ವೇಷಭೂಷಣವಾಗಿದೆ. ಸೊಂಟದ ಕೆಳಗೆ ಪಂಚೆ ಕಟ್ಟಿದ್ದರೆ, ಸಂಪ್ರದಾಯದಂತೆ ಅಂಗಿ ಮತ್ತು ಪೇಟಾವನ್ನು ಮೈಸೂರು ಶೈಲಿಯಲ್ಲಿ ಧರಿಸುತ್ತಾರೆ. ಧಾರವಾಡ ಶೈಲಿಯ ಕಚ್ಚೆ ಮತ್ತು ಕುರ್ತಾ ಅಥವಾ ಗಾಂಧಿ ಟೋಪಿಯೊಂದಿಗೆ ಶರ್ಟ್ ಧರಿಸುತ್ತಾರೆ. ಶಲ್ಯ ಎಂದರೆ ಭುಜದ ಮೇಲೆ ಬಳಸುವ ಉದ್ದನೆಯ ಬಟ್ಟೆ ಇದು ಶಾಂತಿಯ ಸಂಕೇತವಾಗಿರುತ್ತದೆ. ಸ್ತ್ರೀಯರ ವೇಷಭೂಷಣಗಳು ಸೀರೆಯನ್ನು ಒಳಗೊಂಡಿರುತ್ತದೆ. ಅವುಗಳಲ್ಲಿ ಇಳಕಲ್ ಸೀರೆಗಳನ್ನು ಟೋಪ್ ಟೇನಿ (tope teni) ಎಂಬ ವಿಶೇಷ ತಂತ್ರವನ್ನು ಬಳಸಿಧರಿಸುತ್ತಾರೆ. ಮೈಸೂರು, ಮೊಳಕಾಲ್ಮೂರು, ಇಳಕಲ್ ಸೀರೆಗಳು ಸಹ ಪ್ರಸಿದ್ಧವಾಗಿವೆ ಮತ್ತು ಸಲ್ವಾರ್ ಕಮೀಜ್ ನಗರ ಪ್ರದೇಶಗಳಲ್ಲಿ ವ್ಯಾಪಕವಾಗಿ ಜನಪ್ರಿಯವಾಗಿದೆ.

ಯುವತಿಯರು ಸಂಪ್ರದಾಯದಂತೆ ಲಂಗಾ ದಾವಣಿಯನ್ನು ಧರಿಸುತ್ತಾರೆ. ಇದನ್ನು ಅರ್ಧ ಸೀರೆ ಎಂದೂ ಕರೆಯುತ್ತಾರೆ. ಕಸೂತಿ ಎಂಬುದು ಕಸೂತಿ ಕೆಲಸದ ಒಂದು ರೂಪವಾಗಿದೆ. ಇದು ಮೂಲತಃ ಹುಬ್ಬಳ್ಳಿ-ಧಾರವಾಡ ಪ್ರದೇಶಕ್ಕೆ ಸ್ಥಳೀಯವಾಗಿರುವ ಸೀರೆಗಳು ಮತ್ತು ಉಡುಪುಗಳ ಮೇಲೆ ಅಲಂಕಾರವನ್ನು ಬಹಳ ಜನಪ್ರಿಯವಾಗಿ ಬೇಡಿಕೆಯಿದೆ. ಮುರ್ಗಿ, ಗವಂತಿ, ನೇಗಿ ಮತ್ತು ಮೆಂತಿಯ ಹೊಲಿಗೆಗಳನ್ನು ಅವರ ಮನೆಗಳ ಸುತ್ತ ಮುತ್ತಲಿನ ಚಿತ್ರಗಳಾದ ತುಳಸಿಕಟ್ಟೆ, ಹಸು, ಹೂವುಗಳು, ಸೀರೆ, ಉಡುಗೆ ಮತ್ತು ವೇಷಭೂಷಣಗಳ ಮೇಲೆ ರಂಗೋಲಿ ವಿನ್ಯಾಸದಿಂದ ಪ್ರಾಮುಖ್ಯತೆ ಪಡೆದಿದೆ. ಜೀನ್ಸ್ ಯುವ ಜನರಲ್ಲಿ ಜನಪ್ರಿಯತೆ ಪಡೆದುಕೊಂಡಿದೆ. ಆದರೆ ಹೊಸ ಯುಗದ "ಖಾದಿ" ಅಥವಾ "ರೇಷ್ಮೆ" ವಿವಿಧ ಕಲಾಪ್ರಕಾರಗಳೊಂದಿಗೆ ಮುದ್ರಿತವಾಗಿದೆ. ಖಾದಿ ಬಟ್ಟೆಗಳು ಇಂದಿನ ಯುವಕರಲ್ಲಿ ದೇಶಭಕ್ತಿ ಮತ್ತು ಸ್ವಾತಂತ್ರ್ಯದ ಸಂಕೇತವಾಗಿದೆ.

ಕರ್ನಾಟಕದ ಸಾಂಪ್ರದಾಯಿಕ ವೇಷಭೂಷಣಗಳು ಬಹಳ ಆಕರ್ಷಕವಾಗಿವೆ ಮತ್ತು ಶ್ರೀಮಂತ ಸಂಸ್ಕೃತಿ ಮತ್ತು ಪರಂಪರೆಯನ್ನು ಹೊಂದಿವೆ. ಸಾಮಾನ್ಯವಾಗಿ, ಪ್ರತಿಯೊಂದು ಪ್ರದೇಶದ ಉಡುಗೆಯ ಸಂಕೇತ ಜನರ ನಡುವಿನ ಸಾಮರಸ್ಯ ಮತ್ತು ಸಮೃದ್ಧಿಯನ್ನು ತೋರಿಸುತ್ತದೆ. ಸಮಾಜದ ಸಂಪ್ರದಾಯಗಳ ಬದಲಾವಣೆಯೊಂದಿಗೆ ಕರ್ನಾಟಕದಲ್ಲಿ ಸಿಂಗರಿಸಿಕೊಳ್ಳುವ ಶೈಲಿಗಳು ಬದಲಾಗುತ್ತಿವೆ. ಸಾಮಾನ್ಯವಾಗಿ, ಹೆಚ್ಚಿನ ಕರ್ನಾಟಕದ ಜನರು, ವಿಶೇಷವಾಗಿ ವಯಸ್ಸಾದ ಪುರುಷರು ಮತ್ತು ಮಹಿಳೆಯರು ತಮ್ಮ ಸಂಪುದಾಯದ ಉಡುಗೆಯ ಸಂಕೇತವನ್ನು ಕಟ್ಟು ನಿಟ್ಟಾಗಿ ಅನುಸರಿಸುತ್ತಾರೆ. ಬಟ್ಟೆಗಳ ವಿನ್ಯಾಸಗಳು ಮತ್ತು ಧರಿಸುವ ಶೈಲಿಯು ಅವರ ಸಂಸ್ಕೃತಿ ಮತ್ತು ಅವರು ವಾಸಿಸುವವ

ದೇಶಕ್ಕೆ ನಿಕಟ ಸಂಪರ್ಕ ಹೊಂದಿದೆ. ಕರ್ನಾಟಕದ ಮಹಿಳೆಯರ ಸಾಂಪ್ರದಾಯಿಕ ವೇಷ ಭೂಷಣಗಳೆಂದರೆ ಸೀರೆ, ಸೀರೆಗಳನ್ನು ಹತ್ತಿ ಮತ್ತು ರೇಷ್ಮೆ ಬಟ್ಟೆಯಿಂದ ನೇಯಲಾಗುತ್ತದೆ. ಇದರಿಂದಾಗಿ ಹೆಚ್ಚಿನ ಕರ್ನಾಟಕದವರು ರೇಷ್ಮೆ ಸೀರೆಗಳನ್ನು ಉಡಲು ಇಷ್ಟಪಡುತ್ತಾರೆ. ಪ್ರಾಚೀನ ಕಾಲದಲ್ಲಿ ಕರ್ನಾಟಕ ಪ್ರದೇಶವು ರೇಷ್ಮೆ ಬಟ್ಟೆಗೆ ಪ್ರಸಿದ್ಧವಾಗಿತ್ತು. ಇನ್ನು, ಕರ್ನಾಟಕದ ಪ್ರತಿಯೊಂದು ಜಿಲ್ಲೆಯಲ್ಲೂ ಅವರದೇ ಶೈಲಿಯಲ್ಲಿ ಸುಂದರ ವಿನ್ಯಾಸದ ರೇಷ್ಮೆ ಸೀರೆಗಳನ್ನು ನಾವು ಕಾಣಬಹುದು. ಅನೇಕ ವ್ಯಾಪಾರಿಗಳು (brocades) ಮತ್ತು ಫ್ಯಾಷನ್ ವಿನ್ಯಾಸಕರು ಉತ್ತಮ ಗುಣಮಟ್ಟದ ರೇಷ್ಮೆ ಬಟ್ಟೆಗಳನ್ನು ಖರೀದಿಸಲು ಕರ್ನಾಟಕಕ್ಕೆ ಭೇಟಿ ನೀಡುತ್ತಾರೆ. ಜರತಾರಿ ಕಸೂತಿ ಮಾಡಿದ ರೇಷ್ಮೆ ಬಟ್ಟೆ, ನಯವಾದ ಶಿಫಾನ್ (chiffons) ಮತ್ತು ನಯವಾದ ರೇಷ್ಮೆಗಳು ಬಟ್ಟೆಗಳು ಕರ್ನಾಟಕದಲ್ಲಿ ಲಭಿಸುತ್ತವೆ. ಈ ರೇಷ್ಮೆಯ ವಿಭಿನ್ನ ಸೀರೆಗಳು ಮಹಿಳೆಯರ ಮನೆಯ ಬೀರುವಿನಲ್ಲಿ ವೈವಿಧ್ಯತೆಯನ್ನು ತರುತ್ತವೆ. ಮೈಸೂರು ಮತ್ತು ಬೆಂಗಳೂರು ತಮ್ಮ ಸೊಗಸಾದ ಮೈಸೂರು ಸಿಲ್ಕ್‌ಗಳಿಗೆ ಅಥವಾ ಬೆಂಗಳೂರು ಮುದ್ರಿತ ರೇಷ್ಮೆ ಸೀರೆಗಳಿಗೆ ಭಾರತದಲ್ಲಿ ಪ್ರಮುಖ ರೇಷ್ಮೆ ಕೇಂದ್ರಗಳಲ್ಲಿ ಒಂದಾಗಿದೆ. ಇವುಗಳನ್ನು ಗಗನ ಸಖಿಯರು ಮತ್ತು ಇತರ ಕಾರ್ಪೊರೇಟ್ ಅಧಿಕಾರಿಗಳು ಸಮವಸ್ತ್ರವಾಗಿ ಧರಿಸುತ್ತಾರೆ. ಬಣ್ಣ, ಅಸಾಧಾರಣ ವಿನ್ಯಾಸಗಳು ಮತ್ತು ವಿಭಿನ್ನವಾದ ವಿನ್ಯಾಸಗಳು ಜನರನ್ನು ಬೆರಗುಗೊಳಿಸುತ್ತವೆ. ಮತ್ತು ಸೀರೆಗಳನ್ನು ಧರಿಸಲು ಉತ್ಸಾಹವನ್ನುಂಟು ಮಾಡುತ್ತವೆ. ಪುರುಷರ ಕರ್ನಾಟಕದ ಸಾಂಪ್ರದಾಯಿಕ ವೇಷಭೂಷಣವೆಂದರೆ ಪಂಚೆ, ಪುರುಷರು ಪಂಚೆಯನ್ನು ಅಂಗಿಯೊಂದಿಗೆ ಧರಿಸುತ್ತಾರೆ. ಪುರುಷರು ಭುಜದ ಮೇಲೆ ಅಂಗ ವಸ್ತ್ರವನ್ನು ವಿಶೇಷ ಸಂದರ್ಭಗಳಲ್ಲಿ ಮತ್ತು ಹಬ್ಬದ ಋತುಗಳಲ್ಲಿ ಪುರುಷರು ಪಂಚೆ ಧರಿಸುತ್ತಾರೆ. ಇದು ಬಿಳಿ ಬಣ್ಣದಲ್ಲಿದೆ ಮತ್ತು ಧೋತಿಯಂತೆ ಕಾಣುತ್ತದೆ. ಮೈಸೂರು ಪೇಟಾ ಪುರುಷರಿಗೆ ಸಾಂಪ್ರದಾಯಿಕ ಶಿರಸ್ತ್ರಾಣವಾಗಿದೆ. ಕರ್ನಾಟಕದ ಜನ ಸಂಖ್ಯೆಯು ಬಳಕೆಗೆ ತಂದಿರುವ ವೈವಿಧ್ಯಮಯ ವೇಷ ಭೂಷಣಗಳು ಸಂಸ್ಕೃತಿ, ಕಲೆ ಮತ್ತು ವಿನ್ಯಾಸದ ಮಿಶ್ರಣದೊಂದಿಗೆ ಪರಂಪರೆ ಮತ್ತು ತನ್ನದೇ ಆದ ಮಹತ್ವವನ್ನು ಹೊಂದಿದೆ.

ಕರ್ನಾಟಕವು "ಒಂದು ರಾಜ್ಯ ಹಲವು ಪ್ರಪಂಚಗಳು" ಎಂಬ ಟ್ಯಾಗ್‌ಲೈನ್ ಅನ್ನು ಪ್ರತಿನಿಧಿಸುತ್ತದೆ. ಕರ್ನಾಟಕದ ಜನರು ಅನೇಕ ಸಂಸ್ಕೃತಿಗಳು ಮತ್ತು ಸಂಪ್ರದಾಯಗಳ ಮಿಶ್ರಣದೊಂದಿಗೆ ವಿನಮ್ರ, ಸ್ನೇಹ ಪರರಾಗಿದ್ದಾರೆ ಮತ್ತು ಅವರ ಪದ್ಧತಿಗಳು, ಸಂಸ್ಕೃತಿ ಮತ್ತು ವೇಷಭೂಷಣಗಳಿಗೆ ನಿಜವಾದ ಸರ್ವರಾಷ್ಟ್ರ ಪ್ರೇಮ ವಿಧಾನವನ್ನು ಹೊಂದಿದ್ದಾರೆ.

## ಓದುಪತ್ಯ:

### ೪. ಬಂತು ಬಂತು ಕರಂಟು ಬಂತು

**– ಚ.ಹ. ರಘುನಾಥ**

**'ಐಟಂ'** ಎನ್ನುವುದಕ್ಕೆ ಶಬ್ದಕೋಶದಲ್ಲಿ ಇರುವ ಕೆಲವು ಅರ್ಥಗಳು ಪದಾರ್ಥ, ಅಂಶ, ವಿಷಯ, ವಸ್ತು, ಬಾಬು. ಈ ಎಲ್ಲ ಅರ್ಥಗಳನ್ನೂ ಐಟಂ ಸಾಂಗ್ ಸಂದರ್ಭದಲ್ಲಿ ಶೃಂಗಾರ ಎಂದೇ ಅರ್ಥೈಸಲಾಗುತ್ತದೆ. ಅದು ರಮಣೀಯವಾದ ಶೃಂಗಾರವಲ್ಲ; ರೋಚಕ, ಪ್ರಚೋದಕವಾದುದು.

"ಐಟಂ ಸಾಂಗ್" ಎನ್ನುವುದು ಭಾರತೀಯ ಸಿಮಾದ ವಿಶೇಷ ಪರಿಕಲ್ಪನೆ. ಅದು ಸಂಗೀತ–ನೃತ್ಯದ ರಸವತ್ತಾದ ಹಬ್ಬ, ಮೈಸಿರಿಯ ಮೆರವಣಿಗೆಯಲ್ಲಿ ಸಂಗೀತದ ಮಾದಕತೆಯೂ ಒಟ್ಟಾಗುವ ಸಂಭ್ರಮವಿದು. ಮೈಕಟ್ಟನ್ನು ತೆರೆದುತೋರುವ ಉಡುಗೆಯಲ್ಲಿ ಹೆಣ್ಣನ್ನು ಪ್ರದರ್ಶಿಸುವ, ಸ್ತ್ರೀ ಸೌಂದರ್ಯವನ್ನು ವಿಜೃಂಭಿಸುವ ಕಲೆಗಾರಿಕೆ ಇದು.

ಊಟದಲ್ಲಿ ಉಪ್ಪಿನಕಾಯಿ ಇದ್ದಂತೆ ಸಿನಿಮಾದಲ್ಲಿ 'ಐಟಂ ಸಾಂಗ್' ಇದನ್ನು 'ಮಸಾಲಾ ಗೀತೆ' ಎಂದು ಕರೆಯಬಹುದು. ನರ್ತಕಿಯ ದೇಹದ ಬಾಗು ಬಳುಕು ಹಾಗೂ ಹಾಡಿನಲ್ಲಿನ ಕಚಗುಳಿ ಸಾಹಿತ್ಯದಿಂದಾಗಿ 'ಮಸಾಲಾ ಗೀತೆ'ಗಳು ಚಿತ್ರರಸಿಕರನ್ನು ಪುಳಕಗೊಳಿಸುತ್ತವೆ. ಕ್ಯಾಬರೆ, ಐಟಂ ಸಾಂಗ್ ಎಂದರೆ ಮೂಗು ಮುರಿಯುತ್ತಿದ್ದ ಕಾಲ ಇದೀಗ ಬದಲಾಗಿದೆ. ನೈತಿಕತೆಯ ಚೌಕಟ್ಟು ಬದಲಾಗಿರುವ ಸಂದರ್ಭದಲ್ಲಿ ಪುಟ್ಟ ಮಗು ಕೂಡ 'ಎಂಥ ಮಾತು ಪಂಕಜ' ಎಂದು ಗುನುಗುತ್ತದೆ, ಹೆಜ್ಜೆ ಹಾಕುತ್ತದೆ.

ಐಟಂ ಹಾಡಿನ ಮೂಲಗಳ ಬಿಡಿಸುತ್ತಾ ಹೋದರೆ ಅದರ ಬೇರುಗಳು ಕಾಣಿಸುವುದು ಹಿಂದಿ ಚಿತ್ರರಂಗದಲ್ಲಿ, ಈಚೆಗಂತೂ ಕನ್ನಡ, ತೆಲುಗು, ತಮಿಳು, ಸಿನಿಮಾಗಳಲ್ಲೂ ಸರ್ವೇ ಸಾಧಾರಣ ಎನ್ನುವಂತಾಗಿರುವ ಸರಕಿದು. 'ಐಟಂ ಸಾಂಗ್' ಎನ್ನುವ ಪದ–ಪರಿಕಲ್ಪನೆ ಕನ್ನಡ, ತೆಲುಗು, ತಮಿಳು, ಹಿಂದಿ ಸೇರಿದಂತೆ ಭಾರತೀಯ ಚಿತ್ರರಂಗದಲ್ಲಿ ಎಲ್ಲೆಡೆ ಚಲಾವಣೆಯಲ್ಲಿದೆ. ಈ ಹಾಡಿನ ಉದ್ದೇಶ ಸರಳವಾದುದು – ಪ್ರಚಾರದ ತಂತ್ರ, ರಸಿಕರ ಕಂಗಳ ತಣಿಸುವ ಸೂತ್ರ.

'ಐಟಂ' ಹಾಡುಗಳಲ್ಲಿ ಸಾಮಾನ್ಯವಾಗಿ ಹೆಣ್ಣು ಮಕ್ಕಳೇ ಕಾಣಿಸುವುದು ರೂಢಿ. ಅಪರೂಪಕ್ಕೆ ಗಂಡು ಹೈಕಳೂ ಕುಣಿಯುವುದಿದೆ. ಆದರೆ, ಹೆಚ್ಚಿನ ಸಂದರ್ಭಗಳಲ್ಲದು ಪುಕ್ಕ ತರಿದುಕೊಂಡ ನವಿಲಿನ ಕುಣಿತದಂತಿರುತ್ತದೆ. ಮುಂಬಯಿಯ ಸಿನಿಮಾ ಜಾನಪದದಲ್ಲಿ 'ಐಟಂ' ಎಂದರೆ ರಸವತ್ತಾದ ಹೆಣ್ಣು! ಅಂಥ ಹೆಣ್ಣು ಕೇಂದ್ರವಾದ ಹಾಡೇ ಐಟಂ ಸಾಂಗ್! ಸಾಹಿತ್ಯವೂ ರಸವತ್ತು. ಆರಂಭದಲ್ಲಿ ಬಾರು, ರಾತ್ರಿ ಕ್ಲಬ್ಬುಗಳ ಮಂದ ಬೆಳಕಿನಲ್ಲಿ ಕುಣಿತ. ಈಗ ಬಯಲಿನಲ್ಲೇ ಪಟ್ಟು !

ಭಾರತೀಯ ಐಟಂ ಹಾಡುಗಳ ಚರಿತ್ರೆಯ ಚಕೋರಿಯರು ಒಬ್ಬಿಬ್ಬರಲ್ಲ. ಆ ಯಾದಿಯಲ್ಲಿ ಮೊದಲು ನೆನೆಯಬೇಕಾದವರು ವೈಜಯಂತಿಮಾಲಾ, ಪದ್ಮನಿ ಹಾಗೂ ಹೆಲೆನ್ ಅವರನ್ನು ಎಪ್ಪತ್ತರ ದಶಕದಲ್ಲಿ ಕಾಮನೆಗಳೇ ಮೈತಳೆದಂತೆ ಕಾಣುವ, ಲಜ್ಜೆಗೆಟ್ಟ ಹುಡುಗಿಯರ ಪಾತ್ರಗಳನ್ನು ಐಟಂ ಸಾಂಗ್‌ಗಾಗಿ ಸೃಷ್ಟಿಸಲಾಗುತ್ತಿತ್ತು. ಪಾನಮಂದಿರಗಳಲ್ಲಿ, ಖಳರ ಅಡಗುತಾಣಗಳಲ್ಲಿ ಕುಣಿಯುತ್ತಿದ್ದ ಈ ವೈಯಾರಿಯರು ಕಾಮನೆಗಳನ್ನು ಪಸರಿಸುವ ವಾಹಕಗಳಂತಿದ್ದರು. ಅರೆ ಶಾಸ್ತ್ರೀಯ ಚೌಕಟ್ಟಿನಲ್ಲಿ ಅವರ ನೃತ್ಯ ಸಾಗುತ್ತಿತ್ತು. 'ನಾಗಿನ್' ಚಿತ್ರದಲ್ಲಿ 'ಮನ್ ಡೋಲೆ ಮೇರಾ ತನ್ ಡೋಲೆ', 'ದೇವದಾಸ್'ನಲ್ಲಿನ

'ಅಬ್ ಆಗೆ ತೇರಿ ಮರ್ಜಿ' ಮತ್ತು 'ಓ ಜಾನೆವಾಲೆ ರುಕ್ ಜಾ' – ಇವೆಲ್ಲ ರಸಿಕರ ಎದೆಗಳಲ್ಲಿ ಕಿಚ್ಚು ಹೊತ್ತಿಸಿದ ಕೆಲವು ಗೀತೆಗಳು.

ಐಟಂ ಹಾಡುಗಳ ವಿಕಾಸದ ಹಾದಿಯಲ್ಲಿ ಹಿಂತಿರುಗಿ ನೋಡಿದರೆ 'ಕ್ಯಾಬರೆ' ಕಣ್ಣು ಮಿಟುಕಿಸುತ್ತದೆ. ಕ್ಯಾಬರೆ ಹಾಡುಗಳಲ್ಲಿ ಕುಣಿಯಲಿಕ್ಕೆಂದೇ ಮೀಸಲಾದ ಸುಂದರಿಯರಿದ್ದರು. ಜಯಮಾಲಿನಿ, ಸಿಲ್ಕ್ ಸ್ಮಿತಾ, ಡಿಸ್ಕೋ ಶಾಂತಿ – ಪಟ್ಟಿ ಬೆಳೆಯುತ್ತದೆ.

ಹೆಲೆನ್ ಒಬ್ಬ ಜನಪ್ರಿಯ ಐಟಂ ಸುಂದರಿ, 'ಹೌರಾ ಬ್ರಿಡ್ಜ್' (1958) ಚಿತ್ರದಲ್ಲಿ 'ಮೇರಾ ನಾಮ್ ಚಿನ್ ಚಿನ್ ಚೂ' ಎಂದಾಕೆ ಮೈ ಬಳುಕಿಸಿದ್ದೊಂದು ರಸಿಕ ಪುಟ. ಜೀನತ್ ಅಮಾನ್, ಪರ್ವೀನ್ ಬಾಬಿ, ಬಿಂದು, ಅರುಣಾ ಇರಾನಿ ಮುಂತಾದ ಸುಂದರಿಯರು ಹೆಲೆನ್ ಏಕಸ್ವಾಮ್ಯವನ್ನು ಮುರಿದರು. ಹೊಸಬರ ಪ್ರವೇಶದಿಂದ ವಿದೇಶಿ ನಾಯಕಿಯರ ವೈಯ್ಯಾರದ ಛಾಯೆಗಳು ಬಾಲಿವುಡ್‌ಗೆ ಪರಿಚಯಗೊಂಡವು. ಸಮುದಾಯಗಳ ಕುಣಿತಗಳೂ ಐಟಂ ಛಾಯೆಯಲ್ಲಿ ಕಾಣಿಸಿಕೊಳ್ಳತೊಡಗಿದವು. ಬುಡಕಟ್ಟು ಜನರು, ಮುಖ್ಯವಾಹಿನಿಯಿಂದ ಹೊರಗೆ ಉಳಿದ 'ಗಂಧದಗುಡಿ' ಚಿತ್ರದ 'ಗಿಣಿರಾಮ' ಅಂಥದೇ ಹಾಡು.

ತಬು, ರವೀನಾ ಟಂಡನ್, ಸೋನಾಲಿ ಬೇಂದ್ರೆ, ಊರ್ಮಿಳಾ, ಮಾತೋಂಡ್ಕರ್, ರಾಣಿ ಮುಖರ್ಜಿ, ಸುಶ್ಮಿತಾ ಸೇನ್, ಐಶ್ವರ್ಯಾ ರೈ ಇವರೆಲ್ಲ ಐಟಂ ಹಾಡುಗಳಿಗೆ ಬಳುಕಿದ ಸುಂದರಿಯರೇ. 'ರಾ ಒನ್'ನಲ್ಲಿ ಕರೀನಾ ಕಪೂರ್ 'ಚಮಕ್ ಚಲ್ಲೋ' ಎಂದು ಕುಣಿದದ್ದು, 'ಅಗ್ನಿಪಥ್' ಚಿತ್ರದಲ್ಲಿ ಕತ್ರೀನಾ ಕೈಫ್ 'ಚಿಕ್ಕಿ ಚಮೇಲಿ' ಆದದ್ದು, 'ದಬಂಗ್ 2' ಚಿತ್ರದಲ್ಲಿ ಕರೀನಾ ಕಪೂರ್ 'ಚಿಪ್ಕಾ ಲೇ ಸಯ್ಯಾ ಫೆವಿಕಾಲ್ ಸೆ' ಎಂದು ಸರಳರೇಖೆಯಂತೆ ಕಂಗೊಳಿಸಿದ್ದು, 'ದಿ ಡರ್ಟಿ ಪಿಕ್ಚರ್'ನಲ್ಲಿ ವಿದ್ಯಾ ಬಾಲನ್ ಮೊರೆ ಕಳಚಿಕೊಂಡ ಚಿಟ್ಟೆಯಂತೆ ಬೆಚ್ಚಿಬೀಳಿಸಿದ್ದು ಇವೆಲ್ಲ ಐಟಂ ಸಾಂಗ್ ಹಾದಿಯ ಕೆಲವು 'ಕುಣಿಗಲ್ಲು'ಗಳು!

ಐಟಂ ನೃತ್ಯಕ್ಕಾಗಿ ಮೀಸಲಾದ ವೈಯಾರಿಯರು ಪಕ್ಕಕ್ಕೆ ಸರಿದು, ಬರಬರುತ್ತಾ ನಾಯಕಿಯರೇ ಐಟಂ ಹಾಡು–ಕುಣಿತಗಳಲ್ಲಿ ಕಾಣಿಸಿಕೊಳ್ಳತೊಡಗಿದರು. ಆ ಸಾಲಿನಲ್ಲಿ ಎದ್ದು ಕಾಣುವ ಹೆಸರು ಮಾಧುರಿ ದೀಕ್ಷಿತ್. ಹೇಳಿಕೇಳಿ ಆಕೆ ಪಳಗಿದ ನೃತ್ಯಾಂಗನೆ. ಎಂಬತ್ತರ ದಶಕದಲ್ಲಿ ಆಕೆಯ ರೋಚಕ ಹಾಡು–ಕುಣಿತಗಳು ಭಾರತೀಯ ಪ್ರೇಕ್ಷಕರಿಗೆ ಕಚಗುಳಿ ಇಟ್ಟಿದ್ದವು. 'ತೇಜಾಬ್'ನಲ್ಲಿನ 'ಏಕ್ ದೋ ತೀನ್', 'ಬೇಟಾ' ಚಿತ್ರದಲ್ಲಿನ 'ಧಕ್ ಧಕ್' ಗೀತೆಗಳು ನೋಡುಗರ ಎದೆಮಿಡಿತವನ್ನು ಏರುಪೇರಾಗಿ[1]ದ್ದವು. 'ಖಳನಾಯಕ್' ಚಿತ್ರದಲ್ಲಿನ 'ಚೋಲಿ ಕೆ ಪೀಚೆ ಕ್ಯಾ ಹೈ' ಎನ್ನುವ ಮಾಧುರಿ ಹಾಡು ರಸಿಕರಿಗೆ ಮತ್ತೇರಿಸಿತ್ತು. ದ್ವಂದ್ವಾರ್ಥ ಹೊಂದಿದೆ ಎನ್ನುವ ಕಾರಣಕ್ಕೆ ಈ ಹಾಡಿನ ಬಗ್ಗೆ ನಡೆದ ಚರ್ಚೆಯ ಕಾವು ಸಂಸತ್ತಿನಲ್ಲೂ ಪ್ರತಿಧ್ವನಿಸಿತ್ತು.

ನಾಯಕಿಯರೇ ಐಟಂ ಸಾಂಗ್‌ಗಳಿಗೆ ಕುಣಿಯತೊಡಗಿದಾಗ, ಅಂಥ ಗೀತೆಗಳನ್ನು ಸ್ಪೆಷಲ್ ಸಾಂಗ್ ಎಂದು ಕರೆಯಲಾಯಿತು. 'ಜಾನಿ ಮೇರಾ ನಾಮ್ ಪ್ರೀತಿ ಮೇರಾ ಕಾಮ್' ಚಿತ್ರದಲ್ಲಿ ರಮ್ಯಾ ಸೊಂಟ ಬಳುಕಿಸಿದ 'ಊರಿಗೊಬ್ಬೆ ಪದ್ಮಾವತಿ' ಹಾಗೂ 'ಕಳ್ಳ ಮಳ್ಳ ಸುಳ್ಳ' ಚಿತ್ರದಲ್ಲಿ ರಾಗಿಣಿ ಕುಣಿದ 'ತುಪ್ಪ ಬೇಕಾ ತುಪ್ಪ' ಕನ್ನಡದಲ್ಲಿ ಉದಾಹರಿಸಬಹುದಾದ ಪ್ರಸಿದ್ಧ ಸ್ಪೆಷಲ್ ಸಾಂಗ್‌ಗಳು.

ತೊಂಬತ್ತರ ದಶಕದಲ್ಲಿ ಐಟಂ ಹಾಡುಗಳು ಕಿರುತೆರೆಯ ಕಾರ್ಯಕ್ರಮಗಳಲ್ಲಿ, ವಿವಿಧ ಸ್ಪರ್ಧೆಗಳ ವೇದಿಕೆಗಳಲ್ಲಿ ಅನುರಣಿಸತೊಡಗಿದವು. ಅಂದರೆ, ಈ ಗೀತೆಗಳು ಕ್ರಮೇಣ ಕುಟುಂಬದ ಪ್ರೇಕ್ಷಕರಿಗೂ ಸಹನೀಯ ಎನ್ನುವಂತಾಯಿತು. ಐಟಂ ಹಾಡುಗಳು ಹೊಸ ಪ್ರಭೆಯಲ್ಲಿ ಅದ್ದೂರಿಯಾಗಿ ತಯಾರಾಗತೊಡಗಿದವು.

ಈಗಂತೂ ಐಟಂ ಸಾಂಗ್ ಒಲ್ಲದ ನಾಯಕಿಯರು ಕಡಿಮೆ. ಯಶಸ್ಸಿಗೆ ಅದು ಹತ್ತಿರದ ದಾರಿ. ಗೌರಮ್ಮನ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ವಿದ್ಯಾ ಬಾಲನ್ ಅವರಂಥ ನಟಿಯೇ 'ಡರ್ಟಿ ಪಿಕ್ಚರ್'ನಲ್ಲಿ 'ಊ ಲಾ ಲಾ ಲಾ' ಎಂದು ಮುಲುಕಿದರು. ಐಟಂ ಸಾಂಗ್‌ಗಳ ಮೂಲಕವೇ ಅಪಾರ ಜನಪ್ರಿಯತೆ ಗಳಿಸಿದ್ದ ಸಿಲ್ಕ್ ಸ್ಮಿತಾ ಅವರ ಬದುಕಿನಿಂದ ಪ್ರೇರಿತವಾದ ಕಥೆಯ 'ಡರ್ಟಿ ಪಿಕ್ಚರ್' ವಿದ್ಯಾ ಅವರಿಗಿದ್ದ 'ಸ್ನಿಗ್ಧ ಸುಂದರಿ' ಎನ್ನುವ ಇಮೇಜ್ ಕಳಚಿ, 'ಐಟಂ' ಪ್ರಭಾವಳಿಯನ್ನು ಸೃಷ್ಟಿಸಿತು.

'ಚಮ್ಮಾ ಚಮ್ಮಾ' ಗೀತೆಯ ಊರ್ಮಿಳಾ ಮಾತೋಂಡ್ಕರ್, 'ಮೆಹಬೂಬ ಮೆಹಬೂಬ'ದ ಮಲ್ಲಿಕಾ ಷೆರಾವತ್, 'ಮುನ್ನಿ ಬದ್ನಾಮ್ ಹುಯೇ' ಹಾಗೂ 'ಅನಾರ್ಕಲಿ ಡಿಸ್ಕೊ ಚಲಿ' ಹಾಡುಗಳ ಮಲ್ಯೈಕಾ ಅರೋರಾ, 'ದಿಲ್ ಮೇರಾ ಮುಫ್ ಕಾ' ಹಾಡಿನ ಕರೀನಾ ಕಪೂರ್, 'ಬೀಡಿ ಜಲ್ಯೆಲೆ ಜಿಗರ್ ಸೇ ಪಿಯಾ ಬಿಪಾಶಾ ಬಸು, 'ಬೇಬಿ ಡಾಲ್ ಮೆ ಸೋನೆ ದಿ' ಗೀತೆಯ ಸನ್ನಿ ಲಿಯೋನ್ – ಇವರೆಲ್ಲ ಐಟಂ ಹಾಡಿನ ವರ್ಚಸ್ಸು ಹೆಚ್ಚಿಸಿದ ಚೆಲುವೆಯರೇ.

ಅಂದಹಾಗೆ, 'ಐಟಂ ಸಾಂಗ್' ಎಂದರೆ ಅದು ಸಿನಿಮಾಕ್ಕೆ ಮಾತ್ರ ಮೀಸಲು ಎಂದರ್ಥವಲ್ಲ. ಬೇಲೂರು ಹಳೆಬೀಡಿನ ದೇಗುಲಗಳಲ್ಲಿನ ಮದನಿಕೆಯರು ಐಟಂ ಸುಂದರಿಯರೇ, ಪುರಾಣಗಳ ಪುಟ ಮಗುಚಿದರೆ 'ಊ ಲಾ ಲಾ' ನಾಚಿಸುವಂಥ ಗಾನ–ನೃತ್ಯ ಪ್ರಸಂಗಗಳು ಸಿಗುತ್ತವೆ. ದೇವತೆಗಳ ರಾಜ ಇಂದ್ರನೇ ಬಹು ದೊಡ್ಡ ಐಟಂ ಡಾನ್ಸ್ ಮಾಸ್ಟರ್. ಮೇನಕೆ, ರಂಭೆ, ಊರ್ವಶಿ, ತಿಲೋತ್ತಮೆ, ಅಪ್ಸರೆಯರ ಪದಗತಿಯಿಂದ ಆತನ ಒಡ್ಡೋಲಗ ಶೋಭಾಯಮಾನ. ಶೃಂಗಾರದ ರೂಪಕವಾದ ರತಿ ಮನ್ಮಥರೂ 'ಐಟಂ' ವಿಷಯದಲ್ಲಿ ಪಳಗಿದವರೇ.

ಸಂಗೀತ–ನೃತ್ಯದ ಮಾತು ಬಂದರೆ ಕವಿಗಳ ಉತ್ಸಾಹಕ್ಕೆ ಕಾಲು ಮೂಡುತ್ತದೆ. ನೇಮಿಚಂದ್ರನ 'ಲೀಲಾವತಿ'ಯಲ್ಲಿ ರಂಭೆಯ ನರ್ತನದ ಸವಿಸ್ತಾರ ಬಣ್ಣನೆಯಿದೆ. ರಂಭೆಯ ಆಂಗಿಕ, ವಾಚಿಕ, ಆಹಾರ್ಯ, ಸಾತ್ವಿಕಾಭಿನಯಗಳು ಮನೋಜರಾಜನ ಚತುರಂಗದಂತೆ ಕವಿಗೆ ತೋರುತ್ತದೆ. ಅವಳ ಪಾದಪಲ್ಲವದ ಸೊಬಗು, ಕುಚಮಂಡಲ ಜಘನಗಳ ಚೆಲ್ಲು, ಚಾಪಗತಿಯಲ್ಲಿ ನಿಂತ ಆ ಸೊಬಗಿನ ಭಂಗಿ, ಅರುಣ ಸರೋರುಹದ ಅಲರಂತೆ ಎಡಕೆ ಬಲಕೆ ತೂಗುವ ರೀತಿ, ನಾನಾ – ರಾಗಗಳನ್ನು ಪೊಸೆಯಿಸುವ ರೀತಿ – ಎಲ್ಲವೂ ಕವಿಗೆ ಮೋಹಕವೇ ಅಚ್ಚಳಿಯೇ ನೇಮಿಚಂದ್ರನಂತೆಯೇ ರತ್ನಾಕರ ಕವಿ ನೇತ್ರಮೋಹಿನಿಯ ನರ್ತನವನ್ನು ಪರವಶನಾಗಿ ಬಣ್ಣಿಸುತ್ತಾನೆ: 'ಪಚ್ಚೆಯ ಚಲ್ಲಣ ಪಂಚವರ್ಣದ ಕಾಸೆ ಬೆಚ್ಚ ಮುತ್ತಿನ ಮೊಲೆಗಟ್ಟು / ಅಚ್ಚ ಜವ್ವನೆಯರಿರ್ದರು ನೋಡುವರ ಮನ ಹುಚ್ಚೆದ್ದು ಧರೆಗೆ ಬೀಳ್ವಂತೆ' ಎನ್ನುತ್ತಾನೆ.

ರಾಘವಾಂಕನ 'ಹರಿಶ್ಚಂದ್ರ ಕಾವ್ಯ'ದಲ್ಲೂ ರಸವತ್ತಾದ ನೃತ್ಯಹಬ್ಬವಿದೆ. ಬೇಟೆಗೆ ಹೋದ ಹರಿಶ್ಚಂದ್ರನಿಗೆ ಎದುರಾಗುವ ಗಾನರಾಣಿಯರು ತಮ್ಮ ಅದ್ಭುತ ನೃತ್ಯದಿಂದ ಹರಿಶ್ಚಂದ್ರ ನೃಪನನ್ನು ಸಂತೋಷಪಡಿಸುತ್ತಾರೆ. ಕುಣಿಯುವುದರಲ್ಲಷ್ಟೇ ಅಲ್ಲ, ಬುದ್ಧಿಮತ್ತೆಯಲ್ಲೂ ಈ ಗಾನರಾಣಿಯರು ಬಲ್ಲಿದರು. ತಮ್ಮ ರೂಪು, ನೃತ್ಯ ಆಸ್ವಾದಿಸಲಿಕ್ಕೆ ಅಡ್ಡಿಯಾಗದ ಜಾತಿ, ಮದುವೆಗೆ ಅಡ್ಡಿಬರುವುದೇ

ಎಂದು ಹರಿಶ್ಚಂದ್ರನೊಡನೆ ತರ್ಕ ಹೂಡುತ್ತಾರೆ. ಆತನೋ ಜಗಮೊಂಡ, ಗಾನರಾಣಿಯರ ನಿರಾಕರಿಸಿ ವಿಶ್ವಾಮಿತ್ರನ ಆಗ್ರಹಕ್ಕೆ ತುತ್ತಾಗುತ್ತಾನೆ.

ವಾಚ್ಯಾರ್ಥದಲ್ಲಿ ನೋಡುವುದಾದರೆ 'ಐಟಂ ಸಾಂಗ್'ನ ಉದ್ದೇಶ ಮನರಂಜನೆ, ಪ್ರಚೋದನೆ. ಆದರೆ ಸಹೃದಯರ ಪಾಲಿಗೆ ಅದೊಂದು ಕಲಾ ಪ್ರಕಾರವೂ ಹೌದು. ಕವಿ ಜಿ.ಎಸ್. ಶಿವರುದ್ರಪ್ಪನವರು ವಿಶ್ಲೇಷಿಸುವಂತೆ – "ನೃತ್ಯ ಕೇವಲ ಮನರಂಜನೆಯ ಒಂದು ಕಲೆಯಲ್ಲ; ಅದು ಕೇವಲ ಶೃಂಗಾರ ಭಾವಗಳನ್ನು ಹೊಮ್ಮಿಸುವ ಕೌಶಲಕ್ಕೆ ನಮ್ಮ ಕಾವ್ಯಗಳಲ್ಲಿ ಬಳಕೆಯಾಗಿದ್ದರೂ, ನೃತ್ಯ ಭವ್ಯತೆಗೇರಿರುವ ಪ್ರಸಂಗಗಳು ಕನ್ನಡ ಸಾಹಿತ್ಯದಲ್ಲಿ ಬಹುಶಃ ಎರಡು ಕಡೆ ಎಂದು ತೋರುತ್ತದೆ. ಒಂದು, ಪಂಪನ ಆದಿಪುರಾಣದಲ್ಲಿ ಬರುವ ಇಂದ್ರನ ಆನಂದ ನೃತ್ಯ (ಉಳಿದ ಕವಿಗಳೂ ಜೈನಪುರಾಣದಲ್ಲಿ ಯಥಾವತ್ತಾಗಿ ಅದನ್ನೇ ಅನುಕರಿಸಿರುವುದರಿಂದ ಅವು ಗಣನೀಯವಲ್ಲ) ಮತ್ತೊಂದು ಹರಿಹರನ ರಗಳೆಗಳಲ್ಲಿ ಬರುವ ಜೀವನ ಮತ್ತು ಅವನ ಭಕ್ತ ನೃತ್ಯ".

ಹಾಡು–ನೃತ್ಯದಲ್ಲಿ ಪ್ರಧಾನವಾದ ಶೃಂಗಾರದ ಇನ್ನೊಂದು ತುದಿಯಲ್ಲಿ ಅಧ್ಯಾತ್ಮ ಇರುವುದನ್ನು ಬೆಟ್ಟು ಮಾಡುವ ಜಿಎಸ್ಸೆಸ್, ಪಂಪನನ್ನು ಉದಾಹರಿಸುತ್ತಾರಲ್ಲ, 'ಆದಿಪುರಾಣ'ದಲ್ಲಿನ ನೀಲಾಂಜನೆಯ ಆ ನೃತ್ಯ ಒಂದು ಅಸಾಧಾರಣ ಕಾವ್ಯಪ್ರಸಂಗ, ಸುಖದ ಕ್ಷಣಿಕತೆಯನ್ನು ಅದ್ಭುತವಾಗಿ ಚಿತ್ರಿಸುವ ಆ ನೃತ್ಯವನ್ನು ಜಿಎಸ್ಸೆಸ್ ಹೊಸಗನ್ನಡದಲ್ಲಿ ಬಣ್ಣಿಸುತ್ತಾರೆ:

"ಪುರುದೇವನ ಆಸ್ಥಾನದಲ್ಲಿ ಇಂದ್ರ ನಿರ್ಮಿತವಾದ ನಾಟ್ಯ ಆರಂಭವಾಗಲಿದೆ. ರಸಿಕರು ಕಾತರರಾಗಿದ್ದಾರೆ. ಅಮರ್ದಿನ ಮಳೆಯಂತೆ ಹಿನ್ನೆಲೆಯ ವಾದನ ಮೊದಲಾಗಿದೆ. ಕಬ್ಬಿನ ಬಿಲ್ಲಿನಿಂದ ಮಸೆದ ಅಲರ್ಗಣೆ ಚಿಮ್ಮಿದಂತೆ ಭೋಂಕನೆ ನೀಲಾಂಜನೆ ರಂಗಸ್ಥಲವನ್ನು ಪ್ರವೇಶ ಮಾಡಿದ್ದಾಳೆ. ತೆಳ್ಳನೆಯ ಜವನಿಕೆಯ ಹಿಂದೆ ಮುಗಿಲ ಮರೆಯ ವಿದ್ಯುಲ್ಲತೆಯಂತೆ ಅವಳು ತೋರುತ್ತಿದ್ದಾಳೆ. ಈ ಅನಂಗ ಜಂಗಮ ಲತೆಯ ಭಂಗಿಯಲ್ಲಿ ರಸಗಳೆಲ್ಲಾ ನಿಂತಿವೆ. ಮೆಲ್ಲನೆ ತೆರೆ ಸರಿಯಿತು. ಮದನನ ಅಂಬುಗಳಂತೆ ಅವಳು ಕೈಯಲ್ಲಿ ಹಿಡಿದ ಹೂವುಗಳನ್ನು ಎರಚಿದಳು. ವಿಲಂಬಿತ ದ್ರುತ ಮಧ್ಯಲಯಂಗಳಲ್ಲಿ ವಾದ್ಯಗಳು ಅತಿ ಶುಭದವಾಗಿ ಮೊಳಗುತ್ತಿವೆ. ತಾಳದ ಲಯವನ್ನು ಅವಳ ನಿರಿ, ಮುಂಗುರುಳು, ಹಾರದ ಮುತ್ತುಗಳು, ಅನುಸರಿಸುತ್ತಿವೆ. ಭಾರತಿ ಸಾತ್ವಿಕ ಕೈಶಿಕಿ ಆರಭಟ ಎಂಬ ವೃತ್ತಿಗಳಲ್ಲಿ ರಸವನ್ನು ಸಂಚಾರಿಸುವ ವಿಸ್ತಾರಿಸುವ ಬೆಡಂಗು ಅಪೂರ್ವವಾಗಿದೆ. ಭಾವಾನುಭಾವವಿಭಾವಾದಿಗಳಿಂದ ರಸವನ್ನು ಒಸರುತ್ತಿದ್ದಾಳೆ".

ಹೊಸಗನ್ನಡ ಅರುಣೋದಯದ ಕವಿಗಳು ಕೂಡ ಕುಣಿತದ ಗುಂಗಿನಿಂದ ಹೊರಗಾದವರೇನಲ್ಲ. ಪೇಜಾವರ ಸದಾಶಿವರಾಯರು 'ನಾಟ್ಯೋತ್ಸವ' ಎನ್ನುವ ಕವಿತೆಯನ್ನು ಬರೆದರು. ದ.ರಾ. ಬೇಂದ್ರೆ 'ಕುಣಿಯೋಣು ಬಾರಾ ಕುಣಿಯೋಣು ಬಾರಾ / ಬಟ್ಟೆಯ ಹಂಗ್ಯಾಕ; ನೋಡೋರ ಗುಂಗ್ಯಾಕ' ಎಂದು ಆಹ್ವಾನ ಕವಿತೆ ಬರೆದರು. ಕ್ಯಾಬರೆ ಬಗ್ಗೆ ಬಿ.ಎಲ್.ಲಕ್ಷ್ಮಣರಾವ್ 'ಗೋಪಿ ಮತ್ತು ಗಾಂಡಲೀನ' ಎನ್ನುವ ಕವಿತೆ ಬರೆದು ಪೋಲಿ ಕವಿಯೆಂದೇ ಪ್ರಸಿದ್ಧರಾದರು. ಈ ಕವಿತೆ ಸಿನಿಮಾಗಳಲ್ಲೂ ಬಳಕೆಯಾಯಿತು. ಅಷ್ಟು ಮಾತ್ರವಲ್ಲ, 'ಜಾಲಿ ಬಾರಿನಲ್ಲಿ ಪೋಲಿ ಗೆಳೆಯರು' ಸಾಲು ಚಿತ್ರವೊಂದಕ್ಕೆ ಶೀರ್ಷಿಕೆಯೂ ಆಯಿತು. ...ಹೀಗೆ, ಅನೂಚಾನವಾಗಿ ಪ್ರವಹಿಸಿಕೊಂಡು ಬಂದ ಗಾನನಾಟ್ಯ ರಸಧಾರೆ ಆಧುನಿಕ ಸಂದರ್ಭದಲ್ಲಿ 'ಐಟಂ ಸಾಂಗ್' ಎನ್ನುವ ಹೆಸರು ಪಡೆದು ಸಿನಿಮಾದಲ್ಲಿ

ಕಂಗೊಳಿಸುತ್ತಿದೆ. ಕನ್ನಡ ಸಿನಿಮಾದಲ್ಲಂತೂ ಈ ಮಸಾಲಾ ಗೀತೆಗಳು ದಿನದಿಂದ ದಿನಕ್ಕೆ ಹೊಸರಂಗು ಪಡೆದುಕೊಳ್ಳುತ್ತಿವೆ.

ಹುಣಸೂರು ಕೃಷ್ಣಮೂರ್ತಿ ಅವರ ನಿರ್ದೇಶನದ 'ಸತ್ಯ ಹರಿಶ್ಚಂದ್ರ' ಚಿತ್ರದಲ್ಲೊಂದು ಸೊಗಸಾದ ಮಸಾಲೆ ಗೀತೆಯಿದೆ. ವೀರಬಾಹು ಸಮ್ಮುಖದಲ್ಲಿ ನರ್ತಕಿಯೊಬ್ಬಳು ಹಾಡಿಕೊಂಡು ಕುಣಿಯುತ್ತಿದ್ದಾಳೆ. 'ನನ್ನ ನೀನು ನಿನ್ನ ನಾನು ಕಾದುಕೊಂಡು ಕೂತುಕೊಂಡ್ರೆ। ಆಸೆಯೂ ಕಳೆಯದೆಂದು ಚಂದಮಾಮ । ಬೇಸಾರ ಕಳೆಯದೆಂದು ಚಂದಮಾಮ' ಎಂದಾಕೆ ವೀರಬಾಹುವನ್ನು ಕೆಣಕುತ್ತಾಳೆ. ಆಕೆ ನೀಡುವ ಆಹ್ವಾನವೋ ಅರಸಿಕನೆದೆಯಲ್ಲೂ ಕಾಮನೆಗಳ ಮೂಡಿಸುವಂತಿದೆ:

**ನೀಲಿ ರಂಗು ಪಟ್ಟೆ ಸೀರೆ ಕಟ್ಟಿಕೊಂಡೆ**
**ಕೆಂಪು ಹಳದಿ ಹೂವ ರವಿಕೆ ತೊಟ್ಟುಕೊಂಡೆ**
**ಮತ್ತೆ ಮಲ್ಲೆ ಹಾಕಿ ಹಾಸಿ ನಿನಗಾಗೆ**
**ಕಾದಿವ್ನು ಬಾರಯ್ಯಾ ತೋಟದೊಳಗೆ...**

ವೀರಬಾಹು ಅರಸಿಕನೇನೂ ಅಲ್ಲ 'ಬತ್ತೀನಿ ಬತ್ತೀನಿ' ಬತ್ತೀನಿ' ಎಂದು ಪ್ರತಿಕ್ರಿಯಿಸುತ್ತಾನೆ. ಹಾಡು ಮುಗಿದ ಮೇಲೆ, ತನ್ನ ಪಾದಸೇವೆಯಲ್ಲಿ ತೊಡಗಿದ್ದ ಹರಿಶ್ಚಂದ್ರನನ್ನು ಕುರಿತು, 'ಹೇಗಿತ್ತು ನೃತ್ಯ?' ಎಂದು ವೀರಬಾಹು ಪ್ರಶ್ನಿಸುತ್ತಾನೆ. ಆದರೆ, ಕಣ್ಣೆದುರಿನ ರಸಪ್ರಸಂಗಕ್ಕೆ ಹರಿಶ್ಚಂದ್ರ ಕುರುಡಾಗಿದ್ದಾನೆ. ಆತನ ಮನಸ್ಸು ಒಡೆಯನ ಸೇವೆಯಲ್ಲಿ ಮುಳುಗಿಹೋಗಿದೆ. ಸೇವಕನ ನಿಷ್ಠೆ ಮೆಚ್ಚಿದ ವೀರಬಾಹು ಮಸಣ ಕಾಯುವ ಕೆಲಸವನ್ನು ಹರಿಶ್ಚಂದ್ರನಿಗೆ ಮೆಚ್ಚುಗೆಯ ರೂಪದಲ್ಲಿ ವಹಿಸಿಕೊಡುತ್ತಾನೆ. ಹರಿಶ್ಚಂದ್ರ ಕಳೆದುಕೊಂಡಿದ್ದೆಲ್ಲವನ್ನೂ ಅವನಿಗೆ ನೆನಪಿಸುವ ರೀತಿಯ ಈ ಹಾಡು ಹಾಗೂ ಸತ್ಯನಿಷ್ಠೆಯ ಎದುರಲ್ಲಿ ಉಳಿದೆಲ್ಲವನ್ನೂ ತೃಣವಾಗಿ ಭಾವಿಸುವ ಹರಿಶ್ಚಂದ್ರನ ಮನೋದೃಢತೆಯನ್ನು ಹುಣಸೂರರು ಒಂದು ಮಸಾಲಾ ಗೀತೆಯ ಮೂಲಕ ಕಟ್ಟಿಕೊಟ್ಟಿರುವ ರೀತಿ ಅಪೂರ್ವವಾದದ್ದು.

ಐಟಂ ಗೀತೆಗಳ ಸಂದರ್ಭದಲ್ಲಿ ಗಾಯಕಿ ಎಲ್.ಆರ್. ಈಶ್ವರಿ ಅವರನ್ನು ನೆನಪಿಸಿಕೊಳ್ಳಲೇಬೇಕು. 'ಓ ಪ್ರೇಮದ ಪೂಜಾರಿ', 'ರಸಿಕಾ ರಸಿಕಾ..', 'ದೂರದಿಂದ ಬಂದಂತ ಸುಂದರಾಂಗ ಜಾಣ..., 'ಜೋಕೆ ನಾನು ಬಳ್ಳಿಯ ಮಿಂಚು' – ಹೀಗೆ ಈಶ್ವರಿ ಕಂಠದಲ್ಲಿ ಅಮರಗೊಂಡ ಗೀತೆಗಳು ಒಂದೆರಡಲ್ಲ. ಹಾಡಿನ ಸಾಹಿತ್ಯದ ರೋಚಕತೆ ಈಶ್ವರಿ ಅವರ ಗಡುಸು ಮಾದಕ ಧ್ವನಿಯಲ್ಲಿ ಪ್ರಖರಗೊಳ್ಳುತ್ತಿತ್ತು. ಈಗಲೂ ಇನ್ನಷ್ಟು ಹಾಡಿನ ಸ್ಪರ್ಧೆಗಳಲ್ಲಿ, ಗಾನಗೋಷ್ಠಿಗಳಲ್ಲಿ 'ಸುಂದರಾಂಗ ಜಾಣ' ಮರಳಿ ಮರಳಿ ಅವತರಿಸುತ್ತಲೇ ಇರುತ್ತಾನೆ.

'ನಂಜುಂಡಿ ಕಲ್ಯಾಣ' ಚಿತ್ರದ 'ಒಳಗೆ ಸೇರಿದರೆ ಗುಂಡು ಹುಡುಗಿಯಾಗುವಳು ಗಂಡು' (ಗಾಯಕಿ: ಮಂಜುಳಾ ಗುರುರಾಜ್) ತೊಂಬತ್ತರ ದಶಕದ ಜನಪ್ರಿಯ ಹಾಡು. ತೆಲುಗಿನಿಂದ ಕನ್ನಡಕ್ಕೆ ಆಮದಾದ ಮಾಲಾಶ್ರೀ ಸರಿಸಮನಾಗಿ ಅವರಿಗೆ ತಾರಾಪಟ್ಟ ತಂದುಕೊಟ್ಟು, ಅವರು ನಾಯಕಿಯಾಗಿ ಮೆರೆಯಲು ಮುನ್ನುಡಿ ಬರೆದ ಹೆಗ್ಗಳಿಕೆ ಈ ಗೀತೆಯದು. ನಶೆಯ ಹಾಡುಗಳು ಸಾಮಾನ್ಯವಾಗಿ ಶೃಂಗಾರದ ಭಿತ್ತಿಯನ್ನು ಒಳಗೊಂಡಿರುತ್ತವೆ. ಆದರೆ, 'ಬಿಸಿಯಾಗಿದೆ ನಶೆಯೇರಿದೆ / ಮಿತಿ ಮೀರಿದೆ ಜೋಪಾನ' ಎನ್ನುವ ನಂಜುಂಡಿಯ ದುರ್ಗಿಯ ಕುಡಿತದ ಕುಣಿತದ ಹಾಡಿನ ಹಿನ್ನೆಲೆ ಬೇರೆಯದೇ ಬಗೆಯದು. ತನ್ನನ್ನು ಮೋಸದಿಂದ ವರಿಸಿದ ಗಂಡಿನ ಮಾನವನ್ನು ಬೀದಿಯಲ್ಲಿ ಕಳೆಯುವ

ಉಪಾಯವಾಗಿ ನಾಯಕಿ ಗುಂಡುಬೀರಿಯಾಗುತ್ತಾಳೆ. ಅಮಲಿನಲ್ಲಿ ಆಕೆ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡಿರುವ ರೀತಿ ಭಲೇ ಎನ್ನುವಂತಿದೆ.

**ಆಕಾಶ ಕೆಳಗಾಗಿ ಈ ಲೋಕ ಕಳೆದುಹೋಗಿ**
**ನಡೆದಾಡುವ ಈ ದಾರಿ ತಡಕಾಡುವ ಹಾಗಾಗಿ**
**ತಲೆದೂಗುವ ಓಲಾಟ ನೋಡಿ ಹೇಗಿದೆ ಈ ಮಾಟ**
**ಒಳಗಿರುವ ಪರಮಾತ್ಮ ಆಡಿಸುವ ಆಟ**

**ಈ ದೇಶಕ್ಕೆ ನಾಳೆ ನಾನಾದರೆ ಪ್ರಧಾನಿ**
**ಸಾರಾಯಿ ಅಂಗಡಿಯೇ ನನಗಾಗ ರಾಜಧಾನಿ**
**ಗುಡಿಯಲ್ಲಿನ ದೇವರಿಗೂ ಸೋಡಾ ಬ್ರಾಂದಿಯ ನೈವೇದ್ಯ**
**ಏನು ಮಜಾ, ಏನು ಮಜಾ, ಕುಡುಕರ ಸಾಮ್ರಾಜ್ಯ**

ಭಂಗೀರಂಗರ ಸಾಹಿತ್ಯದ 'ನಂಜುಂಡಿ ಕಲ್ಯಾಣ'ದ ಗುಂಡಿನ ಹಾಡು ಜನಪ್ರಿಯಗೊಳ್ಳಲು ಮಾಲಾಶ್ರೀ ಅವರ ಬಿಡುಬೀಸು ಕುಣಿತದ ಜೊತೆಗೆ, ಮಂಜುಳಾ ಗುರುರಾಜ್ ಮಾದಕ ಕಂಠವೂ ಕಾರಣವಾಯಿತು. ನಂತರದ 'ಗಜಪತಿ ಗರ್ವಭಂಗ'ದಲ್ಲೂ ಮಾಲಾಶ್ರೀ–ಮಂಜುಳಾ ಜೋಡಿಯಲ್ಲಿ ಮೂಡಿಬಂದ 'ಜಟಕಾ ಕುದುರೆ ಹತ್ತಿ ಪೇಟೆಗೋಗುಮಾ' ಹಾಡು ಮೋಡಿಮಾಡುವಂತಿತ್ತು. ಇದೇ ಮಾಲಾಶ್ರೀ ನಂತರದ ವರ್ಷಗಳಲ್ಲಿ ಹೀರೊಗಳನ್ನು ಕುಣಿಸುವ ಮಟ್ಟಿಗೆ ಜನಪ್ರಿಯರಾದದ್ದು, ಅವರ ತಾರಾಪ್ರಭೆಯಲ್ಲಿ ನಾಯಕನಟರೇ ಕಳೆಗುಂದುವಂತಾದುದು ಪುರುಷ ಕೇಂದ್ರಿತ ಸಿನಿಮಾ ಇತಿಹಾಸದಲ್ಲಿನ ಸ್ವಾರಸ್ಯಕರ ಸಂಗತಿಗಳಲ್ಲೊಂದು.

ಕಥನ ಗುಣದಿಂದಾಗಿ ಕೆಲವು ಐಟಂ ಸಾಂಗ್‌ಗಳು ಮನೆಮಂದಿಯನ್ನು ತಲುಪುತ್ತವೆ. 'ಹುಡುಗರು' ಚಿತ್ರದ 'ಬೋರ್ಡು ಇರದ ಬಸ್ಸನು ಏರಿ ಬಂದ ಚೋಕರಿ' (ಸಾಹಿತ್ಯ: ಯೋಗರಾಜ ಭಟ್) ಗೀತೆ ಮಕ್ಕಳ ಪ್ರಾರ್ಥನಗೀತೆಯಂತೆ ಪರಿಣಮಿಸಿತ್ತು. 'ಪ್ರೇಮ್ ಅಡ್ಡಾ' ಚಿತ್ರದ 'ಬಸಂತಿ' ಗೀತೆಯೂ ಮಕ್ಕಳಿಗೆ ಬಾಯಿಪಾಠ. ಶಾಲೆಗಳಲ್ಲಿ ಮಕ್ಕಳು ಹೆಜ್ಜೆ ಹಾಕುವುದು ಕೂಡ ಇಂಥ ಗೀತೆಗಳಿಗೆ 'ಅಕ್ಕಾ ನಿಂಗಿನ್ನೂ ಏಜು ಟ್ವೆಂಟಿ ಒನ್ನು...', 'ಅಕ್ಕಾ ನಿಮ್ಮನೆಯಲ್ಲಿ ನಾಯಿಗೂ ಡಾನ್ಸು ಬರುತ್ತಾ... ನಿಮ್ಮೂರಲ್ ತಮಟೇನ ಹೊಡೆಯೋಕೆ ಚಾನ್ಸು ಸಿಗುತ್ತಾ' ಎಂದು ಮಕ್ಕಳು ಹಾಡಿಕೊಂಡರೆ ಗದರಿಸುವ ಅಮ್ಮಂದಿರು ಕಡಿಮೆಯಾಗಿದ್ದಾರೆ. ಶಾಲಾ ಕಾರ್ಯಕ್ರಮಗಳಲ್ಲೂ ಉತ್ಸವಗಳಲ್ಲೂ ಸ್ಥಾನಪಡೆಯುವ ಮಟ್ಟಿಗೆ ಐಟಂ ಹಾಡುಗಳು ಸಾರ್ವಜನಿಕ ಸ್ವೀಕೃತಿ ಪಡೆದಿವೆ.

ದರ್ಶನ್ ಅಭಿನಯದ 'ಐರಾವತ' ಸಿನಿಮಾದದಲ್ಲಿನ 'ಕಾ ತಲ್ಕಟ್ಟು ಕಾ' ಎನ್ನುವ 'ಡಾರ್ಲಿಂಗ್' ಗೀತೆಯೂ ಮಕ್ಕಳಿಗೆ ಪ್ರಿಯವಾಗುವ ಗುಣ ಹೊಂದಿದೆ. 'ಇದು ತುಂಬಾ ಪೆಷಲು ಕ್ಲಾಸು / ಅಡ್ಮೀಶನು ಮಾಡ್ಕೊಳ್ಳಿ ಪ್ಲೀಸು / ನಮ್ ಸೌಂದರ್ಯನ ಸವಿಯೋದಕ್ಕೂ / ಬೇಕ್ರಿ ಟ್ಯೂಶನ್ನು' ಎಂದು ಹಾಡುವ ನೃತ್ಯಾಂಗನೆ, 'ನಾವು ಅಚ್ಚಕನ್ನಡ ಮೀಡಿಯಮ್ಮು / ಕ ಕಾ ಕಾ ಕೀ ಕು ಕೂ ಖಾಯಮ್ಮು' ಎನ್ನುವ ಮೂಲಕ ರಸಾಸ್ವಾದಕ್ಕೂ ಭಾಷೆಯ ಸೊಗಡಿಗೂ ತಳಕು ಹಾಕಿರುವುದು ಸೊಗಸಾಗಿದೆ. ಈ ಅಚ್ಚಕನ್ನಡದ ಜವ್ವನೆ ತನ್ನ ವಿಳಾಸದ ಜೊತೆಗೆ ಆಹ್ವಾನ ನೀಡುವ ಪರಿಯನ್ನು ನೋಡಿ:

**ಸೈಕಲ್ ಶಾಪ ಹಿಂದುಗಡೆ**
**ಮೂರ್ನೆ ಕಾಸು ನನ್ನ ಮನೆ**
**ಗಾರ್ಡನ್‌ನಲ್ಲಿ ತೂಗುತ್ತಿದೆ**
**ಯಾಲಕ್ಕಿ ಬಾಳೆಗೊನೆ**
**ಎರಡು ಕಣ್ಣಲ್ಲೂ ಮೆಗಾ ಸೀರಿಯಲ್ಲು**
**ಅರ್ಧ ಗಂಟೆ ಎಪಿಸೋಡು**
**ಹಳ್ಳಿ ಕಡೆ ಇರೋದು**
**ಸಂಜೇಲಿ ಕರೆಂಟು**
**ಏನೋ ಒಂದು ಡಿಸಿಷನ್ನು**
**ತಕೊಳ್ಳಿ ಅರ್ಜೆಂಟು**

'ಕಲಾ ರಸಿಕರೆ ಬನ್ನಿ, ಬಲಗಾಲು ಒಳಗಿಟ್ಟು' ಎನ್ನುವ ಆಹ್ವಾನ ಯಾರನ್ನಾದರೂ ಡಿಸಿಷನ್ನು ತೆಗೆದುಕೊಳ್ಳಲು ಪ್ರೇರೇಪಿಸುವಂತಿದೆ. ತೆಲುಗಿನ 'ಆರ್ಯ' ಚಿತ್ರದಲ್ಲಿ ಮುಮೈತ್ ಖಾನ್ ಹಾಗೂ ಅಲ್ಲು ಅರ್ಜುನ್ ಕರಂಟು ಹೊಡೆಸಿಕೊಂಡಂತೆ ಬಿಡುಬೀಸಾಗಿ ಕುಣಿದಿರುವ 'ಆ ಅಂಟೆ ಅಮಲಾಪುರಂ' ಕನ್ನಡದ ಚಿತ್ರರಸಿಕರನ್ನೂ ಅಮಲಾಪುರದಲ್ಲಿ ಅಡ್ಡಾಡಿಸಿದ ಹಾಡು.

ಐಟಂ ಗೀತೆಗಳ ಬಗೆಗಿನ ಸಿಗ್ಗು ಕಡಿಮೆಯಾಗಿ, ರಸಾಸ್ವಾದನೆ ರೂಪದಲ್ಲಿ ಅವುಗಳನ್ನು ಸ್ವೀಕರಿಸುತ್ತಿರುವ ಸಂದರ್ಭದಲ್ಲಿ ಮನೆಮಂದಿಯೆಲ್ಲ ಐಟಂ ಗೀತೆಗಳನ್ನು ಗುನುಗುವಂತಾಗಿದೆ. ಹಾಗೆ ನೋಡಿದರೆ, ತೊಂಬತ್ತರ ದಶಕದಲ್ಲೇ ಈ ಸ್ವೀಕೃತಿಯ ಆರಂಭವಾಗಿದೆ ಎನ್ನಬಹುದು. 'ಮಿಸ್ಟರ್ ರಾಜ' ಚಿತ್ರದಲ್ಲಿ 'ದಮ್ಮರ ದಮ್ಮಮ್ಮ, ನಾ ಡಿಸ್ಕೋ ರುಕ್ಕಮ್ಮ' ಎನ್ನುವ ಗೀತೆಯಿದೆ (ಸಾಹಿತ್ಯ: ಹಂಸಲೇಖ) ಆ ಹಾಡಿನಲ್ಲಿ, 'ಬಾರೆನ್ನ ಸರದಾರ / ಈ ವಯಸು ಬಲು ಭಾರ' ಎಂದು ರುಕ್ಕಮ್ಮ ಕರೆದಾಗ, ಜೊಲ್ಲುಗಣ್ಣಿನ ಸರದಾರನ ಪಾತ್ರಧಾರಿ (ಎನ್.ಎಸ್. ರಾವ್) ನೀಡುವ ಉತ್ತರ ಮಾರ್ಮಿಕವಾಗಿದೆ:

**ಕುಣಿಸು ಎಂದರೆ ನೀ ಗುಣಿಸೋದ್ ಯಾಕಮ್ಮೋ**
**ಗುಂಡು ಹಾಕಿದ್ದರೂ ಟೈಟ್ ಆಗಿದ್ದರೂ ಬುದ್ಧಿಗೆಟ್ಟಿಲ್ಲ**
**ಕುಡಿಸು ಎಂದರೆ ನೀ ಗುಡಿಸೋದ್ ಯಾಕಮ್ಮೋ**
**ಸಂಸಾರಸ್ಥರ ರೂಲ್ಸುಗಳನ್ನು ನಾನು ಮೀರಲ್ಲ**

'ಬರಿ ಕುಣಿತ ಇದ್ದರೆ ನನಗಷ್ಟೇ ಸಾಕಮ್ಮ' ಎನ್ನುವ ಡಿಸ್ಕೋ ರುಕ್ಕಮ್ಮ ಗೀತೆಯ ಸಾರ ಇದೀಗ ಸಂಸಾರಸ್ಥರ ನೀತಿಸಂಹಿತೆಯಲ್ಲಿ ಸ್ಪಷ್ಟವಾಗಿ ಸೇರಿದೆ. ಕನ್ನಡ ಕಾವ್ಯಕ್ಕೆ ತುಂಟತನವನ್ನೂ ಪೋಲಿ ಸ್ಪರ್ಶವನ್ನೂ ತಂದವರಲ್ಲಿ ಒಬ್ಬರಾದ ಕವಿ ಬಿ.ಆರ್. ಲಕ್ಷ್ಮಣರಾಯರ 'ಗೋಪಿ ಮತ್ತು ಗಾಂಡಲೀನ' ಕವಿತೆಯ ಗೋಪಿ ಕೂಡ ಸಂಸಾರಸ್ಥರ ರೂಲ್ಸುಗಳನ್ನು ಮೀರದ ಗಂಡಸರ ಸಾಲಿಗೆ ಸೇರಿದವನು. ಗುಂಡುಗುಂಡು ಗಾಂಡಲೀನಳ 'ಕಟ್ಟಕಡೆಯ ತುಟ್ಟತುದಿಯ ಶಿಖರ ನೋಟದಲ್ಲಿ/ ನಡುವಿನ ಗಡಿ ಮೀರಿ ಮಾನ ಜಾರುವಷ್ಟರಲ್ಲಿ ಗೋಪಿಗೆ ಆಗುವ ಜ್ಞಾನೋದಯ ಹೀಗಿದೆ:

**ಹಾ, ವೆಂಕಟಸುಬ್ಬಿ!**
**ಹೆಂಡತಿ ನೆನಪು ದಬ್ಬಿ,**
**ಗಾಂಡಲೀನಳ ಪಾದಪದ್ಮಕಡ್ಡ ಬಿದ್ದನೋ,**
**ಪರನಾರಿ ಸಹೋದರನು ಕಾಮ ಗೆದ್ದನೋ.**

ಗಾಂಡಲೀನಳ ಬಗ್ಗೆ ಹೀಗೆ ತಾದ್ಯಾತ್ಮದಿಂದ ಬರೆದರೂ ಕವಿತೆ ಬರೆಯುವ ವೇಳೆಗೆ ಲಕ್ಷ್ಮಣರಾಯರು ತಮ್ಮ ಕಾವ್ಯನಾಯಕಿಯ ಕ್ಯಾಬರೆ ನೋಡಿರಲಿಲ್ಲವಂತೆ. ಗೆಳೆಯನೊಬ್ಬ ಬಣ್ಣಿಸಿದ್ದನ್ನು ಕೇಳಿ ಕವಿತೆ ಬರೆದರು. ಕವನ ಬರೆದ ಐದು ವರ್ಷಗಳ ನಂತರ ಗಾಂಡಲೀನಳ ಕ್ಯಾಬರೆಯನ್ನು ಕಣ್ಣಾರೆ ಕಾಣುವ ಸೌಭಾಗ್ಯ ಅವರಿಗೆ ದೊರೆಯಿತು. ಆ ಸಂದರ್ಭದಲ್ಲಿನ ತಮ್ಮ ಅನುಭವವನ್ನು 'ಹಾಡಿನ ಜಾಡು' ಎನ್ನುವ ಕೃತಿಯಲ್ಲಿ ಕವಿ ಬರೆದುಕೊಂಡಿರುವುದು ಹೀಗಿದೆ: "ನಿಜಕ್ಕೂ ಆಕೆ ಅದ್ಭುತ ಸೆಕ್ಸಿ ನರ್ತಕಿಯೆಂದು ಅಂದು ನನಗೆ ಮನದಟ್ಟಾಯಿತು. ಪ್ರದರ್ಶನದ ಮಧ್ಯಂತರದ ಬಿಡುವಿನಲ್ಲಿ ನಾನು ಆಕೆಯನ್ನು ಮೊದಲು ಭೇಟಿಯಾದೆ. ಕನ್ನಡದಲ್ಲಿ ಆಕೆಯ ಬಗ್ಗೆ ನಾನು ಕವನ ಬರೆದಿರುವುದು ಹಾಗೂ ಅದು ಅಪಾರ ಜನಪ್ರಿಯತೆ ಗಳಿಸಿರುವುದರ ಬಗ್ಗೆ ಆಕೆಗೆ ಇಂಗ್ಲಿಷಿನಲ್ಲಿ ವಿವರಿಸಿದೆ. ತುಂಬ ಖುಷಿಪಟ್ಟಳು. ಆ ಕವನವನ್ನು ಇಂಗ್ಲಿಷಿಗೆ ಅನುವಾದಿಸಿ ನನಗೆ ಕೊಡುವೆಯ?' ಎಂದು ಕೇಳಿದಳು. 'ಖಂಡಿತ ಕೊಡುವೆ' ಎಂದು ಮಾತು ಕೊಟ್ಟೆ, ಬಿಗಿದಪ್ಪಿ ಕೆನ್ನೆಗೊಂದು ಹೂಮುತ್ತು ಕೊಟ್ಟಳು. ಆಗ್ಗೆ ಅವಿವಾಹಿತನಾಗಿದ್ದ ನಾನು ರೋಮಾಂಚಿತನಾಗಿ 'ಧನ್ಯೋಸ್ಮಿ' ಎಂದುಕೊಂಡೆ."

'ಗೋಪಿ ಮತ್ತು ಗಾಂಡಲೀನ' ಕವಿತೆಯನ್ನು ಮೊದಲ ಬಾರಿಗೆ ಹಾಡಿದ ಸಂದರ್ಭದಲ್ಲಿ ಗಾಯಕ ರಾಜು ಅನಂತಸ್ವಾಮಿ, 'ಈ ಪೋಲಿ ಗೀತೆಯನ್ನು ಸಾರ್ವಜನಿಕವಾಗಿ ಹೇಗೆ ಹಾಡುವುದಪ್ಪ' ಎಂದು ಉದ್ಧರಿಸಿದ್ದರಂತೆ. ನಂತರದ ದಿನಗಳಲ್ಲಿ ಗೋಪಿಯ ಹಾಡು ಅಪಾರ ಜನಪ್ರಿಯತೆ ಗಳಿಸಿತು. ಹಾಗೆಯೇ ಐಟಂ ಹಾಡುಗಳು ಕೂಡ ನಿಧಾನವಾಗಿ ಪೊರೆ ಕಳಚಿಕೊಂಡವು. 'ಅಖಾಡ' ಎನ್ನುವ ಕನ್ನಡ ಚಿತ್ರವೊಂದರ ಗೀತೆಗಳ ಧ್ವನಿಮುದ್ರಿಕೆ ಬಿಡುಗಡೆ ಸಂದರ್ಭದಲ್ಲಿ, ಆ ಚಿತ್ರದ ಗೀತೆಗಳನ್ನು ಬೆಂಗಳೂರಿನ ಆಶ್ರಮವೊಂದರ ಸ್ವಾಮೀಜಿ ಕುತೂಹಲದಿಂದ ವೀಕ್ಷಿಸಿದ್ದರು. 'ಜನ ಚಿತ್ರಮಂದಿರಕ್ಕೆ ಬರಬೇಕು ಅಂತ ಹೇಳುವ ನಾವೇ ಸಿನಿಮಾ ನೋಡದಿದ್ದರೆ ಹೇಗೆ? ಸನ್ಯಾಸಿಗಳು ಸಿನಿಮಾ ನೋಡಬಾರದೆಂಬ ನಿಯಮವಿದೆಯೇ? ಹಾಗೆ ನೋಡಿದರೂ ಐಟಂ ಸಾಂಗ್ ಬಂದಾಗ ಕಣ್ಣು ಮುಚ್ಚಿಕೊಳ್ಳಬೇಕೆ" ಎಂದು ಸ್ವಾಮೀಜಿ ಪ್ರಶ್ನಿಸಿದ್ದರು. ಸ್ವಾಮೀಜಿಗಳೇ ಬಿಡುಗಣ್ಣಾಗಿರುವಾಗ ಜನಸಾಮಾನ್ಯರು ಕಣ್ಣು ಮುಚ್ಚಬೇಕೆಂದು ಯಾರು ತಾನೆ ಹೇಳಿಯಾರು?

ಚಿತ್ರ ನಿರ್ಮಾತೃಗಳ ಪಾಲಿಗೆ 'ಐಟಂ ಸಾಂಗ್‌ಗಳು ತಮ್ಮ ಚಿತ್ರದ ಜನಾಕರ್ಷಣೆಯ ಚುಂಬಕಗಳು. ಆದರೆ, ಈ ಗೀತೆಗಳ ಪರಂಪರೆಯನ್ನು ನೋಡಿದರೆ, ಆಯಾ ಕಾಲದ ಸಾಮಾಜಿಕ ಬದುಕಿನ ಕನ್ನಡಿಯಂತೆಯೂ ಅವು ಕಾಣಿಸುತ್ತವೆ. 'ಐಟಂ' ಎನ್ನುವ ಪದಕ್ಕೆ ನಿಘಂಟಿನಲ್ಲಿ 'ದಾಖಲೆ', 'ನಮೂದು' ಎನ್ನುವ ಅರ್ಥಗಳೂ ಇವೆ.

# ಘಟಕ ೦೪

## ಸಂಕೀರ್ಣ ಲೇಖನಗಳು

**ಆಶಯ:**

ನುಡಿದರೆ ಮುತ್ತಿನ ಹಾರದಂತಿರಬೇಕು!
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು!
ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು!
ನುಡಿದರೆ ಲಿಂಗ ಮೆಚ್ಚಿ ಅಹುದೆನಬೇಕು ?
ನುಡಿಯೊಳಗಾಗಿ ನಡೆಯದಿದ್ದರೆ
ಕೂಡಲಸಂಗಮದೇವನೆಂತೊಲಿವನಯ್ಯ ?

**– ಬಸವಣ್ಣ**

ಬಸವಣ್ಣನವರ ಪ್ರತಿಯೊಂದು ವಚನವು ದಾರಿದೀಪದಂತಿದೆ. ಅನೇಕ ಶರಣರು, ಅನುಭವಿಗಳು, ತತ್ವಜ್ಞಾನಿಗಳು ತಾವು ಕಂಡುಂಡ ಸಮಾಜದ ಚಿತ್ರಣವನ್ನು ಗಾದೆ ರೂಪದಲ್ಲಿ, ವಚನದ ರೂಪದಲ್ಲಿ, ನುಡಿಮುತ್ತುಗಳನ್ನು ಸಾಹಿತ್ಯದಲ್ಲಿ ತುಂಬಿದ್ದಾರೆ. ಅವುಗಳನ್ನು ನಾವು ತಪ್ಪದೆ ನಡೆದರೆ ಸುಖ ಜೀವನ, ಶಾಂತಿಯ ಬದುಕು.

ಬರೆ ಓದಿ ಓದಿ ಮರುಳಾದ ಕೂಚುಂಭಟ್ಟ ಅಂತಾಗಬಾರದು. ಓದಿನೊಂದಿಗೆ ಅನ್ಯ ಕ್ರಿಯಾ ಚಟುವಟಿಕೆಗಳಲ್ಲೂ ನಮ್ಮನ್ನು ನಾವು ತೊಡಗಿಸಿಕೊಳ್ಳಬೇಕು. ಇಲ್ಲದಿದ್ದರೆ ಇಂದಿನ ಪ್ರಪಂಚಕ್ಕೆ ನಾವು ಸರಿಹೊಂದುವುದಿಲ್ಲ. ವ್ಯಾಯಾಮ, ಕ್ರೀಡೆ, ನಾಟಕ, ಸಂಗೀತ, ನೃತ್ಯ, ಶಿಲ್ಪ, ಕಲೆ ಮುಂತಾದವುಗಳನ್ನು ರೂಡಿಸಿಕೊಳ್ಳಬೇಕು. ಎಲ್ಲರೂ ವಾಗ್ಮಿಗಳಾಗುವುದಿಲ್ಲ ಆದರೆ ರೂಢಿಸಿಕೊಂಡರೆ ಆಗಬಹುದು. ಅದು ಚಿಕ್ಕಂದಿನಲ್ಲಿ ವಿದ್ಯಾರ್ಥಿ ದೆಸೆಯಲ್ಲಿ ಆಗಬೇಕು. ಹುಟ್ಟಿದಾಗಲೇ ಎಲ್ಲರೂ ಪ್ರಭೂತಿಗಳಾಗಿರುವುದಿಲ್ಲ. ಕೆಲವು ವೇಳೆ ಪ್ರಯತ್ನದಿಂದಲೂ ಸಾಧಿಸಬಹುದು.

**– ಬಿ.ಎಸ್. ಸ್ವಾಮಿ**

# ೧. ಕೋಟ್ಯಾಧಿಪತಿಯಾದ ಹುಡುಗಾಟದ ಹುಡುಗ

**– ಬಾಲಚಂದ್ರ**

'ಮಕ್ಕಳಿಗೆ ಓದು ಬರಹ ಬೇಡವಾಗಿದೆ. ಅವು ಕಲಿಯಬೇಕು, ಶಿಕ್ಷಕರು ಹೊಡೆದಾದರೂ ಸರಿ, ಬಡಿದಾದರೂ ಸರಿ, ಮಕ್ಕಳಿಗೆ ಕಲಿಸಬೇಕು' ಎಂದು ವಾದಿಸುವ ಹೆತ್ತವರೂ ಇಂದಿಗೂ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಹೆತ್ತವರ ಕನಸಿನ ಮುಂದೆ ಮಕ್ಕಳ ಇಷ್ಟಕಷ್ಟಗಳ ಬಗ್ಗೆ ಲಕ್ಷ್ಯ ಕೊಡುವುದಿಲ್ಲ. ಇಂತಹ ಪ್ರವೃತ್ತಿ ಭಾರತಕ್ಕಷ್ಟೇ ಸೀಮಿತವಾಗಿಲ್ಲ, ದೂರದ ಅಮೇರಿಕದಲ್ಲೂ ಹೀಗೆ ಇದೆ. ಚಿಕ್ಕ ವಯಸ್ಸಿಗೆ ಓದಿಗೆ ಗುಡ್‌ಬೈ ಹೇಳಿದ್ದ ಗುರುಭಕ್ಷ್ ಚಹಾಲ್‌ಗೆ ಬೆಂಬಲ ಅಂತ ಸಿಕ್ಕಿದ್ದು ಪೋಷಕರಿಂದ ಅಲ್ಲ, ಅಜ್ಜಿಯಿಂದ. ಈಗ ಈ ಹುಡುಗ ಗಳಿಸಿದ ಮೊತ್ತ ೧,೮೮೦ ಕೋಟಿ ರೂ. ಇಷ್ಟು ದೊಡ್ಡ ಸಾಧನೆ ಮಾಡಿದ್ದು ಚಹಾಲ್ ತನ್ನ ೧೬ನೇ ವರ್ಷಕ್ಕೆ ಎಂಬುದನ್ನು ನಂಬಲೇಬೇಕು.

ದಶಕಗಳ ಹಿಂದೆ ಗುರುಭಕ್ಷ್ ಕುಟುಂಬ ಅಮೆರಿಕದ ಸ್ಯಾನ್ ಜೋಸ್ ಕ್ಯಾಲಿಫ್‌ಗೆ ಹೋಗಿ ನೆಲೆಸಿತು. ಪುಂಡ ಸ್ನೇಹಿತರ ಸಹವಾಸದಿಂದ ಓದಿದ್ದು ತಲೆಗೆ ಹತ್ತಲಿಲ್ಲ. ಮನೆಯವರು ಓದುವಂತೆ ಒತ್ತಡ ಹೇರಿದರು. ಚಹಾಲ್ ಮನಸ್ಸಿಗೆ ಹೋಗಲಿಲ್ಲ. ಮುಂದೇನು? ಎಂಬ ಪ್ರಶ್ನೆ ಕಾಡಲಾರಂಭಿಸಿತು. ಓದಲು ಮನಸ್ಸಿಲ್ಲ, ಮನೆಯವರು ಬಿಡುತ್ತಿಲ್ಲ. ಏನಾದರೂ ಉದ್ಯಮ ಮಾಡೋಣವೆಂದರೆ ಕೈಯಲ್ಲಿ ಹಣವಿಲ್ಲ. ಕೈಚೆಲ್ಲಿ ಕುಳಿತ ಚಹಾಲ್ ನೆರವಿಗೆ ಬಂದಿದ್ದು ಅವರ ಅಜ್ಜಿ.

ಕೈಗೆ ಒಂದಿಷ್ಟು ಕಾಸು ಕೊಟ್ಟು ಏನಾದರೂ ವ್ಯಾಪಾರ ಮಾಡುವಂತೆ ಸಲಹೆ ನೀಡಿದರು ಅಜ್ಜಿ. ಸ್ಥಳೀಯ ಮಾರ್ಕೆಟ್‌ಗೆ ತೆರಳಿದ ಚಹಾಲ್ ಅಲ್ಲಿ ೫೦ ಡಾಲರ್‌ಗೆ ಪ್ರಿಂಟರ್ ಬಿಡಿಭಾಗ ಖರೀದಿಸಿದ. ಒಂದಷ್ಟು ಹೊಸ ರೂಪ ನೀಡಿ 'ಈ–ಬೇ' ವೆಬ್‌ಸೈಟ್‌ನಲ್ಲಿ ೨೦೦ ಡಾಲರ್‌ಗೆ ಮಾರಾಟಕ್ಕಿಟ್ಟ. ಗುರುಭಕ್ಷ್ ಐಡಿಯಾ ಫಲ ನೀಡಿತ್ತು. ಹೀಗೆ ೧೫ನೇ ವರ್ಷಕ್ಕೆ ಸುಮಾರು ೪೦ ಮಿಲಿಯನ್ ಡಾಲರ್ ಗಳಿಸಿದ. ಈ ಹಣವನ್ನೇ ಹೂಡಿಕೆ ಮಾಡಿ ಆನ್‌ಲೈನ್ ಅಡ್ವಟೈಸಿರ್ಂಗ್ ಕಂಪನಿ 'ಬ್ಲೂ ಲಿಥಿಯಂ' ಕಂಪನಿ ಹುಟ್ಟುಹಾಕಿದ. ಕೇವಲ ಒಂದು ವರ್ಷದಲ್ಲೇ ಜನಪ್ರಿಯತೆ ಪಡೆದುಕೊಂಡು ಅಮೆರಿಕದಲ್ಲಿ ಮನೆಮಾತಾಯಿತು.

ಬೃಹತ್ ಅಂತರ್ಜಾಲ ಸಂಸ್ಥೆಯಾದ 'ಯಾಹೂ' ಕಿವಿಗೂ ಈ ಸುದ್ದಿ ಬಿತ್ತು. ಕಂಪನಿ ಭಾರೀ ಮೊತ್ತ ನೀಡಿ 'ಬ್ಲೂ ಲಿಥಿಯಂ' ಖರೀದಿಸಲು ಮುಂದಾಯಿತು. ಆರಂಭದಲ್ಲಿ ಕಂಪನಿ ಮಾರಲು

ಗುರುಭಕ್ಷ್ ಒಪ್ಪಲಿಲ್ಲ. ಇದಾದ ಬಳಿಕ ೨೦೦ ಮಿಲಿಯನ್ ಡಾಲರ್ (೧೮೮೦ ಕೋಟಿ ರೂ.ಗೆ ಒಪ್ಪಂದ ಕುದುರಿತು. ಗುರುಭಕ್ಷ್‌ನ ಈ ಸಾಧನೆ ಕುಟುಂಬಕ್ಕೂ ನಂಬಲು ಸಾಧ್ಯವಾಗಲಿಲ್ಲ. ಇದೀಗ, ಚಹಾಲ್ ಅಮೆರಿಕದಲ್ಲಿ ಸ್ವಂತ ಮನೆ ಖರೀದಿಸಿದ್ದಾರೆ.

ಉದ್ಯಮಗಳ ಒಳ–ಹೊರಗುಗಳಲ್ಲಿ ಅಧ್ಯಯನ ಮಾಡಿದ ಗುರುಭಕ್ಷ್ ಒಂದಿಷ್ಟು ವರ್ಷ ವಿರಾಮ ಪಡೆದು, 'ರೇಡಿಯಂ ಓನ್' ಕಂಪನಿ ಸ್ಥಾಪಿಸಿ ೧೫೦ ಮಂದಿಗೆ ಉದ್ಯೋಗ ಸಹ ನೀಡಿದ್ದಾನೆ. ಅಂದು ಹೆತ್ತವರು ಓದುವಂತೆ ಒತ್ತಾಯ ಹೇರಿದರೂ, ಇಂದು ತನ್ನ ಸಾಧನೆಗೆ ಬೆನ್ನು ತಟ್ಟಿದ್ದಾರೆ. ಮೊದಲು ಕಂಪನಿ ದೊಡ್ಡದಾಗಿ ಬೆಳೆಯಲು ಅದೃಷ್ಟ ಕೈಹಿಡಿಯಿತು. ಆದರೆ ಎರಡನೇ ಕಂಪನಿ ತನ್ನ ಶ್ರಮದಿಂದ ಬೆಳೆಯಿತು. ಮುಂದೆ ಇನ್ನಷ್ಟು ದೊಡ್ಡದಾಗಿ ಬೆಳೆಯುವ ಕನಸು ಹೊಂದಿದ್ದಾನೆ.

# ೨. ಶತಮಾನದ ಬಾಳಪ್ಪ

**– ಗುಡಿಹಳ್ಳಿ ನಾಗರಾಜ**

**ಆಶಯ :**

ಸಾಹಿತ್ಯ ಪ್ರಕಾರಗಳಲ್ಲಿ ರಮ್ಯವಾದದ್ದು ನಾಟಕ ಜನರಲ್ಲಿಯ ಆಲಸ್ಯ ಪ್ರವೃತ್ತಿಯನ್ನು ದೂರಮಾಡಿ ಅವರಿಗೆ ರಂಜನೆಯ ಜೊತೆಗೆ ಜ್ಞಾನ, ಶಿಕ್ಷಣವನ್ನು ನೀಡುವ ಹಾಗೂ ಜನರನ್ನು ಲೋಭ, ಈರ್ಷ್ಯ ಮೊದಲಾದ ದುರ್ಗುಣಗಳಿಂದ ಮುಕ್ತರಾಗಿಸಲು ದೇವತೆಗಳ ಕೋರಿಕೆಯ ಮೇರೆಗೆ ಬ್ರಹ್ಮ ನಾಟಕವೆಂಬ ಐದನೆಯ ವೇದವನ್ನು ರಚಿಸಿದ ಎನ್ನುತ್ತಾನೆ ಭರತ ತನ್ನ ನಾಟ್ಯಶಾಸ್ತ್ರದಲ್ಲಿ. ಮನರಂಜನೆಯ ಜೊತೆಜೊತೆಗೆ ಜನಸಾಮಾನ್ಯರಿಗೆ ಹಾಗೂ ದಿನನಿತ್ಯದ ಸಂಘರ್ಷಗಳಿಗೆ ಮುಖಾಮುಖಿಯಾಗುವ ಕಾರ್ಯವನ್ನು ಜನಪದ, ವೃತ್ತಿ, ಹವ್ಯಾಸಿ ಹೀಗೆ ಎಲ್ಲ ರಂಗಭೂಮಿಗಳೂ ಮಾಡುತ್ತಲೆ ಬಂದಿವೆ. ಹೊಸಹೊಸ ಪ್ರಯೋಗಗಳಿಗೆ ಒಡ್ಡಿಕೊಳ್ಳುತ್ತ 'ಕಲೆಗಾಗಿ ಕಲೆ ಅಲ್ಲ, ಜನರಿಗಾಗಿ ಕಲೆ' ಎಂಬುದನ್ನು ಸಾಬೀತು ಪಡಿಸಿವೆ.

ನಾಟಕ ಕಲೆಗೆ ಪ್ರೇಕ್ಷಕ ಗಣ ಒಂದು ಕಣ್ಣಾದರೆ ನಟರು ಮತ್ತೊಂದು ಕಣ್ಣು, ಒಂದು ಪಾತ್ರವನ್ನು ನಿನ್ನೆಯ ಪುನರಾವರ್ತನೆಯಾಗದಂತೆ ನಿತ್ಯಂ ಪೊಸತಾಗಿ ಅಭಿನಯಿಸಿ ಪ್ರೇಕ್ಷಕರನ್ನು ರಂಗಸ್ಥಳಕ್ಕೆ ಸೆಳೆದರು. ಅಂತಹ ಪ್ರತಿಭಾಶಾಲಿ ಸೃಜನಶೀಲ ಕಲಾವಿದರೊಬ್ಬರ ಬಾಳಪಥವನ್ನು ಪರಿಚಯಿಸುತ್ತದೆ ಈ ಪಠ್ಯ

ನಾಡುನುಡಿಗೆ ವೃತ್ತಿ ರಂಗಭೂಮಿಯ ಕೊಡುಗೆ ಅನನ್ಯವಾದುದು. ಭಾರತೀಯ ಸ್ವಾತಂತ್ರ್ಯ ಹೋರಾಟಕ್ಕೆ ವೃತ್ತಿರಂಗಭೂಮಿ ಸ್ಪಂದಿಸಿದೆ. ಕರ್ನಾಟಕ ಏಕೀಕರಣಕ್ಕೆ ಶ್ರಮಿಸಿದೆ. ರಂಗಸಂಗೀತ ಪ್ರಕಾರದ ಮೂಲಕ ಶಾಸ್ತ್ರೀಯ ಸಂಗೀತವನ್ನು ಜನಪ್ರಿಯವಾಗಿಸಿದೆ. ಮಹಾಭಾರತ, ರಾಮಾಯಣದಂತಹ ಮಹಾಕಾವ್ಯಗಳನ್ನು ಜನಮಾನಸದಲ್ಲಿ ಬಿತ್ತಿದೆ. ಜಾನಪದ ಹೊರತುಪಡಿಸಿದ ಗ್ರಾಮೀಣ ರಂಗಭೂಮಿ ಇಂದಿಗೂ ಅನುಕರಿಸುತ್ತಿರುವುದು ವೃತ್ತಿ ರಂಗಭೂಮಿಯ ಶೈಲಿಯನ್ನೇ. ಪಟ್ಟಣದ ಕನ್ನಡ ಸಂಘ ಸಂಸ್ಥೆಗಳು ಪ್ರದರ್ಶಿಸುವುದು ವೃತ್ತಿರಂಗಭೂಮಿಯ ಶೈಲೀಕೃತ ನಾಟಕಗಳನ್ನೇ ವೃತ್ತಿರಂಗ ಭೂಮಿಯ ಕೊಡುಗೆಗಳನ್ನು ಹೀಗೆ ಪಟ್ಟಿಮಾಡುತ್ತ ಹೋಗಬಹುದು...

ಕೈಗಾರಿಕಾ ಕ್ರಾಂತಿಯ ಸೃಷ್ಟಿಯಾದ ಮಧ್ಯಮವರ್ಗದ ಮನರಂಜನೆಗೆ ಹುಟ್ಟಿಕೊಂಡ ವೃತ್ತಿರಂಗಭೂಮಿ ಕ್ರಮೇಣ ಸಮಾಜದ ಎಲ್ಲ ಸ್ತರಗಳಿಗೂ ವಿಸ್ತರಿಸಿಕೊಂಡದ್ದು ಅದರ ಮಹತ್ವದ ಸಾಧನೆ. ಕನ್ನಡ ರಂಗಭೂಮಿಯನ್ನು ಶ್ರೀಮಂತಗೊಳಿಸಿ ವೈಭವದಿಂದ ಮೆರೆದ ವೃತ್ತಿರಂಗಭೂಮಿಗೆ ಈಗ ೧೩೦ರ ಪ್ರಾಯ. ಈ ೧೩೦ ವರ್ಷಗಳಲ್ಲಿ ನೂರು ವರ್ಷ ವೃತ್ತಿರಂಗಭೂಮಿಯ ಅವಿಭಾಜ್ಯ ಅಂಗವಾಗಿ ಬಾಳಿದವರು ನೂರನ್ನು ಸಮೀಪಿಸುತ್ತಿರುವ ಏಣಗಿ ಬಾಳಪ್ಪ.

ಶೀಘ್ರದಲ್ಲೇ ಶತಾಯುಯಾಗಲಿರುವ ಬಾಳಪ್ಪ ನಟರಾಗಿ ರಂಗ ಪ್ರವೇಶಿಸಿ, ಗಾಯಕರಾಗಿ ಬೆಳೆದು, ಮೊದಲು ಪಾಲುದಾರಿಕೆಯಲ್ಲಿ ನಂತರ ಸ್ವತಂತ್ರವಾಗಿ ನಾಟಕ ಕಂಪನಿ ಕಟ್ಟಿ ಏಳು ದಶಕಗಳ ಕಾಲ ವೃತ್ತಿರಂಗಭೂಮಿಯ ಸೇವೆ ಮಾಡಿದ್ದಾರೆ. ಬಾಳಪ್ಪ ತಾವು ಸ್ಥಾಪಿಸಿದ 'ಕಲಾವೈಭವ ನಾಟ್ಯಸಂಘ'ವನ್ನು ೧೯೮೩ರಲ್ಲಿ ಸ್ಥಗಿತಗೊಳಿಸಿದ ನಂತರವೂ ಉಪನ್ಯಾಸ, ಪಾತ್ಯಕ್ಷಿಕೆ, ರಂಗಗಾಯನ, ನಿರ್ದೇಶನದ ಮೂಲಕ ವೃತ್ತಿರಂಗಭೂಮಿಯ ನಿರಂತರತೆಗೆ ಕಾರಣರಾಗಿದ್ದಾರೆ. ಅವರ ಹಾಡು, ಅಭಿನಯ, ನಿರ್ದೇಶನ, ಸಂಘಟನಾ ಸಾಮರ್ಥ್ಯ ಒಂದು ತೂಕವಾದರೆ, ಅವರ ಸ್ಮರಣ ಶಕ್ತಿಯದೇ ಮತ್ತೊಂದು ತೂಕ, ಉತ್ತರ ಕರ್ನಾಟಕದ ಒಂದು ಶತಮಾನದ ರಂಗಚಟುವಟಿಕೆಗಳನ್ನು ತಮ್ಮ ಅಗಾಧ ನೆನಪಿನ ಶಕ್ತಿಯಿಂದ ಸ್ವಾರಸ್ಯಕರವಾಗಿ ಬಣ್ಣಿಸುತ್ತಾರೆ. ಹಾಗಾಗಿ ಅವರನ್ನು 'ನಡೆದಾಡುವ ವೃತ್ತಿರಂಗಭೂಮಿ' ಎಂದೇ ಬಣ್ಣಿಸಲಾಗುತ್ತದೆ.

ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕು ಏಣಗಿ ಗ್ರಾಮದ ಕೃಷಿ ಕುಟುಂಬದ ಕರಿಬಸಪ್ಪ ಲೋಕೂರ ಹಾಗೂ ಬಾಳಮ್ಮ ದಂಪತಿಗೆ ೧೯೧೪ರಲ್ಲಿ ಜನಿಸಿದ ಬಾಳಪ್ಪ ಬಾಲ್ಯದಿಂದಲೇ ಭಜನೆ, ಕೋಲಾಟ ಮುಂತಾದ ಜಾನಪದ ಕಲೆಗಳಲ್ಲಿ ಆಸಕ್ತಿ ತಾಳುತ್ತಾರೆ. ೩ನೇ ತರಗತಿ ಓದುತ್ತಿದ್ದಾಗಲೇ ತಮ್ಮೂರಿನಲ್ಲಿ ಜರುಗಿದ ಅನಿವಾರ್ಯವಾದ ಒಂದು ಪ್ರಸಂಗದಲ್ಲಿ ಮಾರ್ಕಂಡೇಯ ನಾಟಕದ ಗಣಪತಿ ಪಾತ್ರಕ್ಕೆ ಬಣ್ಣವನ್ನೂ ಹಚ್ಚಬೇಕಾಗಿ ಬಂದುಬಿಡುತ್ತದೆ.

ಅದರ ಬೆನ್ನಲ್ಲೇ ಏಣಗಿಯಲ್ಲಿ 'ಲವ-ಕುಶ' ನಾಟಕದ ತಾಲೀಮು ಹಚ್ಚುತ್ತಾರೆ. ಬಾಳಪ್ಪನಿಗೆ ಭರತನ ಪಾತ್ರ ಬಾಲಕನ ಪ್ರತಿಭೆ, ಚುರುಕುತನ ಗಮನಿಸಿದ ಊರ ಹಿರಿಯರು ನಾಟಕ ಕಂಪನಿಗೆ ಸೇರಿಕೊಳ್ಳುವಂತೆ ಸೂಚಿಸುತ್ತಾರೆ. ಹುಕ್ಕೇರಿ ಬಸವಪ್ರಭು ನಾಯಕರ ಮೌಲಾಲಿ: ಪ್ರಸಾದಿತ ನಾಟಕ ಮಂಡಳಿ ಸಮೀಪದ ಬೈಲಹೊಂಗಲದಲ್ಲಿ ಕ್ಯಾಂಪ್ ಮಾಡಿರುತ್ತದೆ. ಬಾಳಪ್ಪ ನಟನಾಗಿ ಆ ಕಂಪನಿ ಸೇರಿಕೊಳ್ಳುತ್ತಾರೆ. 'ಪಾದುಕಾ ಪಟ್ಟಾಭಿಷೇಕ' ನಾಟಕದಲ್ಲಿ ಭರತನ ಪಾತ್ರ ದೊರೆಯುತ್ತದೆ. ಕಲಿಯುವುದರಲ್ಲಿ ಅತೀವ ಶ್ರದ್ದೆ ಹೊಂದಿದ್ದ ಹದಿಹರೆಯದ ಯುವಕ ಬಾಳಪ್ಪ ನಾಟಕ ಕಂಪನಿಯ ಎಲ್ಲರ ಪ್ರೀತಿಗೆ ಪಾತ್ರರಾಗುತ್ತಾರೆ.

ತಂದೆ ಬಾಳಪ್ಪನಿಗೆ ಒಬ್ಬ ಅಣ್ಣ, ಒಬ್ಬ ಅಕ್ಕ. ಮೂರು ವರ್ಷ ಇದ್ದಾಗಲೇ ಕರಿಬಸಪ್ಪ ತೀರಿ ಹೋಗಿರುತ್ತಾರೆ. ಇದ್ದ ಅಲ್ಪಸ್ವಲ್ಪ ಆಸ್ತಿಯೆಂದರೆ ಊರ ಮುಂದಿನ ಹೊಲ. ಅದಕ್ಕೆ ಪ್ರತಿಕೂಲ ಪರಿಸ್ಥಿತಿಗಳೇ ಹೆಚ್ಚು. ಹಾಗಾಗಿ ತಾಯಿ ಬಾಳವ್ವ ಅವರಿವರ ಮನೆ ಕೆಲಸ ಮಾಡಿ ಮೂರು ಮಕ್ಕಳನ್ನೂ ಸಾಕುತ್ತಿರುತ್ತಾಳೆ. ತಾಯಿ ಊರಲ್ಲಿ ಎಷ್ಟು ಕಷ್ಟಪಡುತ್ತಿದ್ದಾಳೋ ಎಂಬ ಆತಂಕ ಹದಿಹರೆಯದ ಬಾಳಪ್ಪಗೆ ಊರಿಗೆ ಹೋಗುವ ಸೆಳೆತ ಹೆಚ್ಚಾಗುತ್ತದೆ. ಆದರೆ ನಾಟಕ ಮಂಡಳಿಯಲ್ಲಿದ್ದ ಹೆಸರಾಂತ ನಟಿ ಮರ್ದಾನ್ ಜಾನ್, ಬಾಳಪ್ಪ ಊರಿಗೆ ವಾಪಸ್ಸು ಹೋಗದಂತೆ ತಡೆಯುತ್ತಾಳೆ. ಎಳೆಯ ಬಾಳಪ್ಪನ ಒಳಗಿದ್ದ ಅಪ್ರತಿಮ ಕಲಾವಿದ ಪ್ರಕಾಶಗೊಳ್ಳಲು ಅಲ್ಲಿಂದ ಮುಂದೆ ಮುಕ್ತ ಅವಕಾಶ ದೊರೆಯುತ್ತದೆ. ಹೀಗೆ ಆರಂಭವಾದ ಕಲಾಯಾತ್ರೆ ಹಿಂತಿರುಗಿ ನೋಡಿದ್ದೇ ಇಲ್ಲ.

ನಾಟಕಕಾರ ಶಿವಲಿಂಗ ಸ್ವಾಮಿಗಳು ಆರು ತಿಂಗಳ ಕಾಲ ಕಿತ್ತೂರಿನಲ್ಲೇ ಉಳಿದುಕೊಂಡು ಚೆನ್ನಮ್ಮನ ಬಗ್ಗೆ ಇದ್ದ ದಾಖಲೆಗಳು, ಹಿರಿಯರ ಹೇಳಿಕೆಗಳು ಎಲ್ಲವನ್ನೂ ತಲಸ್ಪರ್ಶಿಯಾಗಿ ಅಧ್ಯಯನ ಮಾಡಿ ಅವನ್ನೇ ಆಕರವಾಗಿಸಿಕೊಂಡು 'ಕಿತ್ತೂರು ಚೆನ್ನಮ್ಮ' ನಾಟಕ ಬರೆದು ಅಬ್ಬಿಗೇರಿಯಲ್ಲಿ ಅದರ

ಯಶಸ್ವಿ ಪ್ರದರ್ಶನ ಮಾಡುತ್ತಾರೆ. ಚೆನ್ನಮ್ಮ ನಾಟಕ ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟದ ಮಹತ್ವವನ್ನು ಕಲಾತ್ಮಕವಾಗಿ ಕಟ್ಟಿಕೊಡುತ್ತದೆ. ಸ್ವಾಮಿಗಳ ಸಂಪರ್ಕಕ್ಕೆ ಬಂದ ಬಾಳಪ್ಪನವರಿಗೆ ನಾಟಕ ಎಂದರೆ ಬರೀ ಮನರಂಜನೆಯಲ್ಲ. ಅದಕ್ಕೆ ಸಾಮಾಜಿಕ ಬದ್ಧತೆ ಇದೆ ಎಂಬುದು ಆ ಹದಿಹರೆಯದಲ್ಲೇ ಮನದಟ್ಟಾಗುತ್ತದೆ.

೧೯೩೦ರ ದಶಕದಲ್ಲಿ ಗದಗದ ಯರಾಶಿ ಭರಮಪ್ಪ ಅವರು ವಾಣಿವಿಲಾಸ ಸಂಗೀತ ನಾಟಕ ಮಂಡಳಿ ಸ್ಥಾಪಿಸಿ ದೇಶದ ಮಹಾನ್ ಸಂಗೀತಗಾರರು, ಕಲಾವಿದರನ್ನು ಕಲೆ ಹಾಕುತ್ತಾರೆ. ಮಲ್ಲಿಕಾರ್ಜುನ ಮನ್ಸೂರು, ಬಸವರಾಜ ಮನಸೂರ, ಹಂದಿಗನೂರು ಸಿದ್ಧರಾಮಪ್ಪ, ಅಮೀರ್‌ಜಾನ್ ಕರ್ನಾಟಕಿ, ಗೋಹರ್‌ಜಾನ್ ಕರ್ನಾಟಕಿಯಂತಹ ದೇಶವೇ ಹೆಮ್ಮೆ ಪಡುವಂತಹ ಮಹಾನ್ ಕಲಾವಿದರು ಆ ಕಂಪನಿಯ ಕಲಾವಿದರು. ಸಂಗೀತ ನಾಟಕದ ಅವಿಭಾಜ್ಯ ಅಂಗವಾಗಿದ್ದ ಕಾಲ ಅದು. ಹಾಡುಗಾರರ ಮೊದಲ ಆಡುಂಬೋಲ ಸಾಮಾನ್ಯವಾಗಿ ನಾಟಕ ಕಂಪನಿಯೇ ಆಗಿರುತ್ತಿತ್ತು. ನಟ ಅಥವಾ ಆ ನಟಿಗೆ ಹಾಡುವುದು ಕಡ್ಡಾಯವಾಗಿ ಬರಬೇಕಿತ್ತು. ನಟನ ಆಯ್ಕೆಯೆಂದರೆ ಅವನ ಹಾಡುಗಾರಿಕೆ ಪರೀಕ್ಷೆಯೂ ಜತಗೇ ನಡೆಯುತ್ತಿತ್ತು. ಈ ನಾಟಕ ಮಂಡಳಿ ಸೇರಿದ ಯುವಕ ಬಾಳಪ್ಪ ರಂಗಸಂಗೀತದ ಪಟ್ಟುಗಳನ್ನು ಕರಗತ ಮಾಡಿಕೊಳ್ಳುತ್ತಾರೆ. 'ಎಳೆಮೆಯಿಂದಲೇ ಅವರದು ಮಧುರ ಕಂಠ ಬೇರೆ. ನಾಟಕದ ಮಹಾನ್ ನಟ ನಟಿಯರನ್ನು ನೋಡುತ್ತ ಕೇಳುತ್ತಲೇ ಸಂಗೀತವನ್ನು ಕಲಿತವರು ಬಾಳಪ್ಪ, ಯಾರಿಂದಲೂ ಹೇಳಿಸಿಕೊಳ್ಳಲಿಲ್ಲ. 'ಸಂಗೀತದಲ್ಲಿ ನನ್ನದು ಏಕಲವ್ಯ ಸಾಧನೆ. ಶ್ರೇಷ್ಠ ಸಂಗೀತಗಾರರ ಹಾಡುಗಳನ್ನು ಕೇಳುತ್ತಲೇ ನಾನು ಕಲಿಯುತ್ತ ಹೋದೆ' ಎಂದು ಹಲವಾರು ಬಾರಿ ಅವರು ಹೇಳಿದ್ದಾರೆ.

ಬಾಳಪ್ಪ ಮತ್ತೆ ಶಿವಲಿಂಗ ಸ್ವಾಮಿಗಳ ನಾಟಕ ಕಂಪನಿ ಸೇರಿ ಬಿ.ಎ ಸ್ತ್ರೀ, ಚಲ್ಲಿ ದುನಿಯಾದಂತಹ ಆಧುನಿಕ ನಾಟಕಗಳಲ್ಲಿ ಅಭಿನಯಿಸುತ್ತಾರೆ. ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟದ ಸಂದೇಶ ಹೊತ್ತ ಅಸ್ಪುರುಷ್ಯತಾ ನಿವಾರಣೆ ನಾಟಕದಲ್ಲಿ ನಟಿಸುತ್ತಾರೆ. ಆ ಹೊತ್ತಿಗೆ ವೈವಿಧ್ಯಮಯವಾದ ಪಾತ್ರಗಳ ನಟನೆಯನ್ನು ಪರಿಚಯ ಮಾಡಿಕೊಂಡು ಸಂಗೀತದಲ್ಲೂ ತಕ್ಕಮಟ್ಟಿನ ಸಾಧನೆ ಮಾಡಿ ಪರಿಪೂರ್ಣ ನಟನ ಹಂತ ತಲುಪುತ್ತಾರೆ. ೧೯೩೦ರ ದಶಕ ಸ್ಪರ್ಧೆಯಿಂದ ನಾಟಕ ಕಂಪನಿಗಳು ಹುಟ್ಟಿಕೊಳ್ಳುತ್ತಿದ್ದ ಕಾಲ. ಸೂಡಿ ಹುಚ್ಚಪ್ಪನವರ ಪಾಲುದಾರಿಕೆಯೊಂದಿಗೆ ಸ್ವಂತ ನಾಟಕ ಕಂಪನಿ ಆರಂಭಿಸಿ 'ಹೇಮರೆಡ್ಡಿ ಮಲ್ಲಮ್ಮ' ನಾಟಕ ಪ್ರದರ್ಶನಕ್ಕೆ ನಾಂದಿ ಹಾಡುತ್ತಾರೆ. ಅದರಲ್ಲಿ ಬಾಳಪ್ಪನವರದು ಮಲ್ಲಮ್ಮನದೇ ಪಾತ್ರ (ಹೇಮರೆಡ್ಡಿ ಮಲ್ಲಮ್ಮ ನಾಟಕವನ್ನು ಮುಂದಿನ ದಿನಗಳಲ್ಲಿ ನಾಡಿನ ಹೆಚ್ಚು ಕಡಿಮೆ ಎಲ್ಲ ನಾಟಕ ಕಂಪನಿಗಳು ಪ್ರದರ್ಶಿಸಿವೆ. ಗ್ರಾಮೀಣ ಹವ್ಯಾಸಿ ರಂಗಭೂಮಿಯಲ್ಲಿ ಇಂದಿಗೂ ನಿರಂತರವಾಗಿ ಪ್ರಯೋಗ ಕಾಣುತ್ತಿದ್ದು ಕನ್ನಡ ರಂಗಭೂಮಿಯ ಇತಿಹಾಸದಲ್ಲಿ ದೊಡ್ಡ ದಾಖಲೆಯನ್ನೇ ನಿರ್ಮಿಸಿತು.)

ಬಾಳಪ್ಪನವರು ಆರಂಭದ ದಿನಗಳಲ್ಲಿ ಮಹಿಳೆಯ ಪಾತ್ರಗಳಲ್ಲಿ ಅಭಿನಯಿಸಿದ್ದೇ ಹೆಚ್ಚು. ನಾಡಿನ ಹಲವಾರು ಕಲಾವಿದರು ಮಹಿಳಾ ಪಾತ್ರಗಳಿಗೆ ಅಭಿನಯಕ್ಕೆ ಹೆಸರಾಗಿದ್ದಾರೆ. ಆ ಪಟ್ಟಿಯಲ್ಲಿ ಕಾಣುವ ಮತ್ತೊಂದು ದೊಡ್ಡ ಹೆಸರು ಬಾಳಪ್ಪನವರದು. ತೆಳ್ಳಗೆ ಬೆಳ್ಳಗೆ ಅತಿ ಎತ್ತರವೂ ಅತಿ ಕುಳ್ಳಾನು ಅಲ್ಲದ ಅವರ ದೇಹದ ಭಾಷೆ ಯಾವುದೇ ಪಾತ್ರಕ್ಕೆ ಒಪ್ಪುವಂತಿತ್ತು. ಶಾರೀರವ ಆ ಹೊತ್ತಿಗೆ ಪಳಗಿತ್ತು. ಶರೀರ ಹಾಗೂ ಶಾರೀರದ ಸಮತೋಲನ ಹೊಂದಿರುವ ೩೦ರ ಹರೆಯದ ಯುವಕ ಬಾಳಪ್ಪ ಒಮ್ಮೆ

ಮಹಾರಾಷ್ಟ್ರದ ಸಾಂಗಲಿಯಲ್ಲಿ ನಾಟಕ ಕಂಪನಿ ಕ್ಯಾಂಪ್ ಮಾಡಿದಾಗ 'ವೀರರಾಣಿ ರುದ್ರಮ್ಮ' ನಾಟಕದ ಪ್ರದರ್ಶನ ಆರಂಭಿಸಿತ್ತು. ಬಾಳಪ್ಪ ರುದ್ರಮ್ಮನ ಪಾತ್ರದಲ್ಲಿ ಬಾಳಪ್ಪನವರ ದೇಶದ ಹೆಸರಾಂತ ಸಂಗೀತಗಾರ ದೀನಾನಾಥರ ಪದ್ಧತಿಯಲ್ಲಿ ರಂಗಗೀತೆ ಹಾಡಲಿದ್ದಾರೆ ಎಂದು ಮರಾಠಿ ಭಾಷೆಯಲ್ಲಿ ಪ್ರಚಾರ ಪಡಿಸಲಾಗುತ್ತದೆ. ಆಗ ದೀನಾನಾಥರು ತಮ್ಮ ಮಕ್ಕಳಾದ ಆಶಾ ಭೋಂಸ್ಲೆ, ಲತಾ ಮಂಗೇಶ್ವರ್ ಅವರೊಂದಿಗೆ ನಾಟಕ ನೋಡಲು ಬಂದು ಬಾಳಪ್ಪನವರ ಹಾಡುಗಾರಿಕೆಯನ್ನು ಮುಕ್ತ ಕಂಠದಿಂದ ಮೆಚ್ಚಿಕೊಳ್ಳುತ್ತಾರೆ.

೧೯೪೦ರಲ್ಲಿ ನಾಲ್ವರು ಭಾಗಸ್ಥರು ಸೇರಿ ವೈಭವಶಾಲಿ ನಾಟ್ಯ ಸಂಘ ಸ್ಥಾಪಿಸುತ್ತಾರೆ. ಕೆಲವು ತಿಂಗಳುಗಳ ನಂತರ ಅವರಲ್ಲಿ ಒಡಕು ಬಂದು ಇನಾಮುದಾರರು ಮಾತ್ರ ಬಾಳಪ್ಪನವರ ಜತೆ ಉಳಿಯುತ್ತಾರೆ. 'ಸಿಂಧೂರ ಲಕ್ಷಣ' ಎಂಬ ಮತ್ತೊಂದು ಹೊಸ ನಾಟಕ ಸಿದ್ಧಪಡಿಸುತ್ತಾರೆ. ವೈಭವಶಾಲಿ ನಾಟ್ಯ ಸಂಘ ತನ್ನ ಹೆಸರನ್ನು ಸಾರ್ಥಕಗೊಳಿಸುವಂತೆ ಮುಧೋಳ, ಮಹಾಲಿಂಗಪುರ, ಬಾಗಲಕೋಟೆ, ವಿಜಾಪುರ ಜಿಲ್ಲೆಗಳ ಹಲವು ಊರುಗಳಲ್ಲಿ ಕ್ಯಾಂಪ್ ಮುಗಿಸಿ ಬೆಳಗಾವಿಗೆ ಆಗಮಿಸುತ್ತದೆ. ಅದು ೧೯೪೨ರ ಕ್ವಿಟ್ ಇಂಡಿಯಾ ಚಲೇಜಾವ್ ಚಳುವಳಿಯ ಕಾಲ, ಮಹಾತ್ಮಾಗಾಂಧಿ ನೇತೃತ್ವದಲ್ಲಿ ದೇಶದಾದ್ಯಂತ ಹಬ್ಬಿದ್ದ ಕಾನೂನು ಭಂಗ ಚಳುವಳಿ ಈ ಭಾಗದಲ್ಲಿ ಇನ್ನೂ ಬಿರುಸಾಗಿರುತ್ತದೆ. ವಾಲಿ ಚನ್ನಪ್ಪ, ಚಿನ್ಮಯ ಸ್ವಾಮಿಗಳ ರೋಮಾಂಚಕ ಭಾಷಣ ಕೇಳಿದ ಸಹಸ್ರ ಸಂಖ್ಯೆಯ ಗ್ರಾಮೀಣರು ಸ್ವಾತಂತ್ರ್ಯ ಸೇನಾನಿಗಳಾಗಿ ಪರಿವರ್ತಿತರಾಗುತ್ತಾರೆ. ವಿದೇಶಿ ಬಟ್ಟೆ, ಕಛೇರಿಯ ಪೀಠೋಪಕರಣಗಳನ್ನು ಧ್ವಂಸ ಮಾಡುತ್ತಿದ್ದ ಸೇನಾನಿಗಳು ನಾಟಕ ಕಂಪನಿಯ ಆಸರೆ ಪಡೆಯುತ್ತಾರೆ. ಅವರೆಲ್ಲರಿಗೂ ವೈಭವಶಾಲಿ ನಾಟಕ ಕಂಪನಿ ರಕ್ಷಣೆ ಕೊಡುತ್ತದೆ. ಒಂದೆಡೆ ಕಿತ್ತೂರು ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಸಿಂಧೂರ ಲಕ್ಷ್ಮಣ, ನರಗುಂದ ಬಂಡಾಯ, ಅಸ್ಪೃಶ್ಯತಾ ನಿವಾರಣೆಯಂತಹ ಸ್ವಾತಂತ್ರ್ಯ ಸಂದೇಶವನ್ನು ನೇರವಾಗಿ ಬಿತ್ತುವ ನಾಟಕಗಳ ಪ್ರದರ್ಶನ, ಬ್ರಿಟೀಷ್ ಅಧಿಕಾರಿಗಳು ಲೈಸನ್ಸ್ ಕೊಡಲು ಸತಾಯಿಸಿದರೆ ಬೇರೆ ಹೆಸರಿನಲ್ಲಿ ನಾಟಕಗಳ ಪ್ರದರ್ಶನ, ಮತ್ತೊಂದೆಡೆ ಸ್ವಾತಂತ್ರ್ಯ ಹೋರಾಟಗಾರರ ರಕ್ಷಣೆ, ನಾಡಿಗೆ ವೃತ್ತಿ ರಂಗಭೂಮಿ ನೀಡಿದ ದೊಡ್ಡ ಕೊಡುಗೆ ಇದು.

ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ ೧೯೪೭ರಲ್ಲಿ ಬಾಳಪ್ಪ ಸ್ವಂತ ನಾಟಕ ಕಂಪನಿ 'ಕಲಾವೈಭವ ಸಂಘ'ವನ್ನು ತಾಳೀಕೋಟೆಯಲ್ಲಿ ಸ್ಥಾಪಿಸುತ್ತಾರೆ. ಲಂಕಾದಹನ, ಪಠಾಣಿ ಪಾಶ, ಅಕ್ಕಮಹಾದೇವಿ ಅವರ ಸ್ವಂತ ಕಂಪನಿಯ ಯಶಸ್ವಿ ಪ್ರಯೋಗಗಳು, ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿತು. ಇನ್ನು ಕನ್ನಡ ನಾಡಿನ ಪ್ರತ್ಯೇಕ ರಾಜ್ಯದ ಕನಸು. ಅಖಂಡ ಕರ್ನಾಟಕವನ್ನು ನನಸು ಮಾಡಿಕೊಳ್ಳುವ ಕಾಲ. ಅದಕ್ಕೂ ಬಾಳಪ್ಪ ಸ್ಪಂದಿಸುತ್ತಾರೆ. ೧೯೪೯ರಲ್ಲಿ ತಮ್ಮ ಸಂಘಕ್ಕೆ 'ಕಲಾವೈಭವ ನಾಟ್ಯ ಸಂಘ, ಬೆಳಗಾವಿ' (ಕರ್ನಾಟಕ ರಾಜ್ಯ) ಎಂದೇ ಬೋರ್ಡ್ ಬರೆಸಿ ಸಾಕಷ್ಟು ಕಿರುಕುಳ ಅನುಭವಿಸುತ್ತಾರೆ. ನಷ್ಟವನ್ನು ಉಂಟು ಮಾಡಿಕೊಳ್ಳುತ್ತಾರೆ. ಆದರೆ ಎದೆಗುಂದದ ಬಾಳಪ್ಪ 'ಕರ್ನಾಟಕ ಏಕೀಕರಣ'ದ ಕುರಿತೇ, ಪ್ರತ್ಯೇಕ ನಾಟಕ ಬರೆಸಿ ಯಶಸ್ವಿಯಾಗಿ ಅದನ್ನು ಪ್ರದರ್ಶಿಸಿ ಕನ್ನಡ ಭಾಷೆಗೆ ಪ್ರತ್ಯೇಕ ರಾಜ್ಯದ ಕನಸನ್ನು ಜನಮಾನಸದಲ್ಲಿ ನೆಲೆನಿಲ್ಲಿಸುತ್ತಾರೆ.

ಗಮಕಿ ಹಾಗೂ ಹಿರಿಯ ಸಾಹಿತಿ ಜೋಳದರಾಶಿ ದೊಡ್ಡನಗೌಡರಿಂದ ಬಸವೇಶ್ವರನ ಕುರಿತು ನಾಟಕ ಬರೆಸುತ್ತಾರೆ. ಪ್ರದರ್ಶನದಲ್ಲಿ ಚಿಕ್ಕದೊಂದು ಕೊರತೆ ಇದೆ ಎನಿಸಿದಾಗ ಫ.ಗು. ಹಳಕಟ್ಟಿ, ಡಂಬಳ

ಶಾಂತಪ್ಪ ಹಾಗೂ ಬಾಳಪ್ಪ ಒಟ್ಟಿಗೆ ಚರ್ಚಿಸಿ ಅನುಭವ ಮಂಟಪದ ದೃಶ್ಯಗಳನ್ನು ಸೇರಿಸಿಕೊಳ್ಳುತ್ತಾರೆ. ವಚನಕಾರರ ಸಂದೇಶವನ್ನು ಸಮರ್ಥವಾಗಿ ಸಾರುವಂತಹ ಜಗಜ್ಯೋತಿ ಬಸವೇಶ್ವರ ಸಿದ್ಧಗೊಳ್ಳುತ್ತದೆ. ಇಲ್ಲಿಂದ ಮುಂದಿನದು ಬಾಳಪ್ಪನವರ ರಂಗಜೀವನದಲ್ಲಿ ಮತ್ತೊಂದು ಪ್ರಮುಖ ಅಧ್ಯಾಯ. ಹುಬ್ಬಳ್ಳಿಯಲ್ಲಿ ದಾಖಲೆಯ ೨೦೦ಕ್ಕೂ ಮಿಕ್ಕಿದ ಪ್ರಯೋಗ ಕಂಡ ನಾಟಕ ನಾಡಿನ ಬಹುತೇಕ ಕಡೆ ಪ್ರವಾಸ ಮಾಡಿ ಹೊಸ ದಾಖಲೆ ಬರೆಯುತ್ತದೆ. ಬಾಳಪ್ಪನವರದು ಅದರಲ್ಲಿ ಬಸವಣ್ಣನ ಪಾತ್ರ. ಈ ಪಾತ್ರದ ಮನೋಜ್ಞ ಅಭಿನಯದಿಂದಾಗಿಯೇ ಅವರು ಮುಂದಿನ ದಿನಗಳಲ್ಲಿ ಅಭಿನವ ಬಸವಣ್ಣ, ಆಧುನಿಕ ಬಸವಣ್ಣ ಎಂದೆಲ್ಲ ಪ್ರತೀತಿಯಾಗುತ್ತಾರೆ. ಹಿರಿಯ ಸಾಹಿತಿ ರಾ.ಯ.ಧಾರವಾಡಕರ ಅವರು, 'ಬಾಳಪ್ಪ ರಂಗಭೂಮಿಯಲ್ಲಿಯೂ, ಹೊರಗೂ ಬಸವಣ್ಣರಾಗಿದ್ದಾರೆ' ಎಂದು ಮುಕ್ತಕಂಠದಿಂದ ಪ್ರಶಂಸಿಸುತ್ತಾರೆ. ಚಿತ್ರನಟ ಡಾ.ರಾಜಕುಮಾರ್ ಬಾಳಪ್ಪನವರ ಬಸವೇಶ್ವರ ನಾಟಕ ಪ್ರದರ್ಶನ ನೋಡಿ ಮಂತ್ರಮುಗ್ಧರಾಗುತ್ತಾರೆ. ಬಾಳಪ್ಪ ಎಲ್ಲೇ ಕಾಣಲಿ ಡಾ.ರಾಜ್‌ಕುಮಾರ್ ಅವರಿಗೆ ಗೌರವ ಸಲ್ಲಿಸುತ್ತಿದ್ದುದೂ ಅವರಲ್ಲಿರುವ ಕಲೆಯ ಕಾರಣದಿಂದಾಗಿಯೇ ..

ಬಸವಣ್ಣ ಬಾಳಪ್ಪನವರ ಅಂತರಂಗದಲ್ಲೂ ಪರಿವರ್ತನೆ ತರುತ್ತಾರೆ. ನಾಟಕದ ನಂತರ ಜೋಳಿಗೆ ಹಿಡಿದು ಹಣ ಸಂಗ್ರಹಿಸುತ್ತಾರೆ. ಅದನ್ನು ಸತ್ಕಾರ್ಯಗಳಿಗೆ ವಿನಿಯೋಗಿಸುತ್ತಾರೆ. ಕನ್ನಡ ಸಾರಸ್ವತ ಲೋಕಕ್ಕೆ ಪ್ರಥಮವಾಗಿ ವಚನಗಳನ್ನು ಸಂಗ್ರಹಿಸಿ ವಚನ ಪಿತಾಮಹ ಎಂದೇ ಹೆಸರಾದ ಫ.ಗು. ಹಳಕಟ್ಟಿ ಹಾಗೂ ಸರ್ವಜ್ಞ ವಚನಗಳನ್ನು ಸಂಗ್ರಹಿಸಿಕೊಟ್ಟ ರೆವರೆಂಡ್ ಉತ್ತಂಗಿ ಚನ್ನಪ್ಪ ಅವರಿಗೆ ಆ ಕಾಲದಲ್ಲಿ ತಲಾ ಒಂದು ಸಾವಿರ ರೂ. ಹಣವನ್ನು ದೇಣಿಗೆ ಸಂಗ್ರಹಿಸಿದ ಹಣದಿಂದ ಕೊಡುತ್ತಾರೆ.

ನಾಡುನುಡಿಗೆ ತೋರುವ ಬದ್ಧತೆ ಮಾತ್ರವಲ್ಲ. ರಂಗದ ಮೇಲೂ ಬಾಳಪ್ಪ ಅಪಾರ ಸುಧಾರಣೆಗಳನ್ನು ಜಾರಿಗೆ ತರುತ್ತಾರೆ. ಅದೃಶ್ಯಪ್ಪ ಮಾನ್ವಿ, ಹಂದಿಗನೂರು ಸಿದ್ಧರಾಮಪ್ಪನವರಂತಹ ಅಪ್ರತಿಮ ಕಲಾವಿದರು ದೊರೆತಾಗ ಅವರ ಅಭಿನಯ ಬೆಳಗುವಂತೆ ಮಾಡಲು ನಾಟಕದಲ್ಲಿ ಹೊಸ ಪ್ರಯೋಗಗಳನ್ನು ಮಾಡುತ್ತಾರೆ. ಗಾಯನ ಪ್ರಧಾನದ ಜತೆ ಅಭಿನಯವನ್ನೂ ಪ್ರಧಾನವಾಗಿಸುತ್ತಾರೆ. ಇಂತಹ ಪ್ರಯೋಗಗಳನ್ನು ತಮ್ಮದೇ ಕಲಾವೈಭವದಲ್ಲಿ ನಿರಂತರವಾಗಿ ಅವರು ಮಾಡುತ್ತಿರುತ್ತಾರೆ. ಕನ್ನಡ ಸಾರಸ್ವತ ಪ್ರಪಂಚದ ಚಿಂತಕರು, ಸಾಹಿತಿಗಳು, ಕಲಾವಿದರೊಂದಿಗೆ ಅವರ ನಿಕಟ ಸಂಪರ್ಕ ಆಗಾಗ ಇಂತಹ ಪ್ರಯೋಗಗಳಿಗೆ ಹೆಚ್ಚುತ್ತದೆ. ಹಂಸಭಾವಿಯಲ್ಲಿ ತಿರುಗುವ ರಂಗ ಆರಂಭಿಸಿ ಮುಂದಿನ ಹಲವು ಕ್ಯಾಂಪ್‌ಗಳಿಗೆ ಅದನ್ನು ಯಶಸ್ವಿಯಾಗಿ ಬಳಸುತ್ತಾರೆ. ಅಭಿನೇತ್ರಿ ಲಕ್ಷ್ಮೀಭಾಯಿಯವರು ಬಾಳಪ್ಪನವರ ಕಲಾವೈಭವವನ್ನು ನಟಿಯಾಗಿ ಸೇರಿದ ನಂತರ ಹೊಸ ತೇಜಸ್ಸು ಮೂಡಿಬರುತ್ತದೆ. ಅಲ್ಲಿಂದ ಮುಂದೆ ಬಾಳಪ್ಪ ಮಾಡುತ್ತಿದ್ದ ಎಲ್ಲ ಸ್ತ್ರೀಪಾತ್ರಗಳು ಲಕ್ಷ್ಮೀಬಾಯಿಯವರ ಪಾಲಾಗುತ್ತವೆ.

ಪ್ರತಿಭಾವಂತ ನಟ ನಟಿಯರು, ಸ್ವತಃ ಬಾಳಪ್ಪ ಸೇರಿದಂತೆ ಹಲವು ಹೆಸರಾಂತ ರಂಗ ಗಾಯಕರಿಂದ ಕಲಾವೈಭವ ತನ್ನ ಶೀರ್ಷಿಕೆಯನ್ನು ಸಾರ್ಥಕ ಪಡಿಸಿಕೊಳ್ಳುವಂತೆ ನಾಡಿನ ಜನರ ಮನೆಮಾತಾಗುತ್ತದೆ. ವ್ಯಾಪಕವಾಗಿ ಉತ್ತರ ಕರ್ನಾಟಕ ಸೇರಿದಂತೆ ಕರ್ನಾಟಕದ ಎಲ್ಲ ಭಾಗಗಳಲ್ಲೂ ಸಂಚರಿಸಿ ಕ್ಯಾಂಪ್ ಮಾಡಿದ ಅವರ ನಾಟಕ ಕಂಪನಿ ಮಹಾರಾಷ್ಟ್ರದ ಈಚಲಕರಂಜಿ, ಸಾಂಗಲಿ, ಕೊಲ್ಲಾಪುರ, ಸೊಲ್ಲಾಪುರ, ಪುಣೆ, ಮುಂಬಯಿ, ಮೀರಜ ಮುಂತಾದ ಕಡೆ ಹಲವು ಬಾರಿ ಕ್ಯಾಂಪ್ ಮಾಡುತ್ತದೆ.

ಅಂಕಲಿ ಶಂಕರ ಪಾಟೀಲ, ಕೃಷ್ಣಚಂದ್ರ ಬಳ್ಳಾರಿ ಗುರುಸಿದ್ದಯ್ಯ ಸುತಗಟ್ಟಿ, ಸದಾಶಿವರಾವ ಬ್ರಹ್ಮಾವರ, ಗಂಗಯ್ಯ ಶಿರೂರ, ದುರ್ಗಾದಾಸ್, ಶ್ರೀಪಾದರಾವ್ ಗರುಡ, ಪಂಡರೀಬಾಯಿ, ಬಾಯಿ, ಸುಮಿತ್ರಾ ಕುಂದಾಪುರ ಸೇರಿದಂತೆ ನಾಡಿನ ನೂರಾರು ಪ್ರಖ್ಯಾತ ಕಲಾವಿದರು ಕಲಾವೈಭವದ ಖ್ಯಾತಿಗೆ ಕಾರಣರಾಗಿದ್ದಾರೆ. ಪೇಂಟಿಂಗ್ ಕಲಾವಿದರಾದ ಆರ್.ಕೆ.ಡೊಂಗರೆ, ಶಿರ್ಶಿ ಪೇಂಟರ್, ಹುಬ್ಬಳ್ಳಿ ಪ್ರಹ್ಲಾದ, ಸಂಗೀತ ಸಂಯೋಜಿಸಿದ ಸಿದ್ಧರಾಮ ಜಂಬಲದಿನ್ನಿ, ನಾಟಕಗಳನ್ನು ಬರೆದುಕೊಟ್ಟ ಜಿ.ಜಿ.ಹೆಗಡೆ, ಜಿ.ಟಿ.ಸ್ವಾಮಿ, ಪಿ.ಬಿ.ಧುತ್ತರಗಿ, ಪು.ಲ.ದೇಶಪಾಂಡೆ, ಎನ್.ಎಸ್.ಜೋಶಿ, ಶ್ರೀರಂಗ, ಅನಕೃ, ಬಿ.ಪುಟ್ಟಸ್ವಾಮಯ್ಯ, ಮಹಾಂತೇಶ ಶಾಸ್ತ್ರಿ ಮುಂತಾದವರು ಕಲಾವೈಭವವನ್ನು ಅನ್ವರ್ಥಗೊಳಿಸಿದ್ದಾರೆ.

ಕಲಾಲೋಕ ಹಾಗೂ ಖಾಸಗಿ ಪ್ರಪಂಚವನ್ನು ಯಶಸ್ವಿಯಾಗಿ ನಿಭಾಯಿಸಿದವರು ವೃತ್ತಿರಂಗಭೂಮಿಯಲ್ಲಿ ವಿರಳ. ಅದಕ್ಕೆ ಅಪವಾದ ಬಾಳಪ್ಪನವರು. ಎಲ್ಲವನ್ನೂ ಸಮಚಿತ್ತದಿಂದ ಸರಿದೂಗಿಸಿದರು. ನೂರು ಸಮೀಪಿಸುತ್ತಿರುವ ಬಾಳಪ್ಪ ೫೪ನೇ ವಯಸ್ಸಿನ ಪುತ್ರ ಏಣಗಿ ನಟರಾಜನನ್ನು ಕಳೆದುಕೊಂಡಾಗಲೂ ಅದನ್ನು ಅಷ್ಟೇ ಸಮಚಿತ್ತದಿಂದ ಸ್ವೀಕರಿಸಿದರು. ಧಾರವಾಡ ರಂಗಾಯಣದ ನಿರ್ದೇಶಕರಾಗಿದ್ದ ನಟರಾಜ ಕನ್ನಡ ರಂಗಭೂಮಿಯ ಅತ್ಯಂತ ಭರವಸೆದಾಯಕ ನಟ ಆಗಿದ್ದರು.

ಬಾಳಪ್ಪನವರಿಗೆ ಇಬ್ಬರು ಪತ್ನಿಯರು. ಮೊದಲ ಪತ್ನಿ ಸಾವಿತ್ರಿ ಅವರಿಗೆ ರುದ್ರಮ್ಮ ಬಸವರಾಜ, ಸುಭಾಷ, ಶಕುಂತಲಾ, ಮೋಹನ, ಅರವಿಂದ, ಬಾಳಮ್ಮ – ಒಟ್ಟು ೭ಜನ ಮಕ್ಕಳು. ಹೆಸರಾಂತ ನಟಿ ಲಕ್ಷ್ಮೀಬಾಯಿ ಅವರಿಗೆ ನಟರಾಜ ಹಾಗೂ ಭಾಗ್ಯ ಇಬ್ಬರು ಮಕ್ಕಳು. ತಮ್ಮ ವೃತ್ತಿ ಕಂಪೆನಿಯ ಅಲೆದಾಟದ ಜೀವನದಲ್ಲಿಯೂ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಅತೀವ ಕಾಳಜಿ ವಹಿಸಿದ್ದರಿಂದ ಅವರೆಲ್ಲ ಈಗ ನೆಮ್ಮದಿಯ ಜೀವನ ನಡೆಸಿದ್ದಾರೆ.

ರಂಗಭೂಮಿಗೆ ಬಾಳಪ್ಪ ಅವರ ಅನನ್ಯ ಸೇವೆಯನ್ನು ಪರಿಗಣಿಸಿ ಕನ್ನಡ ರಂಗಭೂಮಿಯ ಅತ್ಯುನ್ನತ ಪುರಸ್ಕಾರವಾದ 'ಗುಬ್ಬಿ ವೀರಣ್ಣ ಪ್ರಶಸ್ತಿ' ನೀಡಲಾಗಿದೆ. 'ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ,' 'ರಾಜ್ಯೋತ್ಸವ', 'ಕರ್ನಾಟಕ ನಾಟಕ ಅಕಾಡೆಮಿ', 'ಕನ್ನಡ ಸಾಹಿತ್ಯ ಪರಿಷತ್ತು ಗೌರವ', 'ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ', ಕರ್ನಾಟಕ ವಿಶ್ವವಿದ್ಯಾಲಯದ ಡಾಕ್ಟರೇಟ್ ಪದವಿಗೆ ಭಾಜನರಾಗಿರುವ ಬಾಳಪ್ಪ ಅವರಿಗೆ ಅಭಿಮಾನಿಗಳು ಹಾಗೂ ಪ್ರತಿಷ್ಠಿತ ಸಂಘ ಸಂಸ್ಥೆಗಳು ನಾಟ್ಯಭೂಷಣ, ನಾಟ್ಯ ಗಂಧರ್ವ, ಬಸವತತ್ವಭೂಷಣ, ನಾಟಕ ಕಲಾನಿಪುಣ ಮುಂತಾದ ಬಿರುದುಗಳನ್ನು ದಯಪಾಲಿಸಿವೆ. ಡಾ.ಎಂ.ಎಂ.ಕಲಬುರ್ಗಿ ಅವರ ಪ್ರಧಾನ ಸಂಪಾದಕತ್ವದಲ್ಲಿ 'ನಾಟ್ಯಭೂಷಣ' ಅಭಿನಂದನಾ ಗ್ರಂಥವನ್ನು ಹೊರತರಲಾಗಿದೆ. ದು.ನಿಂ.ಬೆಳಗಲಿ ನಿರೂಪಿಸಿದ ನನ್ನ ಬಣ್ಣದ ಬದುಕು ಹಾಗೂ ಗಣೇಶ ಅಮೀನಗಡ ನಿರೂಪಿಸಿದ ಬಣ್ಣದ ಬದುಕಿನ ಚಿನ್ನದ ದಿನಗಳು ಎಂಬ ಎರಡು ಆತ್ಮಕಥೆಗಳು ಪ್ರಕಟವಾಗಿವೆ.

ಅಪ್ಪಟ ಅಭಿನಯ, ಅಮೋಘ ಗಾಯನ, ಸಾಮಾಜಿಕ ಬದ್ಧತೆಯಿಂದ ಅವರ ನಾಟಕಗಳು ಏಳು ದಶಕಗಳ ಕಾಲ ರಂಗದ ಮೇಲೆ ತಾನೇ ತಾನಾಗಿಮೆರೆದವು. ಅವರ ನಾಟಕಗಳ ಜನಪ್ರಿಯತೆ ಎಷ್ಟಿತ್ತೆಂದರೆ ಸೇದಿದರೆ ಭಿಕುಸಾ ಬೀಡಿಗಳನ್ನೇ ಸೇದಿರಿ; ನೋಡಿದರೆ ಏಣಗಿ ಬಾಳಪ್ಪನವರ ನಾಟಕಗಳನ್ನೇ ನೋಡಿರಿ.....' ಎಂದೇ ಪ್ರತೀತಿಯಾಗಿತ್ತಂತೆ. ಓದಿದರೆ ಕೃಷ್ಣಮೂರ್ತಿ ಪುರಾಣಿಕರ ಕಾದಂಬರಿ ಓದಬೇಕು; ನೋಡಿದರೆ ಬಾಳಪ್ಪನವರ ನಾಟಕ ನೋಡಬೇಕು....' ಎಂದೂ ಜನ

ಆಡಿಕೊಳ್ಳುತ್ತಿದ್ದರಂತೆ. ಜನಪ್ರಿಯತೆಯ ತುತ್ತತುದಿ ತಲುಪಿದಾಗ ಸಾಮಾನ್ಯವಾಗಿ ಇಂತಹ ಗಾದೆಗಳು ಹುಟ್ಟಿಕೊಳ್ಳುತ್ತವೆ. ಹೀಗೆ ವ್ಯಕ್ತಿಯೊಬ್ಬ ದಂತಕಥೆಯಾಗುವುದು, ಗಾದೆಯಾಗುವುದು ಇತಿಹಾಸದಲ್ಲಿ ವಿರಳ: ಅಂತಹ ವಿರಳಾತಿ ವಿರಳರಲ್ಲಿ ಬಾಳಪ್ಪ ಒಬ್ಬರು. ಬಾಳಪ್ಪ ಎಂಬ ಹೆಸರಿಗೆ ಅನ್ವರ್ಥವಾಗಿ ಒಂದು ಶತಮಾನ ಕಾಲ ನಮ್ಮ ಮಧ್ಯೆ ಅವರು ಬಾಳಿ, ಬದುಕುತ್ತಿರುವುದು ನಮ್ಮ ಸುದೈವ.

## ೩. ನಮಗೆ ಬೇಕಾಗಿರುವ ಇಂಗ್ಲಿಷ್

**– ಕುವೆಂಪು**

ಇಂದು ನಮ್ಮ ದೇಶದ ಮನಸ್ಸನ್ನು ಕುದಿಸುತ್ತಿರುವ ಸಮಸ್ಯೆಗಳಲ್ಲಿ ಭಾಷಾ ಸಮಸ್ಯೆಯೂ ಒಂದು ಪ್ರಮುಖಸ್ಥಾನ ಪಡೆದಿದೆ. ಪ್ರಾದೇಶಿಕ ದೃಷ್ಟಿಯಿಂದ, ಅಖಿಲ ಭಾರತೀಯ ದೃಷ್ಟಿಯಿಂದ, ಅಂತರರಾಷ್ಟ್ರೀಯ ದೃಷ್ಟಿಯಿಂದ, ಜ್ಞಾನಾರ್ಜನೆಯ ದೃಷ್ಟಿಯಿಂದ, ವಿದ್ಯಾಪ್ರಸಾರದ ದೃಷ್ಟಿಯಿಂದ, ಸಂಸ್ಕೃತಿಯ ದೃಷ್ಟಿಯಿಂದ, ನಾನಾ ದೃಷ್ಟಿಗಳಿಂದ ವಿವಿಧಾಭಿಪ್ರಾಯಗಳು ರಣರಂಗದಲ್ಲಿ ಮಲಯುದ್ಧ ಹೂಡಿದಂತಿದೆ. ಆಯಾ ಪ್ರದೇಶದ ದೇಶಭಾಷೆಗೆ ಅಲ್ಲಲ್ಲಿ ಪ್ರಾಧ್ಯಾನ್ಯವಿರಬೇಕೆನ್ನುವವರು ಕೆಲವರು; ಅಖಿಲ ಭಾರತೀಯವೆಂದು ಒಪ್ಪಿಕೊಂಡಿರುವ ಸಂಯುಕ್ತ ಭಾಷೆಗೆ ಪ್ರಥಮ ಸ್ಥಾನವಿರಬೇಕು ಎನ್ನುವವರು ಕೆಲವರು. ಸರ್ವ ವಿದ್ಯಾಶಾಸ್ತ್ರಗಳಿಗೂ ಆಗರವಾಗಿ, ವ್ಯಾವಹಾರಿಕ ದೃಷ್ಟಿಯಿಂದಲೂ ಅಂತರ ರಾಷ್ಟ್ರೀಯವಾಗಿರುವ ಇಂಗ್ಲಿಷ್ ಭಾಷೆಗೆ ಪ್ರಥಮ ಸ್ಥಾನವಿರಬೇಕೆಂದು ಕೆಲವರು.

ತಮ್ಮ ಈ ವಿಚಾರಮಂಥನ ನಿನ್ನೆ ಮೊನ್ನೆಯದಲ್ಲ. ಸ್ವಯಂ ಗಾಂಧೀಜಿಯ ಇವುಗಳನ್ನು ಕೂಲಂಕಷವಾಗಿ ಚರ್ಚಿಸಿ, ತಮ್ಮ ನಿರ್ಧಾರಗಳನ್ನು ಸಕಾರಣವಾಗಿ ವಾದಿಸಿ, ನಾಡಿನ ಮುಂದೆ ಇಟ್ಟು ಹೋಗಿದ್ದಾರೆ. ಅಲ್ಲದೆ ವಿದೇಶಗಳ ತಜ್ಞರೂ ಮನಃಶಾಸ್ತ್ರೀಯವಾಗಿ ಪರಿಶೀಲಿಸಿ ಸಿದ್ಧಾಂತಗಳನ್ನು ಮುಂದಿಟ್ಟಿದ್ದಾರೆ. ನಾಡಿನ ಅಗ್ರಗಣ್ಯ ದೇಶಭಕ್ತರೂ ತಮ್ಮ ನಿಷ್ಪಕ್ಷಪಾತವಾದ ನಿರ್ಣಯಗಳನ್ನು ಆಗಿಂದಾಗ್ಗೆ ಘೋಷಿಸುತ್ತಾ ಬಂದಿದ್ದಾರೆ. ಈ ವಿಚಾರವಾಗಿ ಇನ್ನು ಸಾಕು ಎಂಬಷ್ಟು ಚರ್ಚೆ ನಡೆದಿದೆ. ಈ ಸಮಸ್ಯೆ ವಾದ ಪ್ರತಿವಾದದ ಎಲ್ಲೆಯನ್ನು ದಾಟಿ ಇತ್ಯರ್ಥದ ಸೀಮೆಯನ್ನು ಮುಟ್ಟಿದೆ ಎಂದು ಹೇಳಬಹುದು.

ಒಟ್ಟಿನಲ್ಲಿ ಆ ಇತ್ಯರ್ಥವನ್ನು ಹೀಗೆ ವಿವರಿಸಬಹುದು. ಆಯಾ ಪ್ರಾಂತಗಳಲ್ಲಿ ಆಯಾ ಪ್ರಾದೇಶಿಕ ಭಾಷೆಗಳಿಗೆ ಪ್ರಥಮ ಸ್ಥಾನ ಸಲ್ಲಬೇಕು. ಅಂತರ ಪ್ರಾಂತೀಯ ವ್ಯವಹಾರ ದೃಷ್ಟಿಯಿಂದ ಮತ್ತು ಕೇಂದ್ರದ ಆಡಳಿತ ದೃಷ್ಟಿಯಿಂದ ಅಖಿಲ ಭಾರತೀಯವಾದ ಸಂಯುಕ್ತ ಭಾಷೆಗೆ ಎರಡನೆ ಸ್ಥಾನ ಕೊಡಬೇಕು. ಅಂತರ ರಾಷ್ಟ್ರೀಯವಾದ ಭಾಷೆಗೆ ಅಥವಾ ಭಾಷೆಗಳಿಗೆ ಐಚ್ಛಿಕ ಸ್ಥಾನ ಕೊಡಬೇಕು. ಆಯಾ ಪ್ರಾಂತಗಳಲ್ಲಿ ಆಯಾ ದೇಶಭಾಷೆಗಳ ಆಡಳಿತ ಭಾಷೆಗಳಾಗಿರಬೇಕು. ಅಲ್ಲಿಯ ಶಿಕ್ಷಣವೆಲ್ಲ ಎಲ್ಲ ಮಟ್ಟಗಳಲ್ಲಿಯೂ ದೇಶ ಭಾಷಾ ಮಾಧ್ಯಮದಲ್ಲಿಯೆ ಸಾಗಬೇಕು.

ಈ ಸ್ಥೂಲ ವಿವರಣೆ ಬಹುಜನ ಸಮ್ಮತವಾಗಿರುವುದರಲ್ಲಿ ಸಂದೇಹವಿಲ್ಲ.

ಆದರೆ ಭಾಷೆಗಳ ಸ್ಥಾನವನ್ನು ಹೀಗೆ ನಿರ್ಣಯಿಸುವಾಗ ಅನೇಕರು ತಪ್ಪು ಅಭಿಪ್ರಾಯಗಳ ದೆಸೆಯಿಂದ ಆತಂಕಗೊಳ್ಳುತ್ತಾರೆ. ಅದರಲ್ಲಿಯೂ ಇಂಗ್ಲಿಷನ್ನು ಚೆನ್ನಾಗಿ ಅಭ್ಯಾಸ ಮಾಡಿ ಅದರ ಸಾಹಿತ್ಯವನ್ನು ತಣಿಯುಂಡು ಸವಿದು, ಅದರ ವೈಭವಕ್ಕೂ ವೈಶಾಲ್ಯಕ್ಕೂ ಮಾರುಹೋದವರಿಗೆ ಸಹಿಸಲಸಾಧ್ಯವಾದ ಸಂಕಟವಾಗುತ್ತದೆ. ಇಂಗ್ಲಿಷ್ ಭಾಷೆಯ ಮೂಲಕವೇ ತಮ್ಮ ಲೌಕಿಕ ಅಭ್ಯುದಯವನ್ನು ಸಾಧಿಸಿಕೊಂಡವರಿಗಿಂತಲೂ ಆ ಭಾಷೆಯಿಂದಲ್ಲದೆ ಬೇರೆ ಯಾವ ಭಾಷೆಯಿಂದಲೂ ಅಭ್ಯುದಯ ಸಾಧ್ಯವೇ ಇಲ್ಲ ಎಂಬಂತೆ ಭಾಸವಾಗುತ್ತದೆ. ನಮ್ಮ ಪ್ರಾಚೀನವಾದ ದೇಶಭಾಷೆಗಳ ಸಾಹಿತ್ಯದ ಅಥವಾ ಪ್ರಾಚೀನವಾದ ಸಂಸ್ಕೃತ ಸಾಹಿತ್ಯದ ವೈಭವ ವೈಶಾಲ್ಯಗಳ ಪರಿಚಯವಿಲ್ಲದೆ ಇರುವ

ಇಂಗ್ಲಿಷ್ ವಿದ್ವಾಂಸರಿಗಂತೂ ಇಂಗ್ಲಿಷ್ ಭಾಷೆಯನ್ನು ಈ ಗಣ್ಯ ಸ್ಥಾನದಿಂದ ಅಲುಗಿಸಿದರೆ ಭರತ ಖಂಡವೆಲ್ಲ ಕಗ್ಗತ್ತಲೆಯಲ್ಲಿ ಅದ್ದಿಹೋಗುತ್ತದೆ ಎಂದೇ ನಂಬಿಕೆ. ಅಂಥವರ ಭಯಾಶಂಕೆಗಳ ಸಾಧಾರ ನಿರಾಧಾರ ಸತ್ಯಾಸತ್ಯತೆಗಳೇನೇ ಇರಲಿ ಅದರ ವಿಶ್ಲೇಷಣಕ್ಕೆ ಹೋಗದೆ, ಇನ್ನು ಮುಂದೆ ಇಂಗ್ಲಿಷಿಗೆ ಭಾಷಾದೃಷ್ಟಿಯಿಂದ, ಸಾಹಿತ್ಯದೃಷ್ಟಿಯಿಂದ ನಮ್ಮ ದೇಶದಲ್ಲಿ ಇರಬೇಕಾದ ಸ್ಥಾನವೇನು? ಅದು ಯಾವ ರೂಪದಲ್ಲಿ, ಯಾವ ಪ್ರಮಾಣದಲ್ಲಿ, ಎಷ್ಟರಮಟ್ಟಿಗೆ ಎಷ್ಟು ಜನಕ್ಕೆ ಬೇಕಾಗುತ್ತದೆ, ಎಂಬೆಲ್ಲ ವಿಷಯಗಳನ್ನು ಕುರಿತು ಆಲೋಚಿಸುತ್ತೇವೆ.

ದೇಶಭಾಷೆಗೆ ಪ್ರಥಮಸ್ಥಾನ ಸಲ್ಲಬೇಕು. ದೇಶಭಾಷೆ ಶಿಕ್ಷಣ ಮಾಧ್ಯಮವಾಗಬೇಕು. ಎಂದೊಡನೆ ಕೆಲವರು ಇಂಗ್ಲಿಷ್ ಭಾಷಾಸಾಹಿತ್ಯಗಳಿಗೆ ಸಂಪೂರ್ಣ ಅರ್ಧಚಂದ್ರ ಪ್ರಯೋಗವಾಗಿ ಬಿಡುತ್ತದೆ ಎಂದು ವ್ಯಾಖ್ಯಾನಮಾಡಿ ದೇಶಭಾಷಾವಾದಿಗಳನ್ನು ಸ್ವಭಾಷಾ ಭ್ರಾಂತರೆಂದೂ, ವಿದ್ಯಾಸಂಸ್ಕೃತಿ ವಿದ್ವೇಷಿಗಳೆಂದೂ ಸಂಕುಚಿತ ಮನೋಭಾವದರೆಂದೂ ಟೀಕಿಸಿ ಖಂಡಿಸುತ್ತಾರೆ. ಇಂಗ್ಲಿಷ್ ಮೋಹಿಗಳ ಈ ಪ್ರಥಮ ಭ್ರಾಂತಿ ಮೊದಲು ನಿರಸನಗೊಳ್ಳಬೇಕು.

ಇಂಗ್ಲಿಷ್ ಭಾಷೆಯ ಯೋಗ್ಯತೆ, ಅದರ ವ್ಯಾಪ್ತಿ, ಅದರಿಂದೊದಗುವ ಪ್ರಜ್ಞಾ ವೈಶಾಲ್ಯ, ಅದು ನಮ್ಮಲ್ಲಿ ಪ್ರಚೋದಿಸಿರುವ ವಿಚಾರಬುದ್ಧಿ, ಅದರಿಂದ ಮುಂದೆ ಎಂದೆಂದಿಗೂ ನಮಗೆ ಲಭಿಸಲಿರುವ ಸಂಪರ್ಕ ಸಹಾಯ ಮೊದಲಾದವುಗಳನ್ನೆಲ್ಲ ಅರಿತವಾದರೂ ಬ್ರಿಟಿಷ್‌ರನ್ನು ಓಡಿಸಿದಂತೆ ಇಂಗ್ಲಿಷ್ ಭಾಷೆಯನ್ನೂ ಓಡಿಸಬೇಕೆಂದು ಹೇಳುವ ಅವಿವೇಕಕ್ಕೆ ಹೋಗಲಾರದು. ಹಾಗೆ ಹೇಳುವವರನ್ನು ಪ್ರಚ್ಛನ್ನ ದೇಶದ್ರೋಹಿಗಳೆಂದು ಕರೆಯಬೇಕಾಗುತ್ತದೆ. ಆದ್ದರಿಂದ ಇಂಗ್ಲಿಷ್ ನಮ್ಮೊಡನೆ ಉಳಿಯಬೇಕೆಂಬುದರಲ್ಲಿ ಭಿನ್ನಾಭಿಪ್ರಾಯವಿರುವುದಕ್ಕೆ ಅವಕಾಶವೇ ಇಲ್ಲ.

ಇಂಗ್ಲಿಷ್ ಉಳಿಯಬೇಕೆಂದು ನಿಶ್ಚಯಿಸಿದ ಮೇಲೆ ನಮ್ಮ ಮುಂದೆ ಏಳುವ ಪ್ರಶ್ನೆ: ಅದು ಯಾವ ರೂಪದಲ್ಲುಳಿಯಬೇಕು? ಯಾವ ಪ್ರಮಾಣದಲ್ಲಿ? ಯಾರಿಗೆ? ಏತಕ್ಕೆ? ಯಾವ ಯಾವ ಉದ್ದೇಶಗಳಿಗಾಗಿ?

ಇಂಡಿಯಾಕ್ಕೆ ಇಂಗ್ಲಿಷ್ ಬಂದದ್ದು ಮುಖ್ಯವಾಗಿ ರಾಜಕೀಯ ಕಾರಣಗಳಿಂದಾಗಿ, ಅದನ್ನು ಅಧಿಕಾರಿಭಾಷೆಯೆಂದು ಘೋಷಿಸಿ ಕಡ್ಡಾಯವಾಗಿ ಅದನ್ನೆಲ್ಲರೂ ಕಲಿಯಬೇಕೆಂದು ವಿಧಿಸಿದುದೂ ಅದೇ ಕಾರಣಕ್ಕಾಗಿ. ಬಹು ಜನರು ನಮ್ಮ ದೇಶದಲ್ಲಿ ಇಂಗ್ಲಿಷನ್ನು ಕಲಿತುದಕ್ಕೆ ಕಾರಣವೂ ರಾಜಕೀಯವೆ. ಅಥವಾ ಅದರಿಂದ ಉದ್ಭವಿಸುವ ಆರ್ಥಿಕಾದಿ ಪ್ರಯೋಜನಕ್ಕಾಗಿ. ಅದನ್ನೀಗಲೂ ಬಯಸುವ ಬಳಸುವ ಜನರಲ್ಲಿ ಬಹುಪಾಲು ಲೋಕೋಪಯೋಗಿ ದೃಷ್ಟಿಯನ್ನೇ ಹೊಂದಿರುತ್ತಾರೆ. ಆದರೆ ಈಗ ನಮ್ಮ ರಾಜಕೀಯ ಪರಿಸ್ಥಿತಿ ಬದಲಾಗಿದೆ. ಸ್ವತಂತ್ರ ಭಾರತ ಬೇರೊಂದು ಭಾಷೆಯನ್ನು ತನ್ನ ಅಧಿಕಾರಿ ಭಾಷೆಯನ್ನಾಗಿ ಆರಿಸಿದೆ. ಈ ಹೊಸ ಪರಿಸ್ಥಿತಿಯಲ್ಲಿ ಇಂಗ್ಲಿಷಿಗೆ ಸಲ್ಲಬೇಕಾದ ಸ್ಥಾನ ಯಾವುದು? ಇಂಗ್ಲಿಷನ್ನು ಬಿಡುವಂತಿಲ್ಲ; ಆದರೆ ಅದಕ್ಕೆ ಹಿಂದಿದ್ದ ಸ್ಥಾನವನ್ನು ಕೊಡುವಂತೆಯೂ ಇಲ್ಲ.

ಇನ್ನು ಮುಂದೆ ಇಂಗ್ಲಿಷ್ ಹಲವರು ಕಲಿಯುವ ಭಾಷೆಯಲ್ಲ; ಕೆಲವರು ಕಲಿಯಬೇಕಾದ ಭಾಷೆ, ಇನ್ನು ಮುಂದೆ ಅನೇಕರಿಗೆ ಬೇಕಾದ ಇಂಗ್ಲಿಷಿನ ಮಟ್ಟವೆಂದರೆ ಅದನ್ನೋದಿ ಅರ್ಥಮಾಡಿಕೊಳ್ಳುವಷ್ಟೆ ಹೊರತು ಅದರಲ್ಲಿ ಸಂಭಾಷಿಸುವುದಾಗಲಿ, ಭಾಷಣ ಮಾಡುವುದಾಗಲಿ, ಬರೆಯುವುದಾಗಲಿ ಅಲ್ಲ.

ಈ ದೃಷ್ಟಿಯಿಂದ ನಮ್ಮ ಅಧ್ಯಯನ ಕ್ರಮದಲ್ಲಿ ಅದಕ್ಕೆ ಗಾಂಧೀಜಿ ಕೊಟ್ಟಿರುವ ಐಚ್ಛಿಕ ಭಾಷಾಸ್ಥಾನವೆ ಯೋಗ್ಯವಾದದ್ದು. ಅದಕ್ಕೆ ಈಗ ಕೊಟ್ಟಿರುವ ಪ್ರಥಮ ಭಾಷಾಸ್ಥಾನ ದೇಶಕ್ಕೆ ಹಾನಿಕರ. ನಮ್ಮ ಬಾಲಕರ ಹಾಗೂ ತರುಣರ ಮನಶ್ಶಕ್ತಿಯನ್ನೆಲ್ಲ ಅಪವ್ಯಯಗೊಳಿಸಿ, ಅವರನ್ನು ಪರೀಕ್ಷೆಗಳಲ್ಲಿ ಅನ್ಯಾಯವಾಗಿ ಅನುತ್ತೀರ್ಣರನ್ನಾಗಿ ಮಾಡುವುದರಿಂದ ಅವರ ಹೃದಯದ ಆಶಾಭಾವನೆಯನ್ನೆ ಮೊಳಕೆಯಲ್ಲಿಯೆ ಚಿವುಟಿಹಾಕಿ ನಿರಾಶೆಯನ್ನೂ ಅಧೈರ್ಯವನ್ನೂ ತಂದೊಡ್ಡಿ, ಅವರ ಬದುಕನ್ನೆ ಬಯಲುಗೊಳಿಸುವ ಸಾಧನೆಯಾಗಿದೆ ಈ ಪರಭಾಷೆ! ನಮ್ಮ ಮಕ್ಕಳು ತಮಗೆ 'ಸಹಜ'ವಾದ ನೆಲದ ನುಡಿಯನ್ನು ಕಲಿತು ಇನ್ನೇನು ಭಾಷೆಯಿಂದ ಭಾವಕ್ಕೂ ಜ್ಞಾನಕ್ಕೂ ರೆಕ್ಕೆಗೆದರಿ ಹಾರಬೇಕು ಎನ್ನುವಷ್ಟರಲ್ಲಿ ಈ ಹೊರಭಾಷೆಯ ಕಲ್ಲುಚಪ್ಪಡಿಯನ್ನು ಅವರ ತಲೆಗಳ ಮೇಲೆ ಹೇರುತ್ತೇವೆ! ಸರಿ, ಕನ್ನಡದಲ್ಲಿ ಕಲಿತುಬಿಟ್ಟಿದ್ದ ಬೆಕ್ಕು ಇಲಿ ಚಾಪೆ ಟೋಪಿಗಳನ್ನ ಮತ್ತೆ ಕ್ಯಾಟ್ ಬ್ಯಾಟ್ ಮ್ಯಾಟ್ ಹ್ಯಾಟ್ ಎಂದು ತಮಗೆ ಅರ್ಥವಾಗದ ಸ್ಪೆಲ್ಲಿಂಗ್ ಸಹಿತವಾಗಿ ಬಾಯಿಪಾಠ ಮಾಡಬೇಕು! ಕನ್ನಡದಲ್ಲಿ ದೊಡ್ಡ ದೊಡ್ಡ ಹೊತ್ತಗೆಗಳನ್ನು ಉಲ್ಲಾಸದಿಂದ ಓದಿ, ಭಾವಕ್ಕೂ ಚಿಂತನಕ್ಕೂ ಕಣ್ಣರಳಿ ಎದೆಯರಳಿ, ಸಾಹಸಿಯಾಗಿ ಮುನ್ನುಗ್ಗಲೆಳಸುವ ಮಾಧ್ಯಮಿಕ ಶಾಲೆಯ ಬಾಲಕನ ಹಸುರು ಚೇತನ ಇಂಗ್ಲಿಷ್ ಭಾಷಾಬಂಡೆಗೆ ಮುಗ್ಗುರಿಸಿ ಹಸುರುಗಟ್ಟಿ ಉಸಿರುಗಟ್ಟಿ ಸೋತು ನಿಲ್ಲುವುದನ್ನು ಮಕ್ಕಳಿದ್ದು ಅವರ ಓದಿನ ಕಡೆಗೆ ಒಂದಿನಿತಾದರೂ ಗಮನ ಕೊಟ್ಟವರೆಲ್ಲರೂ ನೋಡಿಯೆ ಇರುತ್ತಾರೆ. ಅಲ್ಲದೆ ಹಳ್ಳಿಹಳ್ಳಿಗೂ ಹೈಸ್ಕೂಲುಗಳೇಳುತ್ತಿರುವ ಈ ಸಮಯದಲ್ಲಿ, ಅಲ್ಲಿ ಇಂಗ್ಲಿಷ್ ಪಾಠ ಹೇಳುವ ಬೋಧಕರ ಮಟ್ಟವೂ ತುಂಬ ಇಳಿದು ಹೋಗಿರುವುದರಿಂದಲೂ, ಬಾಲಕರ ಸಂಖ್ಯೆ ಮತ್ತು ಸಂಸ್ಕಾರ ವೈವಿಧ್ಯಗಳಲ್ಲಿ ಹಿಂದಣಕ್ಕಿಂತ ವಿಪುಲ ವ್ಯತ್ಯಾಸಗಳಾಗಿರುವುದರಿಂದಲೂ, ಮೊದಲಿನಂತೆ ಬೆಂಚಿನ ಮೇಲೆ ನಿಲ್ಲಿಸಿ, ಕಿವಿ ಹಿಂಡಿ, ಚಡಿ ಏಟುಕೊಟ್ಟು, ಘರಂಗಿಮಣೆ ಕೂರಿಸಿ, ಕಪಾಳಕ್ಕೆ ಬಿಗಿದು, ಬಾಯಿಪಾಠ ಮಾಡಿಸಿ, ವ್ಯಕ್ತಿ ವ್ಯಕ್ತಿಗೆ ಗಮನಕೊಡುವ ಇಂಡಿವಿಜುಯಲ್ ಆಟೆನ್‌ಷನ್ನಿನ 'ಕಸರತ್ತಿಗಾಗಲಿ ಕವಾಯಿತಿಗಾಗಲಿ ಈ ಅವಕಾಶವೇ ಇಲ್ಲ! ಹೀಗೆ: ಪರೀಕ್ಷೆ ಪರೀಕ್ಷೆಯಲ್ಲಿಯೂ ಒಂದೊಂದು ಮೆಟ್ಟಲಲ್ಲಿಯೂ 'ಕೃಪೆ'ಯ ರಟ್ಟೆ ಹಿಡಿದು ಎತ್ತಿ ಮೇಲಿನ ಮೆಟ್ಟಲಿಗೆ ಹಾಕಿದ ಹುಡುಗನ ಇಂಗ್ಲಿಷ್ ಜ್ಞಾನದ ದೋಣಿ ಹೇಗೊ ಕಾಲೇಜಿನ ಜಲಪಾತ ಪ್ರಪಾತದವರೆಗೂ ಸಾಗುತ್ತದೆ ಅದುವರೆಗೂ ಏನೋ ಎಂತೋ ಅಂಕು ಡೊಂಕು ಹರಿವ ಹೊಳೆ ಮಾತ್ರವಾಗಿದ್ದ ಇಂಗ್ಲಿಷ್ ಬಾಲಕನ ಕಣ್ಣಿಗೆ ಇದ್ದಕ್ಕಿದ್ದಂತೆ ಪ್ರಪಾತಕ್ಕೆ ಧುಮುಕುವ ಜಲಪಾತವಾಗಿ ಪರಿಣಮಿಸುತ್ತದೆ. ಇನ್ನೇನು ಮಾಡುತ್ತಾನೆ? ಪಾಪ, ಅದುವರೆಗೂ ತಾನು ಮಾಡುತ್ತಿದ್ದ ಅಲ್ಪ ಸ್ವಲ್ಪ ಪ್ರಯತ್ನದ ಹುಟ್ಟನ್ನೂ ಹೊಳೆಗೇ ಎಸೆದು, ಸುಮ್ಮನಾಗಿ, ದೋಣಿ ಮುಂಬರಿದು ತನಗೊದಗುವ 'ಗತಿಯ' ರುದ್ರರಮಣೀಯತೆಯ ರಸಾಸ್ವಾದನೆಯಲ್ಲಿ ತೊಡಗಬೇಕಾಗುತ್ತದೆ! ಅವನಿಗಿರುವ ಧೈರ್ಯ ಒಂದೇ ಒಂದು. ಈ ಅನಾಹುತದಲ್ಲಿ ತನ್ನೊಡನೆ ಸಮಪಾಲುಕೊಳ್ಳಲು ಒಡನಾಡಿಗಳು ಅಸಂಖ್ಯೇಯವಾಗಿದ್ದಾರೆ!

ದಡದಲ್ಲಿ ನಿಂತು ನೋಡುವ ಹಿರಿಯರ ಇತ್ಯರ್ಥವೇನು? ಹುಡುಗರೆಲ್ಲ ಈಚೀಚೆಗೆ ದಡ್ಡರಾಗುತ್ತಿದ್ದಾರೆ! ಸ್ಟಾಂಡರ್ಡ್ ತುಂಬ ಇಳಿದು ಹೋಗಿದೆ! ಹಾಗಾದರೆ ಏನು ಮಾಡಬೇಕು? ಇನ್ನಷ್ಟು ಇಂಗ್ಲಿಷ್ ಪಠ್ಯಪುಸ್ತಕ ಹೆಚ್ಚಿಸಿ ಗ್ರಾಮರ್ ಲೇಹ್ಯ ಇನ್ನೂ ಸ್ವಲ್ಪ ಹೆಚ್ಚಾಗಿ ತಿನ್ನಿಸಿ! ಪರಿಣಾಮ : ಪರೀಕ್ಷೆಯ ಫಲಿತಾಂಶ ಪ್ರಕಟಣೆ ಸಮಯದಲ್ಲಿ ಮತ್ತೆ 'ಕೃಪೆ'ಯೆ, ಕೈ ಹಿಡಿದು ಎತ್ತಬೇಕು. ಮುಂದಿನ ಮೆಟ್ಟಲಿಗೆ.

ಈ ನಾಟಕ – ದುರಂತನಾಟಕ – ಇನ್ನು ಸಾಕು. ಇನ್ನು ಮುಂದೆ ಇಂಗ್ಲಿಷಿನ ಈ ನೀರುನೀರು ಸಮಾರಾಧನೆ ನಿಲ್ಲಬೇಕು. ಅದಕ್ಕೆ ಬಲವಾಗಿ ಆಯ್ದ ಕೆಲವರಿಗೆ ಮಾತ್ರ ಗಟ್ಟಿ ಇಂಗ್ಲಿಷಿನ ಪುಷ್ಟಿಯೊದಗುವಂತೆ ನಮ್ಮ ವಿದ್ಯಾಭ್ಯಾಸ ಕ್ರಮದಲ್ಲಿ ಭಾಷೆಗಳ ಸ್ಥಾನ ನಿರ್ಣಯವಾಗಬೇಕು. ಇನ್ನು ಮುಂದೆ ಇಂಗ್ಲಿಷ್ ಎಲ್ಲರಿಗೂ ಬೇಡ, ಹಲವರಿಗೆ ಕೊಂಚಮಟ್ಟಿಗೆ ಬೇಕು, ಕೆಲವರಿಗೆ ಮಾತ್ರ ಚೆನ್ನಾಗಿಯೇ ಬೇಕು.

ಇಂಗ್ಲಿಷ್ ಕಲಿಯುವವರನ್ನು ಎರಡು ವಿಭಾಗವಾಗಿ ವಿಂಗಡಿಸಬಹುದು. ಭಾಷಾದೃಷ್ಟಿಯಿಂದ ಕಲಿಯುವವರು; ಸಾಹಿತ್ಯದೃಷ್ಟಿಯಿಂದ ಕಲಿಯುವವರು. ಭಾಷಾದೃಷ್ಟಿಯಿಂದ ಕಲಿಯುವವರಿಗೆ ಇಂಗ್ಲಿಷಿನ ಪರಿಚಯ ಚೆನ್ನಾಗಿ ಆಗಬೇಕು. ಅವರು ಆ ಭಾಷೆಯಲ್ಲಿ ಚೆನ್ನಾಗಿ ಓದಲೂ ಬರೆಯಲೂ ಮಾತನಾಡಲೂ ಭಾಷಣ ಮಾಡಲೂ ಬಲ್ಲವರಾಗಬೇಕು. ಅವರು ನಮಗೂ ಅಂತರರಾಷ್ಟ್ರೀಯ ಪ್ರಪಂಚಕ್ಕೂ ಸಾಹಿತ್ಯದಲ್ಲಿ, ಶಾಸ್ತ್ರದಲ್ಲಿ, ರಾಜಕೀಯದಲ್ಲಿ ಸಂಪರ್ಕ ಕಲ್ಪಿಸುವ ಸಾಧನಗಳಾಗಬೇಕು. ಇಂಥವರಿಗೆ ವಿದ್ಯಾಭ್ಯಾಸದ ಮೇಲಿನ ಮಟ್ಟದಲ್ಲಿ, ವಿಶೇಷವಾಗಿ ಸಾಹಿತ್ಯ ವಿಷಯಗಳಲ್ಲಿ, ಇಂಗ್ಲಿಷ್ ಶಿಕ್ಷಣ ಮಾಧ್ಯಮವಾಗಿದ್ದರೆ ಲೇಸು. ಏಕೆಂದರೆ ಅವರ ಉದ್ದೇಶವೇ ಆ ಭಾಷೆಯಲ್ಲಿ ಉದ್ದಾಮ ಪಾಂಡಿತ್ಯ ಸಂಪಾದನೆ.

ಆದರೆ ಇಂಗ್ಲಿಷನ್ನು ಆ ಭಾಷೆಯಲ್ಲಿರುವ ವಿಪುಲವಾದ ವಿವಿಧವಾದ ಶ್ರೀಮಂತವಾದ ಸಾಹಿತ್ಯಕ್ಕಾಗಿ ಅಭ್ಯಾಸ ಮಾಡುವವರ ವಿಷಯವೆ ಬೇರೆ. ಅವರಿಗೆ ಬೇಕಾದುದು ಭಾಷೆಯಲ್ಲ; ಕಾವ್ಯ, ಸಾಹಿತ್ಯ, ಅಲ್ಲಿಯ ಕವಿಗಳು, ನಾಟಕಕಾರರು, ಅಲ್ಲಿಯ ತತ್ವಜ್ಞಾನಿಗಳು, ಅಲ್ಲಿಯ ರಾಜಕಾರಣಿಗಳು, ಸಹೃದಯರಿಗೆ ಜಿಜ್ಞಾಸುಗಳಿಗೆ ನೀಡುವ ರಸಾಂಶ, ಚಿಂತನಾಂಶ, ಸತ್ವ, ಇಂಗ್ಲಿಷನ್ನು ಅದರ ಸಾಹಿತ್ಯಕ್ಕಾಗಿ ಅಭ್ಯಾಸ ಮಾಡುವವರು ಆ ಭಾಷೆಯಲ್ಲಿ ಮಾತನಾಡುವುದನ್ನು ಅಭ್ಯಾಸ ಮಾಡಬೇಕಾಗಿಲ್ಲ; ಅದರಲ್ಲಿ ಬರೆಯುವುದಕ್ಕೂ ಶ್ರಮಿಸಬೇಕಾಗಿಲ್ಲ; ಅದನ್ನು ಓದಿ ಅರಿಯಬೇಕಾದುದೆಷ್ಟೋ ಅಷ್ಟೆ. ಆದ್ದರಿಂದ ಅವರು ಇಂಗ್ಲಿಷ್ ಸಾಹಿತ್ಯವನ್ನು ದೇಶಭಾಷಾ ಮಾಧ್ಯಮದ ಮೂಲಕವೆ ಅಭ್ಯಾಸ ಮಾಡಿದರೆ ಅದರ ರಸಸತ್ವ ಸುಲಭವಾಗಿ ಶೀಘ್ರವಾಗಿ ಜೀರ್ಣವಾಗಿ ರಕ್ತಗತವಾಗುತ್ತದೆ. ಎಲ್ಲ ದೇಶಗಳಲ್ಲಿಯೂ ಪರಭಾಷೆಯ ಸಾಹಿತ್ಯವನ್ನು ಸ್ವಭಾಷೆಯ ಮೂಲಕ ಕಲಿಯುವುದೇ ರೂಢಿ, ಸಹಜ ರೀತಿ, ಏಕೆಂದರೆ ಅವರ ಉದ್ದೇಶ ಆ ಪರಭಾಷೆಯಲ್ಲಿ ಬರೆಯುವ ಮಾತನಾಡುವ ಪಾಂಡಿತ್ಯ ಸಂಪಾದನೆಯಲ್ಲ. ಅದರ ಸಾಹಿತ್ಯದ ಸತ್ವದ ಅಸ್ವಾದನೆ ಮಾತ್ರ ನಮ್ಮ ದೇಶದಲ್ಲಿ ಪರಕೀಯರ ಸೌಕರ್ಯಾರ್ಥವಾಗಿ ಆ ಭಾಷೆಯಲ್ಲಿ ಬರೆದು ಮಾತಾಡುವುದಕ್ಕಾಗಿಯೇ ನಮ್ಮ ವಿದ್ಯಾಭ್ಯಾಸ ಏರ್ಪಟ್ಟುದುದರಿಂದ ನಾವು ಪರಭಾಷಾ ಸಾಹಿತ್ಯವನ್ನು ಆ ಭಾಷಾ ಮಾಧ್ಯಮದಿಂದಲೇ ಕಲಿಯಬೇಕಾಯಿತು. ಮೊದಲಿನಿಂದಲೂ ಆ ಸಾಹಿತ್ಯವನ್ನು ನಮ್ಮ ಭಾಷೆಯ ಮಾಧ್ಯಮದಿಂದಲೇ ಕಲಿಸಿದ್ದರೆ ನಮ್ಮವರಿಗೆ ಈಗ ಒದಗಿರುವ ರಸಪುಷ್ಟಿಗಿಂತಲೂ ಸಾವಿರ ಪಾಲು ಹೆಚ್ಚಿನ ರಸಪುಷ್ಟಿ ಒದಗುತ್ತಿತ್ತು. ಪರಭಾಷಾ ಮಾಧ್ಯಮದಿಂದಲೆ ಕಲಿಯುವ ವಿಕಾರ ಪರಿಸ್ಥಿತಿ ಎಷ್ಟರಮಟ್ಟಿಗೆ ಮುಂದುವರಿದಿದೆಯೆಂದರೆ – ಷೇಕ್ಸ್‌ಪಿಯರ್, ಮಿಲ್ಟನ್, ವರ್ಡ್ಸ್‌ವರ್ತ್ ಮೊದಲಾದ ಕವಿಗಳ ಕೃತಿಗಳನ್ನು ಕನ್ನಡದ ಮೂಲಕ ಪಾಠ ಹೇಳಬಹುದೆಂಬ ಸಂಗತಿ ಇಂದಿಗೂ ಅನೇಕರಿಗೆ ದಿಗ್‌ಭ್ರಾಂತಿಕರ ವಿಸ್ಮಯವಾಗಿದೆ. ಆದರೆ ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾರ್ಜನೆ ಮಾಡಿ, ಅಲ್ಲಿಯೆ ಅಧ್ಯಾಪಕರಾಗಿ ಸೇರಿ, ತಾವೇ ವಿದ್ಯಾರ್ಥಿಗಳಾಗಿಯೂ, ಅಧ್ಯಾಪಕರಾಗಿಯೂ, ವಿದ್ಯಾರ್ಥಿಗಳ ಇಂಗ್ಲಿಷ್

ಭಾಷಾ ಸಾಮರ್ಥ್ಯವನ್ನೂ, ಸಾಹಿತ್ಯ ರಸಾಸ್ವಾದನಾ ಶಕ್ತಿಯನ್ನೂ ಗಮನಿಸುತ್ತ ಬಂದವರಿಗೆ ನಿಜಸ್ಥಿತಿ ಚೆನ್ನಾಗಿ ಗೊತ್ತು. ಇಂಗ್ಲಿಷ್ ಭಾಷೆಯಲ್ಲಿ ತನ್ನ ಅಭಿಪ್ರಾಯಗಳನ್ನು ವ್ಯಕ್ತಗೊಳಿಸುವ ಶಕ್ತಿ ಏನೇನೂ ಇಲ್ಲದ ವಿದ್ಯಾರ್ಥಿಗೆ ಪರೀಕ್ಷೆಯಲ್ಲಿ ಮ್ಯಾಕ್‌ಬೆತ್ ಪಾತ್ರದ ವಿಚಾರವಾಗಿ ಪ್ರಬಂಧ ಬರೆಯುವ ಸಂಕಟ ಒದಗಿದರೆ ಏನು ಮಾಡುತ್ತಾನೆ? ಪೂರ್ವಸಿದ್ಧತೆ ಮಾಡಿದ ಪ್ರಬಂಧವನ್ನು ಗಟ್ಟಿ ಮಾಡಿದ್ದರೆ ಅದನ್ನು ಉತ್ತರ ಪತ್ರಿಕೆಗೆ ಇಳಿಸಿ ತೇರ್ಗಡೆ ಹೊಂದುತ್ತಾನೆ. ಅಂತವನಿಗೆ ನಿಜವಾಗಿಯೂ ಷೇಕ್ಸ್‌ಪಿಯರ್ ನಾಟಕ ರಸಾಸ್ವಾದನೆಯಿಂದ ಅರಿವಾಗಿರುತ್ತದೆ. ಎಂದು ಹೇಳಲಾಗುವುದಿಲ್ಲ. ಅದೇ ಇನ್ನೊಬ್ಬ ವಿದ್ಯಾರ್ಥಿಗೆ ಅದರ ಅರಿವು ಸ್ವಲ್ಪ ಮಟ್ಟಿಗೆ ಆಗಿದ್ದರೂ ಅದನ್ನು ಬರೆಯುವ ಭಾಷಾಸಾಮರ್ಥ್ಯವಿಲ್ಲದೆ ತಪ್ಪುತಪ್ಪಾಗಿ ಏನನ್ನೂ ಬರೆದು ಫೆಯಿಲ್ ಆಗುತ್ತಾನೆ. ತನ್ನ ಭಾಷೆಯಲ್ಲಿಯೆ ಉತ್ತರ ಬರೆಯುವ ಸ್ವಾತಂತ್ರ್ಯ ಅವನಿಗಿದ್ದರೆ ಮ್ಯಾಕ್‌ಬೆತ್ ಪಾತ್ರವನ್ನು ಕುರಿತು ಚೆನ್ನಾಗಿಯೆ ಬರೆಯುತ್ತಿದ್ದನೆಂಬುದರಲ್ಲಿ ಸಂದೇಹವಿಲ್ಲ. ಈಚೀಚೆಗೆ ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಭಾಷೇತರ ವಿಷಯಗಳಲ್ಲಿ ಮೊದಲಿಗಿಂತಲೂ ಸಮಧಿಕ ಪ್ರಮಾಣದಲ್ಲಿ ಅನುತ್ತೀರ್ಣರಾಗುತ್ತಿರುವುದಕ್ಕೆ ಮುಖ್ಯ ಕಾರಣ ಇಂಗ್ಲಿಷ್ ಭಾಷಾ ಮಾಧ್ಯಮವೇ ಹೊರತು ವಿಷಯಗಹನತೆಯೂ ಅಲ್ಲ. ವಿದ್ಯಾರ್ಥಿ ವರ್ಗದ ಬುದ್ಧಿಶಕ್ತಿಯ ಸರ್ವತ್ರಾವನತಿಯೂ ಅಲ್ಲ. ಆದ್ದರಿಂದ ಇಂಗ್ಲಿಷನ್ನು ಅದರ ಸಾಹಿತ್ಯಕ್ಕಾಗಿ ಅಭ್ಯಾಸಮಾಡುವ ವಿದ್ಯಾರ್ಥಿಗಳಿಗೆ ಕನ್ನಡ ಮಾಧ್ಯಮದಲ್ಲಿಯೆ ಪಾಠ ಹೇಳಬೇಕು, ಪರೀಕ್ಷೆ ನಡೆಸಬೇಕು.

ಇಂಗ್ಲಿಷನ್ನು ಅದರ ಪ್ರಥಮ ಭಾಷಾಸ್ಥಾನದಿಂದ ಸದ್ಯಕ್ಕೆ ದ್ವಿತೀಯ ಸ್ಥಾನಕ್ಕೆ ಇಳಿಸಿ, ಕನ್ನಡವನ್ನ ಪ್ರಥಮ ಭಾಷಾಸ್ಥಾನಕ್ಕೆ ಏರಿಸಿ, ಪ್ರಥಮ ಭಾಷೆಯ ಮೂರು ಪ್ರಶ್ನೆ ಪತ್ರಿಕೆಗಳಲ್ಲಿ ಒಂದನ್ನು ಇಂಗ್ಲಿಷ್ ಸಾಹಿತ್ಯ ಎಂಬ ಹೆಸರಿನಲ್ಲಿ ಇಂಗ್ಲಿಷ್ ಸಾಹಿತ್ಯಕ್ಕೆ ಮೀಸಲಾಗಿರಿಸಿ, ಕನ್ನಡದಲ್ಲಿ ಪಾಠ ಹೇಳಿ, ಕನ್ನಡದಲ್ಲಿಯೆ ಉತ್ತರ ಬರೆಯುವಂತೆ ಮಾಡಿದರೆ, ನಮ್ಮ ಮಕ್ಕಳಿಗೆ ಭಾಷೆಯ ಹೊರೆಯನ್ನು ತಪ್ಪಿಸುವುದರ ಜೊತೆಗೆ, ಇಂಗ್ಲಿಷ್ ಸಾಹಿತ್ಯದ ರಸಾಮೃತವನ್ನು ಪಾನ ಮಾಡಿಸಿದಂತಾಗಿ, ಅವರ ಪುಷ್ಟಿ ಈಗಿರುವುದಕ್ಕಿಂತಲೂ ನೂರಡಿ ಹೆಚ್ಚುವುದರಲ್ಲಿ ಸಂದೇಹವಿಲ್ಲ.

ಇಂಗ್ಲಿಷ್ ಹೋದರೆ ಎಲ್ಲ ಕೊಚ್ಚಿ ಹೋಗುತ್ತದೆ ಎಂದು ಕೂಗಿಕೊಳ್ಳುವವರಿಗೆ ಇನ್ನೂ ಒಂದು ಸಮಾಧಾನ ಹೇಳಬೇಕಾಗುತ್ತದೆ. ಮೇಲೆ ವಿವರಿಸಿದಂತೆ, ಇಂಗ್ಲಿಷ್ ಸಂಪೂರ್ಣವಾಗಿ ಹೋಗುವುದಿಲ್ಲ. ಹಲವರಲ್ಲಿ ಸಾಹಿತ್ಯವಾಗಿ ಉಳಿದಿರುತ್ತದೆ. ಕೆಲವರಲ್ಲಿ ಭಾಷೆಯಾಗಿಯೂ ಉಳಿಯುತ್ತದೆ. ಅಲ್ಲದೆ ಇಂಗ್ಲಿಷ್ ಕಲಿಯದ ಇತರ ಬಹು ಜನರಿಗೂ ಇಂಗ್ಲಿಷ್ ಮೋಹಿಗಳು ಊಹಿಸುವಂತೆ ಯಾವ ತೆರನಾದ ಭಾವನಷ್ಟವಾಗಲಿ ಬುದ್ಧಿದಾರಿದ್ರವಾಗಲಿ ಸಂಭವಿಸುವುದಿಲ್ಲ. ಏಕೆಂದರೆ ಕನ್ನಡದ ಈಗಿನ ಸ್ಥಿತಿ ಇಪ್ಪತ್ತೈಯ್ದು ಮೂವತ್ತು ವರ್ಷಗಳ ಹಿಂದೆ ಇದ್ದ ಸ್ಥಿತಿಯಲ್ಲ. ಈಗ ಇಂಗ್ಲಿಷ್ ಒಂದಕ್ಷರ ಬರದಿದ್ದವನೂ ಕೊಡ ಆಗ ಇಂಗ್ಲಿಷಿನ ಮೂಲಕವೇ ಪಡೆಯಬೇಕಾಗಿದ್ದ ಭಾವದ ಮತ್ತು ಬುದ್ಧಿಯ ಪುಷ್ಟಿಗಳನ್ನು ಕನ್ನಡದ ಮೂಲಕವೇ ಯಥೇಚ್ಛವಾಗಿ ಪಡೆಯುವಷ್ಟರ ಮಟ್ಟಿಗೆ ಕನ್ನಡ ವಾಙ್ಮಯ ಸಾಹಿತ್ಯದ ಮತ್ತು ಶಾಸ್ತ್ರದ ವಿವಿಧ ಶಾಖೆಗಳಲ್ಲಿ ಮುಂದುವರಿದಿದೆ; ದಿನದಿನಕ್ಕೂ ಬೆಳೆದು ಪ್ರಗತಿ ಹೊಂದುತ್ತಿದೆ. ಅಷ್ಟೇ ಅಲ್ಲ, ಇಂಗ್ಲಿಷ್ ಸಾಹಿತ್ಯವನ್ನೂ ಅಮೂಲಾಗ್ರವಾಗಿ ಓದಿದವರೂ ಬೆಕ್ಕಸ ಪಡುವಂತಹ ಸಾಹಿತ್ಯ ಶೃಂಗಗಳೂ ಕನ್ನಡದಲ್ಲಿ ಕೆಲವಾದರೂ ಮೂಡಿವೆ. ಹಿಂದಿನ ಮತ್ತು ಇಂದಿನ ಕನ್ನಡ ಸಾಹಿತ್ಯದ ರಸಸಾಗರದಲ್ಲಿ ಮುಳುಗಿದವನು ತಾನು ಇಲ್ಲಿ ಅನುಭವಿಸದಿದ್ದ ಅಥವಾ ಅನುಭವಿಸಲಾರದಿದ್ದ ಯಾವ

ನೂತನತೆಯನ್ನಾಗಲಿ ರಸೋನ್ಮೇಷವನ್ನಾಗಲಿ ಅಲ್ಲಿ ಕಂಡು ಕರುಬುವ ಪರಿಸ್ಥಿತಿಯಿಂದ ನಾವು ಬಹುದೂರ ಮುಂದುವರಿದಿದ್ದೇವೆ. ತಾವು ವಿದ್ಯಾರ್ಥಿಗಳಾಗಿದ್ದಾಗ ಓದಿದ್ದ ಅಥವಾ ಶಾಲಾ ಕಾಲೇಜುಗಳಲ್ಲಿ ಕಡಿಮೆ ಸಂಬಳದ ಬಡ ಉಪಾಧ್ಯಾಯರಿಂದ ಪಾಠ ಕೇಳಿದ್ದ ಅಂತಸ್ತಿನಲ್ಲಿಯೆ ಕನ್ನಡ ಈಗಲೂ ಇದೆ ಎಂದು ಭ್ರಮಿಸಿರುವ ರಾಜ್ಯ ಲಲಾಟ ಲೇಖನ ನೌಕೆಯ ಕರ್ಣಾಧಾರರಾಗಿರುವ ವಯಸ್ಕ ಮಹನೀಯರು ಮಾತ್ರ ಕನ್ನಡದ ಶಕ್ತಿಯ ವಿಚಾರವಾಗಿ ಶಂಕಿಸಬಹುದೆ ವಿನಾ ಉಳಿದ ತಿಳಿದವರಾರೂ ಶಂಕಿಸರು.

## ಓದುಪಠ್ಯ:

# ೪. ಮೈಸೂರು ರುಮಾಲು

**– ವಿ. ಸೀತಾರಾಮಯ್ಯ**

**ಆಶಯ :**

ನಮಗೆ ಗುಣವೇ ಪ್ರಧಾನ. ಎಲ್ಲಿ ಗುಣವನ್ನು ಕಂಡರೂ ಅದನ್ನು ಆದರದಿಂದ ಸ್ವೀಕರಿಸುವೆವು. ಸ್ವೀಕರಿಸಿದ್ದನ್ನು ನಮ್ಮ ಸಹಜಗುಣವಾಗಿ ಮಾಡಿಕೊಂಡು ಸುಖ ಪಡುವೆವು. ಶತಮಾನಗಳು ಕಳೆದು ಹೋದರೂ ಅನೇಕ ರಾಜರು ನಮ್ಮ ಮೇಲೆ ದಾಳಿ ಮಾಡಿದರೂ, ತಮ್ಮ ಆಳ್ವಿಕೆಯನ್ನು ಇಲ್ಲಿ ಹೂಡಿದ್ದರೂ, ನಾವು ನಮ್ಮ ವ್ಯಕ್ತಿತ್ವವನ್ನು ಕಳೆದುಕೊಂಡಿಲ್ಲ. ನಮ್ಮ ಉಡುಪು, ಅಲಂಕಾರಗಳು, ಎಷ್ಟು ಸುಂದರವಾದವು! ಒಂದಕ್ಕೊಂದು ಹೇಗೆ ಒಪ್ಪುವುವು! ಕಾಲಿಗೆ ಕಾಶಿಯಾತ್ರೆಯ ಜೋಡು; ನಿರಿ ಲೇಡಿ ಕಚ್ಚೆತಿದ್ದಿ ಕಾಲು ತುಂಬ ಉಟ್ಟ ಬೆಳ್ಳನೆಯ, ಅಂಚಿನಪಂಚೆ; ಬೆರಳಿಗೆ ಹರಳಿನ ಉಂಗುರ; ಒಂದು ಕೈಯಲ್ಲಿ ರೇಷ್ಮೆಯ ವಸ್ತ್ರ, ಇನ್ನೊಂದು ಕೈಲಿ ಬೆತ್ತ ಅಥವಾ ಛತ್ರಿ ತುಂಬು ಕುತ್ತಿಗೆಯ ಅಂಗಿ, ಕಂಕುಳ ಸುತ್ತಿ ಭುಜವೇರಿ ಹಿಂದೆ ಮುಂದೆ ಮರ್ಯಾದೆಯಿಂದ ಈಜಾಡುವ ಉತ್ತರೀಯ; ಕಿವಿಗೆ ಕಡುಕು; ತಿರುವು ಮೀಸೆ; ಹಣೆಗೆ ಅಕ್ಷತೆ; ಕೋರು ರುಮಾಲು! ದೇವೇಂದ್ರನಿಗೆ ಸರಿಸಮಾನ ಕಳೆಯನ್ನು ಕೊಡಬಲ್ಲವು. ಮೈಸೂರಿನ ಉಡುಗೆ–ರುಮಾಲು ಸಹಜಗುಣವನ್ನು, ಮಾನವನ್ನು ಈವರೆಗೆ ಕಾಪಾಡಿಕೊಂಡು ಬಂದಿದೆ.

ಹೆಂಗಸಿನ ಮನಸ್ಸನ್ನಳೆಯಬಹುದು; ನೀರಿನಲ್ಲಿರುವ ಮೀನಿನ ಕಾಲನ್ನು ಕಾಣಬಹುದು; ಅದೃಷ್ಟದಲ್ಲಿ ಏನು ಬರೆದಿದೆಯೆಂದು ಗುಣಿಸಬಹುದು; ಮೃತ್ಯುವಿನ ಬಸಿರನ್ನೇ ಬಗಿದು ಬದುಕು ಹೊರಕ್ಕೆ ಬರಬಹುದು. ಆದರೆ ರುಮಾಲನ್ನು ಕೆಡಿಸದೆ ಯಾವಾಗಲೂ ಸರಿಯಾಗಿ ಕಟ್ಟುತ್ತೇನೆನ್ನುವುದು ಒಂದು ಮಾತ್ರ ಅಸಾಧ್ಯ. ಹಾಗೆ ಕಟ್ಟುತ್ತೇನೆಂದು ಹೇಳಬಲ್ಲ ಗಂಡನ್ನು ನಾನು ಈವರೆಗೂ ನೋಡಿಲ್ಲ. ನಾನು ಎಷ್ಟೋ ಜನ ಸೊಗಸುಗಾರರನ್ನು ನೋಡಿದ್ದೇನೆ. ಕದೀಮರನ್ನು ಕಂಡಿದ್ದೇನೆ. ಅವರ ರುಮಾಲು ಚೆನ್ನಾಗಿರುವಾಗ ಪ್ರಶಂಸೆ ಮಾಡಿದ್ದೇನೆ. ಅಳೆದು ಕಟ್ಟಿದಂತೆ ಒಂದೇ ಸಮನಾಗಿ ರುಮಾಲು ಕಟ್ಟಬಲ್ಲ ಅವರ ಕೌಶಲವನ್ನು ಬಹುವಾಗಿ ಶ್ಲಾಘಿಸಿದ್ದೇನೆ. ಅಂಥ ಶಕ್ತಿಯನ್ನು ನನಗೂ ಕೊಡಬಾರದೆ, ದೇವರೆ, ಏನು ಈ ಪಕ್ಷಪಾತ, ಎಂದು ಮೊರೆಯಿಟ್ಟಿದ್ದೇನೆ. ಅಂಥವರೂ ಎಷ್ಟೋ ಬಾರಿ 'ಗಸ್ತು' ತಿನ್ನುವರಂತೆ! ಮುಗಿವವರೆಗೂ ಅದು ಸರಿಯಾಗುತ್ತದೆಂದು ಖಂಡಿತವಾಗಿ ಹೇಳಿ ಪಂದ್ಯ ಹಾಕಿ ಗೆಲ್ಲಬಲ್ಲವನು ಈ ಹೊತ್ತಿವರೆಗೂ ಹುಟ್ಟಿಲ್ಲ. ಇನ್ನು ಮುಂದೆಯೂ ಹುಟ್ಟ ಬಾರದೆಂದು ದೇವರ ಇಚ್ಛೆ ನಮ್ಮ ರುಮಾಲಿನ ಮಹತ್ವದ ಮುಖ ಲಕ್ಷಣ. ಅದಕ್ಕೆ ಮನಸ್ಸು ಬರಬೇಕು, ಅದು ಸರಿಹೋಗಬೇಕು. ಅದನ್ನು ನಾವು ಅನುಸರಿಸಬೇಕೇ ಹೊರತು ಜೋರು ಮಾಡಿದರೆ ಏನೇನೂ ನಡೆಯುವುದಿಲ್ಲ. ಪೌರುಷದ ಪ್ರಯೋಗ ಪ್ರಯೋಜಕಾರಿಯಾಗುವುದಿಲ್ಲ.

ನಾನು ಆಡುತ್ತಿರುವುದು ಮೈಸೂರು ರುಮಾಲಿನ ಮಾತು. ಆಮೇಲೆ ಸುಳ್ಳು ಹೇಳಿದೆನೆಂದು ವಾದಿಸೀರಿ. ಧಾರವಾಡದ್ದಾದರೆ ಕಟ್ಟಬಹುದು. ಪಂಜಾಬಿನದಾದರೆ ಕಟ್ಟಬಹುದು. ಕೊನೆಗೆ ಗುಜರಾತಿ, ಮಾರವಾಡಿ ರುಮಾಲುಗಳನ್ನಾದರೂ ಕಟ್ಟಬಹುದು. ಮದ್ರಾಸಿನವರು ಈ ಲೆಕ್ಕಕ್ಕೆ ಬರುವುದಿಲ್ಲವಲ್ಲ! ಹುಟ್ಟಿದವರು ಹುಟ್ಟಿದ ಹಾಗೆಯೇ ಇದ್ದು ಹೋಗುವ ಮಹಾನುಭಾವರು ಅವರು. ಮೈಮುಚ್ಚುವ ಅಗತ್ಯವೇ ಇಲ್ಲದಂತೆ ದೇವರು ಅವರಿಗೆ ಅನುಕೂಲಪಡಿಸಿಕೊಟ್ಟಿದ್ದಾನೆ. ಅಂತ ಮುಕ್ತರ ಮಾತು ನಮಗೇಕೆ? ಮಿಕ್ಕ ಪ್ರಾಂತಗಳವರ ರುಮಾಲುಗಳು ಚೆನ್ನಾಗಿ ಕೈಗೆ ಹಬ್ಬುತ್ತವೆ. ಹೇಗೆ ಸುತ್ತಿದರೂ ಸರಿಬರುತ್ತವೆ. ಸರಿಬರಲೇಬೇಕು. ಅವಕ್ಕೆ ನಿಯಮವಿಲ್ಲ; ಕಟ್ಟಲು ಹೆಚ್ಚು ಕಷ್ಟವಿಲ್ಲ. ವಕ್ರವಾಗಿದ್ದಷ್ಟೂ ವಿಶೇಷ, ಮೈಸೂರು ರುಮಾಲೊ? ಎಲ್ಲಿಂದೆಲ್ಲಿಗೆ ಹೋಲಿಕೆ? ಬದುಕಿದರೆ ಬಂತೆ ಭಾಗ್ಯ?

ಸುಮ್ಮನೆ ನಮ್ಮನ್ನು ಸೊಗಸುಗಾರರು, ಬಯಲು ಡಂಬದವರು ಎಂದು ತಿಳಿಯದವರು ಆಕ್ಷೇಪಣೆ ಮಾಡುತ್ತಾರೆ. ಒರಟು ಜನ, ಗುಣಾವಗುಣ ವಿವೇಚನೆ ಮಾಡತಕ್ಕ ಶಕ್ತಿಯಿಲ್ಲದವರು. ಈ ಸುಖ, ಈ ನಯ, ಈ ಸುಖದ ಈ ನಯ, ಈ ನಯದ ಈ ಸುಖ, ಇವು ಅನುಭವಿಸಿದವರಿಗೆ ಮಾತ್ರ ಗೊತ್ತು, ಇತರರಿಗೆ ಹೇಗೆ ಗೊತ್ತಾದೀತು ? ಈ ಹೊರ ಜಂಬವನ್ನೇ ಆಗಲಿ ಎಷ್ಟು ಜನ ಹೀಗೆ ಮನೋಹರವಾಗಿ ಮಾಡಿಯಾರು? ಎಲ್ಲರಿಗೂ ಸಾಧ್ಯವೊ? ಮಾಡುತ್ತಿರುವ ನಮಗೆ, ಮಾಡಲು ಪ್ರಯತ್ನಪಟ್ಟು ಕೈಲಿ ಹರಿಯದೆ ಬಿಟ್ಟು ಬಿಟ್ಟಿರುವವರಿಗೆ ಈ ಇಬ್ಬರಿಗೆ ಮಾತ್ರ ಅದರ ಕಷ್ಟ ಸುಖಗಳು ಗೊತ್ತು. ನಮ್ಮವರು ರಂಗಕ್ಕಿಳಿದರೆ ಎದುರು ನಿಲ್ಲುವ ಧೀರನು ಯಾರು! ಮೈಸೂರು ನಯ ನಾಜೂಕು, ವಿತರಣೆ, ಐಟಕ್ಕು–ಇವು ಸುಮ್ಮನೆ ಬಂದಾವೆ? ದೇವರಲ್ಲಿ ವರವನ್ನು ಪಡೆದು ಇಲ್ಲಿ ಹುಟ್ಟಿ ಅವುಗಳನ್ನು ಅನುಭವಿಸಬೇಕು. ಈ ಜನ್ಮದಲ್ಲಿ ಅವು ದೊರೆಯವಾದರೆ ಮುಂದಿನ ಜನ್ಮಕ್ಕಾದರೂ ದೊರೆಯಲೆಂದು ಹಗಲೂ ರಾತ್ರಿಯೂ ತಪಸ್ಸು ಮಾಡಬೇಕು.

ಮೈಸೂರು ರುಮಾಲಿನ ವಿಶೇಷವೇನು, ಎನ್ನುವಿರೋ? ಅದು ಎಂಥವರಿಗಾದರೂ ದಾಕ್ಷಿಣ್ಯವಿಲ್ಲದೆ 'ಗಸ್ತು' ಕೊಡುವುದು. ಅದರ ವಿಷಯವಾಗಿ ಉದಾಸೀನ ತೋರಿಸಿದರೂ ಸರಿಯೆ, ಧೋರಣೆ ಮಾಡಿದರೂ ಸರಿಯೆ, ಹಾಗೆ ಮಾಡುವವರು ಖಂಡಿತ ಬೇಸ್ತು ಬೀಳುತ್ತಾರೆ. ಅದುದರಿಂದ ಅದನ್ನು ತಾತ್ಸಾರ ಮಾಡಬೇಡಿ. ನೀವು ಆಲಸ್ಯ ತೋರಿಸಿದರೆ ನೀವು ಬೇಹುಷಾರಾಗಿರುವ ಸಮಯ ಕಾದುಕೊಂಡಿದ್ದು ಮೆಲ್ಲಗೆ, ಮೆಲ್ಲಗೆ ಬಾಲ ಬಿಚ್ಚಿ ನಿಮಗೆ ಕೆಲಸ ಕೊಡುತ್ತದೆ. ಅದು ಮಾಡಬಲ್ಲ ಅವಮಾನ ಸಾಧಾರಣವಾದುದಲ್ಲ. ನೀವು ಸ್ಕೂಲು ಮೇಷ್ಟ್ರರಾಗಿದ್ದರಂತೂ ನಿಮ್ಮ ಪಾಡು ನಾಯಿಪಾಡು. ಎಲ್ಲರ ಅನುಭವದ ಮಾತನ್ನೇ ನಾನು ಹೇಳುತ್ತಿರುವುದು. ಯಾರನ್ನು ಬೇಕಾದರೂ ಕೇಳಿಕೊಳ್ಳಿ. ನಾನು ಹೇಳುವುದು ನಿಜವೋ ಸುಳ್ಳೋ ಗೊತ್ತಾಗುವುದು. ಅದರ ಅಂದ ಅದರ ಇನ್ನೊಂದು ಮುಖ್ಯ ವಿಶೇಷ. ಬೇರೆ ಯಾವ ರುಮಲೂ ತೂಕ, ಬಣ್ಣ, ಗಾತ್ರ, ನಯಗಳಲ್ಲಿ ಇದಕ್ಕೆ ಜೋಡಲ್ಲ. ಎಷ್ಟು ಕಮ್ಮಿಯೆಂದರೂ ೨೦–೨೫ ರೂಪಾಯಿಗಳಿಗೆ ಕಡಿಮೆ ಬೆಲೆಗೆ ದೊರಕದಿರುವುದು ಎರಡನೆಯ ವಿಶೇಷ. ಕೋರು ರುಮಾಲು ಬೇಕಾದರೆ ಖರ್ಚು ಮಾಡಬೇಕು. ಅದೇನು ಪೋಸ್ಟಾಫೀಸು ಬೆಂಡು ರುಮಾಲು ಕೆಟ್ಟುಹೋಯಿತೆ? ಒಳ್ಳೆಯ ವಸ್ತುಗಳಿಗೆ ಯಾವಾಗಲೂ ಬೆಲೆ ಹೆಚ್ಚೇ. ಎಷ್ಟೇ ಚೆನ್ನಾಗಿ ಇಸ್ತ್ರೀ ಮಾಡಿದರೂ ಮುರುಗು ಚೆನ್ನಾಗಿ ಬಾರದೆ ಹೋಗುವುದು; ಸರಿಗೆಯ ಬಣ್ಣ ಕಪ್ಪಾಗುವುದು; ಸರಿಗೆ ಮುದುರಿಕೊಳ್ಳುವುದು; ಅಗಸನಿಗೆ ಅಪಕೀರ್ತಿಯನ್ನೂ ಯಜಮಾನನಿಗೆ ಅಸಮಾಧಾನವನ್ನೂ

ತುರುವುದು; ಆರ್ಯಭಟ್ಟನೇ ಲೆಕ್ಕ ಹಾಕಲಿ, ಅಳತೆಯ ಸುತ್ತು ಹೆಚ್ಚು ಕಡಿಮೆಯಾಗಿ ಆರು ಸಲ ಕಟ್ಟಿ, ನೂರು ಸಲ ಬಿಚ್ಚಿ, ಕಟ್ಟುತ್ತ ಬಿಚ್ಚುತ್ತ ಬೇಸರವಾಗುವುದು; ತಲೆಗೆ ಉರಿ ಬಂದು ಕಪ್ಪು ಮುಖವೂ ಕೆಂಪಾಗಿ ಮೈಬೆವರಿ, ಆವೇಶವೇರಿ, ಕೊನೆಗೆ ರುಮಾಲು ಕೊಳೆಯಾಗಿ ಅಂಟಾಗಿ, ಕಾಲಿನಿಂದ 'ಹೈಕಿಕ್' ಹೊಡೆದುಬಿಡೋವೇ ಎನ್ನಿಸುವಷ್ಟು ರೋಷ ತರುವುದು ಮೂರನೆಯ ವಿಶೇಷ. ಇವೆಲ್ಲಕ್ಕೂ ಮೀರಿ, ಸಮಯ, ಸಂದರ್ಭ, ಉತ್ಸವ ಮುಂತಾದ ಕಾಲಗಳಲ್ಲೇ ಬೇಕೆಂದು ಕೆಟ್ಟುಹೋಗುವುದು ಮಹಾ ವಿಶೇಷ. ನಾಲ್ಕು ಜನ ದೊಡ್ಡವರು ಸೇರುವ ಕಡೆ ಹೋಗಬೇಕು. ರೈಲಿಗೆ ಹೋತ್ತಾಯಿತು, ಕಚೇರಿಗೆ ಕಾಲ ಮೀರಿತು, ಸಾಹೇಬರನ್ನು ನೋಡಬೇಕು, ಫೋಟೋಗೆ ಕುಳಿತುಕೊಳ್ಳಬೇಕು, ದರ್ಬಾರಿಗೆ ದಯಮಾಡಿಸಬೇಕು ಹಲವೇನು ಈ ಹೊತ್ತು ರುಮಾಲು ಬೇಗ ಚೆನ್ನಾಗಿ ಕಟ್ಟಿಕೊಳ್ಳಬೇಕೆಂದು ಯಾವಾಗ ಅಂದುಕೊಳ್ಳುವೆವೋ ಆಗಲೇ ಕೆಟ್ಟಿತು! ಹೀಗೆ ಅನಂತ ಗುಣ ವಿಶೇಷಗಳಿಂದ ವಿಶೇಷಿತವಾಗಿರುವ ಮಹಾವಸ್ತುವಿಗೆ ಇದೇ ವಿಶೇಷ, ಅದೇ ವಿಶೇಷವೆಂದು ಸುಲಭವಾಗಿ ಹೇಳಿ ಮುಗಿಸುವುದು ಹೇಗೆ? ಹಾಗಲ್ಲ ಹೀಗಲ್ಲ ಎಂದು ಶಂಕರಾಚಾರ್ಯರು ಪರಬ್ರಹ್ಮ ವಸ್ತುವಿಗೆ ಹೇಳಿದಂತೆ ನಮ್ಮ ರುಮಾಲಿಗೂ 'ನೇತಿ ನೇತಿ' ಎಂದು ಹೇಳಿದರೆ ಸುಮಾರು ನಿಜಕ್ಕೆ ಹತ್ತಿರ ಬರಬಹುದು. ಇವೇ ಪರಮ ವಿಶೇಷ.

ರುಮಾಲು ಅಂದ ಮಾತ್ರಕ್ಕೆ ಅದರೊಳಗೆ ಪೇಟಾ ಸೇರುವುದಿಲ್ಲವೆಂದು ಕೊಳ್ಳಬೇಡಿ, ರುಮಾಲು, ಪೇಟಾ ಎರಡೂ ಒಂದೇ. ಏಕೆಂದರೆ, ಯಾವುದು ರುಮಾಲು, ಯಾವುದು ಪೇಟಾ ಎಂಬುದು ನನಗೆ ಗೊತ್ತಿಲ್ಲ. ಬಾಲಂಗೋಸಿಯ ಹಾಗೆ ಕತ್ತರಿಸಿವುದು ಪೇಟವೋ ರುಮಾಲೊ? ಕತ್ತರಿಸದೆ ಒಂದು ಕಡೆ ಜರಿಯಿರುವುದು? ಇವೆರಡರಲ್ಲಿ ಒಂದಕ್ಕೆ ಈ ಹೆಸರು, ಒಂದಕ್ಕೆ ಆ ಹೆಸರು ಎಂದು ಮಾತ್ರ ಗೊತ್ತಿದೆ. ಎರಡರಿಂದಲೂ ಪ್ರಯೋಜನ ಒಂದೇ–ಮುದ್ದಾಗಿ ಮೈಸೂರಿನ ಜರ್ಬು ರುಮಾಲು ಕಟ್ಟಬಹುದು. ಇನ್ನು ಅವುಗಳಲ್ಲಿ ಭೇದವನ್ನೇಕೆ ಎಣಿಸಬೇಕು? ಆದುದರಿಂದಲೇ ನಾನೂ ನಿತಾಂತವಾಗಿ ಇದು ಹೀಗೆ ಎಂದು ತಿಳಿದು ದೃಢಪಡಿಸಿಕೊಳ್ಳಲು ಅಪ್ಪಾಗಿ ಪ್ರಯತ್ನಪಡಲಿಲ್ಲ. ಇತರರು ಒಂದೆಡು ಸಲ ಅವುಗಳ ವ್ಯತ್ಯಾಸವನ್ನು ನನಗೆ ತಿಳಿಯ ಹೇಳಿದ್ದಾರೆ. ಆದರೇನು: ಮುಖ್ಯರಾದ ವಿಷಯಳಾಗಿದ್ದರೆ ತಾನು ಮನಸ್ಸಿನಲ್ಲಿ ನಿಂತಾವು? ಕ್ಷೇಮಕಾಲದಲ್ಲಿ ಇದು ರೂಪಾಯಿ, ಇದು ನೋಟು ಎಂದು ಜನರು ಹೇಗೆ ಭೇದವೆಣಿಸರೋ ಹಾಗೆ ಸತ್ಯಸ್ವರೂಪ ತಿಳಿದವರು ಇದು ರುಮಾಲು ಇದು ಪೇಟಾ ಎಂಬ ಭೇದವೆಣಿಸರು. ನಾನು ಎಣಿಸುವುದಿಲ್ಲ. ನೀವು ನನ್ನ ಹಾಗೆಯೇ ಮಾಡಿ.

ಮೈಸೂರಿನವರು ನಾವು ರಸಿಕರು. ಈ ವಿಚಾರವನ್ನು ಪ್ರಪಂಚವೇ ಬಲ್ಲುದೆಂದೂ ನಮಗೆ ಗೊತ್ತಿರುವುದು. ರಸಿಕತೆಯನ್ನು ಉಳಿಸಿಕೊಳ್ಳುವುದಕ್ಕಾಗಿ ಏನನ್ನು ಬೇಕಾದರೂ ಮಾಡಲು ನಾವು ಸಿದ್ಧವಾಗಿರುವವರು. ಅದರಲ್ಲಿನ ಆಸಕ್ತಿಯಿಂದ ಬಡತನ ಬಂದೀತೆಂದು ಅಂಜೆವು. ಇತರರು ಹಳಿದಾರೆಂದು ಲೆಕ್ಕಿಸೆವು. ಕಾಯಿಲೆ ಬಿದ್ದೇವೆಂದು ಹೆದರೆವು. ಅದಕ್ಕಾಗಿ ಸರ್ವಸ್ವವನ್ನೂ ವೆಚ್ಚಮಾಡಲು ಹಿಂಜರಿಯವು. ಅದೂ ಒಂದು ಪುಣ್ಯ ನಾಳೆಗೆ ಹೇಗಪ್ಪ ಎಂದು ಚಿಂತಿಸಿ ಕಂದಿ ಬೀಳವು. ಬೀಳುವ ಅಂಥವರು ಏನು ಮನುಷ್ಯರು, ಹೇಳಿ! ಇರುವಷ್ಟು ಕಾಲವೂ ಸುಖವಾಗಿ ಕಲೆಗಳ ವ್ಯವಸಾಯದಲ್ಲಿಯೊ ಸುಂದರ ವಿಷಯಗಳಲ್ಲಿ ಅನುರಕ್ತಿಯನ್ನು ಹೆಚ್ಚಿಸುವ ಕಾರ್ಯಗಳಲ್ಲಿಯೋ ಮಗ್ನರಾಗಿರುವೆವು... ಮೈಸೂರಿನವರಲ್ಲಿ ಯಾವುದೂ ಅತಿಯಲ್ಲ. ಉಡುಗೆ ತೊಡುಗೆ, ಊಟ ಉಪಚಾರ, ಮಾತು ಕತೆ, ಧನ

ಧ್ಯಾನ, ಧೈರ್ಯ, ಸಾಹಸ ಎಲ್ಲವೂ ಮಿತ. ಸುಮ ಧಾತು. ಅರಿಸ್ಟಾಟಲ್ ಹೇಳಿರುವ The High-minded Man ಅಂತಹ ಉದಾತ್ತ ಸ್ವಭಾವದವರು.

ಭೋಗಸಂಪತ್ತನ್ನು ದೇವರು ನಮಗೆ ಬೇಕಾದಷ್ಟು ಒದಗಿಸಿದ್ದಾನೆ. ಎಂಥವರಿಗೂ ಇಲ್ಲಿ ಸುಖಾಪೇಕ್ಷ್ಯ ಬರುವುದು. ವಿರಾಮ ಹೆಚ್ಚಾಗಿ ದೊರಕುವುದು. ಸ್ವಲ್ಪ ಶ್ರಮಪಟ್ಟರೆ ಅತಿಯಾದ ಪ್ರಯೋಜನ ದೊರಕುವುದು. ಎಂಥ ತತ್ವಶೋಧಕರಿಗಾಗಲಿ, ಎಂಜಿನಿಯರುಗಳಿಗಾಗಲಿ ಸ್ವದೇಶದವರಿಗಾಗಲಿ, ವಿದೇಶದವರಿಗಾಗಲಿ ಸ್ತೋಮವಾಗಿ ಮೈ ಬೆಳೆಯುವುದು, ಕಣ್ಣು ತುಂಬ ನಿದ್ರೆ ಬರುವುದು. ಕೆಲಸಗಳನ್ನು ತಾನು ಏತಕ್ಕೆ ಮಾಡಬೇಕು? ಅವಶ್ಯಕತೆಯೇನಿದೆ? ನಮ್ಮದು ರಾಮರಾಜ್ಯ, ಭೋಗರಾಜ್ಯ, ಶೃಂಗಾರರಾಜ್ಯ ಮೈಸೂರಿನ ಚೆಲುವು ಬೆಡಗುಗಳ ಧ್ಯಾನವೊಂದೇ ಸಾಲದೇ? ಹದವಾದ ಇಲ್ಲಿನ ವಾಯುಗುಣವೊಂದೇ ಸಾಲದೇ? ನಮ್ಮ ಶ್ರೀಗಂಧದ ಸೌಗಂಧ ಒಂದು ಸಾಲದೆ? ನಮ್ಮ ಮಲ್ಲಿಗೆ ಹೂ, ವೀಳೆಯದೆಲೆ, ಬದನೆಕಾಯಿಗಳ ಪರಿಮಳ ಸವಿ ಸೌಕುಮಾರಗಳೇ ಸಾಲದೆ? ಆದುದರಿಂದಲೇ ಇತರರು ನಮ್ಮನ್ನು ಎಷ್ಟು ಆಕ್ಷೇಪಿಸಿದರೂ ನಮ್ಮಲ್ಲಿಗೆ ಬೀದಿಯ ಬಾಗಿಲಿನ ಕಡೆಯಿಂದಲ್ಲದಿದ್ದರೆ ಹಿತ್ತಿಲ ಬಾಗಿಲಿಂದಾದರೂ, ಕದ್ದಾದರೂ ತಂಡತಂಡವಾಗಿ ಬಂದು ನೆಲಸಿ, ತಾವೂ ಮೈಸೂರಿನವರೆನಿಸಿಕೊಂಡು ನಮ್ಮ ಭೋಗ ಭಾಗ್ಯಗಳಲ್ಲಿ ದಿನೇ ದಿನೇ ಹೆಚ್ಚು ಹೆಚ್ಚು ಭಾಗಿಗಳಾಗಲು ಹಾರೈಸುತ್ತಿರುವುದು. ನಮಗೇ ಉಳಿಯದಂತೆ ಅವುಗಳನ್ನು ಭೋಗಿಸುತ್ತಿರುವುದು.

ಇನ್ನು ನಮ್ಮ ರಾಜಧಾನಿಯೋ! ಎಲ್ಲಿ ನೋಡಿದರಲ್ಲಿ ಕಣ್ಣನ್ನು ಮೋಹಿಸಿ, ಬಗೆಯನ್ನು ಬಂದಿಸಿಡುವ ಉಪವನಗಳು, ರಾಜಬೀದಿಗಳು, ಸೌಧಗಳು, ಮೇಳತಾಳಗಳು, ಸಂಗೀತ ಶಿಲ್ಪಕಲಾಚಾತುರಿ, ಚಿತ್ರಸೌಂದಯ್ಯ ದೃಶ್ಯಗಳು ಇವು ಯಾರಿಗೆ ಉಂಟು ಯಾರಿಗೆ ಇಲ್ಲ? ಕೊನೆಗೆ ಅಲ್ಲಿನ ಮಡಿವಾಳಿಗಳಂತೆ ಬಟ್ಟೆ ಮಡಿಮಾಡುವವರಾರು? ಅಲ್ಲಿನ ಆಯುಷ್ಕರ್ಮದವರಂತೆ ಕಲೆಗಾರರಾರು? ಸಣ್ಣವರಿಂದ ಹಿಡಿದು ದೊಡ್ಡವರವರೆಗೂ ಎಲ್ಲರೂ ಕಲೆಗಾರರೇ.

ಇಂಥ ಊರಿನ, ಇಂಥ ದೇಶದ, ಮಾರ್ಯದೆಗೆ ತಕ್ಕಹಾಗಿರಬೇಕಲ್ಲವೆ ರುಮಾಲು? ರುಮಾಲು ಶಿರಸ್ಸಿಗೆ ಭೂಷಣ. ಆದುದರಿಂದಲೇ ನಮ್ಮ ರುಮಾಲು ಅಷ್ಟು ಮನೋಹರವಾಗಿರುವುದು. ದಕ್ಷಿಣದವರ ಆಡಂಬರತೆಯಲ್ಲಿ? ಉತ್ತರದವರ ಪರಕೀಯ ವಕ್ರತೆಗಳೆಲ್ಲಿ? ಮೈಸೂರಿನ ಶುದ್ಧ ಸೌಂದರ್ಯ ಸಂಪ್ರದಾಯವೆಲ್ಲಿ?

ಉತ್ತರದವರಲ್ಲಿ ಕೆಲವರ ರುಮಾಲು ನಮ್ಮೂರ ಕರಗದಂತೆ ಇರುತ್ತದೆ. ಇನ್ನು ಕೆಲವರು ಸೇದುವ ಹಗ್ಗದಿಂದ ಹಣೆಗೆ ಮಂಕರಿ ಹೆಣೆದಂತಿರುತ್ತದೆ. ಇನ್ನು ಕೆಲವರದು ನಾಟಕ ವೇಷಗಳಂತಿರುತ್ತದೆ. ಇನ್ನು ಕೆಲವು ನಾನಾ ರಂಗಿನವು. ನಮ್ಮದೋ ಬಹು ಉದ್ದವಲ್ಲ, ಬಲು ಚಿಕ್ಕದಲ್ಲ. ಬೆಳ್ಳಗೆ ಬಳ್ಳಿಯ ಪರೆಯಂತೆ ಇರುವುದು. ಸಾತ್ವಿಕ ಸ್ವಭಾವದ್ದು. ತಲೆಗೆ ಅಲಂಕಾರ, ಮುಖಕ್ಕೆ ಕಾಂತಿ, ಯಾವ ಬಗೆಯ ಮೈ ಬಣ್ಣಕ್ಕಾಗಲಿ ಹೊಂದಿಕೊಂಡು ಎಲ್ಲರ ಪ್ರೀತಿಗೂ ಮರ್ಯಾದೆಗೂ ಪಾತ್ರವಾಗುವುದು. ಆದುದರಿಂದಲೇ ಅದಕ್ಕೂ ನಮಗೂ ಕೀರ್ತಿ. ಯಾರು ಶ್ರದ್ಧೆಯಿಂದ ಭಕ್ತಿಯಿಂದ ಅದಕ್ಕಾಗಿ ಶ್ರಮ ಪಡುವರೊ ಅಂಥವರಿಗೆ ಅದು ಒಲಿಯತಕ್ಕದ್ದು. ಯಾರು ಸಂತತವಾಗಿ ಅದನ್ನು ಉತ್ತಮಗೊಳಿಸುವ ಪ್ರಯತ್ನದಲ್ಲಿರುವರೋ ಅಂಥವರಿಗೆ ವರವನ್ನ ಕೊಡತಕ್ಕದ್ದು ಯಾರು ಆ ಪ್ರಯತ್ನ ನಿಲ್ಲಿಸುವರೋ ಅಂಥವರು ಪುನಃ ನೆಗೆದಾಡಿದರೂ ಅದನ್ನು ಬೇರೆ ರೀತಿ ರೂಪುಗೊಳಿಸಲು

ಅಸಾಧ್ಯವಾಗುವಂತೆ ಮಾಡಬಲ್ಲದ್ದು. ಅವರ ಅಭಿವೃದ್ಧಿಯನ್ನು ಅಲ್ಲಿಗೇ ನಿಲ್ಲಿಸುವಂಥದ್ದು, ಯಾರು ಧೋರಣೆ ಮಾಡುವರೂ ಔದ್ಧತ್ಯದಿಂದ ವರ್ತಿಸುವರೊ ಅವರ ಸೊಕ್ಕು ಮುರಿಯುವುದು. ನಾನು ಹೀಗೆ ಮಾಡುತ್ತೇನೆ, ಹಾಗೆ ಸುತ್ತುತ್ತೇನೆ, ನೋಡಿ ಎಂದು ಜಂಬ ಹೊಡೆದರೆ ಆಯಿತು ಶಾಸ್ತಿ. ಮುದ್ದಾಗಿ ಬರೆಯಬೇಕೆಂದು ಕುಳಿತ ದಿನವೇ ಅಕ್ಷರವೂ ಬರವಣಿಗೆಯೂ ಕೆಟ್ಟು ಹಾಳಾಗುವಂತೆ!... ಹೀಗೆ ನಮ್ಮ ರುಮಾಲು ನಮ್ಮ ಜನರ ಶೀಲ ಸಂಸ್ಕಾರಕ್ಕೂ ಮನಸ್ಸಿನ ಶಿಕ್ಷಣಕ್ಕೂ ಬಹು ಅಮೂಲ್ಯವಾದ ಸಹಕಾರಿಯಾಗಿದೆ.

ಮೈಸೂರು ರುಮಾಲು, ರಸಿಕತೆ – ಇವು ಮೂರು ಸಮಾನಧರ್ಮ ಸೂಚಕಗಳು, ರುಮಾಲನ್ನು ಚೆನ್ನಾಗಿ ಸುತ್ತುವುದು ಸುಲಭವಲ್ಲವೆಂದು ಇದುವರಗೇ ತಿಳಿದುಬಂದಿಯಷ್ಟೆ? ಅದನ್ನು ಚೆನ್ನಾಗಿ ಸುತ್ತಬೇಕಾದರೆ ಅನೇಕ ರುಮಾಲಿನ ರಚನೆಗಳನ್ನು ನೋಡಿರಬೇಕು. ಕಟ್ಟುವ ರೀತಿಯನ್ನು ಗುರುವಿನ ಮೂಲಕವೊ ಹತ್ತಾರು ಕಡೆ ಧ್ಯಾನಪೂರ್ವಕವಾಗಿ ಅನುಸಂಧಾನ ಮಾಡಿಯೊ ತಿಳಿದು ಬಹುಕಾಲದ ಅಭ್ಯಾಸದಿಂದ ಕೈ ಹತೋಟಿಗೆ ತಂದುಕೊಂಡಿರಬೇಕು. ಕಟ್ಟಿ ಕಟ್ಟಿ ಕೈ ಪಳಗಿಸಿಕೊಂಡಿರಬೇಕು. ಮೇಲಾಗಿ ವಿನಯವನ್ನಾಚರಿಸಬೇಕು. ಒಂದಂಗಡಿಯಲ್ಲಲ್ಲದಿದ್ದರೆ ಹತ್ತಂಗಡಿಗಳಿಗೆ ಹೋಗಿ ಒಂದೂರಲ್ಲಿಲ್ಲದಿದ್ದರೆ ಎರಡು ಊರು ತಿರುಗಿ ಬಟ್ಟೆ ಜರತಾರಿ ಎರಡೂ ಚೆನ್ನಾಗಿರುವ ಪದಾರ್ಥವನ್ನು ಮೊದಲು ಕೊಂಡು ತರಬೇಕು. ಜರತಾರಿಯ ಪರೀಕ್ಷೆ ನಿಜವಾಗಿ ವರಪರೀಕ್ಷೆ. ಐ.ಸಿ.ಎಸ್. ಪರೀಕ್ಷೆಯಲ್ಲಾದರೂ ತೇರ್ಗಡೆ ಹೊಂದಬಹುದು. ಈ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರೆ ಅದರಲ್ಲಿ ಖಂಡಿತವಾಗಿ ಮೊದಲಿಗರಾಗಿ ಪಾಸಾಗಬಹುದು. ಅಂಗಡಿಯಿಂದ ಮನೆಗೆ ತಂದ ಮೇಲೆ ಮನೆಯ ಹೆಣ್ಣು ಮಗಳಂತೆ ಅದನ್ನು ನೋಡಿಕೊಳ್ಳಬೇಕು. ಆರೈಕೆ ಮಾಡಬೇಕು. ಅಷ್ಟಾದರೂ ನಿಮ್ಮ ಮಾರ್ಯದೆಯೆಲ್ಲ, ನಿಮ್ಮ ಸೌಖ್ಯವೆಲ್ಲ ಅಗಸನ ಕೈಲಿದೆ. ಅವನ ಮೇಲೆ ರೇಗಾಡೀರಿ ಅವನು ಒಗೆ ಕಡೆಸಿದರೆ ಪುನಃ ಬ್ರಹ್ಮದೇವರೇ ಬಂದರೂ ಅವನು ಕೆಡಿಸಿದ ಕೆಲಸ ಸರಿಹೋಗುವುದಿಲ್ಲ. ಈ ಸಂಗತಿಯನ್ನು ಎಷ್ಟು ಒತ್ತಿ ಹೇಳಿದರೂ ಕಮ್ಮಿಯೇ. ಚೆನ್ನಾಗಿ ರುಮಾಲು ಸುತ್ತಬಲ್ಲವನು ಲೋಕಗಳನ್ನು ಗೆಲ್ಲಬಲ್ಲನು. ಆರು ಲೋಕಗಳನ್ನು ಆಳಬಲ್ಲನು. ಪ್ರಪಂಚವನ್ನೇ ಒಲಿಸಬಲ್ಲನು. ಅನಂತ ವಿಶ್ರಾಂತವಾದ ಕೀರ್ತಿಯನ್ನು ಪಡೆಯಬಲ್ಲನು. ನೀವು ರಸಿಕರು ಹೌದೋ ಅಲ್ಲವೋ ಎಂದು ಯಾವಾಗಲಾದರೂ ನಿಮಗೆ ಸಂಶಯ ಬಂದರೆ ನಿಮ್ಮ ರುಮಾಲನ್ನು ನೋಡಿಕೊಳ್ಳಿ. ನಾನು ಹೇಳಿರುವ ಲಕ್ಷಣಗಳು ಅಲ್ಲಿದ್ದು ನಾನು ಮುಂದೆ ಸೂಚಿಸುವ ಅವಲಕ್ಷಣಗಳು ಇಲ್ಲದಿದ್ದರೆ ನೀವು ರಸಿಕರು ನಿಜವೆಂದು ನಂಬಿ. ಇಲ್ಲವಾದರೆ ರಸಿಕರಲ್ಲ.

ಚೆನ್ನಾಗಿ ರುಮಾಲು ಕಟ್ಟುವುದು ಹೇಗೆ? ಯಾವುದಾದರೂ ನಿಯಮಗಳಿವೆಯೆ? ಇದ್ದರೆ ಅವು ಯಾವುದು? ಎಂದು ಯಾರಾದರೂ ನಿಮ್ಮನ್ನು ಕೇಳಿದರೆ ಮೌನವಾಗಿರಿ, ಮೌನವೇ ಸದಕ್ಕೆ ಉತ್ತರ. ಬ್ರಹ್ಮಸ್ವರೂಪವನ್ನು ಕೇಳಿದಾಗ ಉಪನಿಷತ್ತಿನಲ್ಲಿ ಗುರುವಿನ ಉತ್ತರವೇನು? ಮೌನ. ಇಲ್ಲಿಯೂ ಹಾಗೆಯೇ. ಇದರ ಸ್ವರೂಪವು ಅತಿ ಗಹನವಾದುದು; ಅತಿ ಗಂಭೀರವಾದುದು. ಆದರೂ ತಿಳಿದಿರಬೇಕಾದ ಅಂಶಗಳು ಮಾತ್ರ ಒಂದೆರಡಿವೆ. ಒಬ್ಬೊಬ್ಬರ ತಲೆಗೆ ಒಂದೊಂದು ಅಳತೆ ಬೇಕಾಗುತ್ತದೆ. ಅವರವರ ತಲೆ ಪಾಡು ಅದು. ತಲೆಯೂ ರುಮಾಲೂ ಆಧಾರಾಧೇಯಗಳು. ಅವರವರಿಗೆ ಬೇಕಾಗಿರುವ ಪ್ರಮಾಣಗಳನ್ನು ಅವರವರೇ ನಿರ್ಧರಿಸಿಕೊಳ್ಳಬೇಕು. ದೇವರು ಕೊಟ್ಟ ಬುದ್ಧಿ ಬೇಕು. ಸೌಂದರ್ಯ ಕಾಣುವ ಕಣ್ಣು ಬೇಕು. ಹೊಸ ನಿಯಮ ಶಾಸನಗಳಿಂದು ಇದು ನಡೆಯುವ

ಕೆಲಸವಲ್ಲ. ಹೀಗೆ ಬರೆದರೆಯೇ ಕಾವ್ಯ ಸುಂದರವಾಗುವುದು ಎಂದು ಹಟ ಮಾಡುವುದು ಎಷ್ಟರ ಮಟ್ಟಿಗೆ ಮುಟ್ಠಾಳತನವೊ ತಲೆ ಹೇಗೇ ಇರಲಿ ಈ ಅಳತೆ ಈ ಪ್ರಮಾಣಗಳನ್ನು ಅನುಸರಿಸಿದರೆಯೇ ರುಮಾಲು ಚೆನ್ನಾಗಬೇಕಾದರೆ ಎಂದು ವಾದಿಸುವುದೂ ಅಷ್ಟೇ ದೊಡ್ಡ ಮುಟ್ಠಾಳತನ. ಅದರ ಸಾಮಾನ್ಯ ಗುಣಲಕ್ಷಣಗಳು, ಮಾಟ ಇವು ಇಂಥವು; ನಿಮಗೂ ಕಣ್ಣಿದೆ; ನಾಲ್ಕು ಕಡೆ ನೋಡಿ ಕಂಡುಕೊಳ್ಳಿ ತಿದ್ದಿಕೊಳ್ಳಿ, ಇನ್ನೇನ್ನು ಹೆಚ್ಚು ಹೇಳುವುದಕ್ಕಾಗುವುದಿಲ್ಲ; ಕಟ್ಟಿಕೊಂಡು ನಮ್ಮ ಹತ್ತಿರ ಬನ್ನಿ ಸರಿಯಾಗಿದೆಯೋ ಇಲ್ಲವೋ ಆಗ ಹೇಳುತ್ತೇವೆ ಎಂದು ಮುಂತಾಗಿ ಹೇಳಿ ಕಳಿಸಿಬಿಡಿ. ಆಮೇಲೆ ಅವರ ಪಾಡು ಅವರದು. ಜಿಲೇಬಿಯ ಪಾಕಕ್ಕೆ ಹೇಗೆ ಒಂದು ಹದವಿದೆಯೋ, ಪಕ್ವಾನ್ನಕ್ಕೆ ಹೇಗೆ ಒಂದು ಪಾಕವಿದೆಯೋ ಹಾಗೆಯೇ ಮೈಸೂರು ರುಮಾಲು ಕಟ್ಟುವುದಕ್ಕೂ ಒಂದು ಹದವಿದೆ. ಅಂತಹ ಪದಾರ್ಥವನ್ನು ನೋಡಿದ ಮೇಲೆ ತಾನೆ ಸರಿಯಾದ ಹದ ಬಂದಿದೆಯೇ ಇಲ್ಲವೇ ಎಂಬುದು ಗೊತ್ತಾಗಬೇಕಾದರೆ?

ಸತ್ಕಾವ್ಯ ಕೈಗೆ ಸಿಕ್ಕಿದರೆ ಭೇಷ್, ಇದು ರಸತ್ಕಾವ್ಯ ಎಂದು ಅದರ ಸವಿಯನ್ನು ಅನುಭವಿಸಿ ಹೇಗೆ ಆನಂದಿಸುವೆವೊ ಒಳ್ಳೆಯ ರುಮಾಲನ್ನನು ಕಂಡಾಗಲೂ ಹಾಗೆಯೇ ಮೆಚ್ಚಿ ಅದಕ್ಕೆ ಕೈ ಮುಗಿಯುತ್ತೇವೆ. ಆದರೂ ಅನುಭವಸ್ಥರಾದ ನನ್ನಂಥವರು ಹೀಗೆ ಮಾಡಬೇಡಿ ಹಾಗೆ ಮಾಡಬೇಡಿ ಎಂದು ಒಂದೆರಡು ನಿಷೇಧ ಸೂಚನೆಗಳನ್ನು ಮಾತ್ರ ಕೊಡಬಹುದು. ಕಣ್ಣಿನಲ್ಲಿ ನೀರು ಸುರಿಸಿ – ನೀರು ಸುರಿಯುವ ಕಣ್ಣಲ್ಲಿ ರಕ್ತ ಸುರಿಸಿ, ನೊಂದು ಬಳಲಿ ಪಡೆದುಕೊಂಡಿದ್ದರೇನೆ ಅನುಭವಕ್ಕೆ ಅನುಭವವೆಂದು ಹೆಸರು ಸಲ್ಲಬೇಕಾದರೆ! ಎಷ್ಟು ನೊಂದಿದ್ದರೆ ಅಷ್ಟೂ ಅಷ್ಟು ಆ ಅನುಭವಕ್ಕೆ ಗೌರವ ಹೆಚ್ಚು. ನನ್ನ ಸೂಚನೆಗಳು ಯಾವುದೆಂದರೆ; ಬಟ್ಲರುಗಳಂತೆ ರುಮಾಲು ಸುತ್ತಬೇಡಿ. ರುಮಾಲಿಗೆ ಅಂಡಾಕಾರ ಬಾರದಂತೆ ನೋಡಿಕೊಳ್ಳಿ. ರುಮಾಲಿನೊಳಗೆ ಸೇರಿರುವ ಕೂದಲ ಗಂಟು ಹೆಚ್ಚಾಗದೆ ಇರಲಿ, ನಿಮ್ಮ ಬೋಳು ತಲೆಯೊ ಕೂದಲೋ ಹೊರಗೆ ಕಾಣದಂತೆ ವ್ಯವಸ್ಥೆ ಮಾಡಿಕೊಳ್ಳಿ ರುಮಾಲನ್ನು ಪೂರ್ತಿ ಪಟ್ಟಿ ಮಡಿಸಿ ಕಟ್ಟಬೇಡಿ. ತಿಗಳರ ಮುನಿಶಾಮಿಯಂತೆ ಕಾಣುವಿರಿ; ಸೆಕ್ರೆಟೆರಿಯಟ್ ಜವಾನರಂತೆ ಕಾಣುವಿರಿ, ರುಮಾಲಿನ ಜರಿ ಅತಿ ಕಮ್ಮಿಯಾಗಿ ಆಗಲಿ, ಅತಿ ಹೆಚ್ಚಾಗಿಯಾಗಲಿ ಇರಬಾರದು. ಅತಿ ಕಮ್ಮಿಯಾಗಿ ಕಡ್ಡಿ ಅಂಚಾದರೆ, ಓಹೊ? ಇವನ್ಯಾರೋ ಗುಮಾಸ್ತರಪ್ಪ ಎಂದುಕೊಳ್ಳುತ್ತಾರೆ. ಅತಿ ದೊಡ್ಡದಾಯಿತು ಅನ್ನಿ, ಓಹೊ ಇವರು ತಿಪ್ಪಟ್ಟೂರು ಸಾಹುಕಾರ್ ಬುದ್ಧಯ್ಯನವರು ಅನ್ನುತ್ತಾರೆ. ನನ್ನನ್ನು ಕೇಳಿದರೆ ಜರಿ ಒಂದು ಹೆಬ್ಬೆರಳು ಅಥವಾ ಮುಕ್ಕಾಲಂಗುಲಕ್ಕೆ ಎಂದಿಗೂ ಮೀರಿರಕೂಡದು. ಬಲೆ ಜರತಾರಿ ಇದ್ದರೆ ಅದನ್ನು ಬಾಬಯ್ಯನ ಹಬ್ಬದ ಉಪಯೋಗಕ್ಕೆ ಇರಿಸಿಕೊಳ್ಳಿ. ಅದರ ಬಯಕೆ ಹೆಚ್ಚಾದರೆ ಒಂದು ತೆರೆದ ಒತ್ತೆಳೆಗಳ ಕಂಬಿಯಂಚು ಇರುವುದನ್ನು ಕಟ್ಟಿ ಬೇನೆ ಇಳಿಸಿಕೊಳ್ಳಿ, ಜರಿ ಅಂತೂ ಏನೇ ಆಗಲಿ ಮಿರುಮಿರು ಚಿನ್ನದಂತೆ ಹೊಳೆಯುತ್ತಿರಬೇಕು. ಸಾಧ್ಯವಾದರೆ ಇಷ್ಟು ಮಾಡಿ, ಸಾಕು, ಸ್ವಲ್ಪ ತಾಳಿ, ಇನ್ನೊಂದು ಹೇಳುವುದು ಮರೆತುಬಿಟ್ಟಿದ್ದೆ; ದಾಡಿಗೂ ಮೈಸೂರು ರುಮಾಲಿಗೂ ಹೊಂದಿಕೆ ಇಲ್ಲ. ರಸಿಕರಿಗೂ ದಾಡಿಗೂ ದೂರ. ಆದುದರಿಂದಲೇ ಹದಿನಾರಾಣೆ ಮೈಸೂರಿನವರಾರೂ ದಾಡಿ ಬೆಳೆಸುವುದಿಲ್ಲ. ರುಮಾಲಿಂದ ಮಂಗಳ, ಮದುವೆಯ ಮನೆಯಲ್ಲಾಗಲಿ, ಅರಮನೆಯಲ್ಲಾಗಲಿ ಕೇಳಿ ಹೇಳುತ್ತಾರೆ. ಮೇಲಿನವರಿಗೆ ನೀವು ಮಾರ್ಯದೆ ಮಾಡಬೇಕಾದರೆ ನಿಮ್ಮ ತಲೆಯ ಮೇಲೆ ರುಮಾಲು ಇರಬೇಕು. ನಿಮಗೆ ಇತರರು ಮರ್ಯಾದೆ ಮಾಡಬೇಕಾದರೆ ನಿಮ್ಮ ತಲೆಯ ಮೇಲೆ ರುಮಾಲು

ಇರಬೇಕು. ಚೆನ್ನಾಗಿ ರುಮಾಲು ಕಟ್ಟಿ ಠಾಕು-ಠೀಕಾಗಿರುವವರನ್ನು ಕಂಡರೆ ಎಲ್ಲರೂ ಹತ್ತಿರ ಬನ್ನಿರೆನ್ನುತ್ತಾರೆ. ಯಾವ ಅಂಗಡಿಯಲ್ಲೇ ಆಗಲಿ, ಬ್ಯಾಂಕಿನಲ್ಲಾಗಲಿ ಸಾಲ ಹುಟ್ಟುತ್ತದೆ. ಸಾಲ ತೀರಿಸದಿದ್ದರೂ ಪರವಾ ಇಲ್ಲ. ಕೋರು ರುಮಾಲು ನಂಬಿಕೆ ಉಳಿಸುತ್ತದೆ. ಬೀದಿಯಲ್ಲಿ, ಲಾಲ್ ಬಾಗ್ ಗೇಟ್‌ನಲ್ಲಿ ಪೋಲೀಸಿನವನು ನಿಮಿರಿ ಸಲಾಮು ಮಾಡುತ್ತಾನೆ. ಸಭೆಗಳಲ್ಲಿ ಮೇಲಕ್ಕೆ ಬನ್ನಿರೆಂದು ಕರೆದು ಕೂಡಿಸಿಕೊಳ್ಳುತ್ತಾರೆ. ಅರಮನೆಯಲ್ಲಿ ಖಾಸಾ ಹಾರ ಸಿಕ್ಕುತ್ತದೆ. ಕಂಡ ಕಂಡವರು ಕೈ ಮುಗಿದು ಮುಗುಳ್ನಗೆ ನಕ್ಕು ಸ್ವಾಗತ ಕೊಡುತ್ತಾರೆ. ಕ್ಷೇಮ ಸಮಾಚಾರ ವಿಚಾರಿಸುತ್ತಾರೆ. ಕರೆಯದೆ ಹೋದರೂ ಉತ್ಸವಗಳಲ್ಲಿ ಅಗ್ರತಾಂಬೂಲ ದೊರಕುತ್ತದೆ. ಲಂಚ ರುಷವತ್ತುಗಳಿಲ್ಲದೆ ಕೆಲಸವಾಗುತ್ತದೆ. ತಾಲ್ಲೂಕು ಅಮಲ್ದಾರರು ಪಕ್ಕದಲ್ಲಿ ಕುರ್ಚಿಯ ಮೇಲೆ ಕುಡಿಸಿಕೊಂಡು ಮಾತನಾಡುತ್ತಾರೆ. ಕೊನೆಗೆ ಟಿಕೆಟ್ ಕಲೆಕ್ಟರ್ ಕೂಡ ನಿಮ್ಮ ಗೊಡವೆಗೆ ಬಾರದೆ ನೀವು ಮುರನೆಯ ಮಾಡುತ್ತ ಪ್ರಯಾಣ ಮಾಡಿದರೂ ನಿಮಗೆ ತೊಂದರೆ ಕೊಡದೆ ಹೊರಟು ಹೋಗುತ್ತಾನೆ. ಕೆಟ್ಟದ್ದಾಗಲಿ, ಒಳ್ಳೆಯದಾಗಲಿ ಏನು ಮಾಡುವುದಾದರೂ ಧೈರ್ಯ ಬರುತ್ತದೆ. ಹೀಗೆ ಮಂಗಳಕ್ಕೆ ಮಂಗಳ, ಅಲಂಕಾರಕ್ಕೆ ಅಲಂಕಾರ-ಈ ಬಗೆಯ ಅನುಕೂಲಗಳು ಬೇರೆ ಯಾವುದರಿಂದ ದೊರೆಯುತ್ತವೆ?

ಇಂತಹ ರುಮಾಲಿನ ವ್ಯವಸಾಯ ಇತ್ತೀಚೆಗೆ ಕಡಿಮೆಯಾಗಿ ದೇಶದಲ್ಲಿ ಕ್ಷಾಮಡಾಮರಗಳು ಪ್ರಬಲಿಸುತ್ತಿವೆ. ದೇಶದ ಸಂಪತ್ತು, ವ್ಯಾಪಾರ, ಅಧಿಕಾರ ಎಲ್ಲವೂ ಪರಕೀಯರ ವಶವಾಗುತ್ತಿವೆ. ಶಿಷ್ಟ ಸಂಪ್ರದಾಯಗಳು ಚೆನ್ನಾಗಿಲ್ಲದಿದ್ದರೆ ಆಯಾ ಅಧಿದೇವತೆಗಳಿಗೆ ಕೋಪವಿಲ್ಲ. ಅವು ಅತ್ಯುತ್ತಮವಾಗಿರುವಾಗ ಜನರು ಅವುಗಳನ್ನು ಮಾರಿ 'ಪರದೇಸಿ' ಸಂಪ್ರದಾಯಗಳಿಗೆ ಒಳಗಾದರೆ ಅವು ಸಹಿಸಿಕೊಂಡು ಸುಮ್ಮನಿದ್ದೀವೆ? ದೇಶದ ಅತ್ಯುನ್ನತ ಅಧಿಕಾರಿಗಳಿಂದ ಕೂಡ ಈ ದೇವತೆಗಳು ಅವಿಧೇಯತೆಯನ್ನು ಸಹಿಸವು. ಈ ವಿಷಯಕ್ಕೆ ನಾವು ತರೆಯಿಂದ ಗಮನ ಕೊಡದಿದ್ದರೆ ದೇಶ ಪೂರ್ತಿಯಾಗಿ ಅನ್ಯರ ಪಾಲಾಗಿ ನಮ್ಮ ನಾಡಿನಲ್ಲಿ ನಾವೇ ಪರರಾಗಿ ಹೋಗುತ್ತೇವೆ. ಪರರ ಭೋಜನ ಭೂಮಿಯಾಗಿ ಅದು ನಮ್ಮ ಕೈತಪ್ಪಿ ಹೋಗುವುದು ಖಂಡಿತ, ಪ್ಲೇಟೊ, ಮೋರ್, ಬೇಕನ್, ವೆಲ್ಸ್ ಪ್ರಕೃತಿಗಳು ಆದರ್ಶರಾಜ, ಆದರ್ಶ ಜೀವನ ರೀತಿಗಳನ್ನು ಕಲ್ಪಿಸಿ, ತಮ್ಮ ವಿಚಾರದ ಫಲಿತಾಂಶಗಳನ್ನು ಪ್ರಕಟಿಸಿದ್ದಾರೆ. ಅಂಥ ರಾಜ್ಯದಲ್ಲಿ ಜನರ ಶಿರೋಭೂಷಣ ಹೇಗಿರಬೇಕೆಂಬ ವಿಚಾರ ಮಾಡಿದ್ದಾರೆ. ಪ್ರಂಪಚದಲ್ಲಿ ಎಲ್ಲ ಕಡೆಗಳಲ್ಲಿಯೂ ಹುಡುಕಿದರೆ ಮೈಸೂರು ಸಂಪ್ರದಾಯವನ್ನು ನೋಡಿದರೆ ಇದು ಸತ್ಯ, ಏಕೆ, ಸತ್ಯದ ತಿರುಳು ಎಂದು ಗೊತ್ತಾಗುವುದು. ಅದೂ ಇದ್ದಂತೆಯೇ ಇಲ್ಲ. ಪ್ರತಿಕಾಲದಲ್ಲಿಯೂ ಪ್ರತಿಸಂವತ್ಸರದಲ್ಲಿಯೂ ದೊರೆತ ಸೂಚನೆಗಳನ್ನು ತೆಗೆದುಕೊಂಡು ನಮ್ಮ ಉಡುಪನ್ನು ಸರ್ವಾಂಗ ಸುಂದರವಾಗಿ ಮಾಡಿದೆ.

# ಪ್ರಶ್ನೆ ಪತ್ರಿಕೆಯ ಸ್ವರೂಪ:

**ಕನ್ನಡ ಭಾಷಾ ಪಠ್ಯ (ಎನ್.ಇ.ಪಿ.)**

**ವಿನ್ಯಾಸ ಸೌರಭ – III**

**ಬಿ.ಎಸ್ಸಿ. ಫ್ಯಾಡ್ ಮೂರನೇ ಸೆಮಿಸ್ಟರ್**

**ಅವಧಿ: 2:30 ಗಂಟೆ** **ಗರಿಷ್ಠ ಅಂಕ: 60**

---

**I. ಯಾವುದಾದರೂ ಐದು ಪ್ರಶ್ನೆಗಳಿಗೆ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. (5X2=10)**

(ಪ್ರತಿ ಭಾಗದಿಂದ 4 ಪ್ರಶ್ನೆಗಳು, ಎಲ್ಲ ಪ್ರಶ್ನೆಗಳಿಗೂ ಪೂರ್ಣವಾಕ್ಯದಲ್ಲಿ ಉತ್ತರ ಕಡ್ಡಾಯ)

**II. ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಹತ್ತುವಾಕ್ಯಗಳಲ್ಲಿ ಉತ್ತರಿಸಿ. (4X5=20)**

(6 ಪ್ರಶ್ನೆಗಳಲ್ಲಿ 4 ಪ್ರಶ್ನೆಗಳಿಗೆ ಉತ್ತರ ಬರೆಯಬೇಕು)

**III. ಯಾವುದಾದರೂ ಎರಡು ಪ್ರಶ್ನೆಗಳಿಗೆ ಎರಡು ಪುಟಗಳಷ್ಟು ಉತ್ತರಿಸಿ.(2X10=20)**

(4 ಪ್ರಶ್ನೆಗಳಲ್ಲಿ 2 ಪ್ರಶ್ನೆಗಳಿಗೆ ಉತ್ತರ ಬರೆಯಬೇಕು)

**IV.ಯಾವುದಾದರೂ ಎರಡು ಪ್ರಶ್ನೆಗಳಿಗೆ ಹತ್ತು ವಾಕ್ಯಗಳಲ್ಲಿ ಉತ್ತರಿಸಿ.** (ಓದು ಪಠ್ಯ) **(2X5=10)**

(4 ಪ್ರಶ್ನೆಗಳಲ್ಲಿ 2 ಪ್ರಶ್ನೆಗಳಿಗೆ ಉತ್ತರ ಬರೆಯಬೇಕು)

# 3ನೇ ಸೆಮಿಸ್ಟರ್ ಬಿ.ಎಸ್ಸಿ. ಫ್ಯಾಡ್ (ಎನ್.ಇ.ಪಿ.) (2022–23)

## ಮಾದರಿ ಪ್ರಶ್ನೆಪತ್ರಿಕೆ

### ಕನ್ನಡ ಭಾಷಾ ಪಠ್ಯ– ವಿನ್ಯಾಸ ಸೌರಭ – ೩ (Freshers Scheme)

**Time: 2:30 Hours** **Maximum marks: 60**

**I. ಯಾವುದಾದರು ಐದು ಪ್ರಶ್ನೆಗಳಿಗೆ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.** **5X2=10**

1. ಮಂತ್ರಿಗಳು ಆಸ್ಪತ್ರೆಯ ತನಿಖೆ ಮಾಡಲು ಕಾರಣವೇನು?
2. ಅಕ್ಕುವಿನ ಊಟದ ಬಗ್ಗೆ ತಿಳಿಸಿ.
3. ಬಾಳಪ್ಪನವರ ಗಾಯನ ನಟನೆಯನ್ನು ಮೆಚ್ಚಿದ ಖ್ಯಾತನಾಮರು ಯಾರು? ಯಾರು?
4. ಮಕ್ಕಳ ಜಡೆಯನ್ನು ಹೋಲಿಸಿರುವ ಬಗೆಯನ್ನು ಬರೆಯಿರಿ.
5. ಬ್ಲೂ–ಲಿಥಿಯಂ ಬಗ್ಗೆ ತಿಳಿಸಿ.
6. 'ಟೊಪ್ ಟೆನಿ' ಎಂದರೇನು?
7. ದೇಶಿ ಹಸುಗಳ ತಳಿಗಳನ್ನು ಹೆಸರಿಸಿ?
8. ಜೋಳದ ಪಾಳಿ ಎಂದರೇನು?

**II. ಯಾವುದಾದರು ನಾಲ್ಕು ಪ್ರಶ್ನೆಗಳಿಗೆ ಹತ್ತು ವಾಕ್ಯಗಳಲ್ಲಿ ಉತ್ತರಿಸಿ.** **4X5=20**

1. ಬಾಳಪ್ಪನವರಿಗೆ ದೊರೆತ ಪುರಸ್ಕಾರಗಳು ಯಾವುವು?
2. ಮಂತ್ರಿಗಳು ದೊಡ್ಡ ಆಸ್ಪತ್ರೆಗೆ ಒಗೆಯುವ ಯಂತ್ರ ಆದೇಶಿಸಲು ಕಾರಣವೇನು?
3. ಅಕ್ಕು ತನ್ನ ಬೆಪ್ಪುತನದಿಂದ ಗಂಡಸರ ಬಣ್ಣ ಬಯಲು ಮಾಡುವ ಸನ್ನಿವೇಶವನ್ನು ಬರೆಯಿರಿ.
4. ಹಸುವಿನ ಗಂಜಲದ ಪ್ರಾಮುಖ್ಯತೆ ಬರೆಯಿರಿ.
5. ಅನ್ನಯಜ್ಞ ಕವಿತೆಯ ಆಶಯವೇನು?
6. ಅಕ್ರಮ ಸಂತಾನದ ಹಸಿವಿನ ಚಿತ್ರಣ ಕುರಿತು ಬರೆಯಿರಿ.

**III. ಯಾವುದಾದರು ಎರಡು ಪ್ರಶ್ನೆಗಳಿಗೆ ಎರಡು ಪುಟಗಳಲ್ಲಿ ಉತ್ತರಿಸಿ. 2X10=20**

1. ಕಲಿಯದ ವಿದ್ಯೆಗಿಂತ ಕೆಲವು ಸಲ ಶ್ರಮದಾಯಕ ದುಡಿಮೆ ನಮ್ಮ ಬದುಕನ್ನು ರೂಪಿಸುವ ರೀತಿಯನ್ನು ಗುರುಭಕ್ಷ್ನ ಬದುಕಿನ ಹಿನ್ನೆಲೆಯಲ್ಲಿ ವಿವರಿಸಿ.
2. 'ಜಡೆ'ಯ ವೈವಿಧ್ಯತೆಯನ್ನು ಕವಿ ವಿವಿಧ ಹಂತಗಳಲ್ಲಿ ಬಣ್ಣಿಸಿರುವ ಬಗೆಯನ್ನು ವಿವರಿಸಿ.
3. ಮನುಷ್ಯ ನಿರ್ಮಿತ ಆಧುನಿಕ ಯಂತ್ರವನ್ನು ದೇಹವೆಂಬ ಯಂತ್ರದೊಡನೆ ಸಮೀಕರಿಸಿದ ಬಗೆಯನ್ನು ವಿವರಿಸಿ.
4. ಬಾಳಪ್ಪನವರ ಜೀವನ ಸಾಧನೆಯನ್ನು ವಿವರಿಸಿ.

**IV. ಯಾವುದಾದರು ಎರಡು ಪ್ರಶ್ನೆಗಳಿಗೆ ಹತ್ತು ವಾಕ್ಯಗಳಲ್ಲಿ ಉತ್ತರಿಸಿ. (ಓದು ಪಠ್ಯ) 2X5=10**

1. ಸ್ವಾವಲಂಬಿ ಜೀವನಕ್ಕೆ ಸ್ವಂತ ಉದ್ಯೋಗ ಆಧಾರವಾಗಬಲ್ಲದೇ? ಸುನಿಲ್‌ರ ಹಿನ್ನಲೆಯಲ್ಲಿ ವಿವರಿಸಿ.
2. ಮೈಸೂರು ರುಮಾಲಿನ ವಿಶಿಷ್ಟತೆಗಳನ್ನು ಬರೆಯಿರಿ.
3. ಡಾ.ಟಿ. ಯಲ್ಲಪ್ಪನವರ 'ಹಸಿವು' ಕವನದ ಆಶಯವೇನು?
4. 'ಐಟಂ ಸಾಂಗ್‌ಗಳು ಸಾಮಾಜಿಕ ಬದುಕಿನ ಕನ್ನಡಿ' ಎಂಬುದನ್ನು 'ಬಂತು ಬಂತು ಕರಂಟು' ಬಂತು ಲೇಖನದ ಹಿನ್ನೆಲೆಯಲ್ಲಿ ವಿವರಿಸಿ.

****